
ಏಕಾಂತ
ಮತ್ತು
ಏಕಾಗ್ರತೆ
(ಲಲಿತ ಪ್ರಬಂಧಗಳು)
ಮನು ಬಳಿಗಾರ್

# ಏಕಾಂತ ಮತ್ತು ಏಕಾಗ್ರತೆ

## ಮನು ಬಳಿಗಾರ್

**ಐಬಿಎಚ್ ಪ್ರಕಾಶನ**

ನಂ.17, ರಾಮರಾವ್ ಲೇಔಟ್,

2ನೇ ಮುಖ್ಯರಸ್ತೆ 4ನೇ ಅಡ್ಡರಸ್ತೆ

ಬಿಎಸ್‌ಕೆ 3ನೇ ಹಂತ,

ಬೆಂಗಳೂರು - 560 085

“EKANTHA MATTU EKAGRATHE" : Collection of essays by Manu Baligar KAS, Published by K.H.L. Adiga for IBH Prakashana, # 77, Ramrao Layout, 2nd Main, 4th Cross, BSK 3rd Stage, Bangalore - 560 085. Ph: 56698689, 26698088

First Edition : 2004

Second Edition : 2006

Third Reprint : 2009

ISBN: 81-89268-69-4

©: Mayadevi Baligar

Pages: 156

Price. 100/-

No. of Copies : 1000

Printed at:

**SREERANGA PRINTERS PVT.Ltd.,**

No. 184, Kavi Raghavanka Road,

Srinagar, Bangalore - 50

Ph: 2242 4757, 2667 9333

# ನಮ್ಮ ಕುಟುಂಬದ ಕುಡಿ

# ಚಿ|| ಗಳಾದ

ವಿಕಾಸ್, ಮೇಘಾ, ಮಯೂರವರ್ಮ

ಭರತ್, ವಿಶಾಲಾಕ್ಷಿ, ಬಾಪೂಜಿ

ಭಾವನಾ, ಪಾವನಾ, ಸಮರ್ಥ

ನೃಪತುಂಗ, ಶುಷತ್, ವಚನ

ಸಾಹಸ, ವಸುಂಧರಾ-ಇವರುಗಳಿಗೆ

ಶುಭಾಶೀರ್ವಾದಗಳೊಂದಿಗೆ

# ಹಾರೈಕೆ

ನ್ಯಾಯನಿಷ್ಠ ದಕ್ಷ ಐ.ಎ.ಎಸ್. ಅಧಿಕಾರಿ ಶ್ರೀ ವಿ.ಪಿ. ಬಳಿಗಾರ್ ಕವಿತಾ ಸಾಮರ್ಥ್ಯವುಳ್ಳ ಪ್ರತಿಭಾವಂತರು. ಅವರಣ್ಣ, ಕೆ.ಎ.ಎಸ್. ಅಧಿಕಾರಿ ಶ್ರೀ ಮನು ಬಳಿಗಾರ್ ಕವಿ, ಕತೆಗಾರ, ಜೀವನಚರಿತ್ರಕಾರ, ಭಾಷಾಂತರಕಾರ, ಸಂಪಾದಕರೆಂದು ಹಲವು ಪ್ರಶಸ್ತಿಗಳನ್ನು ಪಡೆದವರೆಂದು ಡಾ.ಟಿ.ಸಿ.ಪೂರ್ಣಿಮಾ ಅವರನ್ನು ಪರಿಚಯಿಸಿಕೊಟ್ಟಾಗ ನನಗೆ ಸಂತೋಷವಾಯಿತು. ಅವರ ತಮ್ಮ ಶ್ರೀ ಶಿವಲಿಂಗು ಬಳಿಗಾರ್ ಸಹ ಕಥೆಗಾರರೆಂಬುದನ್ನು ತಿಳಿದಾಗ, ಈ ಮೂವರು ಅಣ್ಣತಮ್ಮಂದಿರು ನಾಡು-ನುಡಿಗಳ ಅಭ್ಯುದಯಕ್ಕಾಗಿ ಸಲ್ಲಿಸುತ್ತಿರುವ ಅಮೂಲ್ಯ ಸೇವೆಯಿಂದ ಕರ್ನಾಟಕ ಮಾತೆಯ ಆಶೀರ್ವಾದಕ್ಕೆ ಪಾತ್ರರಾದವರೆಂಬ ಕಾರಣಕ್ಕಾಗಿ ನನಗವರಲ್ಲಿ ಅಭಿಮಾನ ಮೂಡಿತು. ಅದರಿಂದಾಗಿ ಮನು ಬಳಿಗಾರರ ಈ ಗ್ರಂಥಕ್ಕೆ ನನಗೆ ತಿಳಿದ ಎರಡು ಮಾತು ಬರೆಯಲೊಪ್ಪಿಕೊಂಡೆ.

ಇಲ್ಲಿಯ ಲೇಖನಗಳ ಪೈಕಿ ಆರು ವ್ಯಕ್ತಿ ಚಿತ್ರಗಳು, ಸಾಹಿತ್ಯ ವಿಮರ್ಶೆ, ಒಂದು ಭಾರತೀಯ ಸಂಸ್ಕೃತಿಗೆ ಸಂಬಂಧಿಸಿದ್ದು, ಉಳಿದುವು ವಿವಿಧ ವಸ್ತುಗಳನ್ನೊಳಗೊಂಡ ಲಘು ಗಂಭೀರ ಪ್ರಬಂಧಗಳು.

ಸಂಸ್ಕೃತಿ ಕೃಷಿ ಮೂಲವಾದದ್ದು, ಅದೊಂದು ಸುಗುಣ ಸಾಮರಸ್ಯವೆಂಬ ಗ್ರಂಥಕರ್ತರ ವ್ಯಾಖ್ಯೆ ಗ್ರಾಹ್ಯವಾದುದು. ಸಂಸ್ಕೃತಿ ರೂಪುಗೊಳ್ಳುವಲ್ಲಿ ಭೌಗೋಳಿಕ ಅಂಶಗಳು ಮಹತ್ವದ ಪಾತ್ರವನ್ನು ವಹಿಸುತ್ತವೆನ್ನುವುದು ಸರಿಯೇ ಸರಿ. ಲಲಿತ ಕಲೆಗಳು, ವ್ಯಕ್ತಿ ಸ್ವಾತಂತ್ರ್ಯ, ಅಧ್ಯಾತ್ಮಿಕತೆ ಸತ್ಯಾನ್ವೇಷಣೆ, ಮೋಕ್ಷಸಾಧನೆ, ಪರಮತ ಸಹಿಷ್ಣುತೆ,

ಸಮಾನತೆ, ಸಮನ್ವಯಗಳು 'ಭಾರತೀಯ ಸಂಸ್ಕೃತಿ'ಯ ವಿಶಿಷ್ಟ ಲಕ್ಷಣಗಳೆಂದವರು ಸಮರ್ಥಿಸಿಕೊಳ್ಳುತ್ತಾರೆ. ಭಾರತವು ಎಲ್ಲ ಜನಾಂಗಗಳ, ತತ್ವಜ್ಞಾನಗಳ, ಯೂರೋಪಿನ ಭಾಷೆಗಳ, ಗಣಿತಶಾಸ್ತ್ರದ ತಾಯಿಯೆಂದು ಹೇಳುವ ಅಮೆರಿಕೆಯ ಚಿಂತಕ ವಿಲ್ ಡುರಾಂಟ್‌ನ ಮಾತುಗಳನ್ನು ಅಭಿಮಾನದಿಂದ ಉಲ್ಲೇಖಿಸುತ್ತಾರೆ. ಅಸಮಾನತೆ, ಜಾತೀಯತೆ, ಅಸ್ಪೃಶ್ಯತೆಗಳು ಭಾರತೀಯ ಸಂಸ್ಕೃತಿಗಂಟಿಕೊಂಡಿರುವ ಕಳಂಕವೆಂಬುದನ್ನು ಅವುಗಳ ವಿನಾಶಕ್ಕಾಗಿ ಬಸವೇಶ್ವರರು ಮಾಡಿದ ಪ್ರಯತ್ನವನ್ನು ವಿವರಿಸಬಹುದಿತ್ತೇನೋ !

ಬಳಿಗಾರ್‌ರು ಕುಂಚಿಸಿರುವ ಕಿತ್ತೂರು ಚೆನ್ನಮ್ಮ, ವಿಶ್ವೇಶ್ವರಯ್ಯ, ಕನಕದಾಸ, ಚಂಬಾ ಮುತ್ನಾಳ, ಮಹಾದೇರ ಮೈಲಾರ ಮತ್ತು ಶ್ರೀಲ ಪ್ರಭುಪಾದರ ವ್ಯಕ್ತಿ ಚಿತ್ರಗಳು ಭಾರತೀಯ ಸಂಸ್ಕೃತಿಯ ಪ್ರತಿರೂಪಗಳೆಂದೇ ಹೇಳಬಹುದು. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿಚುಕ್ಕಿಯೆಂದು ಕಿತ್ತೂರು ಚೆನ್ನಮ್ಮನನ್ನು ಕರೆದು, ಅವರ ಸಾಹಸ ಪ್ರತಾಪಗಳ ಹಾಗೂ ದುರಂತದ ವರ್ಣನೆಯನ್ನು ಕೇಳುವಾಗ ಕನ್ನಡಿಗರು ಅಶ್ರು ನಿವೇದನೆ ಸಲ್ಲಿಸುತ್ತಾರಲ್ಲದೆ, ಅಭಿಮಾನದಿಂದ ಹಿಗ್ಗುತ್ತಾರೆ. 'ಭಾರತರತ್ನ ವಿಶ್ವೇಶ್ವರಯ್ಯನವರು ತಮ್ಮ ಕನಸುಗಾರಿಕೆಯಯಿಂದ, ಮೇಧಾವಿತನದಿಂದ, ಕಾರ್ಯಕುಶಲತೆಯಿಂದ, ಸೃಜನಶೀಲ ಪ್ರತಿಭೆಯಿಂದ, ಭವಿಷ್ಯ ಪ್ರಜ್ಞೆಯಿಂದ ಭಾರತಕ್ಕೆ ಮಾತ್ರವಲ್ಲ, ಇಡೀ ಜಗತ್ತಿಗೆ ಭೂಷಣ ಪ್ರಾಯರಾದವರೆಂದು' ಮನು ಅವರು ಚಿತ್ರಿಸಿದ್ದಾರೆ. ಕುಸ್ತಿಕಲೆಯಲ್ಲಿ ಸಾಧಿಸಿದ 'ಹಿಂದ್ ಕೇಸರಿ' ಸಿದ್ಧಿಯಿಂದಾಗಿ ಚಂಬಾ ಮುತ್ನಾಳರು ಕರ್ನಾಟಕಕ್ಕೆ ಗೌರವ ತಂದುಕೊಟ್ಟರೆಂಬುದು ಹೆಮ್ಮೆಯ ಸಂಗತಿ. ದೇಶೀಯ ಪದ್ಧತಿಯ ಆಟಗಳಾದ ಕುಸ್ತಿ ಖೋಖೋ, ಕಬಡ್ಡಿ, ಅಟ್ಯಾಪಟ್ಯಾ ಮುಂತಾದವು ವಿದೇಶೀಯ ಕ್ರಿಕೆಟ್ ಟೆನ್ನಿಸ್ ಆಟಗಳ ದಾಳಿಯಿಂದಾಗಿ ದುಸ್ಥಿತಿಗೊಳಗಾಗುತ್ತಿರುವ ಸಂಕಟವನ್ನು ಅಭಿವ್ಯಕ್ತಗೊಳಿಸುವ ಮನು ಅವರ ದೇಶಭಿಮಾನವನ್ನು ಈ ದೇಶದ ಕ್ರೀಡಾಪ್ರೇಮಿಗಳು ಸರಿಯಾಗಿ ಅರ್ಥಮಾಡಿಕೊಳ್ಳಬೇಕು, ಲಾವಣಿಗಳಿಗೂ ಸುಗ್ರಾಸವಾದ ಮೈಲಾರ ಮಹಾದೇವನ ಬಲಿದಾನದ ವೀರಗಾಥೆ ಅಂಜುಕುಳಿಗಳ ಹೃದಯಕ್ಕೆ ಶೌರ್ಯದಾನ ಮಾಡುವ ರೀತಿಯಲ್ಲಿ ಭಾವಾತ್ಮಕವಾಗಿ ರಚನೆಗೊಂಡಿದೆ.

'ಕನಕದಾಸ' ಮತ್ತು 'ಪ್ರಭುಪಾದರ' ಅಭೂತಪೂರ್ವ ಜೀವನ ವಿಕಾಸ, ಸಾಧನೆಸಿದ್ಧಿಗಳನ್ನು ಬಳಿಗಾರರು ಅನನ್ಯ ಆತ್ಮೀಯತೆಯಿಂದ ಸುಂದರವಾಗಿ ಕುಂಚಿಸಿದ್ದಾರೆ. ತಿಮ್ಮಪ್ಪ ತಿಮ್ಮಪ್ಪನಾಯಕನಾಗಿ, ತದನಂತರ ಕನಕಪ್ಪ, ಕನಕದಾಸರಾಗಿ ಪರಿಣಾಮ ಹೊಂದಿದ ಲೌಕಿಕಾಲೌಕಿಕದ ಭವ್ಯಕಥನವನ್ನು ಪುಳಕ ಹುಟ್ಟಿಸುವಂತೆ ವರ್ಣಿಸಿದ್ದಾರೆ. ಅಪರೂಪದ ಕ್ರಾಂತಿಕಾರಿ ವಿಚಾರಪರ ಕವಿಪುಂಗವರವರು, ಜಾತಿ ಕುಲ ವಿನಾಶಕ್ಕಾಗಿ ಹೋರಾಡಿದ, ವೈಷ್ಣವ ಮಾಧ್ವ ಶೈವ ವೀರಶೈವ ಮತಗಳ ನಡುವಣ ಸಮನ್ವಯಕಾರರು, ಧರಣಿಯ ಕಲ್ಲಿಗೆ ಶರಣೆಂದು ಪೂಜೆಯ ಮಾಡಬಾರದೆಂದು ಘೋಷಿಸಿ, ಮೂರ್ತಿಪೂಜೆಯನ್ನು ಖಂಡಿಸಿ, ಏಕದೇವತೋಪಾಸನೆಯನ್ನು ಎತ್ತಿಹಿಡಿದ ಮಹಾಪುರುಷರವರು, ಈ ಲೋಕದಲ್ಲಿ ಜ್ಞಾನವೇ ಸರ್ವಶ್ರೇಷ್ಠವೆಂದು, ಅದಕ್ಕೆ ಸಮನಾದದ್ದು ಬೇರೊಂದಿಲ್ಲವೆಂದು ಡಂಗುರಿಸಿ, ಸಂಪ್ರದಾಯದ ನಡುವೆಯೂ ಸ್ವತಂತ್ರ ಮನೋಭಾವವನ್ನೂ ವ್ಯಕ್ತಿ ವೈಶಿಷ್ಟ್ಯವನ್ನೂ ಮೆರೆದ ಮಹಾಮಹಿಮರು- ಇದು ಗ್ರಂಥಕರ್ತರು ಕನಕದಾಸರಿಗೆ ಸಲ್ಲಿಸಿರುವ ಗೌರವ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಕೃಷ್ಣಜ್ಞೆಯ ಪ್ರಸಾರಕ್ಕೆ ಅಡಿಪಾಯ ಹಾಕಿದ ಶ್ರೀಲ ಪ್ರಭುಪಾದರ ಅದ್ಭುತ ಜೀವನ ಸಾಧನೆ ಸಿದ್ಧಿಗಳನ್ನು ಬಳಿಗಾರರು ಓದುಗರ ಮನ ಮುಟ್ಟುವಂತೆ ದೀರ್ಘವಾಗಿಯೆ ಚಿತ್ರಿಸಿದ್ದಾರೆ. 1896ರಲ್ಲಿ ಕಲ್ಕತ್ತಾದಲ್ಲಿ ಜನಿಸಿದ ಅಭಯಚರಣರು ಸದ್ಗುರುಗಳ ಸಂಪರ್ಕದಿಂದ ವೇದ ವೇದಾಂತ ಭಾಗವತ ಭಗವದ್ಗೀತೆಗಳನ್ನು ಜೀರ್ಣಿಸಿಕೊಂಡು, ಇಂಗ್ಲೀಷ್ ಭಾಷೆಯಲ್ಲಿಯೂ ವ್ಯಾಖ್ಯಾನಗಳನ್ನು ರಚಿಸಿ, ಮಹಾದಾರ್ಶನಿಕರಾಗಿ, ಕೃಷ್ಣಪ್ರಜ್ಞೆಯಲ್ಲಿ ಮುಳುಗಿ, ಅದರ ಪ್ರಸಾರಕ್ಕಾಗಿ, ಸಂಸಾರವನ್ನು ತೊರೆದು, ಸನ್ಯಾಸ ಸ್ವೀಕರಿಸಿ, ಶ್ರೀ ಭಕ್ತಿವೇದಾಂತಸ್ವಾಮಿ ಪ್ರಭುಪಾದರಾದ, ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ ಕೃಷ್ಣನ ಆಜ್ಞೆಯಿಂದ ಅಮೇರಿಕಾಕ್ಕೆ ಹೋಗಿ, ಕಠಿಣ ಸಮಸ್ಯೆಗಳ ಮಧ್ಯೆಯೂ ವಿಶ್ವವಿಖ್ಯಾತರಾಗಿ, ಗುರಿಮುಟ್ಟಿದ ಸಂತೃಪ್ತಿಯಿಂದ 1977ರಲ್ಲಿ ವಿಶ್ವಚೇತನದಲ್ಲಿ ವಿಲೀನಗೊಂಡ ಜಗದ್ವಂದ್ಯರ ಸಾಹಸವಿಜಯಗಾಥೆಯಿದು. ಶ್ರೀರಾಮಾನುಜ ಮಧ್ವರ ತತ್ವಗಳಿಗೆ ಮಾರುಹೋದ, ಚೈತನ್ಯ ಮಹಾಪ್ರಭುಗಳ ಆರಾಧಕರಾದ ಅವರು ಸ್ಥಾಪಿಸಿದ ಅಂತರರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಸ್ಥೆ (ಇಸ್ಕಾನ್) ವಿಶ್ವದಲ್ಲೆಲ್ಲ ವ್ಯಾಪಿಸಿದೆ. ಮಾಯೆಯ ಸೇನೆಯ ಅಜ್ಞಾನವನ್ನು ಸೋಲಿಸಲು ನಮ್ಮ ಪುಸ್ತಕಗಳು ಮತ್ತು ನಿಯತಕಾಲಿಕೆಗಳು ಅತ್ಯಂತ ಪ್ರಮುಖ ಪ್ರಚಾರ ಆಯುಧಗಳು. ಅಂತಹ ಸಾಹಿತ್ಯವನ್ನು ನಾವು ಹೆಚ್ಚು ಹೆಚ್ಚು ಉತ್ಪಾದಿಸಿ, ಪ್ರಪಂಚದಾದ್ಯಂತ ಹೇರಳವಾಗಿ ವಿತರಣೆ ಮಾಡಿದಷ್ಟು ಪ್ರಪಂಚವನ್ನು ನಾವು ಆತ್ಮಹತ್ಯಪಥದಿಂದ ಪಾರು ಮಾಡಿದಂತಾಗುತ್ತದೆ ಎಂಬ ಪ್ರಭುಪಾದರ ಸಂದೇಶ ಪುಸ್ತಕ ಶತ್ರುಗಳಿಗೆ ಅರ್ಥವಾಗುತ್ತದೆಯೆ ? ಅನೇಕ ಸಮಸ್ಯೆಗಳ ನಡುವೆಯೂ ಕೃಷ್ಣ ಆಂದೋಲನ ಜಗತ್ತಿನಲ್ಲಿ ಹರಡುತ್ತದೆ ಎಂಬ ಅವರ ಭವಿಷ್ಯ ನಿಜವಾಗಿದೆ. ಶಿಷ್ಯರಿಗೂ ಗುರುಗಳಿಗೂ ವಿಯೋಗವೆಂಬುದೇ ಇಲ್ಲ. ಏಕೆಂದರೆ ಶಿಷ್ಯರು ತಮ್ಮ ಗುರುಗಳ ಉದ್ದೇಶಗಳನ್ನು ಅನುಸರಿಸುತ್ತಿರುವವರೆಗೂ, ಗುರುಗಳು ಶಿಷ್ಯರ ಸಮೀಪದಲ್ಲೇ ಇರುತ್ತಾರೆ. ಇದನ್ನು ವಾಣಿ ಸಾನ್ನಿಧ್ಯವೆನ್ನುತ್ತಾರೆ. ದೇಹದ ಅಸ್ತಿತ್ವವಿದ್ದಾಗ ಅದು ವಪು ಸಾನ್ನಿಧ್ಯವೆಂದು ಸಾಯುವ ಮುನ್ನ ಆ ಹಿರಿಯ ಚೇತನ ನುಡಿದ ಮಾತು ಸಾರ್ವಕಾಲಿಕ ಸತ್ಯ.

ಕಾದಂಬರೀ ಸಾಮ್ರಾಟ ಶ್ರೀ ಶಿವರಾಮಕಾರಂತರ 'ಜಗದೋದ್ಧಾರನಾ' ಕೃತಿಯ ವಿಶ್ಲೇಷಣೆಯಲ್ಲಿ ನಿರ್ಮೋಹಕ ವಸ್ತುದೃಷ್ಟಿಯಿದೆ, ಪ್ರಭುದ್ಧತೆಯಿದೆ, ಸಮತೋಲನವಿದೆ. ಅನ್ಯಾಯ ಅನಿಷ್ಟಗಳನ್ನು ಕಾರಂತರು ನಿರ್ದಾಕ್ಷಿಣ್ಯವಾಗಿ ಎದುರಿಸುತ್ತಾರೆಂದು, ವ್ಯಂಗ್ಯತಂತ್ರದ ಮೂಲಕ ವಿಡಂಬಿಸುತ್ತಾರೆಂದು, ಮಾನವತೆ ಮತ್ತು ವೈಚಾರಿಕತೆ ಅವರ ಬದುಕಿನ ಮಹಾಮಂತ್ರಗಳೆಂದು ಬಳಿಗಾರ್ ಸರಿಯಾಗಿಯೇ ಅವರ ನಿಲವೊಲವುಗಳನ್ನು ಎತ್ತರ-ಬಿತ್ತರಗಳನ್ನು ಅಳೆಯುತ್ತಾರೆ. ಶೋಷಣೆ ಯಾವ ರೂಪದಲ್ಲಿದ್ದರೂ ಕಾರಂತರಿಗಾಗದೆಂಬುದನ್ನು ಸೋದಾಹರಣವಾಗಿ ತೋರಿಸುತ್ತಾರೆ. ಉಪನಿಷತ್ತು ಭಗವದ್ಗೀತೆಗಳಲ್ಲಿಲ್ಲದ ವಿಚಾರಗಳನ್ನು ಸೃಷ್ಟಿಸಿ, ಜನಮನದಲ್ಲಿ ಬಿತ್ತುವ ಸಾಧುಸನ್ಯಾಸಿಗಳ ಮೋಸಗಾರಿಕೆಯನ್ನು ಬಯಲಿಸಿ, ಸಮಾಜವನ್ನು ಸತ್ಯದ ಮಾರ್ಗದಲ್ಲಿ ಕೊಂಡೊಯ್ಯುವುದೆ ಕಾದಂಬರಿಯ ಉದ್ದೇಶವೆಂದು ವಿಮರ್ಶಕರು ಸ್ಪಷ್ಟಪಡಿಸುತ್ತಾರೆ. ತಮ್ಮ ಕಾದಂಬರಿಗಳಿಗೆ ಬೇಕಾದ ವಸ್ತು ವಿಷಯ ನಾಯಕ ಪಾತ್ರಗಳ ಅನ್ವೇಷಣೆ ಕಾರಂತರ ನಿರಂತರ ವ್ಯವಸಾಯವಾಗಿದೆಯೆಂಬುದು ಮನು ಅವರ ಅಭಿಪ್ರಾಯ. ಓದುಗರೊಡನೆ ಲೇಖಕರೇ ನೇರ ಸಂಭಾಷಣೆ ನಡೆಸಿದಂತೆ ತೋರುವುದರಿಂದ, ಕಾದಂಬರಿಯ ಓಟದಲ್ಲಿ ಲೇಖಕರೆ ಭಾಗಿಯಾಗುವುದರಿಂದ, ಅಲ್ಲಿ ಜರುಗುವ ಸಣ್ಣಪುಟ್ಟ ಘಟನೆಗಳ ಬಗ್ಗೆ ಅನುಮಾನುಗಳು ಓದುಗನ ಮನಸ್ಸಿನಲ್ಲಿ ಏಳಬಹುದೆಂಬ ತಮ್ಮ ಅನಿಸಿಕೆಯನ್ನು ದಾಖಲಿಸಲು ವಿಮರ್ಶಕರು ಮರೆತಿಲ್ಲ.

ಉಳಿದ ಲೇಖನಗಳಲ್ಲಿ ಒಂದೆರಡು ಹೊರತಾಗಿ ಮಿಕ್ಕವು ಕಿರು ಪ್ರಬಂಧಗಳ ರೂಪದಲ್ಲಿವೆ. ಕಾಲಹರಣವೇ ಪತನಕ್ಕೆ ದಾರಿಯೆಂದು ಸಮಯಾವಕಾಶದಲ್ಲಿ ನಿರವಿಸುತ್ತ, ಟಿವಿಯನ್ನು ಸೋಮಾರಿ ಪೆಟ್ಟಿಗೆಯೆಂದು ಕರೆದಿದ್ದಾರೆ. 'ಏಕಾಂತ ಮತ್ತು ಏಕಾಗ್ರತೆ'ಯಲ್ಲಿ ಬರುವ ಲೇಖಕನ ಜೀವನ ಏಕಾಂಗಿಯಾದದ್ದು, ಆತ ಏಕಾಂಗಿತನ ಬಿಟ್ಟಿದ್ದಾದರೆ ಆತನ

ಕೃತಿಗಳು ಸೊರಗಿ ಹೋಗುತ್ತವೆ. ಏಕಾಗ್ರತೆಯು ಆಧ್ಯಾತ್ಮಿಕ ಸ್ಥಿತಿ. ಇಚ್ಛಾಶಕ್ತಿಯ ಮೂಲನೆಲೆ ಏಕಾಗ್ರತೆ ಎಂಬ ಸೂತ್ರಪ್ರಾಯದ ಸೂಕ್ತಿಗಳು ಮನು ಅವರ ಅಡಕಶೈಲಿಗೆ ನಿದರ್ಶನವಾಗಿವೆ. ಸಾರ್ವತ್ರಿಕ ವಸ್ತು ಸೌಲಭ್ಯಗಳ ಬಗೆಗಿರಬೇಕಾದ ಎಲ್ಲ ಜನರ ಜವಾಬ್ದಾರಿಯನ್ನು 'ಸಾಮಾಜಿಕ ಹೊಣೆ'ಯಲ್ಲಿ ವಿವರಿಸಿದ್ದಾರೆ. ಸರ್ವರೂ ನೆನಪಿಡಬೇಕಾದ ಸಂಗತಿಗಳು ಇಲ್ಲಿವೆ. ಅನುಕರಣೆ ಎರವಲು ಮೂಲಕ 'ಕೃತಕತೆ' ತಾಂಡವವಾಡುತ್ತಿರುವ ಈ ಯುಗದಲ್ಲಿ ಸಹಜತೆ ಸರಳತೆಗಳ ಛಾಪು ಸಾಧ್ಯವೇ ಎಂದು ಪ್ರಬಂಧಕಾರರು ಹಳವಳಿಸುತ್ತಾರೆ. ನಮ್ಮ ನಾಡಿನಲ್ಲಿ 1304ರಲ್ಲಿ ದೊರೆತ ಕೊಹಿನೂರ್ ವಜ್ರದ ಇತಿಹಾಸವನ್ನು ಅಭಿಮಾನದಿಂದ 'ಭಾರಿ ಬೆಳಕಿನ ಬೆಟ್ಟ-ಕೊಹಿನೂರ್ ವಜ್ರ' ಎಂಬ ಪ್ರಬಂಧದಲ್ಲಿ ವಿವರಿಸುತ್ತಾರೆ.

'ಕಬಿನಿ ನದಿ ಅರಣ್ಯಧಾಮ' ಪ್ರವಾಸಿಗಳಿಗೆ ಪ್ರಿಯವಾದ ಪರಿಚಯ ಲೇಖನ. ಆಹಾರ ಪದಾರ್ಥಗಳನ್ನು ಪೋಲುಮಾಡಬಾರದೆಂಬ ಎಚ್ಚರಿಕೆ ನೀಡುವ 'ಅನ್ನಬ್ರಹ್ಮ', ಮಾತಿನ ಸ್ವರೂಪ ಹಾಗೂ ಜಾದೂಗಾರಿಕೆಯನ್ನು ವಿವರಿಸುವ 'ಮಾತು', ಅಮೆರಿಕೆಯ ವಾಣಿಜ್ಯ ಕಟ್ಟಡಕ್ಕೊದಗಿದ ದುರಂತವನ್ನು ದಾಖಲಿಸುವ 'ಸೆಪ್ಟೆಂಬರ್-11' ಇವು ಇಲ್ಲಿಯ ಕಿರುಲೇಖನಗಳು.

ನಮ್ಮಲ್ಲಿ ಲೇಖನವೊಂದನ್ನೇ ವೃತ್ತಿಯಾಗುಳ್ಳ, ಅದಕ್ಕಾಗಿಯೇ ತಮ್ಮೆಲ್ಲ ಶಕ್ತಿಸಾಮರ್ಥ್ಯಗಳನ್ನು ಸವೆಸುವ ಲೇಖಕರು ವಿರಳ. ಶಿಕ್ಷಕ ವೃತ್ತಿಯೊಡನೆ ಲೇಖನವೃತ್ತಿಯನ್ನೂ ಹೊಂದಿಸಿಕೊಂಡು ಹೋಗುವವರೇ ಹೆಚ್ಚು. ಆಡಳಿತ ಚಕ್ರದಲ್ಲಿ ಕೈ ಸಿಕ್ಕಿಸಿಕೊಂಡಿರುತ್ತ, ಲೇಖನ ವೃತ್ತಿಯನ್ನೂ ನಿಭಾಯಿಸಿಕೊಂಡು ಹೋಗುವವರು ವಿರಳಾತಿ ವಿರಳ. ಇಂಥ ವಿರಳರಲ್ಲಿ ಶ್ರೀ ಮನುಬಳಿಗಾರ್ ಒಬ್ಬರು. ವಿವಿಧ ಅಧಿಕಾರ ವಲಯಗಳ ಅನುಭವ ಸಂಪತ್ತು ಭಾವಕೋಶದ ಮೂಲಕ ಕನ್ನಡ ಸಾಹಿತ್ಯಕ್ಕಿಳಿದಾಗ, ಭಾಷಾ ಸಾಹಿತ್ಯಗಳ ಬನಿ, ಕೆಚ್ಚು ಕಸುವು ಚೆಲುವುಗಳು ಬಹುಗುಣವಾಗುವುದರಲ್ಲಿ ಅನುಮಾನವಿಲ್ಲ. ವೈವಿಧ್ಯಮಯ ಪಕ್ವಾನುಭವವುಳ್ಳ ಶ್ರೀ ಮನು ಬಳಿಗಾರ್ ಅವರ ಲೇಖನಿಯಿಂದ ಕನ್ನಡದಲ್ಲಿ ಹುಲುಸು ಬೆಳೆಯೊದಗಿ, ನಾಡಿಗೆ ಸಿರಿಸುಗ್ಗಿಯ ಆನಂದ ದೊರೆಕೊಳ್ಳಲೆಂದು ಹಾರೈಸುತ್ತೇನೆ.

ಮೈಸೂರು **ದೇಜಗೌ**

# ನೆನೆಯುವೆ ನಮಿಸುವೆ

ಕಳೆದ ಇಪ್ಪತ್ತು ವರ್ಷಗಳಲ್ಲಿ ನಾನು ಬರೆದ ಹಲವಾರು ಲಲಿತ ಪ್ರಬಂಧಗಳಲ್ಲಿ ಆಯ್ದ 26 ಲೇಖನಗಳ ಸಂಗ್ರಹ ಇದಾಗಿದೆ. ಇವೆಲ್ಲವುಗಳೂ ಆಗಾಗ ಪತ್ರಿಕೆಗಳಲ್ಲಿ ಪ್ರಕಟವಾದವುಗಳು ಹಾಗೂ ಆಕಾಶವಾಣಿಯಿಂದ ಬಿತ್ತರಗೊಂಡವುಗಳು.

ಈ 'ಏಕಾಂತ ಮತ್ತು ಏಕಾಗ್ರತೆ'ಗೆ ಮುನ್ನುಡಿ ಬರೆದು ಹರಸಿದ ನಾಡಿನ ಖ್ಯಾತ ಸಾಹಿತಿ ನಾಡೋಜ ಡಾ. ದೇಜಗೌ ಅವರಿಗೆ ನನ್ನ ಮೊದಲ ನಮನಗಳು.

ಬೆನ್ನುಡಿ ಬರೆದುಕೊಟ್ಟ ಆತ್ಮೀಯ ಮಿತ್ರ ಕ್ರಿಯಾಶೀಲ ಸಾಹಿತಿ ಜಯಂತ ಕಾಯ್ಕಿಣಿ ಅವರಿಗೆ ವಂದನೆಗಳು.

ಪ್ರಕಾಶನಗೊಳಿಸುತ್ತಿರುವ ಮಿತ್ರರಾದ ಬೆಂಗಳೂರಿನ ಐ.ಬಿ.ಎಚ್. ಪ್ರಕಾಶನದ ಶ್ರೀ ಸಂಜಯ ಅಡಿಗ ಅವರಿಗೆ ಹಾಗೂ ಸಿಬ್ಬಂದಿಗೆ ಕೃತಜ್ಞತೆಗಳು.

ಇಲ್ಲಿಯ ಲೇಖನಗಳನ್ನು ಕಾಲಕಾಲಕ್ಕೆ ಪ್ರಕಟಿಸಿದ ವಿಜಯ ಕರ್ನಾಟಕ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಸುಧಾ, ಸಂಕ್ರಮಣ, ಸಂಕಲನ, ಸಂಜೆವಾಣಿ (ವಿಶೇಷ ಸಂಚಿಕೆ) ಜನಪದ, ಪ್ರಸಾದ-ಪತ್ರಿಕೆಗಳ ಸಂಪಾದಕರುಗಳಿಗೆ ಹಾಗೂ ಬಿತ್ತರಿಸಿದ ಧಾರವಾಡ ಆಕಾಶವಾಣಿಯ ನಿರ್ದೇಶಕರು ಹಾಗೂ ಸಿಬ್ಬಂದಿಗೆ ನನ್ನ ಮನಃಪೂರ್ವಕ ನೆನೆಕೆಗಳು.

ನನ್ನ ಬರವಣಿಗೆಗೆ ಸದಾ ಪ್ರೋತ್ಸಾಹಿಸುತ್ತಿರುವ ಮಾನ್ಯಮಂತ್ರಿಗಳಾದ ಶ್ರೀ ಡಿ.ಬಿ. ಇನಾಮದಾರ್ ಅವರಿಗೆ ನಾನು ಉಪಕೃತನಾಗಿದ್ದೇನೆ.

ಎಂದಿನಂತೆ ನನ್ನ ಪ್ರಿಯಮಿತ್ರರಾದ ಸರಜೂ, ಎನ್.ಕೆ.ನಾರಾಯಣ, ಪೂರ್ಣಿಮಾ, ಬಸವರಾಜ ಸಾದರ, ಡಾ.ಮರಾಠ, ಎ.ಆರ್.ಪಾಟೀಲ, ಮೇಘಣ್ಣವರ್, ನವೀನ್ ಪಾಟೀಲ, ಶಿವಕುಮಾರ್, ಚೇತನ್, ಜಿ.ಎಂ. ಶಿರಹಟ್ಟಿ, ಮಹಾಬಲಮೂರ್ತಿ, ಹಿರಿಯರಾದ ಎಚ್.ವೀರಭದ್ರಯ್ಯ, ಎಸ್.ಎಸ್.ಪಾಟೀಲ್, ಡಾ.ಆಲೂರ್ ಎಂ.ಸಿ. ಪಾಟೀಲ್, ಬಡದಾಳಿ ಮತ್ತು ಕಿರಿಯರಾದ ಆನಂದ, ವಿವೇಕ, ಮಲ್ಲೇಶ್, ಮಹೇಶ್ ಇವರುಗಳಿಗೆ ನಲ್ಮೆಯ ನೆನೆಕೆಗಳು,

ಕರಡು ತಯಾರಿಸುವಲ್ಲಿ ಸಹಾಯ ಮಾಡಿದ ರಾಮದಾಸ್, ಜರಳಿ ಅವರುಗಳಿಗೆ ಹಾಗೂ ಅಂದವಾಗಿ ಮುದ್ರಿಸಿದ ಶ್ರೀರಂಗ ಪ್ರಿಂಟರ್ಸ್ ಅವರಿಗೆ

ಉಳಿದಂತೆ ನನ್ನೆಲ್ಲ ಸಹೋದರ ಸಹೋದರಿಯರಿಗೆ ಹಾಗೂ ಧರ್ಮಪತ್ನಿ ಸೌ.ಮಾಯಾಗೆ ನನ್ನ ತುಂಬು ಹೃದಯದ ಕೃತಜ್ಞತೆಗಳು.

ಬೆಂಗಳೂರು

27.11.2003

**ಮನು ಬಳಿಗಾರ್**

ಶಿಗ್ಲಿ ಮನೆ, ನಂ. 37, 6ನೇ ಕ್ರಾಸ್,

ಕೆ.ಎ.ಎಸ್ ಆಫೀಸ್‌ರ್ಸ್ ಕಾಲೋನಿ,

ಬಿ.ಟಿ.ಎಮ್. II ಸ್ಟೇಜ್, ಬೆಂಗಳೂರು-68

# ಪರಿವಿಡಿ


| | | |
|---|---|---|
| 1. | ಭಾರತೀಯ ಸಂಸ್ಕೃತಿ | 11 |
| 2. | ಏಕಾಂತ ಮತ್ತು ಏಕಾಗ್ರತೆ | 20 |
| 3. | ಸಾಮಾಜಿಕ ಹೊಣೆ | 25 |
| 4. | ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು | 28 |
| 5. | ಅಂತರಂಗಶುದ್ಧಿ | 38 |
| 6. | ಸಮಯಾವಕಾಶ | 41 |
| 7. | ಕಾರಂತರ ಜಗದೋದ್ಧಾರ-ನಾ | 44 |
| 8. | ಜನಗಣಮನ-ಒಂದು ಅನಿಸಿಕೆ | 53 |
| 9. | ಕನಕದಾಸರ ಜೀವನ ಸಿದ್ಧಿ | 57 |
| 10. | ಕೃತಕತೆ | 65 |
| 11. | ಹುತಾತ್ಮ ಮಹಾದೇವ ಮೈಲಾರ | 67 |
| 12. | ಗ್ರಾಹಕ ಪ್ರಜ್ಞೆ | 76 |
| 13. | ಮಾತು | 80 |
| 14. | ಶ್ರೀಲ ಪ್ರಭುಪಾದರು | 83 |
| 15. | ಯಾವುದೂ ಕ್ಷುಲ್ಲಕವಲ್ಲ. | 108 |
| 16. | ಗಿರಡ್ಡಿಯವರ ಲಲಿತ ಪ್ರಬಂಧಗಳು | 111 |
| 17. | ಭಾರಿ ಬೆಳಕಿನ ಬೆಟ್ಟ-ಕೊಹಿನೂರ್ ವಜ್ರ | 116 |
| 18. | ಹಿಂದ್ ಕೇಸರಿ ಚಂಬಾ ಮುತ್ನಾಳ | 119 |
| 19. | ವಿಶ್ವಶ್ರೇಷ್ಠದಲ್ಲೊಂದು ಕಬಿನಿ ನದಿ ವಿಹಾರಧಾಮ | 123 |
| 20. | ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿಚುಕ್ಕಿ ಕಿತ್ತೂರುರಾಣಿ ಚೆನ್ನಮ್ಮ | 129 |
| 21. | ಸೆಪ್ಟಂಬರ್ 11 | 135 |
| 22. | ಕಂಠಿಯವರು - ನಿಜಲಿಂಗಪ್ಪನವರು: ಒಂದು ಅನ್ಯೋನ್ಯ ಸಂಬಂಧ | 137 |
| 23. | ವಾಹ್ ಬೆಂಗಳೂರು | 144 |
| 24. | ಅನ್ನಬ್ರಹ್ಮ | 146 |
| 25. | ಬೆಂಗಳೂರಿಗೆ ಬರಲಿರುವ 'ಮೆಟ್ರೋ ಬಸ್' | 149 |
| 26. | ಕಚಗುಳಿ ಇಡುತಿದೆ ಚಳಿಗಾಲ | 153 |

# ಭಾರತೀಯ ಸಂಸ್ಕೃತಿ

'ಸಂಸ್ಕೃತಿ'' ಎಂಬ ಪದವು ಕಳೆದೆರಡು ಶತಮಾನಗಳಿಂದ ಬಹಳ ಪ್ರಚಲಿತದಲ್ಲಿದೆ. ಆ ಮೊದಲು 'ಸಂಸ್ಕೃತಿ' ಶಬ್ದವಿರಲೇ ಇಲ್ಲ ಎಂದಲ್ಲದಿದ್ದರೂ, ಈಗಿನ ಅರ್ಥದಲ್ಲಿ ಅದರ ಬಳಕೆಯಾಗುತ್ತಿರಲಿಲ್ಲವೆಂದು ಹೇಳಬಹುದು. ಅದಕ್ಕೆ ಪರ್ಯಾಯವಾಗಿ ಆ ಪೂರ್ವದಲ್ಲಿ ಸಂಸ್ಕಾರ ಪದ ಚಲಾವಣೆಯಲ್ಲಿದ್ದುದು ಕಂಡುಬರುತ್ತದೆ. ಇಂಗ್ಲೀಷ್ ಮೂಲದ 'Culture' (ಕಲ್ಚರ್) ಎಂಬುದಕ್ಕೆ ಸರಿಸಮಾನವಾಗಿ ಇಂದಿನ 'ಸಂಸ್ಕೃತಿ' ಪದ ಭಾರತೀಯ ಸಂದರ್ಭದಲ್ಲಿ ಉಪಯೋಗಿಸಲ್ಪಡುತ್ತಿರುವುದು ಹತ್ತೊಂಬತ್ತನೆ ಶತಮಾನದಿಂದಲೆನ್ನಬಹುದು. ಪಾಶ್ಚಾತ್ಯರಲ್ಲಿ 'ಕಲ್ಚರ್' ಪದದ ಬಳಕೆ ಅತಿಯಾದಂತೆಲ್ಲ ವಿಶ್ವದ ಇನ್ನಿತರೆಡೆಗಳಲ್ಲೂ ಇದಕ್ಕೆ ಎಲ್ಲಿಲ್ಲದ ಮಹತ್ವ ಬರತೊಡಗಿತು.

ಒಂದು ದೃಷ್ಟಿಯಲ್ಲಿ ಈ 'ಸಂಸ್ಕೃತಿ' ಪದದ ಅರ್ಥವಿವರಣೆ ನೀಡುವುದು ತುಂಬ ಪ್ರಯಾಸಕರ ಕೆಲಸ. ಜಗತ್ತಿನ ಬಹುತೇಕ ಎಲ್ಲ ಕಡೆ, ಎಲ್ಲ ಭಾಷೆಗಳಲ್ಲಿ ಕೂಡ ಈ ಬಗ್ಗೆ ತೀವ್ರ ಜಿಜ್ಞಾಸೆ ನಡೆದಿದ್ದಾಗ್ಯೂ, ಸಂಸ್ಕೃತಿಯ ಅರ್ಥವಿವರಣೆ ಕೆಲಸಾರೆ ವಿಪರೀತಕ್ಕಿಟ್ಟುಕೊಂಡು ಅಪಾರ್ಥಗಳನ್ನೂ ಹುಟ್ಟುಹಾಕಿದೆ. ಆದ್ದರಿಂದ ಈ ಶಬ್ದದ ಬಗ್ಗೆ ಸ್ಪಷ್ಟ ತಿಳುವಳಿಕೆ ಅವಶ್ಯವಾಗಿದೆ. ಹಲವಾರು ವಿದ್ವಾಂಸರು ಈ ಬಗ್ಗೆ ತಮ್ಮದೇ ಆದ ವ್ಯಾಖ್ಯಾನಗಳನ್ನೂ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಒಂದು ಸಾಮಾನ್ಯವಾದ ವಿವರಣೆ ಹೊರಹೊಮ್ಮಬಹುದಾಗಿದೆಯಾದರೂ ನಿರ್ದಿಷ್ಟವಾಗಿ ಇದೇ ಸಂಸ್ಕೃತಿಯ ವ್ಯಾಖ್ಯಾನ ಎಂದು ಹೇಳುವುದು ಕಷ್ಟಸಾಧ್ಯವಾದದ್ದು. ಅನೇಕ ವಿಚಾರವಾದಿಗಳೂ ಅಲ್ಲದೇ ಸಂಯುಕ್ತ ರಾಷ್ಟ್ರಸಂಘ (ಯು.ಎನ್.ಓ), ಭಾರತೀಯ ಸಾಂಸ್ಕೃತಿಕ ಸ್ವಾತಂತ್ರ್ಯ ಸಂಸ್ಥೆ (ಇಂಡಿಯನ್ ಕಾಂಗ್ರೆಸ್ ಫಾರ್ ಕಲ್ಚರ್ ಫ್ರೀಡಂ) ಗಳಂತಹ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಂಘಸಂಸ್ಥೆಗಳು ಈ ಬಗ್ಗೆ ಕಾರ್ಯತತ್ಪರವಾಗಿದ್ದರೂ, ಇದನ್ನು ವ್ಯಾಖ್ಯಾನಿಸುವ ದಿಸೆಯಲ್ಲಿ ಒಮ್ಮತ ಸಾಧಿಸಲಾಗಿಲ್ಲವೆನ್ನಬಹುದು. ಸಂಸ್ಕೃತಿ ಪದದ ಅರ್ಥವ್ಯಾಪ್ತಿ ತುಂಬ ಆಳ ಹಾಗೂ ವಿಸ್ತಾರವಾದದ್ದಾದ್ದರಿಂದ ಒಂದು ವಾಕ್ಯದಲ್ಲೊ, ಮಾತಿನಲ್ಲೊ ಅದರ ವಿವರಣೆ

---

ಈ ಲೇಖನವು ಲೇಖಕರು ದಿ. 13.7.1997ರಂದು ಅಮೇರಿಕಾದ ಕುಪರ್ಟಿನೊ ಸಿಟಿಹಾಲ್‌ನಲ್ಲಿ ಮಾಡಿದ "ಇಂಡಿಯನ್ ಕಲ್ಚರ್ ಅಂಡ್ ಹೆರಿಟೇಜ್" ಎಂಬ ಭಾಷಣದ ಕನ್ನಡ ರೂಪಾಂತರ.

- ಲೇಖಕರಿಂದ

ಅಸಾಧ್ಯ. ಈ ಎಲ್ಲವುಗಳನ್ನು ನೇಪಥ್ಯದಲ್ಲಿರಿಸಿಕೊಂಡು ಇಲ್ಲಿ 'ಸಂಸ್ಕೃತಿ'ಯನ್ನು ವ್ಯಾಖ್ಯಾನಿಸಲು ಯತ್ನಿಸಲಾಗಿದೆ.

'ಸಂಸ್ಕೃತಿ' ಪದವು ಇಂಗ್ಲೀಷಿನ ಕಲ್ಚರ್ (culture) ಶಬ್ದದಿಂದ ಬಂದುದಾಗಿದ್ದರೆ ಆ 'ಕಲ್ಚರ್' (culture) ಎಂಬುದು ಮೂಲ ಲ್ಯಾಟಿನ್ ಪದ ಕಲ್ಟ್ (cult) ಅಥವಾ ಕಲ್ಟಸ್ (cultus) ಎಂಬುದರಿಂದ ಉದ್ಭವವಾಗಿದೆ. ಲ್ಯಾಟಿನ್‌ನಲ್ಲಿ ಈ ಪದಕ್ಕೆ ಗೌರವಿಸು, ಸೇವಿಸು, ನಿಷ್ಠೆಮಾಡು, ಲಕ್ಷ್ಯದಲ್ಲಿರಿಸಿಕೊ, ಟಿಲ್ಲೇಜ್ (tillage), ಕಲ್ಟಿವೇಶನ್ (cultivation), ರಿಫೈನ್ಮೆಂಟ್

(refinement) ಎಂಬ ಕೃಷಿ, ವ್ಯವಸಾಯ, ಸಂಸ್ಕಾರ, ಸಂಸ್ಕೃತಿ, ಬೆಳೆ - ಈ ಅರ್ಥಗಳನ್ನು ನೀಡಲಾಗಿದೆ. ಅಂದರೆ ಪ್ರಾರಂಭದಲ್ಲಿ ಇದು ವ್ಯವಸಾಯ ಮಾಡು, ಹದ ಮಾಡು, ಸುಧಾರಣೆ ಮಾಡು ಎಂಬ ಭೂ ಸಂಬಂಧಿ ಕ್ರಿಯೆಗಳ ಸೂಚಕವಾಗಿ ಬಂದಿತೆನ್ನಬಹುದು. ಭಾರತೀಯ ಸಂದರ್ಭದಲ್ಲಿ ಪುರಾತನ ಗ್ರಂಥಗಳಲ್ಲೆಲ್ಲೂ ಈ ಸಂಸ್ಕೃತಿ ಶಬ್ದದ ಪ್ರಸ್ತುತ ಅರ್ಥದ ಉಪಯೋಗವಾದದ್ದಿಲ್ಲ. ಆದಾಗ್ಯೂ ಈ ಹಿಂದೆಯೇ ಹೇಳಿದಂತೆ ಇದಕ್ಕೆ ತತ್ವಮಾನವಾದ ಸಂಸ್ಕಾರ ಪದದ ಪುಷ್ಕಳ ಬಳಕೆಯಾದದ್ದಿದೆ. ಬುದ್ಧಿ ಸಂಸ್ಕಾರ, ಮನೆತನದ ಸಂಸ್ಕಾರ, ಷೋಡಶ ಸಂಸ್ಕಾರ ಇಂತಹ ಪದಗಳು ಯಥೇಚ್ಛವಾಗಿವೆ. ಪ್ರಾರಂಭದಲ್ಲಿ ಜಮೀನಿಗೆ, ಬೆಳೆಗಳಿಗೆ, ಕೃಷಿ ವಿಚಾರಕ್ಕೆ ಸಂಬಂಧಿಸಿದ್ದ ಕಲ್ಚರ್ ಪದವು ಕಾಲಾಂತರದಲ್ಲಿ ಮಾನವನ ಆಚಾರ, ವಿಚಾರ, ನಡೆನುಡಿಗಳಲ್ಲಿಯ ಸುಧಾರಣೆ, ಹಿರಿಮೆ ಗರಿಮೆಗಳಿಗೆ ಅನ್ವಯವಾಗಿ, ಯೋಗ್ಯ ಹಾಗೂ ಒಳ್ಳೆಯ ಮನುಷ್ಯನನ್ನು ಕಲ್ಚರ್ಡ್ ಅಥವಾ ಸಂಸ್ಕೃತ ಎಂದು ಕರೆಯುವ ಮಟ್ಟ ತಲುಪಿತು. ಅಂತೆಯೇ ಒಳ್ಳೆಯ ಸಂಸ್ಕಾರವಂತ ವ್ಯಕ್ತಿಯೆಂದರೆ ಸುಸಂಸ್ಕೃತ ಎಂದಾಯಿತು. ಸಂಸ್ಕಾರ ಅಥವಾ ಸಂಸ್ಕರಣ - ಸಮ್ಯಕ್ ಕರಣ - ಸಮ್ಯಕ್ ಕೃತಿ - ಸಂಸ್ಕೃತಿ ಹೀಗೆ ಒಳ್ಳೆಯದನ್ನಾಗಿ ಮಾಡುವುದು, ಶುದ್ಧಿಮಾಡಿ ಉತ್ತಮ ಪಡಿಸುವುದು ಎಂದರ್ಥ ಬಂತು. ಮನುಷ್ಯ ತನ್ನ ವ್ಯಕ್ತಿತ್ವದ ಉನ್ನತಿಗಾಗಿ, ಉತ್ಕೃಷ್ಟತೆಯ ಪರಿಗ್ರಹಣಕ್ಕಾಗಿ ಮಾಡುವ ಎಲ್ಲ ಪ್ರಯತ್ನಗಳಲ್ಲಿ ಹಾಗೂ ಆ ಮೂಲಕ ವ್ಯಕ್ತವಾಗುವ ಆತನ ನಡತೆಗಳಲ್ಲಿ ಅವನ ಸಂಸ್ಕೃತಿ ಅಡಕಗೊಂಡಿದೆ ಎಂದೆನ್ನಬಹುದು. ಇದನ್ನೇ ಕುವೆಂಪುರವರು, ".... ಮನುಷ್ಯ ಚೇತನದ ಸರ್ವತೋಮುಖವೂ ವಿಕಾಸಮಾನವೂ ಆದ ಆತ್ಮಶ್ರೀಯನ್ನು ಸಂಸ್ಕೃತಿ ಎಂದು ಸಂಕೇತಿಸಬಹುದು... ಅಸಂಖ್ಯ ಮನಸ್ಸುಗಳ ಸಮಷ್ಟಿಯಲ್ಲಿ ಸಂಭವಿಸಿ, ಪ್ರಕಟವಾಗಿ, ಸಿದ್ಧವಾಗುವ ಒಂದು ದೇಶದ ಸಮಷ್ಟಿ ಮನಸ್ಸಿನ ಚಿತ್‌ಶಕ್ತಿಯ ರಸಗಂಗೆಯೆ ಆ ದೇಶದ ಸಂಸ್ಕೃತಿ..." ಎಂದು ವ್ಯಕ್ತಿ ಹಾಗೂ ದೇಶದ ಸಂಸ್ಕೃತಿಗಳನ್ನು ವ್ಯಾಖ್ಯಾನಿಸಿದ್ದಾರೆ. ಡಿ.ವಿ.ಜಿ.ಯವರು "ಸಂಸ್ಕೃತಿ ಎಂದರೆ ಆತ್ಮಶಿಕ್ಷಣ -ವಿಶ್ವಪ್ರಯುಕ್ತವಾದ ಆತ್ಮಶಿಕ್ಷಣ, ಸಂಸ್ಕೃತಿಯು ಸಂಪೂರ್ಣದೆಶೆಗೆ ಬಂದಾಗ ಮನುಷ್ಯನು ವಿಶ್ವವಿಶಾಲ ಜೀವಿಯಾಗುತ್ತಾನೆ. ಆಗ ಕಾಲ, ದೇಶ ಪರಿಮಿತಿಗಳು ಅವನನ್ನು ಹಿಡಿಯವು...." ಎಂಬುದನ್ನು ಈ ಕೆಳಗಿನ ಪದ್ಯದಲ್ಲಿ ವಿಶದಪಡಿಸಿದ್ದಾರೆ.

**ಕಲಿತಂ ಕಲ್ತರೊಳಜ್ಞರೊಳ್ ತಿಳಿಯದ ವಾಕ್ಯಜ್ಞರೊಳ್ ವಾಗ್ಮಿಮ|**

**ತ್ತೆಳೆಯಂ ತಾನೆಳೆಯರ್ಕಳೊಳ್ ಬಡವರೊಳ್ ದೀನಂ ಸಖಂ ಸಖ್ಯರೊಳ್||**

**ನಲಿವಂ ಭೋಗದೆ ಭೋಗಿವೃಂದದಿ ವಿರಾಗಂ ರಾಗ ನಿರ್ಮುಕ್ತರೊಳ್ |**

**ಸುಲಭಂ ಸಂಸ್ಕೃತನೆಲ್ಲರೊಳ್ ಸಮರಸಂ ಸಮರಸಂ ವಿಶ್ವಾತ್ಮ ಸಜ್ಞಾಪನಂ ||**

ಈ ಪ್ರಪಂಚದಲ್ಲಿ ಅವನು ಎಲ್ಲಿದ್ದರೂ ಅಲ್ಲಿ ವಿದೇಶೀಯನಂತಾಗದೇ ಹೊಂದಿಕೊಳ್ಳುತ್ತಾನೆ, ತಾನು ಅಲ್ಲಿಯವನೇ ಎಂಬಂತೆ ನಡೆದುಕೊಳ್ಳುತ್ತಾನೆ ಎಂದು ಸಂಸ್ಕೃತನನ್ನು ವಿವರಿಸಿದ್ದಾರೆ. ಹಾಗಿದ್ದಲ್ಲಿ ಸಂಸ್ಕೃತನೆಂದರೆ ವಿದ್ಯಾವಂತನೇ, ಜ್ಞಾನಿಯೇ, ಸಂಗೀತ ಕಲೆ ಇತ್ಯಾದಿಗಳ ಮೆಚ್ಚುವ ರಸಿಕನೇ, ಉತ್ತಮ ವಾಗ್ಮಿಯೇ, ಹಿತಮಿತ ಭಾಷಿಯೇ, ಎಲ್ಲರೊಳಗೊಂದಾಗು ಮಂಕುತಿಮ್ಮ ಎಂದು ಡಿವಿಜಿ ಅಂದಂತೆ ಸರ್ವರೊಳು ಸಾಮರಸ್ಯದಿಂದಿರುವವನೇ ? ಹೌದು ಇಂತಹ ಪ್ರಶ್ನೆಗಳು ಸಹಜ. ಆದರೆ ಸುಸಂಸ್ಕೃತನನ್ನು ಈ ವಿವಿಧ ಗುಣಗಳಲ್ಲಿ ಯಾವುದೊಂದಕ್ಕೇ ಸೀಮಿತಗೊಳಿಸುವುದು ಅಸಮಂಜಸ. ಆತ

ಇವೆಲ್ಲವುಗಳು ಸಮ್ಮಿಳಿತಗೊಂಡ ಪರಿಪಾಕವೆನ್ನಬಹುದು. ಇದನ್ನೆ ಈ ಮೇಲಿನ ಪದ್ಯದಲ್ಲಿ ಸೂಚ್ಯವಾಗಿ ಬಿಂಬಸಲಾಗಿದೆ. ಕಾಡು ಬೆಟ್ಟಗಳಲ್ಲಿಯ ಹಲವು ಹದಿನಾರು ಮೂಲಿಕೆಗಳ ಸಾರವನ್ನು ವೈದ್ಯನು ಪುಟಪಾಕದಲ್ಲಿರಿಸಿ ಒಂದೇ ಹೊಸ ಸಂಜೀವಿನಿ ರಸವನ್ನಾಗಿಸುವಂತೆಯೇ ಸಂಸ್ಕೃತಿ ಎಂಬುದೂ ಸಂಗೀತ ಸಾಹಿತ್ಯಾದಿ ನಾನಾ ಕಲಾನುಭವಗಳ ಮತ್ತು ನಾನಾ ಶಾಸ್ತ್ರಶಿಕ್ಷಣಗಳ ಫಲಿತಾಂಶಗಳ ಸಾರಸಮ್ಮೇಳನ. ಅದರಲ್ಲಿ ವಿಜ್ಞಾನವೂ ಉಂಟು ವಿವೇಕವೂ ಉಂಟು. ಔದಾರ್ಯವೂ ಉಂಟು, ದಾರ್ಢ್ಯವೂ ಉಂಟು. ಬಿಗಿಯೂ ಉಂಟು ಸಡಿಲವೂ ಉಂಟು (1). ಮ್ಯಾತ್ಯು ಅರ್ನಾಲ್ಡನ ಮಾತನ್ನು ಹೀಗೆ ವಿವರಿಸುತ್ತ ಡಿ.ವಿ.ಜಿ. ಎರಡು ದೃಷ್ಟಾಂತಗಳನ್ನು ಕೊಡುತ್ತಾರೆ.

ಮೊದಲನೆಯದು-

ಭವಭೂತಿಯ,

ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ |

ಲೋಕೋತ್ತರಾಜಾಂ ಚೇತಾಂಸಿಕೋ ಹಿ ವಿಜ್ಞಾತುಮರ್ಹತಿ ||

(ಅಸಾಧಾರಣರಾದವರ ಹೃದಯವನ್ನು ಹೇಗೆ ತಾನೇ ಕಂಡುಕೊಳ್ಳಲಾದೀತು ? ಅದು ವಜ್ರಕ್ಕಿಂತಲೂ ಕಠಿಣವಾಗಿರುವುದುಂಟು, ಹುವ್ವಿಗಿಂತ ಮೃದುವಾಗಿರುವುದುಂಟು)

ಎರಡನೆಯದು - ವಾಲ್ಮೀಕಿಯ

ವಿಷ್ಣುನಾ ಸದೃಶೋ ವೀರ್ಯೇ ಸೋಮವತ್ ಪ್ರಿಯದರ್ಶನಃ |

ಕಾಲಾಗ್ನಿ ಸದೃಶಃ ಕ್ರೋಧೇ ಕ್ಷಮಯಾ ಪೃಥವೀ ಸಮಃ ||

(ಶ್ರೀರಾಮನು ಪರಾಕ್ರಮದಲ್ಲಿ ವಿಷ್ಣುವಿನಂಥವನು, ಆದರೂ ನೋಟಕ್ಕೆ ಚಂದ್ರನಂತೆ, ಕೋಪಗೊಂಡಾಗ ಆತ ಪ್ರಳಯಾಗ್ನಿ, ಆದರೆ ಕ್ಷಮಿಸುವುದರಲ್ಲಿ ಭೂಮಾತೆಯಂತಹವನು).

ಸಂಸ್ಕೃತಿಯ ಬಗ್ಗೆ ಆಳ ಅಧ್ಯಯನ ಮಾಡಿದ ಪ್ರಥಮರಲ್ಲಿ ಮ್ಯಾತ್ಯು ಅರ್ನಾಲ್ಡ್

---

1.ಸಂಸ್ಕೃತಿ: ಡಿ.ವಿ.ಜಿ. (ಮ್ಯಾತ್ಯು ಅರ್ನಾಲ್ಡ್ ನ ಮಾತು)

ಪ್ರಮುಖನಾಗಿದ್ದಾನೆ. 1869ರಲ್ಲಿಯೇ ಈತ ತನ್ನ ಕಲ್ಚರ್ ಅಂಡ್ ಅನಾರ್ಕಿ - ಸಂಸ್ಕೃತಿ ಮತ್ತು ಅರಾಜಕತೆ-ಎಂಬ ಪ್ರಬಂಧದಲ್ಲಿ ಸಂಸ್ಕೃತಿಯ ಬಗ್ಗೆ ತೀವ್ರ ಜಿಜ್ಞಾಸೆ ನಡೆಸಿ ತನ್ನದೇ ಆದ ವ್ಯಾಖ್ಯಾನವನ್ನೂ ಮಾಡಿದ್ದಾನೆ. ಅವನ ಪ್ರಕಾರ "..... ಮನುಷ್ಯ ಸ್ವಭಾವಕ್ಕೆ ಸೌಂದರ್ಯವನ್ನೂ ಬೆಲೆಯನ್ನೂ ಕೊಡುವ ಎಲ್ಲ ಶಕ್ತಿಗಳ ಸುಸಂಗತ ವಿಕಾಸವೇ ಸಂಸ್ಕೃತಿ... ಸಂಸ್ಕೃತಿಯೆಂದರೆ ಸುಗುಣ ಸಾಮರಸ್ಯ, ಸಮರಸ ಸಂಪೂರ್ಣತೆಯಲ್ಲಿ ಎರಡು ಅತೀ ಶ್ರೇಷ್ಠಗುಣಗಳು ಸಮ್ಮಿಳಿತವಾಗಿರುತ್ತವೆ. ಅವು ಮಾಧುರ್ಯ ಮತ್ತು ಕಾಂತಿ (ಸ್ವೀಟ್‌ನೆಸ್ ಅಂಡ್ ಲೈಟ್).... ಸಂಸ್ಕೃತಿ ಎಂಬುದು ಕಾವ್ಯಕ್ಕೆ ಸಮಾನವಾದುದು, ಅದು ಕಾವ್ಯ

ಅನುಸರಿಸುವ ಧರ್ಮವನ್ನು ಅನುಸರಿಸತಕ್ಕದ್ದು. ಒಂದು ಸುಂದರ ಜೀವನದ ಭಾವನೆ ಮತ್ತು ಅದಕ್ಕನುಸಾರವಾಗಿ ಮನುಷ್ಯ ಸ್ವಭಾವದ ಸರ್ವತೋಮುಖ ಗುಣಸಂಪಾದನೆ-ಇದು ಕಾವ್ಯದ ಪ್ರಧಾನ ತತ್ವ, ಸಂಸ್ಕೃತಿಯದೂ ಅದೇ."

ತನ್ನ ಸಮಾಜ ವಿಜ್ಞಾನಗಳ ವಿಶ್ವಕೋಶ (ಎನ್‌ಸೈಕ್ಲೊಪೆಡಿಯಾ ಆಫ್ ಸೋಸಿಯಲ್ ಸೈನ್ಸಸ್)ದಲ್ಲಿ ಮಾಲಿನೊವಸ್ಕಿಯು, ಸಂಸ್ಕೃತಿಯು ಪರಂಪರಾಗತವಾದ ವಿಚಾರ, ಮೌಲ್ಯ ರೀತಿ ನೀತಿ, ತಾಂತ್ರಿಕ ಅಯಾಮ, ಪರಿಕರ ಪದಾರ್ಥ ಇತ್ಯಾದಿಗಳನ್ನು ಹೊಂದಿರುತ್ತದೆನ್ನುತ್ತಾನೆ. ಅಂದರೆ ಸಂಸ್ಕೃತಿಯು ಭೌತಿಕವಸ್ತುಗಳಂತೆಯೇ ಬೌದ್ಧಿಕ ಜ್ಞಾನ ಹಾಗೂ ನೈತಿಕ, ಆರ್ಥಿಕ ಹಾಗೂ ಆಧ್ಯಾತ್ಮಿಕ ಮೌಲ್ಯಗಳನ್ನೂ ಒಳಗೊಳ್ಳುತ್ತದೆ ಎಂದರ್ಥವಾಗುತ್ತದೆ. ಇಂತಹ ಹಲವಾರು ಆಯಾಮಗಳನ್ನು ಹೊಂದಿರುವ ಸಂಸ್ಕೃತಿ ಸದಾ ಕ್ರಿಯಾಶೀಲವಾಗಿರುತ್ತದೆ, ಅದು ಮಲೆತು ನಿಂತ ನೀರಿನಂತೆ ನಿಶ್ಚಲವಾಗಿರುವುದು ಅಸಾಧ್ಯವಾದದ್ದು. ತನ್ನ ಬೆಳವಣಿಗೆಯ ಉದ್ದಕ್ಕೂ ಕಾಲಘಟ್ಟದ ವಿವಿಧ ಹಂತಗಳಲ್ಲಿ ಅದು ಆಯಾ ಕಾಲಮಾನದ ಅತ್ಯುತ್ತಮ ಅಂಶಗಳನ್ನು ಹೀರಿಕೊಳ್ಳುತ್ತ ಸಮೃದ್ಧವಾಗುತ್ತ ಮುನ್ನಡೆಯುತ್ತದೆ. ಹೀಗೆ ಬೆಳೆದು ಬರುವ ಸಂಸ್ಕೃತಿ ವ್ಯಕ್ತಿಭೂಯಿಷ್ಠ ಹಾಗೂ ಸಮಾಜ ಭೂಯಿಷ್ಠ ಎರಡೂ ತೆರನದ್ದಾಗಿರುತ್ತದೆ. ವ್ಯಕ್ತಿ ತನ್ನ ವ್ಯಕ್ತಿತ್ವದ ವಿಕಾಸಕ್ಕಾಗಿ ಮಾಡುವ ಪ್ರಯತ್ನ, ಶ್ರಮ, ಅನ್ವೇಷಣೆ, ಆತನ ಉತ್ಕೃಷ್ಟತೆಯ ದಾಹ ಮೊದಲನೆಯದರ ಮುಖ್ಯ ಲಕ್ಷಣವಾದರೆ ಒಂದು ನಿರ್ದಿಷ್ಟವಾದ ಸಮುದಾಯ ಸಂಸ್ಕೃತಿಯು ಆ ಸಮಾಜದ ಎಲ್ಲ ವ್ಯಕ್ತಿಗಳ ಪರಸ್ಪರ ಸಂಬಂಧ ಹಾಗೂ ಆಂತರಿಕ ಹೊಂದಾಣಿಕೆಯ ಪರಿಣಾಮವಾಗಿ ಪ್ರಕಟಗೊಳ್ಳುತ್ತದೆ. ಅದಕ್ಕಾಗಿಯೇ ಡಾ. ಎಂ.ಎಂ. ಕಲಬುರ್ಗಿಯವರು, "ಸಂಸ್ಕೃತಿ ಎನ್ನುವುದು ಸಮೂಹ ಸಮ್ಮತ ಜೀವನ ಪದ್ಧತಿಯಾಗಿದೆ' ಎನ್ನುತ್ತಾರೆ. ಈ ದಿಶೆಯಲ್ಲಿ ವ್ಯಕ್ತಿಯ ಸುತ್ತಲಿನ ಭೌಗೋಲಿಕ ಪರಿಸರ ಹಾಗೂ ಸಮಾಜ ಅನುಸರಿಸಿಕೊಂಡು ಬಂದ ಆವರೆಗಿನ ಆಚರಣೆಗಳು ಕೂಡ ಒಂದು ಸಂಸ್ಕೃತಿಯು ರೂಪುಗೊಳ್ಳುವಲ್ಲಿ ತುಂಬ ಪ್ರಭಾವ ಬೀರುತ್ತವೆ. ಈ ಕಾರಣಕ್ಕಾಗಿಯೇ ವ್ಯಕ್ತಿಯ ಸಾಂಸ್ಕೃತಿಕ ಬೆಳವಣಿಗೆಗೆ ಮುಕ್ತ ಹಾಗೂ ಸುರಕ್ಷಿತ ಸಾಮಾಜಿಕ ವಾತಾವರಣ ಬಹುಮುಖ್ಯವೆಂದೆನಿಸುತ್ತದೆ. ಯಾಕೆಂದರೆ ಸ್ವಾತಂತ್ರ್ಯವಿಲ್ಲದೆ ಸಂಸ್ಕೃತಿಯು ಬೆಳೆಯಲಾರದು, ಅಂತೆಯೇ ನಾಗರೀಕತೆಯೂ ಕೂಡ. ಆದುದರಿಂದ ಕ್ರೋಚೆ ಮುಂತಾದ ವಿಚಾರವಂತರು, "ವಿಶ್ವದ ಇತಿಹಾಸವೆಂದರೆ ಸ್ವಾತಂತ್ರ್ಯದ ಇತಿಹಾಸವೇ" ಎಂದು ಅಭಿಪ್ರಾಯಪಟ್ಟಿದ್ದಾರೆ (crore: History as the story of Liberty.) ಭೌತಿಕವಾಗಿ ಸಂಪೂರ್ಣ ಸ್ವಾತಂತ್ರ್ಯ ಅಸಾಧ್ಯವಾದರೂ, ಮಾನವನ ಆತ್ಮ ಸಾಕ್ಷಾತ್ಕಾರಕ್ಕಾಗಿ ಬೇಕಾಗುವ ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದು ಅಸಂಭವವಾದುದೇನಲ್ಲ.

**ಭಾರತೀಯ ಸಂಸ್ಕೃತಿ:** ಸಂಸ್ಕೃತಿಯು ರೂಪುಗೊಳ್ಳುವಲ್ಲಿ ಹಾಗೂ ಬೆಳವಣಿಗೆ ಹೊಂದುವುದರಲ್ಲಿ ಭೌಗೋಲಿಕ ಅಂಶಗಳು ಮಹತ್ವದ ಪಾತ್ರಗಳನ್ನಾಡುತ್ತವೆ. ಪ್ರಾದೇಶಿಕ ಹವಾಗುಣ, ಭೂ ಫಲವತ್ತತೆ ಅರಣ್ಯ ಸಂಪತ್ತು, ನದಿ ಕೆರೆಗಳು ಮುಂತಾದವು ಮಾನವನ ಆರ್ಥಿಕ ಸಂಪನ್ಮೂಲಗಳ ಮೇಲೆ ತುಂಬ ಪ್ರಭಾವ ಬೀರುವುದರಿಂದ ಇವೆಲ್ಲವುಗಳ ಪರಿಣಾಮ ನೇರವಾಗಿ ಸಂಸ್ಕೃತಿಯ ಬೆಳವಣಿಗೆ ಮೇಲಾಗುವುದು ಸಹಜವೇ. ಆದ್ದರಿಂದಲೇ ಸಂಸ್ಕೃತಿಗಳನ್ನು ವಿಂಗಡಿಸಿ ಹೆಸರಿಸುವಾಗ ಗಂಗಾತೀರ, ಸಿಂಧೂ ನದಿ ಕೊಳ್ಳ, ಈಜಿಪ್ಟ್, ಮೆಸೆಪಟೋಮಿಯಾ, ಚೀನ ಮುಂತಾದ ಪ್ರದೇಶ ಸೂಚಕ ಪ್ರತ್ಯಯಗಳು ಬಂದಿವೆ. ಇದರಂತೆಯೇ ದೇಶ ದೇಶಗಳಿಗೆ ವಿಭಿನ್ನ ಸಂಸ್ಕೃತಿಗಳು ಇರುವುದನ್ನು ಕಾಣಬಹುದಾಗಿದ್ದು ಅವುಗಳಲ್ಲಿಯೂ ಅತ್ಯಂತ ಪ್ರಾಚೀನ ಸಂಸ್ಕೃತಿಗಳಲ್ಲಿ ಭಾರತೀಯ ಸಂಸ್ಕೃತಿಯೂ

ಒಂದಾಗಿದೆ. ಹಲವಾರು ಪುರಾತನ ಸಂಸ್ಕೃತಿಗಳು ಇಂದು ಕಣ್ಮರೆಯಾಗಿ ಹೋಗಿದ್ದರೂ ಭಾರತೀಯ ಸಂಸ್ಕೃತಿಯು ತನ್ನದೇ ಆದ ವೈಶಿಷ್ಟ್ಯತೆಗಳಿಂದ ಇಂದಿಗೂ ಪ್ರಸ್ತುತವಾಗಿರುವುದು ಅದರ ಅನಂತತೆಗೆ ಸಾಕ್ಷಿಯಾಗಿದೆ. ಇದರಿಂದಾಗಿಯೇ ಭಾರತೀಯ ಸಂಸ್ಕೃತಿಯನ್ನು ಆದಿ ಹಾಗೂ ಅನಂತವೆಂದು ಗುರುತಿಸಲಾಗುತ್ತದೆ.

ಭಾರತೀಯ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳನ್ನು ವರ್ಣಿಸುವಾಗಾಗಲಿ ಅಥವಾ ನಿರಂತರತೆಯನ್ನು ಸಾದರಪಡಿಸುವಾಗಾಗಲಿ ವಿಭಿನ್ನ ದೃಷ್ಟಿಕೋನಗಳನ್ನು ಹೊಂದಲಾಗಿದೆ. ಕೆಲವರಿಗೆ ಅದು ತನ್ನ ಅಧ್ಯಾತ್ಮ ಹಾಗೂ ತತ್ವಜ್ಞಾನ ಈ ಮೇಲೆ ಅವಲಂಬಿಸಿದ್ದಾದರೆ, ಮತ್ತೆ ಕೆಲವರಿಗೆ ಅದು ಅದರ ಅಪೂರ್ವ ಶಿಲ್ಪಕಲೆ, ಸಂಗೀತ, ಸಾಹಿತ್ಯ, ನೃತ್ಯ, ಚಿತ್ರಕಲೆ ಮುಂತಾದ ಲಲಿತ ಕಲೆಗಳಲ್ಲಿ ವ್ಯಕ್ತವಾಗಿದೆ, ಇನ್ನುಳಿದ ಹಲವರಿಗೆ ಅದು ಇವೆರಡರ ಸಮ್ಮೇಳನವಾಗಿದೆ. ವೈಚಾರಿಕ ಭಿನ್ನತೆಗಳು ಏನೇ ಇರಲಿ ಆ ಎಲ್ಲ ವಿಚಾರ ಸರಣಿಗಳ ತಳಹದಿಯಲ್ಲಿ ಆಧ್ಯಾತ್ಮಿಕ ನಂಬುಗೆಯ ಒಂದು ಸರ್ವೇಸಾಮಾನ್ಯವಾದ ಧಾರೆ ಪ್ರವಹಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ. ಆಧ್ಯಾತ್ಮಿಕ ಭಾವನೆ ಎಂದಾಕ್ಷಣವೇ ಧಾರ್ಮಿಕ ಮನೋಧರ್ಮ ಅಥವಾ ನಿರಾಕರಣವಾದ ಮಾತ್ರ ಎಂದು ಅರ್ಥೈಸಕೂಡದು. ಸಂಪತ್ತಿನ ಗಳಿಕೆ, ಸಾಂಸಾರಿಕ ಆಚಾರ ವಿಚಾರ, ಭೌತಿಕ ಆಸೆ ಆಕಾಂಕ್ಷೆಗಳ ಪೂರೈಕೆಗಳೂ ಕೂಡ ಈ ಆಧ್ಯಾತ್ಮಿಕತೆಯ ಜೊತೆಜೊತೆಯಲ್ಲೇ ಭಾರತೀಯ ಸಾಂಸ್ಕೃತಿಕ ಜೀವನದಲ್ಲಿ ಹಾಸುಹೊಕ್ಕಾಗಿವೆ. ಇದು ಅದರ ವೈಶಿಷ್ಟ್ಯವೂ ಆಗಿದೆ.

ಭಾರತೀಯ ಸಂಸ್ಕೃತಿಯ ಮತ್ತೊಂದು ಪ್ರಮುಖ ಲಕ್ಷಣವೆಂದರೆ ಇಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ವಿಪುಲವಾದ ಅವಕಾಶವಿರುವುದಾಗಿದೆ. ಭಾರತೀಯ ದರ್ಶನಗಳಲ್ಲಿ ವ್ಯಕ್ತಿಯ ಧ್ಯೇಯ ಸಾಕ್ಷಾತ್ಕಾರಕ್ಕಾಗಿ ವಿಭಿನ್ನ ಮಾರ್ಗ, ಅಭಿಪ್ರಾಯಗಳಿದ್ದರೂ ಬಹುತೇಕ ಎಲ್ಲಿಯೂ ಆತನ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಬಂದಿರುವುದನ್ನು ಕಾಣಲಾರೆವು, ಅನೂಚಾನವಾಗಿ ಎಲ್ಲ ಪ್ರಭೇದಗಳಲ್ಲೂ ಅದನ್ನು ರಕ್ಷಿಸಿಕೊಂಡೇ ಬರಲಾಗಿದೆ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿಯೂ ಕೂಡ ವ್ಯಕ್ತಿಗೆ ಕರ್ಮವನ್ನು ಮಾಡಲು, ಬಿಡಲು ಅಥವಾ ತನ್ನದೇ ಆದ ಮಾರ್ಗ ಅನುಸರಿಸಲು ಸಾಕಷ್ಟು ಸ್ವಾತಂತ್ರ್ಯವಿರುವುದು.

ಆಧ್ಯಾತ್ಮಿಕತೆ, ಸತ್ಯಾನ್ವೇಷಣೆ, ಮೋಕ್ಷ ಸಾಧನೆಗಳಂತೆಯೇ (ಪರಧರ್ಮ/ಮತ) ಸಹಿಷ್ಣುತೆ, ಸಮಾನತೆ, ಸಮನ್ವಯತೆಗಳು ಕೂಡ ಭಾರತೀಯ ಸಂಸ್ಕೃತಿಯ ವಿಶಿಷ್ಟ ಲಕ್ಷಣಗಳಾಗಿವೆ. ಮುಸ್ಲಿಂ, ಬ್ರಿಟಿಷ್‌ನಂತಹ ಹಲವಾರು ಪರಧರ್ಮ, ಸಂಸ್ಕೃತಿಗಳು ಹೊರಗಿನಿಂದ ಬಂದುವುಗಳಾಗಿದ್ದರೆ, ಜೈನ, ಬೌದ್ಧ, ಸಿಖ್, ಮುಂತಾದವುಗಳು ಸ್ಥಳೀಯ/ದೇಶೀಯ ಧರ್ಮಗಳಾಗಿವೆ. ಹೀಗೆ ಅನ್ಯ ಧರ್ಮ ಹಾಗೂ ಸಂಸ್ಕೃತಿಗಳ ಪ್ರಭಾವವೇನೆಯಿದ್ದರೂ, ಅವೆಲ್ಲವುಗಳ ಸಾರವನ್ನು ಹೀರಿ ತನ್ನೊಳು ಅರಗಿಸಿಕೊಂಡು ತನ್ನದೇ ಆದ ಸ್ವಂತಿಕೆಯ ಸ್ವರೂಪವನ್ನು ಭಾರತೀಯ ಸಂಸ್ಕೃತಿ ಎಂಬುದು ಕಾಯ್ದುಕೊಂಡು ಬಂದಿದೆ. ಎಂ.ಎಲ್. ವಿದ್ಯಾರ್ಥಿ ಹೇಳುವಂತೆ ಆತ್ಮದ ದಿವ್ಯ ಸಂದೇಶವಾದ ಸಂಸ್ಕೃತಿಯು ಪ್ರಬಲ ವೈರುಧ್ಯ, ವೈಪರೀತ್ಯಗಳು ಎದುರಾದಾಗ ತುಸು ನೇಪಥ್ಯಕ್ಕೆ ಸರಿದು ಅವೆಲ್ಲವುಗಳು ಶಮನಗೊಳ್ಳಲು ಕಾಯ್ದು, ಕಾಲದ ಛಾಯೆಯಲ್ಲಿ ಅಡಗಿಕೊಂಡು, ಸಾವಧಾನಿಯಾಗಿ ತನ್ನ ಇರುವಿಕೆಯನ್ನು ಕಾಯ್ದುಕೊಂಡು ಬರುತ್ತದೆ(1). ಇದನ್ನೆ ಜೆ.ಜೆ. ಹನಿಮನ್‌ನು, “ಸಾಂಸ್ಕೃತಿಕ ಅಧಃಪತನ ಕ್ವಚಿತ್ತಾಗಿ ಆಗುತ್ತದೆ. ಆದರೆ ಒಟ್ಟಾರೆ ಸಂಸ್ಕೃತಿಯು

ಎಂದೂ ವಿನಾಶದ ಹಾದಿ ಹಿಡಿಯುವುದಿಲ್ಲವೆಂದೆನ್ನುತ್ತಾನೆ." (2) ಇದಕ್ಕೆ ಭಾರತೀಯ ಸಂಸ್ಕೃತಿಯು ಒಂದು ಜೀವಂತ ನಿದರ್ಶನವಾಗಿದೆ.

ಆಧ್ಯಾತ್ಮಿಕತೆಯನ್ನು ತಳಹದಿಯಾಗಿಟ್ಟುಕೊಂಡು ಮೋಕ್ಷಸಾಧನೆಯ ಗುರಿಹೊಂದಿದ ಭಾರತೀಯ ಸಂಸ್ಕೃತಿಯು ಜಡಜಗತ್ತಿನ ಜೊತೆಗಿನ ತನ್ನ ಸಂಬಂಧವನ್ನೂ ಅಬಾಧಿತವಾಗಿರಿಸಿಕೊಂಡದ್ದು ಮತ್ತೊಂದು ವಿಶೇಷ ಲಕ್ಷಣ ಎನ್ನಬಹುದು. ಜಗತ್ತಿನ ಪಾಶ್ಚಾತ್ಯ ಸಂಸ್ಕೃತಿಗಳಂತಹ ಇನ್ನಿತರ ಕೆಲ ಸಂಸ್ಕೃತಿಗಳು ಕೇವಲ ಐಹಿಕ ಅಥವಾ ಭೌತಿಕ ಸಂತೃಪ್ತಿಯುಳ್ಳ ಆರ್ಥಿಕ ಹಾಗೂ ಸಾಮಾಜಿಕ ಅಂಶಗಳನ್ನು ಪ್ರಧಾನವಾಗಿಟ್ಟುಕೊಂಡಿದ್ದರಿಂದ ಕಾಲಾಂತರದಲ್ಲಿ ಅವು ಕಣ್ಮರೆಯಾಗಿಹೋಗಿವೆ. ಆದರೆ ಆಧ್ಯಾತ್ಮಿಕ ಅಥವಾ ಆತ್ಮಜ್ಞಾನದ ಗುರಿ ಹೊಂದಿದ ಭಾರತೀಯ ಸಂಸ್ಕೃತಿಯು ಅಬಾಧಿತವಾಗಿ ಉಳಿದುಕೊಂಡು ಬಂದಿದೆ. ಅದನ್ನೇ "ಆತ್ಮಲಾಭಾನ್ನ ಪರಂ ವಿದ್ಯತೆ" ಅಂದರೆ ಆತ್ಮ ಸಾಕ್ಷಾತ್ಕಾರವೇ ಪರಮ ಶ್ರೇಷ್ಠ ಲಾಭ ಎಂದು ವಿವರಿಸಲಾಗಿದೆ. ಅದಕ್ಕಾಗಿಯೇ ಅಂತರಾತ್ಮನ ಧ್ವನಿಗೆ ಎಲ್ಲಿಲ್ಲದ ಮಹತ್ವವೂ ಬಂದಿದೆ.

---

1. Sri Aurobindo: Life Divine

2. ...... Cultural decline is rare and so far culture as a whole has never taken this direction: J.J. Honigmann (Understanding culture.)

ಈ ಆಧ್ಯಾತ್ಮಿಕತೆ ಹಾಗೂ ಮೋಕ್ಷ ಸಾಧನೆಯ ಬಗ್ಗೆ ಪ್ರೊ. ಮ್ಯಾಕ್ಸ್ ಮುಲ್ಲರ್‌ರವರು ತಮ್ಮ 'ಇಂಡಿಯಾ, ವಾಟ್ ಕ್ಯಾನ್ ಇಟ್ ಟೀಚ್ ಅಸ್' (ಭಾರತ, ನಮಗೇನು ಕಲಿಸಬಲ್ಲದು) ಎಂಬ ಗ್ರಂಥದಲ್ಲಿ ಯುರೋಪಿಯನ್ನರು ರೋಮನ್, ಜ್ಯೂ ಹಾಗೂ ಗ್ರೀಕ್ ವಿಚಾರಧಾರೆಯಿಂದ ಸಾಕಷ್ಟು ಪ್ರಭಾವಿತರಾಗಿದ್ದರೂ, ಇನ್ನೂ ಹೆಚ್ಚಿನ ಸಾಧನೆಗಾಗಿ ಅಂದರೆ ವಿಶ್ವಮಾನವತ್ವ ಹಾಗೂ ನಿಜವಾದ ಮನುಷ್ಯ ಜೀವನದರ್ಶನವಾಗಬೇಕಾದರೆ, ಕೇವಲ ಇಹಲೋಕದಲ್ಲದೇ ಪರಲೋಕದ್ದನ್ನೂ ಹಾಗೂ ಅವಿನಾಶಿಯಾದದ್ದನ್ನೂ ಕಂಡುಕೊಳ್ಳಬೇಕೆಂದರೆ ಅವರು ಭಾರತದೆಡೆಗೇ ನೋಡಬೇಕಾಗುತ್ತದೆನ್ನುತ್ತಾರೆ. ಇದನ್ನೇ ಅಮೇರಿಕದ ಸುಪ್ರಸಿದ್ಧ ಚಿಂತಕ ಇತಿಹಾಸಕಾರನಾದ ವಿಲ್ ಡುರಾಂಟ್ ಒಂದು ಹೆಜ್ಜೆ ಮುಂದೆ ಹೋಗಿ ಭಾರತವು ಎಲ್ಲ ಜನಾಂಗಗಳ, ತತ್ವಜ್ಞಾನಗಳ, ಯುರೋಪಿನ ಭಾಷೆಗಳ ತಾಯಿ ಎಂದು ಹೇಳುತ್ತ ಅದು ಅರಬರ ಮೂಲಕ ಗಣಿತಶಾಸ್ತ್ರದ, ಬುದ್ಧನ ಮೂಲಕ ಬೈಬಲ್‌ನ ಆದರ್ಶಗಳ ತಾಯಿ ಎಂದೂ ಗ್ರಾಮ ವ್ಯವಸ್ಥೆ ಮೂಲಕ ಸ್ವರಾಜ್ ಹಾಗೂ ಪ್ರಜಾಪ್ರಭುತ್ವದ ತಾಯಿ ಎಂದೆನಿಸುತ್ತದೆ ಎಂದೂ ಹೇಳಿ ಕೊನೆಗೆ ಭಾರತ ಮಾತೆಯು ಬಹುವಿಧದಲ್ಲಿ ನಮ್ಮೆಲ್ಲರಿಗೂ ತಾಯಿ ಸ್ವರೂಪಿಯಾಗಿದ್ದಾಳೆಂದು ಮುಕ್ತಕಂಠದಿಂದ ಹೊಗಳಿದ್ದಾನೆ.[2] ಮಹಾತ್ಮಾಗಾಂಧಿಯವರೂ ಕೂಡ ತಾವು ಚಿಕ್ಕ ಮಗುವಿನಂತೆ ತಾಯಿ ಭಾರತಿಯ ಎದೆಯನ್ನಪ್ಪಿಕೊಂಡಿದ್ದು ಆಕೆಯ ಆಧ್ಯಾತ್ಮಿಕ ಪೌಷ್ಠಿಕತೆಯನ್ನು ಪಡೆದುಕೊಳ್ಳಲು ಎಂದಿದ್ದಾರೆ.

[1]"If I were to look over the whole world to find out the country most richly endowed with all the wealth, power, and beauty that nature can bestow, in some parts a very paradise on earth-I should point to India. If I were asked under what sky the human mind has most fully developed some of its choicest gifts, has most deeply

pondered on the greatest problems and has found solution of some of them which will deserve the attention even of those who have studied Plato and Kant- I should point to India. And IfI were to ask myself from what literature we here in Europe - we who have been nurtured almost exclusively, on the thoughts of the Greeks and the Romans andofone Semiticrace, the Jewish - may draw that corrective which is most wanted in order to make our inner life more perfect, more comprehensive, more universal, in fact more truly human a life not for this only but a transfigured and eternal life, again I should point to India".

Max Muller, India - What Can It Teach Us?

[2]"India was the motherlandofour race, and Sanskrit the mother of Europe's languages, she was the mother ofourphilosophy, mother through the Arabs, of much of our mathematics; mother, through the Buddha, of the ideals embodied in Christianity; mother, through the village community, of self-government and democracy. Mother India is in many ways the mother of us all" - Will Durant, the eminent American thinker and historian.

**I cling to India like a child to**

**Its mother's breast, because I feel**

**That she gives me the spiritual**

**Nourishment that I need.... Mahatma Gandhi.**

ಭಾರತೀಯ ಸಂಸ್ಕೃತಿಯ ಮತ್ತೊಂದು ಪ್ರಮುಖ ಲಕ್ಷಣವೆಂದರೆ ಮಾತೃಭೂಮಿಯ ಬಗ್ಗೆ ಇಲ್ಲಿಯ ಜನಾಂಗದ ತೀವ್ರ ಒಲವು. ತನ್ನ ದೇಶವನ್ನು ಪ್ರೀತಿಸುವುದು ಎಲ್ಲ ಕಡೆಗೂ ಸಾಮಾನ್ಯವಾಗಿ ಕಂಡುಬರುವುದೇ ಆದರೂ ಭಾರತೀಯನ ಪ್ರೇಮ ಅತ್ಯುತ್ಕಟವಾಗಿದ್ದು ಈ ಭೂಮಿಯನ್ನು ಪುಣ್ಯಭೂಮಿಯನ್ನಾಗಿಸಿದೆ. ಇಲ್ಲಿಯ ನೆಲಜಲಕ್ಕೆ ಎಲ್ಲಿಲ್ಲದ ಪ್ರೀತಿ ದೊರಕಿದ್ದು ಅದು ಭಕ್ತಿಯ ರೂಪದಲ್ಲಿ ವ್ಯಕ್ತವಾಗಿದೆ. ಆರ್ಯವರ್ತಾ, ಭರತಭೂಮಿ ಪುಣ್ಯಭೂಮಿ ಎಂಬುವು ಇದಕ್ಕೆ ನಿದರ್ಶನಗಳಾಗಿವೆ. ಈ ನೆಲದ ಬಗೆಗಿನ ಪ್ರೀತಿಭಕ್ತಿಗಳು ಅನಾದಿಕಾಲದಿಂದಲೂ ವ್ಯಕ್ತವಾಗುತ್ತಲೇ ಬಂದಿವೆ. ಋಗ್ವೇದದಲ್ಲಿಯ 'ನದಿ ಸೂಕ್ತ' ಹಾಗೂ ಅಥರ್ವ ವೇದದಲ್ಲಿಯ 'ಭೂಮಿಸೂಕ್ತ'ಗಳಲ್ಲಿ ಈ ಬಗ್ಗೆ ಸಾಕಷ್ಟು ತಿಳುವಳಿಕೆ ನೀಡಲಾಗಿದೆ. ರಾಮಾಯಣದಲ್ಲಂತೂ ರಾಮನು ಲಕ್ಷ್ಮಣನಿಗೆ:

**ಅಪಿ ಸ್ವರ್ಣಮಯಿ ಲಂಕಾ**

**ನ ಮಿ ಲಕ್ಷ್ಮಣ ರೋಚತೆ**

**ಜನನೀ ಜನ್ಮಭೂಮಿಶ್ಚ**

**ಸ್ವರ್ಗಾದಪಿ ಗರೀಯಸಿ**

(ಓ ಲಕ್ಷ್ಮಣನೆ ಈ ಚಿನ್ನದಂಥ ಲಂಕೆಯು ನನಗಾವ ಆಕರ್ಷಣೆಯನ್ನೂ ನೀಡುತ್ತಿಲ್ಲ. ಯಾಕೆಂದರೆ ಮಾತೆ ಹಾಗೂ ಮಾತೃಭೂಮಿಗಳು ಸ್ವರ್ಗಕ್ಕಿಂತಲೂ ಮಿಗಿಲಾದವುಗಳಾಗಿವೆ.) ಎಂದು ತಿಳಿಸುತ್ತ ಪಚ್ಚದ ನಡುಗಡ್ಡೆಯಾದ ಆ ಸುಂದರ ಲಂಕೆಯಲ್ಲೂ ತನ್ನ ತಾಯಿ ಹಾಗೂ ತಾಯಿ ಸ್ವರೂಪಿ ದೇಶವನ್ನು ನೆನೆಯುತ್ತಾನೆ. ಮಹಾಭಾರತದಲ್ಲಂತೂ:

**ಅತ್ರಾಪಿ ಭಾರತಂ ಶ್ರೇಷ್ಠಂ**

**ಜಂಬುದ್ವೀಪೆ ಮಹಾಮುನೆ**

**ಯಾತೋ ಹಿ ಕರ್ಮ ಭೂಮೇಶ....**

ಎಂದು ಭರತ ಭೂಮಿಯ ಶ್ರೇಷ್ಠತೆಯನ್ನು ಕೊಂಡಾಡುತ್ತ ಇಲ್ಲಿ ಜನ್ಮತಾಳಿ ಬರುವುದೆಂದರೆನೆ ಒಂದು ಗೌರವದ ಹಾಗೂ ಪ್ರತಿಷ್ಠೆಯ ಸಂಕೇತ ಹಾಗೂ ಅದಕ್ಕಾಗಿ ಅಗಾಧವಾದ ಪುಣ್ಯ ಮಾಡಿರಬೇಕಾಗುತ್ತದೆಂದು ವರ್ಣಿಸಲಾಗಿದೆ. ಈ ಕೆಲ ಉಲ್ಲೇಖಗಳು ಬ್ರಿಟೀಷರ ಆಡಳಿತದ ಪೂರ್ವದಲ್ಲಿ ಅಂದಿನ ಭಾರತೀಯರಿಗೆ ದೇಶ/ರಾಷ್ಟ್ರದ ಕಲ್ಪನೆಯೇ ಇರಲಿಲ್ಲ ಎಂದು ವಾದ ಮಾಡುವವರಿಗೆ ಸರಿಯಾದ ಉತ್ತರವೆನಿಸುತ್ತವೆ.

ವಿಭಿನ್ನತೆಗಳಲ್ಲಿ ಏಕತೆಯು ಭಾರತೀಯ ಸಂಸ್ಕೃತಿಯ ಮೂಲಮಂತ್ರವಾಗಿದೆಯನ್ನಲಡ್ಡೀಯಿಲ್ಲ. ನಾನಾ ನಮೂನೆಯ ಭಾಷೆ, ಧರ್ಮ, ಜಾತಿ, ಉಪಜಾತಿ, ಜನಾಂಗಗಳನ್ನು ಹೊಂದಿದ್ದರೂ ಸ್ಥಾನಿಕದಲ್ಲಿ ಹಾಗೂ ಸೀಮಿತ ವಲಯಗಳಲ್ಲಿ ಬೇರೆ ಬೇರೆ ಮನೋಧರ್ಮದ ನೆಲೆಗಳನ್ನು ಹೊಂದಿದಾಗ್ಯೂ ಇಡೀ ಭಾರತೀಯ ಕ್ಷೇತ್ರಕ್ಕೊಂದು ಸಾಮಾನ್ಯವಾದ ಸಂಸ್ಕೃತಿಯ ಗುಪ್ತಗಾಮಿನಿ ಹರಿಯುತ್ತಿರುವುದನ್ನು ಕಾಣಬಹುದಾಗಿದೆ. ಇದನ್ನೆ ರವೀಂದ್ರನಾಥ ಟ್ಯಾಗೋರ್‌ರವರು ಸನಾತನ ಧರ್ಮದ ವಿಶಿಷ್ಟ ಲಕ್ಷಣವೆಂದು ಕರೆಯುತ್ತಾರೆ. 'ಅರವಿಂದೊರವರು ಭಾರತೀಯರಿಗೆ ಧರ್ಮದ ಭಾವವು ಮುಖ್ಯವೇ ಹೊರತು ಪಾಶ್ಚಾತ್ಯರಂತೆ ಧಾರ್ಮಿಕ ಸಿದ್ಧಾಂತವಲ್ಲವೆಂದೆನ್ನುತ್ತಾರೆ.[2]

ಹೀಗೆ ತಮ್ಮದಷ್ಟೇ ಕಟುಸತ್ಯ ಇನ್ನಿತರರದು ಅಲ್ಲ ಎಂಬ ದೋರಣೆಗೆ ವಿರುದ್ಧವಾಗಿ ಭಾರತೀಯರು ತಮ್ಮದರಂತೆಯೇ ಬೇರೆ ಬೇರೆ ಸತ್ಯ ಸಾಧ್ಯತೆಗಳಿರಬಹುದೆಂಬ ನಂಬಿಕೆಯವರಿರುವುದರಿಂದ ಭಾರತದಲ್ಲಿ ಈ ಅಸಂಖ್ಯ ಅನೇಕತೆಗಳಲ್ಲಿಯೂ ಏಕತೆ ಸಾಧ್ಯವಾಗಿದೆ. ಧಾರ್ಮಿಕ ಸಿದ್ಧಾಂತ ಅಥವಾ ತತ್ವಗಳ ಕಠಿಣ ನಿಲುವಿಗಾಗಲಿ ಅಥವಾ ಸಮಾಜದ ನಿರಂಕುಶಾಧಿಕಾರಕ್ಕಾಗಲಿ ಭಾರತದಲ್ಲಿ ಅವಕಾಶವಿಲ್ಲವಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಎಲ್ಲಿಲ್ಲದ ಪ್ರಾಧಾನ್ಯ ಇದೆ.

ಕೊನೆಯದಾಗಿ ಭಾರತೀಯ ಸಂಸ್ಕೃತಿಯ ಅತ್ಯಂತ ಮಿಗಿಲಾದ ವಿಶಿಷ್ಟ ಲಕ್ಷಣವೆಂದರೆ ಅದರಲ್ಲಿ ಕಂಡುಬರುವ ಅದ್ವೈತ ತತ್ವವಾಗಿದೆ. ದ್ವೈತ ಭಾವವನ್ನು ಬಿಂಬಿಸುವ ಯಾವ ಮತ ಅಥವಾ ಸಂಸ್ಕೃತಿಯೇ ಆಗಲಿ ಸುಖ ಶಾಂತಿಯನ್ನು ಉಂಟು ಮಾಡಲಾರದು. ಅಂತೆಯೇ ವಿಶ್ವವ್ಯಾಪಿಯೂ ಆಗಲಾರದು. ದ್ವೈತ ಧೋರಣೆಯು ಭೇದಭಾವಗಳನ್ನು ಬಿಂಬಿಸುವಂತಹುದು. ಈ ಭೇದಭಾವ ಭಯವನ್ನು ಹುಟ್ಟು ಹಾಕುವುದು. ಭಯಜನ್ಯವಾದ ಯಾವುದೇ ಸಂಸ್ಕೃತಿ ಸಾರ್ವಕಾಲಿಕವಾಗಲಾರದು. ಅಂತೆಯೇ ವಿಶ್ವಶಾಂತಿಯನ್ನೂ ಉಂಟುಮಾಡಲಾರದು. ಆದ್ದರಿಂದ ಅದ್ವೈತ ಭಾವವು

ಭಯ ನಿವಾರಕನಾಗಿ, ಭೇದಭಾವವನ್ನಳಿಸುವ ದಿವ್ಯಸಾಧನೆ ಎಂದೆನಿಸುವುದು. ಇಂತಹ ಅದ್ವೈತ ದೃಷ್ಟಿಯನ್ನು ವಿಶ್ವಕ್ಕೆ ನೀಡಿದ ಹೆಮ್ಮೆ ಭಾರತೀಯ ಸಂಸ್ಕೃತಿಯದು.

## ಗ್ರಂಥಋಣ:


Understanding Culture: John J. Honigmann,

The Foundations of Indian Culture: Sri Aurobindo,

ಭಾರತೀಯ ಸಂಸ್ಕೃತಿ: ಡಾ| ಎಸ್. ಶ್ರೀಕಂಠಶಾಸ್ತ್ರಿ,

ಸಂಸ್ಕೃತಿ: ಡಾ| ಡಿ.ವಿ.ಜಿ.

Indias Culture through the Ages: M.L. Vidyarthi.

India Cradle of Cultures: Chaman Lal


---

1. The realisation of unity in diversity, the establishment of a synthesis amidst variety that is the inherent, the Sanatanaàdharma of India-Rabindranath Tagore)

2. (Aurobindo - To the Indian mind, dogma is the least important part of religion, and the religious spirit matters, not the dogma..)

# ಏಕಾಂತ ಮತ್ತು ಏಕಾಗ್ರತೆ

1954ರ ನೋಬೆಲ್ ಪುರಸ್ಕಾರ ಆರ್ನೆಸ್ಟ್ ಹೆಮಿಂಗ್ವೆ ಅವರ "ದಿ ಓಲ್ಡ್‌ಮ್ಯಾನ್ ಅಂಡ್ ದ ಸೀ" ಎಂಬ ಕಾದಂಬರಿಗೆ ಬಂದಿತು. ಈ ಪ್ರಶಸ್ತಿ ಬಂದಾಗ ಹೆಮಿಂಗ್ವೆ ಆಫ್ರಿಕಾದ ದಟ್ಟ ಕಾಡುಗಳಲ್ಲಿ ಬೇಟೆಯಾಡುವುದರಲ್ಲಿ ನಿರತನಾಗಿದ್ದ. ಆ ಸಂದರ್ಭದಲ್ಲಿ ವಿಮಾನ ಅಪಘಾತದಲ್ಲಿ ತೀವ್ರ ಗಾಯಗೊಂಡು ಹಾಸಿಗೆ ಹಿಡಿದು ಮಲಗಿದ. ಹೀಗಾಗಿ ಪ್ರಶಸ್ತಿ ಸ್ವೀಕರಿಸಲು ಆತನಿಗೆ ಸ್ವೀಡನ್‌ಗೆ ಹೋಗಲಾಗಲಿಲ್ಲ. ನೋಬೆಲ್ ಅಕಾಡಮಿಗೆ ಪತ್ರವೊಂದನ್ನು ಬರೆದು ಹಾಕಿದ. ಆ ಪತ್ರದಲ್ಲಿ ಆತ... "ಲೇಖಕನ ಜೀವನ ಏಕಾಂಗಿಯಾದದ್ದು, ಒಂದು ವೇಳೆ ಆತ 'ಏಕಾಂಗಿತನ ಬಿಟ್ಟಿದ್ದಾದರೆ ಆತನ ಕೃತಿಗಳು ಸೊರಗಿಹೋಗುತ್ತವೆ' ಎಂಬ ಅಭಿಪ್ರಾಯಪಟ್ಟಿದ್ದ. ಆ ಮಹಾನ್ ಲೇಖಕನ ಈ ಅಭಿಪ್ರಾಯ ಬಹಳಷ್ಟು ಜನ ಬರಹಗಾರರ ಅಭಿಪ್ರಾಯವೂ ಆಗಿದೆ. ಉದಾ. ಡಾ.ಯು.ಆರ್. ಅನಂತಮೂರ್ತಿಯವರೂ ಒಂದೆಡೆ ಮಾತನಾಡುತ್ತಾ, ಒಳ್ಳೆಯ ಬರಹಕ್ಕೆ ಏಕಾಗ್ರತೆ ಬೇಕು, ಈ ಏಕಾಗ್ರತೆ ಏಕಾಂತದಲ್ಲಿ ದೊರಕುವಂತೆ ಬೇರೆಡೆ ಸಾಧ್ಯವಾಗಲಾರದೆಂದು ತಿಳಿಸಿದ್ದರು. ಸಾಹಿತಿಗಳು, ಕಲಾಕಾರರು, ವಿಜ್ಞಾನಿ, ವೈದ್ಯರು, ವೈಚಾರಿಕರು ಏಕಾಂತದ ಮಹತ್ವವನ್ನು ಇನ್ನಿತರರಿಗಿಂತ ಹೆಚ್ಚು ತಿಳಿದವರಾಗಿರುತ್ತಾರೆ. ಇನ್ನು ವಿದ್ಯಾರ್ಥಿಗಳ ವಿಷಯದಲ್ಲಂತೂ ಇದು ಇನ್ನೂ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿರುತ್ತದೆಂಬುದು ನಿರ್ವಿವಾದ. ಅಂತೆಯೇ ವಸತಿ ನಿಲಯವೊಂದರಲ್ಲಿ ವಿದ್ಯಾರ್ಥಿಯೊಬ್ಬನ ಕೋಣೆಯೊಳಗೆ ಹೊಕ್ಕರೆ ಸಾಮಾನ್ಯವಾಗಿ ಕಾಣುವ ಗೋಡೆ ಬರಹ "ಹರಟೆ ಹೊಡೆಯುವುದಕ್ಕಿಂತ ಹೊರಟುಹೋಗುವುದೇ ಲೇಸು" 'Silence Please' 'No Gossiping' ಎಂಬುವೇ ಆಗಿವೆ. ಇವೆಲ್ಲದರ ಮೂಲ ಮೌನ ಹಾಗೂ ಏಕಾಂತದ ಕಡೆಗೆ ವಾಲಿರುವುದನ್ನು ಕಾಣಬಹುದಾಗಿದೆ.

ಮನುಷ್ಯ ಸಮಾಜ ಜೀವಿ. ಆತನಿಗೆ ಏಕಾಂತ ಒಗ್ಗಲಾರದು ಅಥವಾ ಏಕಾಂತ ಮನುಷ್ಯನ ಸುತ್ತ ನಡುಗಡ್ಡೆಯೊಂದನ್ನು ನಿರ್ಮಿಸಿ ಆತನ ವ್ಯಕ್ತಿತ್ವದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ ಎಂದು ಕೆಲವರು ವಾದ ಮಾಡಬಹುದು. ಆದರೆ, ಏಕಾಂತ ಹಾಗೂ ಸಾಮಾಜಿಕ ಜೀವನ ಒಂದಕ್ಕೊಂದು ವಿರೋಧವಾಗಿರದೆ ಪೂರಕವಾಗಿವೆ ಎಂಬುದೂ ಅಷ್ಟೇ ಸತ್ಯವಾಗಿದೆ.

ಬಹು ಪ್ರಾಚೀನ ಕಾಲದಿಂದಲೂ ಮಾನವ ಏಕಾಂತದ ಅವಶ್ಯಕತೆಯನ್ನು ತಿಳಿದಂತಿದೆ. ವೇದ ಪುರಾಣಗಳ ಕಾಲದಲ್ಲಂತೂ ಇದರ ಮಹತ್ವ ಉತ್ತುಂಗಕ್ಕೇರಿದ್ದನ್ನು ಕಾಣಬಹುದಾಗಿದೆ. ದೇವ ಸಾಕ್ಷಾತ್ಕಾರಕ್ಕಾಗಿ ಏಕಾಗ್ರತೆ ಅವಶ್ಯವೆಂದು ಮನಗಂಡ ಋಷಿಮುನಿಗಳು ಪರಿಪೂರ್ಣ ಏಕಾಗ್ರತೆ ಸಾಧಿಸಲು ನಿರ್ಜನ ಪ್ರದೇಶಕ್ಕೆ ತೆರಳಿ ತಪಸ್ಸು ಮಾಡುತ್ತಿದ್ದರು. ಯಾವುದೇ ಒಂದು ಮಹಾನ್ ಸಾಧನೆಯಾಗಬೇಕಾದರೆ ತಪಸ್ಸು ಅತ್ಯವಶ್ಯವಾಗಿತ್ತೆನ್ನಬಹುದು. ಈ ತಪಸ್ಸು ಅನೇಕ ಸಲ ಉಗ್ರವಾಗಿರುತ್ತಿದ್ದುದನ್ನೂ ನಾವು ಅರಿತಿದ್ದೇವೆ. ಒಟ್ಟಿನಲ್ಲಿ ತಪಸ್ಸೆಂದರೆ ಏಕಾಂತ ಹಾಗೂ ಏಕಾಗ್ರತೆಯ ಸಮ್ಮಿಳಿತ ಎಂದು ವ್ಯಾಖ್ಯಾನಿಸಬಹುದು.

ಏಕಾಂತ ಹಾಗೂ ಏಕಾಗ್ರತೆ ಒಂದಕ್ಕೊಂದು ಪೂರಕವಾಗಿವೆ ಎಂಬುದು ನಿರ್ವಿವಾದವಾದರೂ ಏಕಾಂತವಿಲ್ಲದೆಯೂ ಏಕಾಗ್ರತೆಯನ್ನು ಸಾಧಿಸಬಹುದಾಗಿದೆ. ಉದಾಹರಣೆಗಾಗಿ ಕನ್ನಡದ ಮಹಾಕವಯಿತ್ರಿ ಅಕ್ಕಮಹಾದೇವಿಯ ಈ ವಚನವನ್ನೇ

ನೋಡಬಹುದು. "ಲೋಕವೇ ತಾನಾದ ಬಳಿಕ ಏಕಾಂತದ ಹಂಗೇಕಯ್ಯ ?" ಎಂದು ಆಕೆ ನಿರ್ಭಿಡೆಯಿಂದ ಪ್ರಶ್ನಿಸುತ್ತಾಳೆ. ಅಂತೆಯೇ ಏಕಾಂತವು ಭೌತಿಕ ಸ್ಥಿತಿಯಾದರೆ ಏಕಾಗ್ರತೆಯು ಆಧ್ಯಾತ್ಮಿಕ ಸ್ಥಿತಿ. ಒಂದು ಬಹಿರಂಗಕ್ಕೆ ಸಂಬಂಧಿಸಿದ್ದಾದರೆ ಇನ್ನೊಂದು ಅಂತರಂಗಕ್ಕೆ ಸಂಬಂಧಿಸಿದ್ದು, ಒಂದು ಲೌಕಿಕದ್ದು ಮತ್ತೊಂದು ಅಲೌಕಿಕದ್ದು, ಆಧ್ಯಾತ್ಮಿಕವಾದ ಏಕಾಗ್ರತೆಯು ಲೋಕಕಲ್ಯಾಣಕ್ಕಾಗಿ ಮೀಸಲಾಗಿರಬೇಕೆಂಬುದು ಶರಣರ ಸಂದೇಶವೂ ಆಗಿತ್ತು. ಪರಿಸ್ಥಿತಿಯ ಅನಿವಾರ್ಯತೆಯು ಕೆಲಸಾರೆ ವ್ಯಕ್ತಿಯೊಬ್ಬನನ್ನು ಒತ್ತಾಯದ ಏಕಾಂತಕ್ಕೆ ತಳ್ಳುತ್ತದೆ. ಅಂತೆಯೇ ಕೆಲ ಬರಹಗಾರರು, ಜನಸಂದಣಿಯಿಂದ ತುಂಬಿ ತುಳುಕುತ್ತಿರುವ ಬಸ್ಸು ನಿಲ್ದಾಣಗಳಲ್ಲೊ, ಚಲಿಸುತ್ತಿರುವ ರೈಲಿನಲ್ಲೊ ತಮ್ಮ ಗಾಢ ವಿಚಾರಸರಣಿಯನ್ನು ಹರಿಬಿಟ್ಟು ಎಂತಹ ಗದ್ದಲಕ್ಕೂ ವಿಚಲಿತರಾಗದೇ ಏಕಾಗ್ರತೆಯನ್ನು ಸಾಧಿಸಿಬಿಡುತ್ತಾರೆ. ಇಂತಹ ಪ್ರಸಂಗಗಳನ್ನು ನಾವು 'ಸಮೂಹ ಏಕಾಂತ'ವೆಂದು ವ್ಯಾಖ್ಯಾನಿಸಬಹುದಾಗಿದೆ. ಅಂದರೆ ಸುತ್ತಮುತ್ತಲು ಜಾತ್ರೆಯೇ ನೆರೆದಿದ್ದರೂ ಚಿಂತಕನಾದವನು ಅದಾವುದೂ ತನಗೆ ಸಂಬಂಧಿಸಿದ್ದಲ್ಲವೇನೋ ಎಂಬಂತೆ ಎಲ್ಲರಿಂದಲೂ ಮಾನಸಿಕವಾಗಿ ಒಂದು ಅಂತರವನ್ನು ನಿರ್ಮಿಸಿಕೊಂಡು ತನಗೆ ಅವಶ್ಯವಾದ ಏಕಾಂತ ಮತ್ತು ಏಕಾಗ್ರತೆಗಳನ್ನು ಸಾಧಿಸುತ್ತಾನೆ. ಇದು ಕೇವಲ ಬುದ್ಧಿಜೀವಿಗಳು ಅಥವಾ ವಿಚಾರಶೀಲರಿಗಷ್ಟೇ ಸಾಧಿತವಾಗಬಲ್ಲದೆಂದು ಯಾರೂ ತಿಳಿಯಬಾರದು. ಸಾಮಾನ್ಯ ಮನುಷ್ಯನೂ ಅನೇಕ ಸಲ ತನಗೆ ದುಃಖವಾದಾಗಲೊ ಅಥವಾ ಅತೀವ ಆನಂದ ಆಶ್ಚರ್ಯಗಳಾದಾಗ ತನ್ನ ಸುತ್ತಮುತ್ತಲಿನದೆಲ್ಲವನ್ನೂ ಮರೆತು ತನ್ನ ಭಾವನಾಲೋಕದಲ್ಲಿ ಮುಳುಗಿರುತ್ತಾನೆ. ಅದರಂತೆಯೇ ಕೆಟ್ಟ ಕೆಲಸ ಮಾಡುವದಕ್ಕೂ ಕೂಡ ಇದನ್ನು ರೂಢಿಸಿಕೊಳ್ಳಬಹುದಾಗಿದೆ. ಅದಕ್ಕಾಗಿಯೇ 'ಕಾಮಾತುರಾಣಾಂ ನ ಭಯಂ ನ ಲಜ್ಜಾ' ಅಂದರೆ ಕಾಮಾಂಧನಿಗೆ ಭಯ ಹಾಗೂ ಲಜ್ಜೆಗಳು ಇರದೇ ಆತ ತಾನು ಮಾಡುವುದನ್ನು ಯಾರೂ ನೋಡಲಾರರೆಂದು ಬೆಕ್ಕು ಕಣ್ಮುಚ್ಚಿ ಹಾಲು ಕುಡಿವಂತೆ - ನಿರ್ಲಜ್ಜನಾಗಿ ಮುಂದುವರೆಯುತ್ತಾನೆ.

ಏಕಾಂತ ಹಾಗೂ ಏಕಾಗ್ರತೆಗಳೇ ಕೊನೆಯ ಸಿದ್ಧಿಗಳಾಗಿರದೆ, ಉದ್ದೇಶಿತ ಗುರಿಯನ್ನು ತಲುಪಲು ಅವು ಕೇವಲ ಸಾಧನೆಗಳಾಗಿವೆ ಎನ್ನಬಹುದು. ನಮಗೆ ಯಾವುದಕ್ಕಾಗಿ ಬೇಕೊ ಅದಕ್ಕೆ, ಹೇಗೆ ಬೇಕೋ ಹಾಗೆ ಅವುಗಳನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಒಂದಕ್ಕೊಂದು ಪೂರಕವಾಗಿದ್ದರೂ ಏಕಾಂತವನ್ನು ಸಾಧಿಸಿದಷ್ಟು ಸುಲಭವಾಗಿ ಏಕಾಗ್ರತೆಯನ್ನು ಸಾಧಿಸಲಾಗುವುದಿಲ್ಲ. ಮನೆ, ಮಠ, ಊರು, ಕೇರಿ ಎಲ್ಲವನ್ನೂ ಬಿಟ್ಟು ದೂರದ ದಟ್ಟ ಕಾಡಿಗೆ ಹೋದರೂ ಏಕಾಗ್ರತೆಯನ್ನು ಸಾಧಿಸುವುದು ಸಾಧ್ಯವಾಗದೇಹೋಗಬಹುದು. ಆದ್ದರಿಂದ, ಏಕಾಂತವು ಏಕಾಗ್ರತೆಯನ್ನು ಸಾಧಿಸುವ ಅನೇಕದಲ್ಲಿ ಒಂದು ಸಾಧನ ಮಾತ್ರ ಎಂದೆನ್ನಬಹುದು.

ಶ್ರೇಷ್ಠ ವಿಚಾರ, ಉತ್ಕೃಷ್ಟ ಕಲ್ಪನೆಗಳು ಏಕಾಗ್ರತೆಯಿಂದ ಮಾತ್ರಸಾಧ್ಯ, ಇಲ್ಲದಿದ್ದರೆ ಎಲ್ಲರೂ ಸರಿಸಮಾನವಾದ ಬುದ್ಧಿಮತ್ತೆ ಅಥವಾ ವಿಚಾರಗಳನ್ನು ಹೊಂದಿದವರಾಗಿರುತ್ತಿದ್ದರೇನೋ. ಏಕಾಗ್ರತೆಯು ಒಬ್ಬರಿಗೆ ಸಿದ್ಧಿಸಿದಷ್ಟು ಸುಲಭವಾಗಿ ಮತ್ತೊಬ್ಬರಿಗೆ ದಕ್ಕಲಾರದು. ಈ ಏಕಾಗ್ರತೆ ದೊರಕಿಸಿಕೊಳ್ಳಲು ಕೆಲಸಾರೆ ಏನೆಲ್ಲ ಕಷ್ಟಪಡಬೇಕು, ಎಷ್ಟೆಲ್ಲ ತ್ಯಾಗ ಮಾಡಬೇಕಾಗುವುದೋ ಹೇಳತೀರದು. 'ರಾಮಾಯಣದರ್ಶನಂ' ಮಹಾಕಾವ್ಯವನ್ನು ರಚಿಸುವ ಆ ಕೆಲವರ್ಷ ಕುವೆಂಪುರವರು ತಮ್ಮ ಎಂದಿನ ಸಂಸಾರ ಜೀವನವನ್ನೂ ತ್ಯಜಿಸಿದ್ದರೆಂದು ಹೇಳಲಾಗುತ್ತಿದೆ. ಅಂತೆಯೇ ಅವರು

'ರಸಋಷಿ'ಗಳಾಗಿದ್ದರು. 'ಶೂದ್ರ ತಪಸ್ವಿ' ಎಂದೆನಿಸಿದರು. ಇಂದಿನ ಖ್ಯಾತ ಕಾದಂಬರಿಕಾರ ಡಾ.ಭೈರಪ್ಪನವರಾದರೂ ಅಷ್ಟೆಯೇ, ಸಾಮಾನ್ಯವಾಗಿ ಕಾರ್ಯಕ್ರಮಗಳನ್ನು, ಸಮಾರಂಭದ ಆಮಂತ್ರಣಗಳನ್ನು ಅವರು ಒಪ್ಪಿಕೊಳ್ಳುವದೇಯಿಲ್ಲ. ಮಹತ್ತಾದ ಕೃತಿ ರಚಿಸಲು ಅವರು ಸಂಬಂಧಿಸಿದ ಕ್ಷೇತ್ರಕಾರ್ಯ ಕೈಗೊಳ್ಳುವುದು, ಗ್ರಂಥಗಳನ್ನು ಪರಾಮರ್ಶಿಸುವುದು ಅಂದರೆ ತೀವ್ರ ಹಾಗೂ ಆಳ ಅಭ್ಯಾಸ ಮಾಡುವುದು ಅವಶ್ಯವೆಂದು ನನಗೊಮ್ಮೆ ತಿಳಿಸಿದ್ದರು. ಮನುಷ್ಯನಿಗೆ ಮಹತ್ತಾದುದನ್ನು ಸಾಧಿಸಲು ಏಕಾಂತ ಹಾಗೂ ಆ ಮೂಲಕ ಏಕಾಗ್ರತೆ ಅವಶ್ಯವೆಂದು ನಂಬಿದ ಪ್ರಮುಖರಲ್ಲಿ ಇವರೂ ಒಬ್ಬರು.

ಏಕಾಗ್ರತೆಯ ಕೆಲ ಅಪೂರ್ವ ನಿದರ್ಶನಗಳಲ್ಲಿ ಮಹಾಕವಿ ವಾಲ್ಮೀಕಿ ಹಾಗೂ ಸಾಮಾಜಿಕ ಸಂತ ವಿನೋಬಾ ಭಾವೆ ಅವರನ್ನು ಎತ್ತಿ ಹೆಸರಿಸಬಹುದು. ಗೊಂಡಾರಣ್ಯದಲ್ಲಿ ನಿರ್ಜನ ಪ್ರದೇಶವನ್ನಾಯ್ದುಕೊಂಡು ಘೋರ ತಪಸ್ಸನ್ನು ಕೈಗೊಂಡು ಮೈಮೇಲೆ ಹುತ್ತ (ವಾಲ್ಮೀಕ) ಬೆಳೆದರೂ ಕಿಂಚಿತ್ತೂ ಚಿತ್ತ ಕದಲಿಸದೆ 'ರಾಮ ರಾಮ' ಎಂಬ ಜಪತಪದಲ್ಲಿ ಲೀನನಾಗಿ - ಏಕಾಂತ ಏಕಾಗ್ರತೆಗಳ ಸಂಪೂರ್ಣ ಬೆಸುಗೆ ಮಾಡಿದ ಮಾದರಿ ಎಂದೆನಿಸಿದವ ವಾಲ್ಮೀಕಿ. ಅಂತೆಯೇ ಆತನ ರಾಮಾಯಣ ಇಂದಿಗೂ ಸರಿಸಾಟಿಯಿಲ್ಲದ ಮಹಾಕಾವ್ಯವೆಂದೆನಿಸಿದೆ. ಇದು ಕವಿಯ ಏಕಾಂತ ಹಾಗೂ ಏಕಾಗ್ರತೆಗಳು ಸಂಗಮಗೊಂಡ ಸಮ್ಮಿಲನದ ಫಲವೆನ್ನಬಹುದು. ವಿನೋಬಾ ಕೂಡ ಏಕಾಗ್ರತೆಯ ಪರಿಪೂರ್ಣ ಪಕ್ಷಪಾತಿಯಾಗಿದ್ದರು. ಮೂಲಾಗಾಮಿ ಹಾಗೂ ಕ್ರಾಂತಿಕಾರಿ ಕಾರ್ಯದಲ್ಲಿ ತೊಡಗಿರುವುದು ತಮ್ಮ ನಿಲುವಿಗೆ ತಕ್ಕುದಾದ ಕ್ರಮ, ಅದರಲ್ಲಿ ಯಾವುದೇ ಭಂಗ ಬರದಂತೆ ನೋಡಿಕೊಳ್ಳುವುದು ಅಗತ್ಯವೆಂಬುದು ಅವರ ದೃಷ್ಟಿಯಾಗಿತ್ತು. ಅಂಥ ಕಾರ್ಯದಲ್ಲೆಲ್ಲ ಅವರ ಚಿಂತನೆ ಹೆಚ್ಚು ಆಳ, ಗಾಢ, ದೂರದೃಷ್ಟಿ ಮತ್ತು ವೈಚಾರಿಕ ಸೂಕ್ಷ್ಮತೆಯಿಂದ ಕೂಡಿರುತ್ತಿತ್ತು,

ಮಹತ್ತಾದುದನ್ನು ಸಾಧಿಸಲು ಇಚ್ಛಾಶಕ್ತಿ (ವಿಲ್ ಪಾವರ್) ಅತ್ಯಗತ್ಯ. ಈ ಇಚ್ಛಾಶಕ್ತಿಯ ಮೂಲ ನೆಲೆ ಏಕಾಗ್ರತೆ, ಇಚ್ಛಾಶಕ್ತಿ ರೂಪುಗೊಂಡು ಬೆಳವಣಿಗೆ ಹೊಂದಬೇಕಾದರೆ ಮೊದಲು ಮನಸ್ಸನ್ನು ನಿಗ್ರಹಿಸಿ ತದನಂತರ ಬೇಕಾದ ವಿಷಯ ಅಥವಾ ವಸ್ತುವಿನ ಮೇಲೆ ಕೇಂದ್ರೀಕರಿಸುವುದೂ ಅಲ್ಲದೇ ಇಚ್ಛಿತ ವಸ್ತು ಒಂದನ್ನು ಹೊರತುಪಡಿಸಿ ಇನ್ನಿತರ ಯಾವುದೂ ಮನದೊಳಗೆ ನುಸುಳದಂತೆ ನಿಗಾವಹಿಸುವುದು ಎಂದಂತೆ. ಈ ಬಗ್ಗೆ ಗೀತೋಪದೇಶದಲ್ಲಿಯ ಈ ಮಾತು ನೋಡಿ.

**..... ವಿಷಯ ಚಿಂತನೆಗೈಯಲು ಸಂಘ ಲಭಿಸುವದವನಿಗೆ**

**ಸಂಗದಲ್ಲಿ ತಾ ಕಾಮವು ಕಾಮದಿಂದಲೇ ಕ್ರೋಧವು**

**ಇಂತು ಕ್ರೋಧದಿ ಮೊಹವು ಮೋಹದಿಂದವಿವೇಕವು**

**ಅವಿವೇಕದಿಂದ ಬುದ್ಧಿನಶಿಸಿ ಸರ್ವನಾಶವು ತಪ್ಪದು.**

ಅಂದರೆ ಇಚ್ಛಾಶಕ್ತಿಗಾಗಿ ಮನೋನಿಗ್ರಹ ಅದಕ್ಕಾಗಿ ಇಂದ್ರಿಯ ಹಾಗೂ ಮನಸ್ಸಿನ ತಹಬಂದಿ ಆಗತ್ಯವೆಂದಾಯಿತು. ಇಲ್ಲವಾದರೆ ಹಿಡಿದ ಕಾರ್ಯ ಸಾಧಿಸದು ಅಷ್ಟೇ ಅಲ್ಲ ಒಂದು ವೇಳೆ ಚಿತ್ತಚಾಂಚಲ್ಯವಾಗಿ ವಿಕಾರ ವಿಷಯಗಳನ್ನು (ಅರಿಷಡ್‌ಗಳನ್ನು) ಬೆಂಬತ್ತಿದರೆ ವಿನಾಶ ಖಂಡಿತವೆಂಬುದೂ ಸೂಚ್ಯವಾಗಿದೆ. ಇದನ್ನೇ ಬಸವಣ್ಣನವರು,

ವಿಷಯವೆಂಬ ಹಸುರನೆನ್ನ ಮುಂದೆ ತಂದು

ಪಸರಿಸದಿರಯ್ಯ ಪಶುವೇನಬಲ್ಲದು

ಹಸುರೆಂದೆಳಿಸುವುದು

ವಿಷಯರಹಿತನ ಮಾಡಿ

ಭಕ್ತಿರಸದ ಸುಧೆಯನ್ನೂಡಿಸಿ..........

ಎಂದೊಮ್ಮೆ ದೇವರಲ್ಲಿ ಪ್ರಾರ್ಥಿಸಿಕೊಂಡರೆ ಮತ್ತೊಮ್ಮೆ

ಮನವೆಂಬ ಮರ್ಕಟವ ತಡೆಯಲಾರೆನು ದೇವ ಎಂಬ ಅಸಹಾಯಕತೆಯ ಮೊರೆಯನ್ನು ಇಡುತ್ತಾರೆ. ಹಾಗೆಯೇ ಮುಂದುವರಿದು.

ಅತ್ತಲಿತ್ತ ಪೋಗದಂತೆ ಹೆಳವನ್ನ ಮಾಡಯ್ಯಾ ತಂದೆ

ಸುತ್ತುಸುಳಿದು ನೋಡದಂತೆ ಕುರುಡನ್ನ ಮಾಡಯ್ಯಾ ತಂದೆ....

ಇತ್ಯಾದಿಯಾಗಿ ಬೇಡುತ್ತ ದೇವರ ಮೇಲೆ ಚಿತ್ತ ಕೇಂದ್ರೀಕೃತವಾಗಲು ಇಂದ್ರಿಯನಿಗ್ರಹ ಅವಶ್ಯವೆಂದೂ ಈ ಏಕಾಗ್ರತೆಗಾಗಿ ಏಕಾಂತ ಅನಿವಾರ್ಯವೆಂದೂ ಪರೋಕ್ಷವಾಗಿ ಸೂಚಿಸುತ್ತಾರೆ. ಒಟ್ಟಿನಲ್ಲಿ (ಮನೋನಿಗ್ರಹ ಮಾಡಿ) ಏಕಾಗ್ರತೆಯನ್ನು ಸಾಧಿಸುವದೆಂದರೆ ಮನುಷ್ಯ ತನ್ನನ್ನೇ ತಾನು ಗೆದ್ದಂತೆ ಎನ್ನಬಹುದು. ಇದಕ್ಕೆ ಪೂರಕವಾಗಿರುವ ಈ ಕೆಳಗಿನ ಸಾಲುಗಳನ್ನು ನೋಡಿ:

"ಒಂದೆಡೆ ಒಬ್ಬ, ಯುದ್ಧದಲ್ಲಿ ಸಾವಿರ ಬಾರಿ ಸಾವಿರ ಜನರನ್ನು

ಗೆದೆಯಬಹುದು, ಇನ್ನೊಂದಡೆ ಮತ್ತೊಬ್ಬ ತನ್ನನ್ನೇ ತಾನು

ಜಯಿಸಬಹುದು; ಆಗ ಯಾವ ತನ್ನನ್ನು ತಾನು ಗೆದ್ದಿರುತ್ತಾನೋ

ಅವನೇ ಎಲ್ಲರಿಗಿಂತ ಶ್ರೇಷ್ಠ ಜಯಶಾಲಿ ಎಂದೆನಿಸುವನು" -

**ಧಮ್ಮಪಾದ**

ಅಂದರೆ ಏಕಾಗ್ರತೆಯನ್ನು ಸಾಧಿಸುವುದೆಂದರೆ ತನ್ನನ್ನೇ ತಾನು ಗೆದೆಯವದೆಂದಂತೆ ಅದೇ ಅತ್ಯುತ್ಕೃಷ್ಟತೆಯನ್ನು ಹೊಂದಿದಂತೆ ಎನ್ನಬಹುದು.

ಏಕಾಗ್ರತೆಯ ಮತ್ತೊಂದು ಉದಾಹರಣೆಯಾಗಿ ಕೊನೆಯಲ್ಲಿ ಮಹಾಭಾರತದ ಅರ್ಜುನನನ್ನು ಉಲ್ಲೇಖಿಸಬಹುದಾಗಿದೆ. ಬಿಲ್ಲುವಿದ್ಯೆಯ ಪರೀಕ್ಷೆಯಲ್ಲಿ ದೂರದ ಗಿಡವೊಂದಕ್ಕೆ ಕಟ್ಟಿದ ಹಕ್ಕಿಯ ಕಣ್ಣಿಗೆ ಬಾಣ ಹೊಡೆಯಬೇಕೆಂಬ ಸ್ಪರ್ಧೆಯಲ್ಲಿ ಆತನಿಗೆ ಆ ಗಿಡವಾಗಲಿ, ಅದರ ರೆಂಬೆಕೊಂಬೆಗಳಾಗಲಿ, ಕೊನೆಗೆ ಹಕ್ಕಿಯ ದೇಹದ ಇನ್ನಿತರ ಭಾಗಗಳಾಗಲಿ ಕಾಣಿಸುತ್ತಲೇ ಇರಲಿಲ್ಲ; ಕೇವಲ ಆ ಪಕ್ಷಿಯ ಕಣ್ಣು ಮಾತ್ರ ಕಾಣಿಸುತ್ತಿತ್ತು. ಅಂತೆಯೇ ಆತನು ಗುರಿ ಹೊಡೆಯುವುದರಲ್ಲಿ ಅದ್ವಿತೀಯನಾಗಿ ಬಿಲ್ಲುವಿದ್ಯೆಯಲ್ಲಿ ಮೂರುಲೋಕದ ವೀರೋತ್ತಮನೆನ್ನಿಸಿದನು. ಮನುಷ್ಯನ ಏಕಾಗ್ರತೆಯ ಶಕ್ತಿ ಹೆಚ್ಚಿದಂತೆಲ್ಲ

ಆತನ ಇಚ್ಛಾಶಕ್ತಿಯೂ ಬೆಳೆಯುತ್ತ ಹೋಗುತ್ತದೆ. ಇದರಿಂದಾಗಿ ಹಾಗೆಯೇ ಆತನ ದಕ್ಷತೆ, ಕಾರ್ಯಕ್ಷಮತೆ ಹೆಚ್ಚಾಗುತ್ತ ಆತ ಬಯಸಿದ ಎಲ್ಲ ಕಾರ್ಯಸಿದ್ಧಿಯಾಗುತ್ತವೆ, ಗುರಿ ಕೈಗೆಟುಕುತ್ತವೆ, ಬರ್ನಾರ್ಡ್ ಷಾ ಅಂದಂತೆ ಅಸಾಧ್ಯವೆಂಬ ನುಡಿ ಆತನ ನಿಘಂಟಿನಿಂದ ಮಾಯವಾಗುತ್ತದೆ.

# ಸಾಮಾಜಿಕ ಹೊಣೆ

ಮನುಷ್ಯ ಸಮಾಜ ಜೀವಿ ಎನ್ನುವ ಮಾತು ಜನಜನಿತವಾಗಿದೆ. ಈ ಸಮಾಜದಲ್ಲಿ ನಾವು ಹುಟ್ಟಿ ಬಂದ ಮೇಲೆ ಈ ಸಮಾಜಕ್ಕೆ, ಈ ನಾಡಿಗೆ, ಈ ದೇಶಕ್ಕೆ ಇರುವ ನಮ್ಮ ಹೊಣೆ ಏನು ಎಂಬುದನ್ನು ನಾವು ತಿಳಿಯಬೇಕು. ಕೇವಲ ಹಕ್ಕುಗಳಿಗಾಗಿಯೇ ಹೋರಾಡುವ ಈ ಕಾಲದಲ್ಲಿ ಸ್ವಲ್ಪ ಕರ್ತವ್ಯಗಳ ಕಡೆಗೂ ಸಾಮಾಜಿಕ ಜವಾಬ್ದಾರಿಗಳ ಕಡೆಗೂ ಲಕ್ಷವಹಿಸುವುದು ಅವಶ್ಯವಾಗಿದೆ. ಜಾನ್ ಎಫ್ ಕೆನಡಿಯವರು ಹೇಳಿದ ಹಾಗೆ "ಆಸ್ಕ ನಾಟ್ ವಾಟ್ ದಿ ಕಂಟ್ರಿ ಹ್ಯಾಜ್ ಡನ್ ಫಾರ ಯು, ಆಸ್ಕ ವಾಟ್ ಯು ಹ್ಯಾವ್ ಡನ್ ಫಾರ್ ದಿ ಕಂಟ್ರಿ" ಎಂಬ ಮಾತನ್ನು ಕೇವಲ ಭಾವುಕರಾಗಿ ತೆಗೆದುಕೊಳ್ಳದೇ ಪ್ರಾಯೋಗಿಕವಾಗಿ ಅಳವಡಿಸಿಕೊಳ್ಳಬೇಕಾಗಿದೆ. ಬೃಹತ್ ಕಟ್ಟಡಗಳನ್ನು ಕಟ್ಟುವಲ್ಲಿ ಸಣ್ಣಪುಟ್ಟ ಕಲ್ಲುಗಳೂ ಕೂಡ ಅವಶ್ಯವಿರುವಂತೆ ದೇಶವನ್ನು ಕಟ್ಟುವಲ್ಲಿ ನಮ್ಮ ಸಣ್ಣಪುಟ್ಟ ನಡವಳಿಕೆಗಳೂ ಕೂಡ ಪರಿಣಾಮಕಾರಿಯಾಗಿವೆ ಎಂಬುದನ್ನು ತಿಳಿಯಬೇಕಾಗಿದೆ.

ಸಾರ್ವಜನಿಕ ವಸ್ತುಗಳನ್ನು ಉಪಯೋಗಿಸುವಾಗ ನಾವು ಎಷ್ಟೊಂದು ಕಾಳಜಿ ವಹಿಸುತ್ತೇವೆ ಎಂಬುದನ್ನು ವಿಚಾರಿಸೋಣ. ಉದಾಹರಣೆಗಾಗಿ ನಾವು ಸರ್ಕಾರಿ ಬಸ್ಸೊಂದರಲ್ಲಿ ಪ್ರಯಾಣಿಸುತ್ತಿದ್ದೇವೆ ಎಂದು ತಿಳಿಯುವಾ. ಆಗ ಅಲ್ಲಿ ಒಬ್ಬರು ಸೀಟಿನ ಮೇಲೆ ಹೊಲಸು ಕಾಲುಗಳನ್ನಿಟ್ಟುಕೊಂಡು ಕೂತಿದ್ದರೆ ಇನ್ನೊಬ್ಬರು ಸಿಗರೇಟೋ ಬೀಡಿಯೋ ಸೇದಿ ಉಫ್ ಎಂದು, ಅದು ಬೇರೆಯವರ ಬಾಯಿ ಮೂಗುಗಳಲ್ಲೇ ನೇರವಾಗಿ ಹೋದೀತೆಂಬ ಕಲ್ಪನೆಯೂ ಇಲ್ಲದೇ, ಹೊಗೆಯನ್ನು ಉಗುಳಿ ಇಡೀ ವಾತಾವರಣವೇ ಕಲುಷಿತವಾಗುವಂತೆ ಮಾಡುತ್ತಾರೆ. ಮತ್ತೊಬ್ಬರು ಸೀಟಿನಲ್ಲಿಯ ಸ್ಪಾಂಜ್ ಕೀಳುತ್ತಿದ್ದರೆ ಮಗದೊಬ್ಬರು ಕೈಯಲ್ಲಿಯ ಕೀಲಿ ಕೈಯಿಂದಲೋ, ಅಥವಾ ಮೊಳೆಯಿಂದ ಮುಂದಿನ ಸೀಟಿನ ಹಿಂಭಾಗದಲ್ಲಿ ತಮ್ಮ ಹೆಸರನ್ನೋ, ಊರ ಹೆಸರನ್ನೋ ಅಥವಾ ತನ್ನ ಪ್ರೇಯಸಿಯ ಹೆಸರನ್ನೊ ಇಲ್ಲವೆ ಹೃದಯದೊಳಗೆ ನಾಟುವ ಬಾಣದ ಚಿತ್ರವನ್ನೊ ಕೆತ್ತುತ್ತಿರುತ್ತಾರೆ. ಒಟ್ಟಿನಲ್ಲಿ ತಾವು ಕುಳಿತದ್ದೇ ಬಸ್ಸನ್ನು ಕೆಡಿಸುವುದಕ್ಕಾಗಿ ಎಂದು ತಿಳಿದಂತಿರುತ್ತಾರೆ.

ಇದರಂತೆಯೇ ಸಾರ್ವಜನಿಕ ನಳದ ನೀರನ್ನು ತಾವು ಉಪಯೋಗಿಸಿಕೊಂಡ ಮೇಲೆ ನೀರು ವ್ಯರ್ಥವಾಗಿ ಹಾಗೆಯೇ ಹರಿದುಹೋಗುವಂತೆ ಚಾಲೂ ಇಟ್ಟು ಅದನ್ನು ಬಂದ್ ಕೂಡಾ ಮಾಡದೇ ಹಾಗೆಯೇ ಹೋಗುವುದು, ವಾಚನಾಲಯಗಳಲ್ಲಿ ಪುಸ್ತಕಗಳ ಹಾಳೆಗಳನ್ನು ಹರಿದು ಕೀಳುವುದು, ಮನೆಯ ಹೊರಗೆ ಮೋರಿಯ ಕೊಳಚೆ ನೀರು ಸಾರ್ವಜನಿಕ ರಸ್ತೆಗೆ ಹೋಗಲು ಬಿಡುವುದು, ಅಕ್ಕಪಕ್ಕದಲ್ಲಿ ಕಸ ಚೆಲ್ಲುವುದು, ಕುಳಿತಲ್ಲೇ ಪಿಚಿಪಿಚಿ ಉಗುಳುವುದು ಮತ್ತೆ ಕೆಲ ಉದಾಹರಣೆಗಳಾಗಿವೆ.

ಇದಲ್ಲದೆ ಸಾಮಾನ್ಯ ನೈತಿಕ ಹೊಣೆ ಬಗ್ಗೆ ಹೇಳುವುದಾದರೆ ಸಾರ್ವಜನಿಕ ಉದ್ಯಾನವನ, ರಸ್ತೆ, ರೈಲು, ಬಸ್‌ಗಳಲ್ಲಿ ಗಂಡ-ಹೆಂಡಿರೋ, ಪ್ರಿಯ-ಪ್ರೇಯಸಿಯರೊ ಮಾಡುವ ಮಿತಿಮೀರಿದ ಸಲ್ಲಾಪ ನಿಜವಾಗಿಯೂ ಖಂಡನಾರ್ಹವೇ ಸೈ. ಅದರಂತೆಯೇ ಅಶ್ಲೀಲ ಸಾಹಿತ್ಯ ರಚಿಸುವುದಾಗಲಿ, ಚಿತ್ರ ಬಿಡುಸುವುದಾಗಲಿ, ಸಿನೇಮಾ ನಾಟಕ ತೋರಿಸುವುದಾಗಲಿ ಕೊನೆಗೆ ಹಾಡುವುದು ಮಾತನಾಡುವುದಾಗಲಿ ಅಕ್ಷಮ್ಯವೇ. ಯಾವುದು ಶ್ಲೀಲ ಯಾವುದು ಅಶ್ಲೀಲ ಎನ್ನುವ ವಾದಕ್ಕಿಳಿಯದೇ, ಯಾವುದು ಸಮಕಾಲೀನ ಸಾಮಾನ್ಯ ಬಹುಮತ ವಿರೋಧಿ ಚಟುವಟಿಕೆಯೋ ಹಾಗೂ ಯಾವುದು ಅಪ್ರಾಪ್ತ ಬಾಲಕ ಬಾಲಕಿಯರ ಹಾಗೂ ಯುವಕ ಯುವತಿಯರ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುವುದೂ ಅವೆಲ್ಲವೂ ಅಶ್ಲೀಲವೆಂದೇ ಹೇಳಬಹುದು.

ವಿಹಾರ, ವಿಚಾರ ಮತ್ತು ವಾಕ್ ಸ್ವಾತಂತ್ರ್ಯಗಳು ಸಂವಿಧಾನದತ್ತ ಮೂಲಭೂತ ಹಕ್ಕುಗಳೇ ಆದರೂ ಇವುಗಳ ಮೇಲೂ ಕೂಡ ಆ ಸಂವಿಧಾನವೇ ಕೆಲವೊಂದು ಯೋಗ್ಯ ನಿರ್ಬಂಧನೆಗಳನ್ನು ಅಂದರೆ (ರೀಜನೇಬರ್ ರಿಸ್ಟ್ರಿಕ್ಷನ್ಸ್)ಗಳನ್ನೂ ಪೂರೈಸಿದೆ. ಇವುಗಳನ್ನು ನಿರ್ಧರಿಸುವ ಅಧಿಕಾರ ಕೋರ್ಟುಗಳ ವಿವೇಚನೆಗೆ ಬಿಟ್ಟಿದುದಾದರೂ ಅದು ಈ ಮೊದಲೇ ಹೇಳಿದ ಅಂಶಗಳನ್ನೂ ಒಳಗೊಂಡಿರುತ್ತದೆ. ಮನುಷ್ಯ ಸಮಾಜಜೀವಿ ಎಂದು ಮೊದಲೇ ಹೇಳಿದಂತೆ ಮನುಷ್ಯನ ಸಾಮಾಜಿಕ ಜೀವನ ದಿನನಿತ್ಯವಾಗಿ ಸುಗಮವಾಗಿ ಸಾಗಬೇಕಾದರೇ "ಮೈ ರೈಟ್ ಎಂಡ್ಸ್ ವ್ಹೇರ್ ಅನದರ್ಸ್ ರೈಟ್ ಸ್ಟಾರ್ಟ್ಸ" ಅವನ ಹಕ್ಕು ಪ್ರಾರಂಭವಾಗುವಲ್ಲಿಗೆ ನನ್ನ ಹಕ್ಕು ಕೊನೆಗೊಳ್ಳುತ್ತದೆ" ಎಂಬ ಸಾಮಾಜಿಕ ಪ್ರಜ್ಞೆಯ ಮಾತನ್ನು ನಾವೆಲ್ಲಾ ನೆನಪಿಡಬೇಕಾಗುತ್ತದೆ.

ಸರ್ಕಾರಿ ಅಥವಾ ಇತರ ನೌಕರರೋ, ಡಾಕ್ಟರರೋ, ವಕೀಲರೋ ಇವರೆಲ್ಲ ಬುದ್ಧಿಜೀವಿಗಳೆಂದೋ ಅಥವಾ ವಿಶೇಷ ಸ್ಥಾನಮಾನದವರೆಂದೋ ಕರೆಯಿಸಿಕೊಳ್ಳುವುದರಿಂದ ಇವರ ಸಾಮಾಜಿಕ ಜವಾಬ್ದಾರಿ ಇತರರಿಗಿಂತ ಹೆಚ್ಚಿನದಾಗಿರುತ್ತದೆ. ಇವರೆಲ್ಲ ತಾವು ಪಡೆಯುತ್ತಿರುವ ಸಂಬಳ ಅಥವಾ ಶುಲ್ಕಗಳಿಗೆ ಸರಿಯಾಗಿ ಕೆಲಸ ನಿರ್ವಹಿಸುತ್ತಿದ್ದೇವೆಯೇ ಎಂದು ಯೋಚಿಸಿ ನಡೆಯಬೇಕಾಗಿದೆ (ತಾವು ಈ ವಿಶೇಷ ಸ್ಥಾನಕ್ಕೇರಿದ್ದು ಸಮಾಜದ ಋಣದಿಂದಲೇ ಎಂಬುದನ್ನು ಮರೆಯಕೂಡದು.)

ದೊಡ್ಡ ದೊಡ್ಡ ವಾಣಿಜ್ಯೋದ್ಯಮಿಗಳು, ಬಂಡವಾಳ ಶಾಹಿಗಳು ತಾವು ಕೇವಲ ಕಾರ್ಮಿಕರ ಬೆವರು ಹಾಗೂ ನಿಟ್ಟುಸಿರುಗಳಿಂದಲೇ ಶ್ರೀಮಂತರಾದದ್ದು ಎಂಬುದನ್ನು ನೆನಪಿನಲ್ಲಿಡಬೇಕು. ಮಹಾತ್ಮಾಗಾಂಧೀಜಿಯವರು ಹೇಳಿದ "ವಾಲಂಟ್ರಿ ಪಾವರ್ಟಿ' ಅಂದರೆ ಸ್ವಯಂ ಬಡತನ ಸ್ವೀಕರಣೆಯ ಅರ್ಥವು - ತನಗೆ ಬಂದ ಲಾಭವನ್ನು ಕೇವಲ ತನ್ನ

ಐಷಾರಾಮಿ ಉಪಭೋಗಕ್ಕೆ ವ್ಯಯಿಸದೇ ಆ ಮಾರ್ಗವನ್ನು ಬಿಟ್ಟು ಸರಳ ಜೀವನ ನಡೆಸಬೇಕು ಹಾಗೂ ಇತರರಿಗೂ ಹಂಚಬೇಕು ಎಂಬುದಾಗಿದೆ.

ಸಮಾಜವನ್ನು "ದೈವ" ಎಂದೇ ಸಂಬೋಧಿಸುವ ನಮ್ಮ ಜಾನಪದದಲ್ಲಂತೂ ಅದಕ್ಕೆ ಎಲ್ಲಿಲ್ಲದ ಮಹತ್ವ ನೀಡಲಾಗಿದೆ. ಮೊದಲಿಗೆ ದೈವಕ್ಕೆ ಶರಣು ಎಂದು ಪ್ರಾರಂಭವಾಗುವ ನಮ್ಮ ಜನಪದ ಗೀತನಾಟಕಗಳಲ್ಲಿ ಅನೇಕ ಕಡೆ ಕೂಡಿದ ದೈವಸಾಕ್ಷಿ ಎಂದು, ಸಮಾಜವನ್ನು ಉದ್ದೇಶಿಸಿಯೇ ಉಲ್ಲೇಖಿಸಲಾಗುತ್ತದೆ.

ಸಮಾಜಪ್ರಜ್ಞೆಯ ಬಹುಮುಖ್ಯ ಅಂಗ ಸಾಮಾಜಿಕ ನ್ಯಾಯವೂ ಆಗಿದೆ. ಬಹುವಿಶಾಲಾರ್ಥದ ಈ ಮಾತು ವಿಶೇಷ ಗಮನ ಸೆಳೆಯುವಂತಹದೂ ಆಗಿದೆ. ನಮ್ಮ ಸಂವಿಧಾನ ರಚನಾಕಾರರಂತೂ ಈ ಬಗ್ಗೆ ವಿಶೇಷ ಒಲವು ಹಾಗೂ ಒತ್ತನ್ನು ನೀಡಿದ್ದಾರೆ. ಇದಕ್ಕೆ ತಕ್ಕ ಕಾನೂನು ರೀತ್ಯಾ ವಿಧಿಗಳನ್ನೂ ಸ್ಪಷ್ಟಗೊಳಿಸಿದ್ದೂ ಅಲ್ಲದೇ ರಾಜ್ಯ ನೀತಿಗಾಗಿ ಮಾರ್ಗದರ್ಶಿ ಸೂತ್ರಗಳನ್ನು (Directive Principles of State Policy)ನೀಡಿದ್ದಾರೆ. ನಮ್ಮ ಆಡಳಿತದ ಜೀವನಾಡಿಯಾಗಿ ಸಾಮಾಜಿಕ ನ್ಯಾಯವಿರಲಿ ಎಂಬುದೇ ಅವರ ಆಶಯ. ಇಂತಹದೇ ಗುಣಾತ್ಮಕ ಉಲ್ಲೇಖಗಳನ್ನು ಜಗತ್ತಿನ ಪ್ರಜಾತಾಂತ್ರಿಕ ವ್ಯವಸ್ಥೆಯುಳ್ಳ ಇನ್ನಿತರ ಸಂವಿಧಾನಗಳಲ್ಲೂ ಕಾಣಬಹುದಾಗಿದೆ. ಆದರೆ ಬಹುಕೋಮಿನ, ಬಹುಭಾಷೆಯ, ಬಹುಸಾಂಸ್ಕೃತಿಕ, ಮೇಲಾಗಿ ಬಹು ಭೇದಗಳ ನಮ್ಮ ದೇಶದಲ್ಲಿ ಇದಕ್ಕೆ ವಿಶಿಷ್ಟ ಒತ್ತನ್ನು ನೀಡಿ ಈ ಡೈರೆಕ್ಟಿವ್ ಪ್ರಿನ್ಸಿಪಲ್ಸ್‌ಗಳ ಒಂದು ವಿಶೇಷ ವಿಭಾಗ (ಚಾಪ್ಟರ್-IV) ಸೇರಿಸಿದ್ದು ಸಂವಿಧಾನ ತಜ್ಞರ ಕಾಳಜಿ ಹಾಗೂ ಕಳಕಳಿಯ ದ್ಯೋತಕವಾಗಿದೆ.

ಹುಟ್ಟಿನಿಂದ ಕೊನೆಯವರೆಗೂ ನಮಗೆ ಆಶ್ರಯ, ರಕ್ಷಣೆಗಳನ್ನು ನೀಡಿ ನಮ್ಮೆಲ್ಲ ನಲಿವು ಆನಂದ ವಿಕಾಸಗಳಿಗೆ ಕಾರಣೀಭೂತವಾಗುವ, ನೆಲೆಯಾಗಿ ನಿಲ್ಲುವ ಸಮಾಜದ ಋಣ ಆಗಾಧವಾದದ್ದು. ತಂದೆತಾಯಿಗಳ ಋಣದಂತೆಯೇ ಇದನ್ನು ತೀರಿಸುವುದೂ ಬಹುಕಷ್ಟಕರವಾದದ್ದು. ಆದ್ದರಿಂದ ಸಮಾಜಪ್ರಜ್ಞೆ ನಮ್ಮಲ್ಲಿ ಸದಾ ಜಾಗೃತವಾಗಿದ್ದು ಅದರ ಋಣಭಾರ ತೀರಿಸುವ ಹೊಣೆ ನಮ್ಮದಾಗಿರಲಿ.

ಹೀಗೆ ಸಾಮಾಜಿಕ ಹೊಣೆ ಬಗ್ಗೆ ನಮ್ಮಲ್ಲಿ ಜಾಗೃತಿ ಆಗದೇ ರಾಷ್ಟ್ರೀಯ ಭಾವನೆಯೂ ಬೆಳೆಯಲಾರದು. ಕುವೆಂಪುರವರು ಹೇಳುವ "ದೇಶ ನನ್ನದು, ನನ್ನದು ನಾಡು ಎನ್ನದ ಮಾನವನೆದೆ ಸುಡುಗಾಡು" ಎಂಬ ಭಾವನೆ ಬೆಳೆಯಲು ರಾಷ್ಟ್ರೀಯ ಪ್ರಜ್ಞೆ ಹಾಗೂ ಸಾಮಾಜಿಕ ಜಾಗೃತಿ ಅತ್ಯವಶ್ಯ.

# ಭಾರತ ರತ್ನ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು

"ಮಹಾನ್ ಎಂಜಿನಿಯರ್ ಆಗಿ, ಕೈಗಾರಿಕಾವಾದಿಯಾಗಿ ಮತ್ತು ರಾಷ್ಟ್ರಧುರೀಣರಾಗಿ ವಿಶ್ವೇಶ್ವರಯ್ಯನವರು ತಮ್ಮ ಕಾಲದಲ್ಲಿ ದೇಶಕ್ಕೆ ಸಲ್ಲಿಸಿದ ಬಹುಮುಖ ಸೇವೆಯಂತಹ ಸೇವೆಯನ್ನು ಭಾರತದಲ್ಲಿ ಇನ್ನಿತರ ಯಾವುದೇ ವ್ಯಕ್ತಿಯೂ ಸಲ್ಲಿಸಿಲ್ಲ "ರಿಕನ್‌ಸ್ಟ್ರಕ್ಟಿಂಗ್ ಇಂಡಿಯಾ" (ಭಾರತದ ಪುನರ್ ನಿರ್ಮಾಣ) ಮತ್ತು "ಪ್ಲಾನ್ಡ್ ಎಕಾನಮಿ ಫಾರ್ ಇಂಡಿಯಾ" (ಭಾರತಕ್ಕಾಗಿ ಯೋಜಿತ ಅರ್ಥವ್ಯವಸ್ಥೆ) ಗ್ರಂಥಗಳ ಕರ್ತೃವಾಗಿ ಅವರು ಭಾರತದ ಯೋಜಿತ ಅಭಿವೃದ್ಧಿಯ ಪಿತಾಮಹರೆನಿಸಿದ್ದಾರೆ." ಇವು ಯಾವುದೇ ಒಬ್ಬ ವ್ಯಕ್ತಿ ಹೇಳಿದ ಅಥವಾ ಬರಹಗಾರ ಬರೆದ ಮಾತುಗಳಲ್ಲ. ಭಾರತ ಸರ್ಕಾರವು 1955ರ ಸೆಪ್ಟೆಂಬರ್ 7 ರಂದು ಸರ್ ಎಂ.ವಿ. ಅವರಿಗೆ 'ಭಾರತ ರತ್ನ' ನೀಡಿದ ಸಂದರ್ಭದಲ್ಲಿ ಉಲ್ಲೇಖಿಸಿದ ಪ್ರಶಂಸಾ ಅವತರಣಿಕೆಗಳು. ಅಂತೆಯೇ ವಿಶ್ವೇಶ್ವರಯ್ಯನವರು ನಿರ್ಮಿಸಿದ ಕೃಷ್ಣರಾಜ ಸಾಗರವನ್ನು ಕಣ್ಣಾರೆ ಕಂಡ ಮಹಾತ್ಮಾ ಗಾಂಧೀಜಿಯವರು 1927ರಷ್ಟು ಹಿಂದೆಯೇ "ಇದು ಪ್ರಪಂಚದ ಅತ್ಯಂತ ಬೃಹತ್ ಜಲಾಶಯಗಳಲ್ಲಿ ಒಂದಾಗಿದ್ದು ಇದೊಂದೇ ವಿಶ್ವೇಶ್ವರಯ್ಯನವರ ಹೆಸರನ್ನು ಶಾಶ್ವತಗೊಳಿಸಲು ಸಾಕು..." ಎಂದು ಹೃದಯಾರೆ ಹೊಗಳಿದರು. ಹೀಗೆ ದೇಶದ ರಾಷ್ಟ್ರಪಿತನಿಂದ ಹಿಡಿದು ಪ್ರತಿವ್ಯಕ್ತಿಯವರೆಗೆ ಹಾಗೂ ರಾಜ್ಯ ರಾಷ್ಟ್ರಗಳ ಘನ ಸರ್ಕಾರಗಳವರೆಗೆ ಸರ್ವರ ಮೆಚ್ಚುಗೆಗೆ ಪಾತ್ರರಾದ ಈ ಧೀಮಂತ ಪುತ್ರನನ್ನು ಅವರ ಶತಮಾನೋತ್ಸವ ಸಂದರ್ಭದಲ್ಲಿ (15.09.1960) ಅಂದಿನ ಪ್ರಧಾನಿ ಜವಹರಲಾಲ್ ನೆಹರೂರವರು"..... "ನಾನು ಈ ಸಮಾರಂಭದಲ್ಲಿ ಭಾಗಿಯಾಗುವ ಹಿರಿಮೆಗಾಗಿ ಇಲ್ಲಿಗೆ ಬಂದಿದ್ದೇನೆ. ಭಾರತದ ಈ ಮಹಾನ್ ಪುತ್ರನನ್ನು ಗೌರವಿಸಲು ಬಂದಿದ್ದೇನೆ.... ಈ ಸನ್ಮಾನ್ಯರಿಗೆ ಗೌರವಾರ್ಪಣೆ ಮಾಡುವಾಗ ನಾನು ಇಡೀ ಭಾರತದ ಜನತೆಯ ಪರವಾಗಿ ಹಾಗೆ ಮಾಡುತ್ತಿದ್ದೇನೆಂದು ಯಾವುದೇ ನಾನತ್ವವಿಲ್ಲದೆ ಹೇಳಬಯಸುತ್ತೇನೆ" ಎಂದು ಘೋಷಿಸಿದರು. ವಿಶ್ವೇಶ್ವರಯ್ಯನವರ ಸಾಧನೆಗಳ ಕಿರುನೋಟ ಮಾಡಿದವರಿಗೂ ಕೂಡ ಈ ಮಾತುಗಳಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಅಷ್ಟೇ ಅಲ್ಲ ಈ ಶಬ್ದಗಳೇ ಸಾಲವಲ್ಲ ಅವರನ್ನೊರ್ಣಿಸಲು ಎಂದು ಖಂಡಿತ ಅನಿಸುತ್ತದೆ. ಅವರೊಬ್ಬ ಮಹಾನ್ ದಾರ್ಶನಿಕ ಇಂಜಿನಿಯರ್ ಆಡಳಿತಗಾರ, ಕನಸುಗಾರ, ಛಲದಂಕಮಲ್ಲ, ಶಿಕ್ಷಣ ತಜ್ಞ, ಕೈಗಾರಿಕಾ ಪ್ರೇಮಿ, ನ್ಯಾಯನಿಷ್ಠುರಿ, ಪವಿತ್ರಜೀವಿ, ಹೀಗೆ ಸಾಗುತ್ತದೆ ಮುಗಿಯದ ಕಥೆಯಂತೆ ಅವರ ವರ್ಣನೆ ! ಅವರು ಸಾಧಿಸಿದ ನಮ್ಮೆದುರು ಇಟ್ಟುಬಿಟ್ಟು ಹೋದ ಅವರ ಕೆಲಸಕಾರ್ಯಗಳೇ ಸಾಕ್ಷಿ ಈ ನಿರಂತರತೆಗೆ.

ಹುಟ್ಟಿದ್ದು ಬಡಕುಟುಂಬವೊಂದರಲ್ಲಾದರೂ ತಾನೂ ಕಲಿತು ಮುಂದೆ ಬರಬೇಕೆಂಬ ಹಂಬಲ ಮತ್ತು ಛಲ. ಅದಕ್ಕಾಗಿ ಪಟ್ಟ ಪರಿಶ್ರಮ ಅಷ್ಟಿಷ್ಟಲ್ಲ. ತಾಯಿ ವೆಂಕಟಲಕ್ಷ್ಮಮ್ಮ ತಂದೆ ಶ್ರೀನಿವಾಸ ಶಾಸ್ತ್ರಿಗಳ ಸಾತ್ವಿಕ ಜೀವನದ ಪರಿಣಾಮವೂ ಅವರ ಮೇಲೆ. ತನ್ನೂರು ಮುದ್ದೇನಹಳ್ಳಿ (ಚಿಕ್ಕಬಳ್ಳಾಪುರ ತಾಲ್ಲೂಕು, ಕೋಲಾರ ಜಿಲ್ಲೆ) ಮುಂದೆ ಬೆಂಗಳೂರು ಪುಣೆಗಳಲ್ಲಿ ತೀರ ಕಷ್ಟದಲ್ಲೇ ಓದಿದರೂ ಎಲ್ಲದರಲ್ಲೂ ಅಗ್ರಗಣ್ಯರಾಗಿ ತೇರ್ಗಡೆ ಹೊಂದಿದರು. ಮುಂಬಯಿ ವಿಶ್ವವಿದ್ಯಾಲಯಕ್ಕೇ ಪ್ರಥಮ ಸ್ಥಾನ ಪಡೆದು ಪಾಸಾಗಿದ್ದರಿಂದ ಅಲ್ಲೇ ಕಿರಿಯ ಇಂಜಿನಿಯರ್ ಆಗಿ ನೇರ ನೇಮಕಾಯಿತು. ಅಲ್ಲಿಂದ ಮೇಲೆ ವಿವಿಧ

ಹಂತಗಳಲ್ಲಿ ಬಡ್ತಿ ಪಡೆಯುತ್ತ ಸೂಪರಿಂಟೆಂಡಿಂಗ್ ಇಂಜಿನಿಯರ್ ಆಗಿ ಹಾಗೂ ಸ್ಯಾನಿಟರಿ ಇಂಜಿನಿಯರಿಂಗ್ ಹುದ್ದೆಯಲ್ಲಿ ಕಾರ್ಯಭಾರಿಯಾಗಿ ಅಧಿಕಾರ ವಹಿಸಿಕೊಂಡ ಮೊದಲ ಭಾರತೀಯನೆನಿಸಿಕೊಂಡರು. ಈ ನೈರ್ಮಲ್ಯ ಎಂಜಿನಿಯರ್ ಆಗಿದ್ದಾಗ ಅವರು 1906ರಲ್ಲಿ ಏಡೆನ್ ನಗರ ಹಾಗೂ ಸೈನಿಕ ನೆಲೆಗಳಿಗೆ ಕುಡಿಯುವ ನೀರಿನ ಯೋಜನೆ ರೂಪಿಸಿಕೊಟ್ಟರು. ಇದರಂತೆಯೇ ಸಿಂಧ್ ಪ್ರಾಂತ, ಧಾರವಾಡ, ಬಿಜಾಪುರ, ಕೊಲ್ಲಾಪುರ, ಅಹಮದಾಬಾದ್, ಹೈದರಾಬಾದ್, ಗೋವಾ, ರಾಜಕೋಟೆ ನಗರಗಳಿಗೂ ನೀರು ಸರಬರಾಜು, ಒಳಚರಂಡಿ, ನೀರಾವರಿ ಇತ್ಯಾದಿ ಯೋಜನೆಗಳನ್ನು ರೂಪಿಸಿಕೊಟ್ಟರು. ಪುಣೆಯಲ್ಲಿದ್ದಾಗ ಅಲ್ಲಿಯ ಡೆಕ್ಕನ್ ಕ್ಲಬ್ ಸ್ಥಾಪನೆಯಲ್ಲಿ ವಿಶೇಷ ಪಾತ್ರ ವಹಿಸಿದರು. ಅಲ್ಲಿಯ ಸಾಮಾಜಿಕ ಜೀವನದಲ್ಲಿ ಕ್ರಿಯಾಶೀಲರಾಗಿ ಬಾಲಗಂಗಾಧರ ತಿಲಕ, ಮಹಾದೇವ ರಾನಡೆ ಹಾಗೂ ಗೋಪಾಲಕೃಷ್ಣ ಗೋಖಲೆಯವರಂತಹ ಮಹಾಪುರುಷರ ಸಂಪರ್ಕವನ್ನೂ ಬೆಳೆಸಿಕೊಂಡರು. ಪುಣೆ ಜಿಲ್ಲೆಯ ನೀರಾ ನದಿಯ ನೀರುಣಿಸುವ ಪ್ರದೇಶದಲ್ಲಿ ಪರ್ಯಾಯ ಬೆಳೆ ಹಾಗೂ ನೀರು ಹಂಚಿಕೆಗಾಗಿ ಬ್ಲಾಕ್ ಸಿಸ್ಟಂ (ವಿಭಾಗ ಪದ್ಧತಿ) ಎಂಬ ಹೆಸರಾಂತ ಹೊಸ ಕೃಷಿ ಪದ್ಧತಿಯನ್ನು ಯಶಸ್ವಿಯಾಗಿ ಜಾರಿಗೆ ತಂದು ಮುಂಬಯಿ ಸಂಪುಟ ಸಚಿವ ಸರ್ ಜಾನ್ ಮೂರ್ ಮೆಕನ್ಜಿಯಿಂದ "ಇಡೀ ಸರ್ಕಾರಿ ಇಲಾಖೆಯಲ್ಲಿ ವಿಶ್ವೇಶ್ವರಯ್ಯನವರಂತಹ ಪ್ರತಿಭಾವಂತ ಆಂಗ್ಲ ಅಥವಾ ಭಾರತೀಯ ಅಧಿಕಾರಿ ಬೇರೊಬ್ಬನಿಲ್ಲ. ಇವರೊಡನೆ ಸಹಕರಿಸುವ ಸೌಭಾಗ್ಯ ನನ್ನದಾಗಿದ್ದುದಕ್ಕೆ ಸಂತೋಷವಾಗಿದೆ" ಎಂಬ ಹೊಗಳಿಕೆಗೆ ಪಾತ್ರರಾದರು. ಇದರಂತೆಯೇ ನಂತರ ದೇಶದ ಇನ್ನಿತರ ಸಂಸ್ಥಾನಗಳಾದ ಬರೋಡ, ಭೂಪಾಲ್, ಗ್ವಾಲಿಯರ್, ಇಂದೋರ್, ಕಾಥೇವಾಡ್, ಮೌರವಿ, ಫಲ್ಟನ್ ಮುಂತಾದವುಗಳೂ ಇವರ ಸೇವಾಕೌಶಲ್ಯವನ್ನು ಉಪಯೋಗಿಸಿಕೊಂಡವು.

ಹೀಗೆ ತಮ್ಮ ಕೆಲಸಕಾರ್ಯಗಳಿಂದ, ಯೋಜನಾ ರಚನೆಗಳಿಂದ, ಸಾಮಾಜಿಕ ಚಟುವಟಿಕೆಗಳಿಂದ ಭಾರಿ ಮಹತ್ವಗಳಿಸಿಕೊಂಡು ದೇಶವಿದೇಶಗಳಲ್ಲೂ ಹೆಸರುವಾಸಿಯಾದ ವಿಶ್ವೇಶ್ವರಯ್ಯನವರನ್ನು ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಸಂಸ್ಥಾನದ ಮುಖ್ಯ ಇಂಜಿನಿಯರ್ ಆಗಿ ಅಧಿಕಾರ ವಹಿಸಿಕೊಳ್ಳಲು ಆಮಂತ್ರಿಸಿದರು. 1909ರ ನವೆಂಬರ್‌ನಲ್ಲಿ ಈ ಹುದ್ದೆಗೆ ಬಂದ ವಿಶ್ವೇಶ್ವರಯ್ಯನವರು ಅಲ್ಲಿ ಮಾಡಿದ ಕಾರ್ಯಗಳು ಅದ್ಭುತವಾದವುಗಳು. ಅವುಗಳಲ್ಲಿ ಪ್ರಮುಖವಾಗಿ "ಕಾವೇರಿ ಜಲಾಶಯ ಸಮೀಕ್ಷಾ ವಿಭಾಗ" ರಚನೆ, ಆರ್ಥಿಕ ಪರಿಷತ್ತಿನ ಸ್ಥಾಪನೆ, ತಾಂತ್ರಿಕ ಶಿಕ್ಷಣಕ್ಕೆ ಯೋಜನಾ ವರದಿ ಸಿದ್ಧತೆ ಇತ್ಯಾದಿಗಳಲ್ಲದೇ ಸ್ಥಗಿತಗೊಂಡಿದ್ದ ರೈಲುಮಾರ್ಗ ನಿರ್ಮಾಣಕಾರ್ಯದ ಪುನರಾರಂಭ. ಇಲ್ಲಿ ವಿಶ್ವೇಶ್ವರಯ್ಯನವರಿಗೆ ರೈತರ ಬಗ್ಗೆ, ಜನಸಾಮಾನ್ಯರ ಬಗ್ಗೆ ಹಾಗೂ ಯುವಕರ ಶಿಕ್ಷಣದ ಬಗ್ಗೆ ಇರುವ ವಿಶೇಷ ಕಾಳಜಿ ಹಾಗೂ ಒಲವುಗಳನ್ನು ಕಾಣಬಹುದಾಗಿದೆ. ಹಣಕಾಸಿನ ವ್ಯವಹಾರ ಹೆಚ್ಚಾಗಿರುವ ಈ ಇಂಜಿನಿಯರಿಂಗ್ ಇಲಾಖೆಯಲ್ಲಿ ಪ್ರಾಮಾಣಿಕತೆ ಹಾಗೂ ದಕ್ಷತೆಗಳು ಸಮ್ಮಿಳಿತವಾಗುವಂತೆ ಪ್ರಯತ್ನಿಸಿದರು. ಮೊರ್ಲೆಬೆಲ್‌ನ "ನಿಮ್ಮ ಕೆಲಸ ಚೌಕವೊಂದನ್ನು ಗುಡಿಸುವುದೇ ಆಗಿರಬಹುದು, ಆ ಚೌಕವನ್ನು ಜಗತ್ತಿನ ಅತ್ಯಂತ ಸ್ವಚ್ಛ ಚೌಕವೆಂದಾಗುವಂತೆ ಗುಡಿಸುವುದು ನಿಮ್ಮ ಕರ್ತವ್ಯ ಎಂಬುದನ್ನು ಸದಾ ನೆನಪಿಡಿ" ಎಂಬ ಮಾತನ್ನು ಪದೇಪದೇ ಸಿಬ್ಬಂದಿಗೆ ಮನಮುಟ್ಟುವಂತೆ ಹೇಳುತ್ತಿದ್ದರು. ಅಂದರೆ ತಾವು ಮಾಡುವ ಎಲ್ಲ ಕೆಲಸಗಳನ್ನೂ ವಿಶ್ವದ ಸರ್ವಶ್ರೇಷ್ಠ ದರ್ಜೆಗೇರಿಸುವುದು ಅವರ ಗುರಿಯಾಗಿತ್ತು. ಈ ಗುರಿ ಸಾಧಿಸಲು ಅವರು ತಮ್ಮೆಲ್ಲ ಶಕ್ತಿಸಾಮರ್ಥ್ಯಗಳನ್ನೂ ಧಾರೆಯೆರೆದರು. ಮೈಸೂರು ರಾಜ್ಯದ ಅಭಿವೃದ್ಧಿಗಾಗಿ ಅಹರ್ನಿಸಿ ದುಡಿದರು...

ವಿಶ್ವೇಶ್ವರಯ್ಯನವರ ಈ ಕಾರ್ಯಕ್ಷಮತೆ ಹಾಗೂ ಪ್ರಾಮಾಣಿಕತೆಗಳು ಮಹಾರಾಜರನ್ನು ತೀವ್ರವಾಗಿ ಆಕರ್ಷಿಸಿದ್ದು ಸಹಜವೇ ಆಗಿತ್ತು. ಅಂತೆಯೇ ಅವರು ವಿಶ್ವೇಶ್ವರಯ್ಯನವರನ್ನು 'ದಿವಾನ್ ಹುದ್ದೆಗೆ ನೇಮಿಸಿದರು (10.12.1912). ಇಂಜಿನಿಯರ್‌ನಂತಹ ತಾಂತ್ರಿಕಜ್ಞರೊಬ್ಬರನ್ನು ಈ ಆಡಳಿತಾತ್ಮಕವಾದ ಅತ್ಯುನ್ನತ ಹುದ್ದೆಗೆ ನೇಮಿಸಿದ್ದು ಇತಿಹಾಸದಲ್ಲೇ ಇದು ಮೊದಲನೆಯದಾಗಿತ್ತು. ಇದಕ್ಕೆ ಅಷ್ಟಿಷ್ಟು ವಿರೋಧ ವ್ಯಕ್ತವಾಗಿದ್ದರೂ ಮಹಾರಾಜರು ಅದನ್ನು ಲೆಕ್ಕಿಸಲಿಲ್ಲ. ಅವರ ಈ ಧೈರ್ಯದ ಹಾಗೂ ನಿಷ್ಠುರ ನಿಲುವಿಗೆ ವಿಶ್ವೇಶ್ವರಯ್ಯನವರ ವ್ಯಕ್ತಿತ್ವ ಹಾಗೂ ಸಾಧನೆಗಳೇ ಕಾರಣವಾಗಿದ್ದವೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ನೀಲ್ ಆರ್ಮಸ್ಟ್ರಾಂಗನು ಚಂದ್ರನ ಮೇಲಿಟ್ಟ ಮೊದಲ ಪುಟ್ಟ ಹೆಜ್ಜೆ ಇಡೀ ಮಾನವ ಕುಲಕ್ಕೆ ಒಂದು ಬೃಹತ್ ನೆಗೆತ ಆಯಿತೆಂಬಂತೆ ವಿಶ್ವೇಶ್ವರಯ್ಯನವರ ಈ ನೇಮಕಾತಿಯ ಮಹಾರಾಜರ ಆ ಒಂದು ನಿರ್ಣಯ ಇಡೀ ಮೈಸೂರು ರಾಜ್ಯದ ಪ್ರಗತಿಯ ಚಿತ್ರವನ್ನೇ ಬದಲಾಯಿಸಿ ಸುವರ್ಣ ಯುಗವನ್ನು ಬರಮಾಡಿಕೊಂಡಿತೆಂಬುದೂ ಸಾರ್ವಕಾಲಿಕ ಸತ್ಯವಾಗಿದೆ.

ವಿಶ್ವೇಶ್ವರಯ್ಯನವರ ಜೀವನ ಚರಿತ್ರೆಯೆಂದರೆ ಅದು ಅವರು ಮಾಡಿದ ಅದ್ಭುತ ಸಾಧನೆಗಳ ಒಂದು ದಾಖಲೆ ಮಾತ್ರವೇ ಆಗಿದೆ. ಮೈಸೂರು ದಿವಾನರಾಗಿ ಅವರು ಮಾಡಿದ ಕೆಲಸಕಾರ್ಯಗಳು, ರೂಪಿಸಿದ ಯೋಜನೆಗಳು, ಕೈಗೊಂಡ ಸುಧಾರಣೆಗಳಂತೂ ಅಸಂಖ್ಯವಾಗಿವೆ. ಅವುಗಳಲ್ಲಿ ರಾಜಕೀಯ ಹಾಗೂ ಆಡಳಿತ, ಪ್ರಜಾಸತ್ತಾತ್ಮಕ ಹಾಗೂ ರಾಜತಾಂತ್ರಿಕ, ಕೈಗಾರಿಕೆ ಮತ್ತು ವಾಣಿಜ್ಯ, ಶೈಕ್ಷಣಿಕ ಹಾಗೂ ಸಾಹಿತ್ಯ, ಕೃಷಿ, ನೀರಾವರಿ ಹಾಗೂ ವಿದ್ಯುತ್ ಕ್ಷೇತ್ರಗಳು ಪ್ರಮುಖವಾಗಿವೆ. ಆ ಮಹೋನ್ನತ ಸ್ಥಾನವನ್ನು ಅಲಂಕರಿಸುವ ಮೊದಲೇ ತನ್ನ ಸಂಬಂಧಿಕರನ್ನೆಲ್ಲ ಕರೆದು ಆಡಳಿತದಲ್ಲಿ ಹಸ್ತಕ್ಷೇಪ ಮಾಡದಂತೆ ಕೇಳಿಕೊಂಡದ್ದು ಒಂದು ಅನುಕರಣೀಯ ಹೃದಯಸ್ಪರ್ಶಿ ಘಟನೆಯೆಂದೆನಿಸುತ್ತದೆ.

ದಿವಾನ್ ಪದವಿಯ ಅಧಿಕಾರ ವಹಿಸಿಕೊಂಡ ಒಂದು ವರ್ಷದಲ್ಲೇ ಅಂದರೆ 1913ರಲ್ಲಿ ಬ್ರಿಟೀಷ್ ಸರ್ಕಾರದೊಡನೆ ಒಪ್ಪಂದವೊಂದನ್ನು ಮಾಡಿಕೊಂಡು ಮೈಸೂರು ಸಂಸ್ಥಾನದೊಡನೆಯೇ ದೇಶದ ಇನ್ನಿತರ ಸಂಸ್ಥಾನಗಳಿಗೂ ಹೆಚ್ಚಿನ ಆಡಳಿತ ಸ್ವಾತಂತ್ರ್ಯ ದೊರಕಿಸಿಕೊಟ್ಟರು ಹಾಗೂ ದಿನನಿತ್ಯದ ವ್ಯವಹಾರದಲ್ಲಿ ಬ್ರಿಟೀಷರ ಹಸ್ತಕ್ಷೇಪ ಕಡಿಮೆ ಮಾಡಿಸುವಲ್ಲಿಯೂ ಸಫಲರಾದರು; ಅಲ್ಲದೆ ಮಹಾರಾಜರ ರಾಜ್ಯಾಧಿಕಾರವನ್ನು ಹಿಂದಕ್ಕೆ ಪಡೆಯುವ ಅವಕಾಶವನ್ನು ಕಲ್ಪಿಸಿದ ಕಲಂ ಒಂದನ್ನು ಕೈಬಿಡುವಂತೆಯೂ ನೋಡಿಕೊಂಡರು. ಇದಕ್ಕಾಗಿ ಮಹಾರಾಜರು ವಿಶ್ವೇಶ್ವರಯ್ಯನವರನ್ನು ಬಹುದೊಡ್ಡ ಕೃತಜ್ಞತಾಭಾವದಿಂದ ಹೊಗಳಿ ಮೆಚ್ಚುಗೆ ವ್ಯಕ್ತಪಡಿಸಿ ಪತ್ರವೊಂದನ್ನು ಕಳಿಸಿಕೊಟ್ಟರು. ಮುಂದೆ 1917ರಲ್ಲಿ ಬ್ರಿಟೀಷ್ ಸರ್ಕಾರವು ಭಾರತದಲ್ಲಿ ಜವಾಬ್ದಾರಿ ಸರ್ಕಾರವನ್ನು ಜಾರಿಗೆ ತರುವ ಘೋಷಣೆ ಮಾಡಿದಾಗ ಆ ಬಗ್ಗೆ ಸಂಸ್ಥಾನಗಳ ಸ್ಥಾನಮಾನಗಳನ್ನು ಕುರಿತು ಚರ್ಚಿಸಲು ಭಾರತದ ಎಲ್ಲ ರಾಜಮಹಾರಾಜರುಗಳ ಹಾಗೂ ಮುಖ್ಯಮಂತ್ರಿಗಳ ಪರಿಷತ್ತೊಂದನ್ನು ಸ್ಥಾಪಿಸಲಾಯಿತು. ಅದರ ಕಾರ್ಯದರ್ಶಿಯಾಗಿ ವಿಶ್ವೇಶ್ವರಯ್ಯನವರನ್ನು ಆಯ್ಕೆ ಮಾಡಲಾಯಿತು. ಇಲ್ಲಿ ವಿಶ್ವೇಶ್ವರಯ್ಯನವರು ಸಂಸ್ಥಾನಗಳು ಕೌನ್ಸಿಲ್ ಆಫ್ ಸ್ಟೇಟ್ಸ್ ಅಥವಾ ಎರಡನೇ ಸದನದಲ್ಲಿ ಪ್ರತಿನಿಧಿಸಿ ತಮ್ಮ ರಕ್ಷಣೆ, ವಿದೇಶಿ ವ್ಯಾಪಾರ, ರೈಲ್ವೆ ಮಾರ್ಗ, ಹಣಕಾಸು, ಅಂತರ್‌ಸಂಸ್ಥಾನದ ವಿಷಯಗಳನ್ನು ಚರ್ಚಿಸಬಹುದೆಂದು ಮಾಡಿದ

ಸಲಹೆಯನ್ನು ಯಥಾವತ್ತಾಗಿ ಸ್ವೀಕರಿಸಲಾಯಿತು. ಆಗ ವಿಶ್ವೇಶ್ವರಯ್ಯನವರನ್ನು ಮಾಂಟೆಗೋರವರು ಬ್ರಿಟೀಷ್ ಸರ್ಕಾರದ ಸ್ಟೇಟ್ ಕಾರ್ಯದರ್ಶಿಯಾಗಿದ್ದುಕೊಂಡೇ ಮುಕ್ತಕಂಠದಿಂದ ಹೊಗಳಿದರು ಹಾಗೂ ಈ ಪರಿಷತ್ತನ್ನು ಜಂಟೀ ಸಲಹಾ ಸಂಸ್ಥೆಯಾಗಿ ಬ್ರಿಟೀಷ್ ಸರ್ಕಾರ ಪರಿಗಣಿಸಿತು. ನಂತರ ಮಾಂಟೆಗೊ ಚೆಮ್ಸ್‌ಫರ್ಡ್ ಆಯೋಗದ (1918) ಮುಂದೆ ಎಲ್ಲ ಸಂಸ್ಥಾನಗಳ ಪರವಾಗಿ ಒಯ್ದ ನಿಯೋಗದ ನೇತೃತ್ವ ತಂತಾನಾಗಿಯೇ ವಿಶ್ವೇಶ್ವರಯ್ಯನವರಿಗೆ ದೊರೆಯಿತು.

ವಿಶ್ವೇಶ್ವರಯ್ಯನವರು ಸಂಸ್ಥಾನಗಳ ಪರವಾಗಿ ಅವುಗಳ ಹೆಚ್ಚಿನ ಅಧಿಕಾರಕ್ಕಾಗಿ ಬ್ರಿಟೀಷರಲ್ಲಿ ವಾದಿಸಿದಂತೆಯೇ ಮೈಸೂರು ಸಂಸ್ಥಾನದಲ್ಲಿಯ ಪ್ರಜೆಗಳಿಗೆ ಹಾಗೂ ಅವರ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚೆಚ್ಚು ಪ್ರಜಾಸತ್ತಾತ್ಮಕ ಅಧಿಕಾರ ನೀಡಲು ಯತ್ನಿಸಿದರು. ರಾಜ್ಯದ 'ಆರ್ಥಿಕ ಪರಿಷತ್ತಿನಲ್ಲಿ' ಅಧಿಕಾರಿಗಳ ಜೊತೆಜೊತೆಗೆ ಅಧಿಕಾರೇತರರೂ ಕೆಲಸ ಮಾಡುವಂತೆ ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯವಿಧಾಯಕ ಸಂಸ್ಥೆಗಳು ಚರ್ಚೆಯಲ್ಲಿ ಭಾಗವಹಿಸಿ ಪ್ರಶ್ನೆ ಕೇಳುವಂತೆ, ಆಯವ್ಯಯ ಮಂಡನೆಯ ಮೇಲೂ ಮಾತನಾಡುವಂತೆ ಅವಕಾಶ ಕಲ್ಪಿಸಿದರಲ್ಲದೇ 'ಗ್ರಾಮ ಸಮಿತಿ'ಗಳನ್ನು ಸ್ಥಾಪಿಸಿ ಅವುಗಳ ನೇತೃತ್ವವನ್ನು ಪೂರ್ತಿಯಾಗಿ ಅಧಿಕಾರೇತರರೇ ವಹಿಸಿಕೊಂಡು ಕೆಲಸ ಮಾಡುವಂತೆಯೂ ನೋಡಿಕೊಂಡರು. ಇದು ಗಾಂಧೀಜಿಯವರ 'ಗ್ರಾಮ ಸ್ವರಾಜ್ಯ'ದ ಪರಿಕಲ್ಪನೆಗೆ ಮೊದಲೇ ಅನುಷ್ಠಾನಗೊಂಡ ಒಂದು ಅಪೂರ್ವ ಬೆಳವಣಿಗೆಯಾಗಿತ್ತು. ಅಂತೆಯೇ ವಿಶ್ವೇಶ್ವರಯ್ಯನವರ ರಾಜನೀತಿಜ್ಞತೆಗೆ ಹಾಗೂ ದೂರಗಾಮಿತ್ವಕ್ಕೆ ಹಿಡಿದ ಕನ್ನಡಿಯೂ ಆಗಿತ್ತು.

ಆಡಳಿತ ಸುಧಾರಣೆ ಕ್ರಮಗಳಲ್ಲಂತೂ ವಿಶ್ವೇಶ್ವರಯ್ಯನವರನ್ನು ಮೀರಿಸಿದ ಮತ್ತೊಬ್ಬರು ಸಿಗಲಾರರು. ರಾಜ್ಯದ ಇಡೀ ಕಾರ್ಯಾಂಗದ ಮುಖ್ಯ ಹುದ್ದೆಯಾದ ದಿವಾನ್ ಪದವಿಯಲ್ಲಿದ್ದರೂ ಬೆಳಗಿನ ಏಳು ಗಂಟೆಯಿಂದ ಸಂಜೆ ಆರು ಅಥವಾ ಏಳರವರೆಗೂ ಕೆಲಸ ಮಾಡುತ್ತಿದ್ದರು. ಮಧ್ಯದ ವಿಶ್ರಾಂತಿ ವೇಳೆಯಲ್ಲಿ ಕಚೇರಿ ಕೆಲಸದ ವೇಳೆಗಿಂತ ಹೆಚ್ಚು ಕೆಲಸ ಮಾಡುತ್ತಿದ್ದ ಸಿಬ್ಬಂಧಿಗಾಗಿ ಅಲ್ಪೋಪಹಾರದ ವ್ಯವಸ್ಥೆಯನ್ನೂ ಮಾಡಿದ್ದರು. ಕಚೇರಿ ಕೆಲಸಕ್ಕೆ ವೇಳೆಗೆ ಸರಿಯಾಗಿ ಬರುವುದು, ನಿಯಮಿತತನ, ಸಮಯ ಪಾಲನೆಗಳು ಕಡ್ಡಾಯವಾಗಿದ್ದವು. ಪ್ರತಿ ನೌಕರನಿಗೂ ಇಂತಿಷ್ಟು ಕೆಲಸ ಮಾಡಬೇಕೆಂದು ಕಾರ್ಯನಿಗದಿ ಮಾಡಲಾಗಿತ್ತು. ಶಿಸ್ತು, ಸ್ವಚ್ಚತೆ, ದಕ್ಷತೆಗಳಿಗೆ ಎಲ್ಲಿಲ್ಲದ ಮಹತ್ವ ನೀಡಲಾಗಿತ್ತು. ಕಡತಗಳ ಪ್ರಾಮುಖ್ಯತೆಯನ್ನು ಪರಿಗಣಿಸಿ ಅದರಂತೆ ವಿಂಗಡಿಸಿ ಪ್ರತಿಯೊಂದು ಭಾಗಕ್ಕೂ ಇಂತಿಷ್ಟೇ ವೇಳೆಯೆಂದು ಸೂಚಿಸಲಾಗಿತ್ತು. ಆಡಳಿತದಲ್ಲಿ ಪ್ರಾಮಾಣಿಕತೆ ಹಾಗೂ ಹೆಚ್ಚಿನ ದಕ್ಷತೆಗಳನ್ನು ತರಲು "ದಕ್ಷತಾ ಪರಿಶೋಧನಾ ಇಲಾಖೆ"ಯನ್ನು ಹೊಸದಾಗಿ ತೆರೆಯಲಾಯಿತು. ವಿಳಂಬನೀತಿ, ದೋಷಪೂರ್ಣ ಕಾರ್ಯ ಹಾಗೂ ಪುನರಾವರ್ತನೆಗಳು ಭ್ರಷ್ಟಾಚಾರಕ್ಕೆ ಎಡೆಮಾಡಿ ಆಡಳಿತದಲ್ಲಿ ದಕ್ಷತೆಗೆ ಪೆಟ್ಟುಕೊಡುತ್ತವೆ ಎಂಬುದನ್ನು ಮನಗಂಡ ಅವರು ಇವೆಲ್ಲವುಗಳನ್ನು ಬೇರುಸಹಿತ ಕಿತ್ತೊಗೆಯಲು ಈ ಒಂದು ವಿಶೇಷ ವಿಭಾಗವನ್ನು ತೆರೆದಿದ್ದರು ಹಾಗೂ ಇದು ನೇರವಾಗಿ ದಿವಾನರಾದ ತಮ್ಮ ಉಸ್ತುವಾರಿಯಲ್ಲೇ ಕೆಲಸ ಮಾಡುವಂತೆ ಕ್ರಮಕೈಗೊಂಡರು. ಬಲು ಪರಿಣಾಮಕಾರಿಯಾಗಿ ಕೆಲಸ ಮಾಡಿದ ಈ ಇಲಾಖೆ 1916ರಲ್ಲಿ 'ದ ಮೈಸೂರು ಬ್ಲೂಬುಕ್ ಜರ್ನಲ್' ಎಂಬ ತ್ರೈಮಾಸಿಕ ಹಾಗೂ 'ಹ್ಯಾಂಡ್ ಬುಕ್ ಆಫ್ ಮೈಸೂರ್ ಅಡ್ಮಿನಿಸ್ಟ್ರೇಷನ್' ಎಂಬ ಕೈಪಿಡಿ ಪ್ರಕಟಿಸತೊಡಗಿತ್ತು. ಮುಂದೆ ಜಿಲ್ಲೆ, ತಾಲ್ಲೂಕು ಹಾಗೂ ಪುರಸಭೆಗಳಿಗ ಮಾರ್ಗದರ್ಶಿ ಕೈಪಿಡಿಗಳನ್ನು ತಯಾರಿಸಿ ವಿತರಿಸಲಾಯಿತು. ಇಂದಿನ "ಮಾಹಿತಿ ಹಕ್ಕನ್ನು" ಸಾರ್ವಜನಿಕಕ್ಕೆ ನೀಡುವ ಪ್ರಯತ್ನವನ್ನು

ವಿಶ್ವೇಶ್ವರಯ್ಯನವರು ತೊಂಭತ್ತು ವರ್ಷ ಮೊದಲೇ ಕೈಗೊಂಡು 1881ರಿಂದ 1918ರವರೆಗಿನ ರಾಜ್ಯದ ಕೃಷಿ, ಆರೋಗ್ಯ, ಕೈಗಾರಿಕೆ, ಜನನ ಮರಣ ಮುಂತಾದ ಹಲವಾರು ವಿಷಯಗಳ ಸಂಬಂಧಿತ ಅಂಕಿ-ಅಂಶಗಳನ್ನು ಹಾಗೂ ವಿವಿಧ ಅಧಿಕಾರಿ ಸಿಬ್ಬಂದಿಗಳ ದಕ್ಷತೆ ಹಾಗೂ ಕಾರ್ಯವೈಖರಿಗಳ ಬಗ್ಗೆ ಮಾಹಿತಿಯನ್ನು ಪ್ರಕಟಿಸಿ ಪ್ರಜೆಗಳ ಅವಗಾಹನೆಗೆ ನೀಡಿದರು. ನಾಗರಿಕರ ಮತ್ತೊಂದು ಬೇಡಿಕೆಯಾದ ಕಾರ್ಯಾಂಗ ಹಾಗೂ ನ್ಯಾಯಾಂಗ ಅಧಿಕಾರಗಳನ್ನು ಬೇರ್ಪಡಿಸಲೂ ದೃಢ ಕ್ರಮಗಳನ್ನು ಕೈಗೊಳ್ಳಲಾಯಿತು. ಆಡಳಿತದಲ್ಲಿ ಕನ್ನಡವನ್ನು ಹೆಚ್ಚೆಚ್ಚು ಬಳಸಲೂ ಪ್ರಾರಂಭಿಸಲಾಯಿತು.

ಇನ್ನು ಕೈಗಾರಿಕಾ ಕ್ಷೇತ್ರದಲ್ಲಂತೂ ಹೇಳತೀರದಷ್ಟು ಬೆಳವಣಿಗೆಯನ್ನು ಮೈಸೂರು ಕಾಣುವಂತಾಯಿತು. ಅಲ್ಲಿಯವರೆಗೂ ಕೇವಲ ಸಣ್ಣಪುಟ್ಟ ಕೈಗಾರಿಕೆಗಳನ್ನು ಮಾತ್ರ ಹೊಂದಿ ಅದೊಂದು ಹಿಂದುಳಿದ ಸಂಸ್ಥಾನವಾಗಿತ್ತು. "ಕೈಗಾರಿಕೀಕರಣ ಇಲ್ಲವೆ ವಿನಾಶ" ಎಂಬ ತಮ್ಮ ಘೋಷಣೆಯೊಂದಿಗೆ ವಿಶ್ವೇಶ್ವರಯ್ಯನವರು ಬೃಹತ್ ಉದ್ದಿಮೆಗಳ ಸ್ಥಾಪನೆ, ಉದ್ದಿಮೆದಾರರಿಗೆ ಹಾಗೂ ಬಂಡವಾಳ ಹೂಡಿಕೆದಾರರಿಗೆ ಪ್ರೋತ್ಸಾಹ, ಮಾರ್ಗದರ್ಶನ, ಸಾಲ, ಸಹಾಯಧನದ ಅನುಕೂಲ ಇವೇ ಮುಂತಾದ ಕ್ರಮಗಳನ್ನು ಜಾರಿಗೆ ತಂದರು. ಜೊತೆಜೊತೆಯಲ್ಲಿಯೇ ಚಿಕ್ಕ ಹಾಗೂ ಗುಡಿ ಕೈಗಾರಿಕೆಗಳಿಗೆ, ಗ್ರಾಮೋದ್ಯೋಗಗಳಿಗೆ ಎಂದಿಲ್ಲದ ಸದವಕಾಶಗಳನ್ನು ಕಲ್ಪಿಸಿಕೊಟ್ಟರು. ಅಂತೆಯೇ ಅವರ ಆ ಆರು ವರ್ಷಗಳ ಆಡಳಿತದಲ್ಲಿ ಮೈಸೂರು ಉದ್ಯಮಶೀಲತೆಯಲ್ಲಿ ಇಡೀ ದೇಶವೇ ಬೆರಗುಗೊಳ್ಳುವಂತೆ ಪ್ರಥಮ ಸ್ಥಾನದಲ್ಲಿ ಬಂದು ನಿಂತಿತು. ವಿಶ್ವೇಶ್ವರಯ್ಯನವರು ಸ್ಥಾಪಿಸಿದ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ 1927ರಲ್ಲಿ ಭೇಟಿ ನೀಡಿದ್ದ ಮಹಾತ್ಮಾ ಗಾಂಧೀಜಿಯವರು "ಕೃಷ್ಣರಾಜ ಸಾಗರದಂತೆಯೇ ಭದ್ರಾವತಿಯೂ ವಿಶ್ವೇಶ್ವರಯ್ಯನವರ ದೇಶಭಕ್ತಿ ಮತ್ತು ರಚನಾತ್ಮಕ ಪ್ರತಿಭೆಯ ಕೊಡುಗೆಯಾಗಿದೆ. ಅವರು ತಮ್ಮ ಪ್ರತಿಭೆ, ವಿದ್ವತ್ತು, ಸಮಯ, ಶಕ್ತಿಶ್ರಮಗಳನ್ನೆಲ್ಲ ಮೈಸೂರಿನ ಸೇವೆಗೆ ಅರ್ಪಿಸಿಕೊಂಡಿದ್ದಾರೆ.... ಈ ವಿಷಯ ನಿಮಗೂ ಭಾರತಕ್ಕೂ ಹೆಮ್ಮೆ ತರುವಂತಹದ್ದಾಗಿದೆ" ಎಂದು ತಮ್ಮ "ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಬರೆದು ಕೊಂಡಾಡಿದರು. ಈ ಕೈಗಾರಿಕಾ ಜಾಲ ಶ್ರೀಗಂಧದೆಣ್ಣೆ ಹಾಗೂ ಸಾಬೂನು ಉತ್ಪಾದನೆ, ನೇಯ್ಗೆ ಕಾರ್ಖಾನೆ, ಲೋಹ ತಯಾರಿಕೆ, ಚರ್ಮ, ಗುಂಡಿ, ಇತ್ಯಾದಿ ಕಾರ್ಖಾನೆಗಳ ಸ್ಥಾಪನೆ ಹಾಗೂ ವಿಸ್ತರಣೆಯನ್ನು ಒಳಗೊಂಡಿತು. ಇದಲ್ಲದೇ ಖನಿಜಸಂಪತ್ತನ್ನು ಸದುಪಯೋಗಪಡಿಸಿಕೊಳ್ಳಲು ಗಣಿಗಾರಿಕೆಗೆ ಪ್ರೋತ್ಸಾಹಿಸಲಾಯಿತು. ಕೋಲಾರ ಚಿನ್ನದ ಗಣಿಗೆ ಸಾಕಷ್ಟು ವಿದ್ಯುತ್ ಪೂರೈಸಿ ಅದು ಸಂಪೂರ್ಣ ಸಾಮರ್ಥ್ಯದೊಂದಿಗೆ ಕೆಲಸ ಮಾಡಲು ಅನುವುಮಾಡಿಕೊಡಲಾಯಿತು. ವಿದ್ಯುತ್ ಉತ್ಪಾದನೆಯಲ್ಲಿ ರಾಜ್ಯ ಮುನ್ನಡೆಯುವಂತೆ ಮಾಡಲಾಯಿತು. ಕಾಡಿನ ಸಂಪತ್ತನ್ನು ಉಪಯೋಗಿಸಿಕೊಂಡು ಅರಣ್ಯ ಕೈಗಾರಿಕೆಗಳ ಸ್ಥಾಪನೆಗೊಂಡವು. ಇದಕ್ಕೆ ಪೂರಕವಾಗಿ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸಲು ಹಣಕಾಸು ಸಂಸ್ಥೆಗಳನ್ನು ಮೈಸೂರು ಬ್ಯಾಂಕ್ (1913), ಪ್ರಾಂತೀಯ ಸಹಕಾರಿ ಬ್ಯಾಂಕ್, ವಾಣಿಜ್ಯ ಮಹಾಮಂಡಲ (1916), ಪ್ರತ್ಯೇಕ ವಾಣಿಜ್ಯ ಇಲಾಖೆ (1917), ಸೆಂಚುರಿ ಕ್ಲಬ್ (1917), ಮಹಿಳಾ ಕ್ಲಬ್ ಹಾಗೂ ಸರ್ಕಾರಿ ಒಡೆತನದ 'ಮಾಡರ್ನ್ ಹಿಂದೂ ಹೋಟೆಲ್'ಗಳ ಸರಣಿ ಇಂತಹ ಹಲವಾರು ಸಂಘ ಸಂಸ್ಥೆಗಳನ್ನು ಹುಟ್ಟುಹಾಕಲಾಯಿತು.

ಶೈಕ್ಷಣಿಕ ರಂಗದಲ್ಲಿಯೂ ಅಭೂತಪೂರ್ವ ಸುಧಾರಣೆಗಳನ್ನು ತರಲಾಯ್ತು. ಸಾವಿರಾರು ಪ್ರಾಥಮಿಕ ಶಾಲೆಗಳು, ತಾಂತ್ರಿಕ ವೃತ್ತಿಪರ ಹಾಗೂ ವಾಣಿಜ್ಯ ಶಿಕ್ಷಣ ಸಂಸ್ಥೆಗಳು, ಜಿಲ್ಲಾ ಮಟ್ಟದಲ್ಲಿ ಕೈಗಾರಿಕಾ ಶಾಲೆಗಳು, ವ್ಯವಸಾಯ ಶಿಕ್ಷಣ ಕೇಂದ್ರಗಳೇ ಮುಂತಾಗಿ

ಸ್ಥಾಪನೆಗೊಂಡವು. ವಯಸ್ಕರ ಹಾಗೂ ಮಹಿಳೆಯರ ಶಿಕ್ಷಣಕ್ಕಾಗಿ ವಿಶೇಷ ಒತ್ತನ್ನು ನೀಡಲಾಯಿತು. ಇವೆಲ್ಲಕ್ಕೂ ಮುಕುಟಪ್ರಾಯದಂತೆ ಮೈಸೂರು ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಇಡೀ ದೇಶದಲ್ಲಿಯೇ ಸಂಸ್ಥಾನವೊಂದರ ಪ್ರಪ್ರಥಮ ವಿಶ್ವವಿದ್ಯಾಲಯ ಇದೆಂಬ ಹೆಗ್ಗಳಿಕೆಯೂ ಇದರದಾಯಿತು.

ನೀರಾವರಿ ಹಾಗೂ ಕೃಷಿಯಲ್ಲಂತೂ ಅದ್ಭುತ ಸಾಧನೆ ಮಾಡಿ ಕನ್ನಂಬಾಡಿಯಂತಹ ಚಿರಸ್ಮಾರಕಗಳನ್ನು ದೇಶಕ್ಕೆ ನೀಡಿದರು. (ಮುಂದೆ ಗಂಗಾ ಸೇತುವೆ ನಿರ್ಮಾಣದಲ್ಲಿ ತಮ್ಮ ತೊಂಭತ್ತೆರಡರ ಇಳಿ ವಯಸ್ಸಿನಲ್ಲೂ ಆ ಪ್ರದೇಶದಲ್ಲೆಲ್ಲ ತಿರುಗಾಡಿ ಅಪೂರ್ವ ಯೋಜನೆಯನ್ನು ರೂಪಿಸಿಕೊಟ್ಟರು.) ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕದಲ್ಲೂ ಸಾಕಷ್ಟು ಅಭಿರುಚಿ ಇದ್ದ ವಿಶ್ವೇಶ್ವರಯ್ಯನವರು ಬೆಂಗಳೂರಿನಲ್ಲಿ ಪ್ರತಿಷ್ಠಿತ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು. (1915). ಬೆಂಗಳೂರಿನ ಈಗಿನ ರಾಜ್ಯ ಗ್ರಂಥಾಲಯವಿರುವ ಶೇಷಾದ್ರಿ ಅಯ್ಯರ್ ಸ್ಮಾರಕ ಭವನದಲ್ಲಿ ಒಂದು ಹಾಗೂ ಮೈಸೂರಿನ ಶ್ರೀಚಾಮರಾಜ ತಾಂತ್ರಿಕ ಸಂಸ್ಥೆಯ ಕಟ್ಟಡದಲ್ಲಿ ಇನ್ನೊಂದು ಹೀಗೆ ಎರಡು ಬೃಹತ್ ಗ್ರಂಥಾಲಯಗಳನ್ನು ಪ್ರಾರಂಭಿಸಿ ಜಿಲ್ಲಾ ಹಾಗೂ ಗ್ರಾಮ ಮಟ್ಟದಲ್ಲೂ ಗ್ರಂಥಾಲಯಗಳನ್ನು ನಿರ್ಮಿಸಲು ವಿಶೇಷ ಅನುದಾನ ನೀಡಲಾಯಿತು. ಇದು ರಾಜ್ಯದಲ್ಲಿ ಗ್ರಂಥಾಲಯ ಚಳುವಳಿಯ ಪ್ರಾರಂಭಕ್ಕೆ ನಾಂದಿಯಾಯಿತು.

ಒಟ್ಟಿನಲ್ಲಿ ವಿಶ್ವೇಶ್ವರಯ್ಯನವರ ಅಹರ್ನಿಸಿ ದುಡಿತದ ಫಲವಾಗಿ ಎರಡನೆ ದರ್ಜೆ ಸ್ಥಾನಮಾನದಲ್ಲಿದ್ದ ಮೈಸೂರು ಸಂಸ್ಥಾನವು ಒಂದು 'ಮಾದರಿ ಮೈಸೂರು ರಾಜ್ಯ'ವೆಂದು ಇಡೀ ದೇಶದಲ್ಲೇ ಹೆಸರುವಾಸಿಯಾಯಿತು. ಅಂತೆಯೇ 1916ರಲ್ಲಿ ಇಲ್ಲಿಗೆ ಭೇಟಿ ನೀಡಿದ್ದ ಭಾರತೀಯ ರಾಜರುಗಳ ಪರಿಷತ್ತಿನ ಅಧ್ಯಕ್ಷರಾದ ಗಂಗಾಸಿಂಗ್ ಬಹದ್ದೂರ್ ಅವರು ಮೈಸೂರನ್ನು ಮಾದರಿ ಸಂಸ್ಥಾನ ಎಂದೂ ವಿಶ್ವೇಶ್ವರಯ್ಯನವರ ಶ್ರಮ ಉಚ್ಚತಮವಾದುದೆಂದೂ ಮುಕ್ತಕಂಠದಿಂದ ಹೊಗಳುತ್ತ ತಾವು ಅವರಿಂದ ಅನೇಕ ವಿಷಯಗಳನ್ನು ಕಲಿತುಕೊಂಡದ್ದಾಗಿಯೂ ಹಾಗೂ ಅವನ್ನೆಲ್ಲ ತಮ್ಮ ಸಂಸ್ಥಾನದಲ್ಲಿ ಅನುಕರಿಸಬೇಕಿರುವುದಾಗಿಯೂ ಹಂಬಲವನ್ನು ವ್ಯಕ್ತಪಡಿಸಿದರು.

ಬೇಡಿದ ವರವನ್ನು ನೀಡಿದ ದೇವರನ್ನೆ ದೂಷಿಸುವವರಿಲ್ಲವೇ? ಅಂತೆಯೇ ವಿಶ್ವೇಶ್ವರಯ್ಯನವರ ಮೇಲೂ ಎರಡು ತೀವ್ರ ಆರೋಪಗಳಿದ್ದವು. ಒಂದು ಅವರು ಹೆಚ್ಚೆಚ್ಚು ಪಾಶ್ಚಿಮಾತ್ಯರನ್ನು ಅನುಕರಿಸುತ್ತಾರೆಂಬುದು ಹಾಗೂ ಇನ್ನೊಂದು ಅವರು ಹಿಂದುಳಿದ ವರ್ಗಗಳ (ಮೀಸಲಾತಿ) ವಿರೋಧಿಯಾಗಿದ್ದರೆಂಬುದು, ಆದರೆ ಅವರ ಜೀವನ ವೃತ್ತಾಂತವನ್ನು ಕೂಲಂಕುಶವಾಗಿ ಅಭ್ಯಾಸ ಮಾಡಿದವರಿಗೆ ಈ ಆರೋಪಗಳು ಸತ್ಯಕ್ಕೆ ದೂರವಾದವುಗಳೆಂದು ಮನವರಿಕೆ ಆಗದೇ ಇರದು. ಉತ್ತಮವಾದುದು ಎಲ್ಲೇ ಇರಲಿ ಅದನ್ನು ನಾವು ಸ್ವೀಕರಿಸಬೇಕು ಎಂಬ ಸಹಜ ಮನೋಧರ್ಮದಿಂದ ವಿಶ್ವೇಶ್ವರಯ್ಯನವರು ಸಮಯ ಪಾಲನೆ, ಶಿಸ್ತು, ಅಚ್ಚುಕಟ್ಟುತನ ದಕ್ಷತೆ ಮತ್ತು ಪ್ರಾಮಾಣಿಕತೆ ಇಂತಹ ವಿಷಯದಲ್ಲಿ ಬಿಗುನಿಲುವು ತಾಳುತ್ತಿದ್ದುದನ್ನೇ ನೆಪಮಾಡಿ ಮೊದಲ ಆರೋಪ ಹುಟ್ಟಿಕೊಂಡಿತ್ತು. ನಿಜವಾಗಿ ಹೇಳುವುದಾದರೆ ಆಡಳಿತದಲ್ಲಿ ಕನ್ನಡವನ್ನು ಹೆಚ್ಚೆಚ್ಚು ತಂದದ್ದು, ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಿದ್ದು, ಕನ್ನಂಬಾಡಿಯಂತಹ ಮಹತ್ವದ ಅಣೆಕಟ್ಟಿಗೆ ವಿದೇಶಿ ಸಿಮೆಂಟ್‌ಗೆ ಬದಲಾಗಿ ಸ್ಥಳೀಯ ಸುರಕಿಗಾರೆಯನ್ನೇ ಉಪಯೋಗಿಸಿದ್ದು, ದಸರಾ ದರ್ಬಾರಿನಲ್ಲಿ ಬ್ರಿಟೀಷರು ಮೇಲೆ ಕುಳಿತು ಸ್ಥಳೀಯರು ಕೆಳಗೆ

ಜಮಾಖಾನೆ ಮೇಲೆ ಕೂರುವ ಪದ್ಧತಿಗೆ ಹಾಗೂ ದರಬಾರಿನ ಪ್ರಜಾಪ್ರತಿನಿಧಿ ಸಭೆಯ ಪ್ರಾರಂಭದಲ್ಲಿ ರಾಜರನ್ನು ಹಾಗೂ ದಿವಾನರನ್ನು ಅತಿಶಯವಾಗಿ ಹೊಗಳುವ ಭಟ್ಟಂಗಿ ಪರಂಪರೆಗೆ ಕೊನೆ ಎಳೆದದ್ದು ಇವೆಲ್ಲ ವಿಶ್ವೇಶ್ವಯ್ಯನವರ ಸ್ವಂತಿಕೆ ಹಾಗೂ ಸ್ವಾಭಿಮಾನವನ್ನು ಎತ್ತಿತೋರುವ ಅನೇಕ ಉದಾಹರಣೆಗಳಲ್ಲಿ ಕೆಲವಾಗಿವೆ. ಅಂತೆಯೇ ಸರ್ಕಾರಿ ನೇಮಕಗಳಲ್ಲಿ ಅರ್ಹತೆ ಹಾಗೂ ದಕ್ಷತೆ ಇವರೆಡನ್ನೇ ಪರಿಗಣಿಸಬೇಕೆಂದು ಪ್ರಾರಂಭದಲ್ಲಿ ನಿಲುವು ತಳೆದಿದ್ದರೂ ನಂತರದ ದಿನಗಳಲ್ಲಿ ಇದನ್ನು ಬದಲಾಯಿಸಿ ಹಿಂದುಳಿದ ವರ್ಗಗಳಿಗೆ ಶೇಕಡಾ 33 ರಷ್ಟು ಮೀಸಲಾತಿ ನೀಡಲು ಒಪ್ಪಿಕೊಂಡರು. ಮೇಲಾಗಿ ದಲಿತ ಹಾಗೂ ಹಿಂದುಳಿದ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿವೇತನ ಪ್ರಾರಂಭಿಸಿದರು. ಸಾರ್ವಜನಿಕ ಸಂದರ್ಭಗಳಲ್ಲಿ ಜಾತಿ ಭೇದವಿಲ್ಲದೆ ಸಹಪಂಕ್ತಿ ಭೋಜನಗಳನ್ನೇರ್ಪಡಿಸುತ್ತಿದ್ದ ಅಸ್ಪೃಶ್ಯರಿಗಾಗಿಯೇ ನೂರಾರು "ಪಂಚಮಶಾಲೆ"ಗಳನ್ನು ಹಾಗೂ ವಸತಿ ಶಾಲೆಗಳನ್ನು ಸ್ಥಾಪಿಸಿದ ಮೊದಲ ದಿವಾನರೆನಿಸಿದರು. ಇಲ್ಲಿ ವಿಶ್ವೇಶ್ವರಯ್ಯನವರು ಮುಖ್ಯ ಇಂಜಿನಿಯರ್ ಆಗಿದ್ದಾಗಿನ ಒಂದು ಘಟನೆಯ ಪ್ರಸ್ತಾಪವು ಪ್ರಸ್ತುತವೆಂದೆನಿಸುತ್ತದೆ. ಆಗಿನ ದಿವಾನರೊಂದಿಗೆ ಹರಿಕಥೆ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದಾಗ ದಾಸರು ಉಲ್ಲೇಖಿಸಿದ ಪುರಾಣದ ಉಪಕತೆಯೊಂದು ಇವರಿಗೆ ತಿಳಿದಿರಲಾರದೆಂದು ಊಹಿಸಿ ದಿವಾನರು ಅದನ್ನು ವಿವರಿಸತೊಡಗಿದಾಗ ವಿಶ್ವೇಶ್ವರಯ್ಯನವರು "ಅದೆಲ್ಲಾ ಸರಿ. ಅಲ್ಲಿ ಓಡಾಡಿಕೊಂಡಿರುವ ಮಕ್ಕಳ ಕಡೆ ನೋಡಿ, ಹರಕು ಬಟ್ಟೆ, ಕೊಳಕು ಮುಖ, ಕೆದರಿದ ತಲೆ, ಅನಾರೋಗ್ಯಕರ ಮೈ, ಕೈಕಾಲು ಸಣ್ಣ ಹೊಟ್ಟೆದಪ್ಪ, ಅರಚಾಟ, ಗೋಳಾಟ. ಈ ವಿಷಯದಲ್ಲಿ ಪುರಾಣ ಏನೂ ಹೇಳತಕ್ಕದಿಲ್ಲವೊ?" ಎಂದು ಪ್ರಶ್ನಿಸಿದರು. ಅಂದರೆ "ದರಿದ್ರ ದೇವೋಭವವೇ", ಸಮಾಜದಲ್ಲಿ ಕಟ್ಟಕಡೆಯವನನ್ನು ತಲುಪುವುದೇ ಅವರ ನೀತಿಯಾಗಿತ್ತೆಂದಲ್ಲವೇ ?

ತಮ್ಮೆಲ್ಲ ಶಕ್ತಿ, ಶ್ರಮ, ಶ್ರದ್ಧೆ ಹಾಗೂ ಚಿಂತನೆಗಳನ್ನು ದೇಶಕ್ಕಾಗಿ ಧಾರೆಎರೆದ ವಿಶ್ವೇಶ್ವರಯ್ಯನವರ ಕೌಟುಂಬಿಕ ಜೀವನ ಸುಖಕರವಾಗಿರಲಿಲ್ಲ. ಹೆರಿಗೆ ಸಮಯದಲ್ಲಿ ಇಬ್ಬರು ಪತ್ನಿಯರು ಮೃತರಾದರೆ ಮೂರನೆಯವರನ್ನು ಇವರೇ ತ್ಯಜಿಸಿದ್ದರು ಹಾಗೂ ಅವಳ ಜೀವಿತದವರೆಗೂ ಮಾಶಾಸನ ಕಳಿಸುತ್ತಿದ್ದರು. ತಮ್ಮ ಈ ನೋವನ್ನೆಲ್ಲ ನುಂಗಿ ಜಗದ ನಲಿವಿಗೆ ಶ್ರೀಗಂಧದಂತೆ ಜೀವತೇಯ್ದು ಬರೀ ಪರಿಮಳ ಸೂಸಿದ ಅಮೂಲ್ಯ ಚೇತನ ಇವರು. ಎಂದೂ ಪ್ರಶಂಸೆಗೆ ಹಿಗ್ಗಿದವರಲ್ಲ. ಬಸವಣ್ಣನವರು ಹೊಗಳಿಕೆಗೆ ಹೊನ್ನಶೂಲವೆಂದಂತೆ, ಕುವೆಂಪುರವರು ಕೀರ್ತಿಯನ್ನು ಶನಿ ಎಂದು ಕರೆದಂತೆ ವಿಶ್ವೇಶ್ವರಯ್ಯನವರು ಪ್ರಚಾರ, ಬಣ್ಣನೆಗಳಿಂದ ಯಾವಾಗಲೂ ದೂರವಿದ್ದವರು. ಅಷ್ಟೇ ಅಲ್ಲ ಕೆಲಸ ಮುಖ್ಯ ಹೆಸರಲ್ಲವೆಂದು ಬಲವಾಗಿ ನಂಬಿದವರು. 1902ರಷ್ಟು ಹಿಂದಿನ ಒಂದು ಉದಾಹರಣೆಯೇ ಸಾಕು ಇದನ್ನು ರುಜುವಾತುಪಡಿಸಲು. ಸದಾ ನಾಡಿನ ಅಭ್ಯುದಯದ ಬಗ್ಗೆ ಚಿಂತಿಸುತ್ತಿದ್ದ ವಿಶ್ವೇಶ್ವರಯ್ಯನವರು ಶಿಕ್ಷಣದ ಅವಶ್ಯಕತೆ, ಕೈಗಾರಿಕೀಕರಣದ ಅನಿವಾರ್ಯತೆ, ಜನಜೀವನ ಕ್ರಮದಲ್ಲಿ ತೀವ್ರ ಬದಲಾವಣೆಯೊಂದಿಗೆ ದೇಶಕಾರ್ಯಕ್ಕಾಗಿ ಆಗಬೇಕಾದ ಸಿದ್ಧತೆ, ಕೃಷಿಪದ್ಧತಿಯಲ್ಲಿ ಅಳವಡಿಸಬೇಕಾದ ಹೊಸ ಸುಧಾರಣೆ ಹೊಸ ಹೊಸ ಪ್ರಯೋಗಗಳೇ ಇತ್ಯಾದಿಗಳನ್ನು ವಿವರಿಸುವ ಚಿಕ್ಕ ಪುಸ್ತಿಕೆಯೊಂದನ್ನು ತಾವೇ ಸ್ವಂತ ಹಣದಲ್ಲಿ ಮುದ್ರಿಸಿ, "A vision of Prosperous Mysore' ಎಂಬ ಶೀರ್ಷಿಕೆಯೊಂದಿಗೆ ಸಾರ್ವಜನಿಕಕ್ಕೆ ವಿತರಿಸಿದ್ದರು. ವಿಚಿತ್ರವೆಂದರೆ ಈ ಲಘುಪುಸ್ತಿಕೆಯ ಮೇಲೆ ಲೇಖಕನ ಹೆಸರನ್ನು ಎಲ್ಲಿಯೂ ಮುದ್ರಿಸಿರಲಿಲ್ಲ. "By a Mysorean' ಎಂದಷ್ಟೇ ನಮೂದಿಸಲಾಗಿತ್ತು. ಡಿ.ವಿ.ಗುಂಡಪ್ಪನವರು ಇವರೊಡನೆ

ಒಮ್ಮೆ ಮಾತನಾಡುತ್ತಾ ನಿಮ್ಮಂತಹ ಪುತ್ರರತ್ನರನ್ನು ನೀಡಿದ ನಿಮ್ಮ ತಂದೆತಾಯಿಗಳು.... ಎಂದು ಪ್ರಾಸಂಗಿಕವಾಗಿ ಏನನ್ನೂ ಪ್ರಸ್ತಾಪಿಸಬೇಕೆಂದಾಗ ನಡುವೆಯೇ ಅವರನ್ನು ತಡೆದು "ಹೌದು ಈಗ ನಾನೇನಾಗಿದ್ದೇನೆ?" ಎಂದು ಪ್ರಶ್ನಿಸಿದರೆಂದು ಡಿ.ವಿ.ಜಿ.ಯವರೇ ತಮ್ಮ ಪುಸ್ತಕವೊಂದರಲ್ಲಿ ಉಲ್ಲೇಖಿಸಿದ್ದಾರೆ. ವಿಶ್ವೇಶ್ವರಯ್ಯನವರಿಗೆ ಇಂದು ನಾವೇನಾಗಿದ್ದೇವೆ? ಎಂಬ ಪ್ರಶ್ನೆ ಸದಾ ಕಾಡುತ್ತಿದ್ದುದರಿಂದಲೇ ಸಾತ್ವಿಕತೆ, ನಿಷ್ಕಳಂಕ ಹಾಗೂ ಸಾದಾ ಜೀವನಶೈಲಿಗಳಂತಹ ಮೌಲ್ಯಗಳು ಅವರ ಉಸಿರಿನಲ್ಲಿ ಹಾಸುಹೊಕ್ಕಾಗಿದ್ದವು. "ನನಗ್ಯಾಕೆ ಮನೆಬೇಕು?" ಎಂದು ಮುಪ್ಪಿನ ವಯಸ್ಸಿನಲ್ಲೂ ಕೇಳುತ್ತಿದ್ದರು. ಅವರು ತಿನ್ನುತ್ತಿದ್ದುದು ಅತ್ಯಲ್ಪ, ಅನ್ನಪಾನಗಳ ವಿಷಯದಲ್ಲಿ ಅವರು ಯತಿಗಳಷ್ಟು ಮಿತಾಹಾರಿಗಳಾಗಿದ್ದರು. ಸರಕಾರೇತರ ಕೆಲಸಕ್ಕೆ ಒಂದು ಗುಂಡು ಸೂಜಿ, ಒಂದು ಹನಿ ಪೆಟ್ರೋಲ್, ಮಸಿ ಏನೂ ಸರಕಾರದ್ದನ್ನು ಬಳಸುತ್ತಿರಲಿಲ್ಲ. ಬರೀ ನೀತಿ ಪಾಠ ಮಾಡದೇ ಸ್ವತಃ ಅನುಷ್ಠಾನ ಮಾಡಿ ಮಾದರಿಯಾಗುತ್ತಿದ್ದರು. ಮಹಾನದಿ ಯೋಜನೆ ರೂಪಿಸಿಕೊಟ್ಟಾಗ ಒರಿಸ್ಸಾ ಸರ್ಕಾರ ನೀಡಿದ ಬೃಹತ್ ಸಂಭಾವನೆಯನ್ನು ಹಾಗೂ ಭದ್ರಾವತಿ ಕಬ್ಬಿಣ ಕಾರ್ಖಾನೆಯ ಅಧ್ಯಕ್ಷ ಪದವಿಗಾಗಿ ಬಂದ ಆ ಕಾಲದ ಎರಡೂ ಕಾಲು ಲಕ್ಷ ರೂ. ಗೌರವಧನವನ್ನು ನಿರಾಕರಿಸಿದ್ದು ತೊಂಭತ್ತೆಂಟರ ಮುಪ್ಪಿನಲ್ಲೂ ರೇಷನ್ ಅಕ್ಕಿಯನ್ನೆ ಊಟ ಮಾಡುತ್ತಿದ್ದುದು ಅವರು ಎಂಥ ಘನ ವ್ಯಕ್ತಿತ್ವದವರು ಎಂಬುದಕ್ಕೆ ಕೆಲ ನಿದರ್ಶನಗಳು. ಅಂತೆಯೇ ರಾಜಾಜಿಯವರು ಇವರ ಋಜುವರ್ತನೆ ಹಾಗೂ ಸರಳ ನಡತೆಗಳು ನಂಬಲಾರದಷ್ಟು ಎತ್ತರಕ್ಕೇರಿವೆ ಎಂದೊಮ್ಮೆ ಉದ್ಗಾರ ಮಾಡಿದ್ದರು.

ಕೆಂಗಲ್ ಹನುಮಂತಯ್ಯನವರಂತು "…. ಮೈಸೂರಿನ ಮಾನವ ವೈಶಿಷ್ಟ್ಯದ ಹಿರಿಮೆಯನ್ನು ದಿಗಂತದವರೆಗೂ ಹರಡುವಂತೆ ಮಾಡಿರುವ ಮಹನೀಯರಲ್ಲಿ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಅಗ್ರಗಣ್ಯರು. ಶಿಸ್ತಿನ ಜೀವನ, ದೇಶಾಭ್ಯುದಯಕ್ಕೆ ಪರಿಪೂರ್ಣವಾಗಿ ಮುಡುಪಿಟ್ಟ ಮೇಧಾಶಕ್ತಿ, ಉದಾರತೆ, ನಿಸ್ಪೃಹ ಕಾರ್ಯತತ್ಪರತೆ, - ಈ ಕಲ್ಯಾಣಗುಣಗಳೆಲ್ಲವೂ ಇರುವ ಉನ್ನತ ಮಟ್ಟದ ವೃದ್ಧರು ಮತ್ತೊಬ್ಬರಿಲ್ಲ" ಎಂದು ಭಾವಪರವಶರಾಗಿದ್ದುಕೊಂಡಿದ್ದಾರೆ. ಹೀಗೆ ಏಕಮೇವಾದ್ವಿತಿಯ ಮಹಾನ್ ಪುರುಷರಾಗಿದ್ದ ವಿಶ್ವೇಶ್ವರಯ್ಯನವರು ತಾವು ಬದುಕಿದ್ದಾಗಲೇ ಕತೆ, ದಂತಕತೆಯಾಗಿ ತಮ್ಮ 102ನೇ ವಯಸ್ಸಿನಲ್ಲಿ 1962ರ ಏಪ್ರಿಲ್ 14 ರಂದು ಸಾರ್ಥಕ ಇಹಲೋಕ ವಾಸ ಮುಗಿಸಿ ಪರಲೋಕಯಾತ್ರೆ ಕೈಗೊಂಡರು. ಆಗ ಭಾರತೀಯ ಅಭ್ಯದಯದ ಯಶಸ್ವಿ ಯುಗವೊಂದು ಪರಿಸಮಾಪ್ತಿಯಾದಂತಾಯಿತು.

**ಗ್ರಂಥ ಋಣ:**

ಮೋಕ್ಷಗುಂಡಂ ವಿಶ್ವೇಶ್ವರಯ್ಯ: ವಿ.ಎಸ್. ನಾರಾಯಣರಾವ್

ದಿವಾನ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು: ಡಾ. ಡಿ.ಎಸ್. ಜಯಪ್ಪಗೌಡ.

ಮೈಸೂರಿನ ದಿವಾನರುಗಳು: ಡಿ.ವಿ.ಜಿ.

ಎಂ. ವಿಶ್ವೇಶ್ವರಯ್ಯ: 1) Speeches 2) Memoirs

ಕರ್ನಾಟಕ ಗೆಜೆಟಿಯರ್: ಮೈಸೂರು ಜಿಲ್ಲೆ

# ಅಂತರಂಗಶುದ್ಧಿ

ಮಾನವನ ಮನಸ್ಸು ಹಾಗೂ ಆತ್ಮಗಳು ಯಾವಾಗಲೂ ಅತ್ಯಂತ ಉಚ್ಚತಮ ಹಾಗೂ ಕಳಂಕರಹಿತ ವಿಚಾರಗಳನ್ನು ಹೊಂದಿರಬೇಕು. ಈ ಆಂತರಿಕ ಶುದ್ಧಿ ಇರದಿದ್ದರೆ ಆತ್ಮಬಲದ ಕೊರತೆಯಾಗಿ ಅವನ ಜೀವನವೇ ಹಾಳಾಗಿ ಹೋಗುತ್ತದೆ. ಕೆಟ್ಟ ವಿಚಾರಗಳು, ಅದರಂತೆಯೇ ದುಶ್ಚಟಗಳು ಮನುಷ್ಯನ ಜೀವನಕ್ಕೆ ಅಂಟುವ ಕೀಟಗಳು ಇದ್ದಂತೆ. ಇದರಿಂದ ವ್ಯಕ್ತಿಯ ಬೆಳವಣಿಗೆ ಕುಂಠಿತಗೊಂಡು ಆತನ ಜೀವವೃಕ್ಷ ರೋಗದಿಂದ ಬಳಲಿ ಬಾಡುತ್ತದೆ.

ಗೀತೋಪದೇಶದಲ್ಲಿ ದುರ್ವ್ಯಸನಗಳಿಂದ, ದುರ್ವಿಚಾರಗಳಿಂದ ನಮಗೆ ದುಷ್ಟ ಸಂಗ ಲಭಿಸಿ ಜೀವನ ಸಂಪೂರ್ಣ ಹಾಳಾಗಿ ಹೋಗುತ್ತದೆ ಎಂಬ ಎಚ್ಚರಿಕೆ ನೀಡಲಾಗಿದೆ. ಆದ್ದರಿಂದ ಆತ್ಮಶುದ್ಧಿ ಹಾಗೂ ಮನಶುದ್ಧಿಗಾಗಿ ನಾವು ಬಹಳ ಗಮನಕೊಡಬೇಕು. ಗಾಂಧೀಜಿಯವರು "ಪ್ರಾರ್ಥನೆಯು ಆತ್ಮದ ಆಹಾರ" ಎಂದು ಹೇಳುತ್ತಿದ್ದರು. ಅಂದರೆ ಮನನಿಗ್ರಹಕ್ಕಾಗಿ ಪ್ರಾರ್ಥನೆ, ಏಕಾಗ್ರತೆ ಒಳ್ಳೆಯ ವಿಚಾರಗಳು ಬಹಳ ಮುಖ್ಯ. ಒಳ್ಳೆಯ ವಿಚಾರದಿಂದ ಒಳ್ಳೆಯ ಆಚಾರ, ಸತ್ಸಂಗದಿಂದ ಸದ್ವಿಚಾರ ಎಂಬುದನ್ನು ಅರಿತುಕೊಳ್ಳಬೇಕು. ಮನ ಶುದ್ಧಿಗಾಗಿ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು. "ಚಿತ್ತಶುದ್ಧಿಯಾಗ್ವದು ನಿರಾಹಾರದಿಂದಲೇ" ಎಂದು ಉಪವಾಸದಿಂದ ಮನಸಿನ ಆರೋಗ್ಯ ಹೆಚ್ಚಿಸುವುದು ಸಾಧ್ಯವೆಂದು ಹೇಳಲಾಗಿದೆ. ಒಟ್ಟಿನಲ್ಲಿ ಸತ್ಸಂಗ, ಸದ್ವಿಚಾರ, ಸದ್ವರ್ತನೆಗಳು ಒಂದಕ್ಕೊಂದು ಪೂರಕವಾಗಿವೆ ಎಂಬುದು ನಿರ್ವಿವಾದ. ಆದ್ದರಿಂದ ನಾವು ಯಾವಾಗಲೂ ಒಳ್ಳೆಯ ವಿಚಾರ ಮಾಡಬೇಕು ಹಾಗೂ ಮಾಡಬೇಕು. ಹಾಗೂ ದುಷ್ಟ ವಿಚಾರಗಳು, ಕೆಟ್ಟ ಗುಣಗಳು, ದುಶ್ಚಟಗಳು ನಮ್ಮ ಸಮೀಪವೂ ಸುಳಿಯದಂತೆ ನೋಡಿಕೊಳ್ಳಬೇಕು. ಕೆಟ್ಟದ್ದನ್ನು ಕೇಳಲಾರೆ, ಕೆಟ್ಟದ್ದನ್ನು ನೋಡಲಾರೆ, ಕೆಟ್ಟದ್ದನು ಆಡಲಾರೆ ಎಂಬ ಗಾಂಧೀಜಿಯ ಮೂರು ಮಂಗಗಳ ಉಪದೇಶ ನೆನಪಿನಲ್ಲಿರಬೇಕು, ಆವಾಗಲೇ ನಮ್ಮ ನಡೆತೆಯೂ ಒಳ್ಳೆಯದಾಗಲು ಸಾಧ್ಯವಾಗುತ್ತದೆ. ನಡತೆ ಒಳ್ಳೆಯದಾಗದೇ ಕೇವಲ ವೈಚಾರಿಕ ಶುದ್ಧಿಯೂ ಅರ್ಥವಿಲ್ಲದ್ದಾಗುತ್ತದೆ. ಇದನ್ನೇ ಅಕ್ಕಮಹಾದೇವಿ ಅಂತರಂಗದಲ್ಲಿ ಅರಿವಾದೊಡೇನು ಬಹಿರಂಗದಲ್ಲಿ ಕ್ರಿಯೆಯಿಲ್ಲದನ್ನಕ್ಕರ ? ಎಂದು ಪ್ರಶ್ನಿಸಿದ್ದಾಳೆ.

ಒಳ್ಳೆಯ ಕ್ರಿಯಾಕರ್ಮಗಳಿಲ್ಲದ ಬಾಹ್ಯ ಸ್ವಚ್ಛತೆಯನ್ನು ಪುರಂದರದಾಸರು "ಉದರ ವೈರಾಗ್ಯ'ವೆಂದು ಖಂಡಿಸಿದ್ದಾರೆ.

ಈ ಸಂಬಂಧದಲ್ಲಿಯೇ ಅಲ್ಲಮರ ಒಂದು ವಚನ "ಹೆಣ್ಣು ಮಾಯೆ ಎಂಬರು ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆ ಎಂಬರು ಮಣ್ಣು ಮಾಯೆ ಅಲ್ಲ, ಹೊನ್ನು ಮಾಯೆ ಎಂಬರು ಹೊನ್ನು ಮಾಯೆ ಅಲ್ಲ. ಮನದ ಮುಂದಣ ಆಶೆಯೇ ಮಾಯೆ ಕಾಣಾ" ಎಂದಿದೆ. ಅಂದರೆ ಮನಸ್ಸು ಸ್ವಚ್ಛವಿರದಿದ್ದರೆ ಎಲ್ಲ ದುರಾಶೆಗಳೂ ಅದರಲ್ಲಿ ಮನೆ ಮಾಡಿಕೊಂಡಿರುತ್ತವೆ ಎಂದಂತೆ. ಆದ್ದರಿಂದ ನಾವು ಮಾನಸಿಕ ಸ್ವಚ್ಛತೆ ಹಾಗೂ ಮನೋ ಆರೋಗ್ಯದ ಕಡೆ ಹೆಚ್ಚು ಗಮನ ಕೊಡಬೇಕು. ಅದರಂತೆಯೇ ನಮ್ಮ ನಡತೆಯೂ, ಇದನ್ನೇ ಅಂತರಂಗ ಹಾಗೂ ಬಹಿರಂಗ ಶುದ್ಧಿ ಎಂದು ಹೇಳಬಹುದು.

ಅಂತರಂಗ ಮತ್ತು ಬಹಿರಂಗ ಶುದ್ಧತೆಯ ಬಗ್ಗೆ ಸಪ್ತಸೂತ್ರಗಳನ್ನರಹುವ ಬಸವಣ್ಣನವರ ಈ ಕೆಳಗಿನ ವಚನಕ್ಕಿಂತ ಮಿಗಿಲಾದ ಬೇರೆ ದೃಷ್ಟಾಂತ ಸಿಗಲಿಕ್ಕಿಲ್ಲವೆನಿಸುತ್ತದೆ:

**ಕಳಬೇಡ ಕೊಲಬೇಡ**

**ಹುಸಿಯ ನುಡಿಯಲುಬೇಡ**

**ಮುನಿಯಬೇಡ, ತನ್ನ ಬಣ್ಣಿಸಬೇಡ**

**ಎದಿರು ಹಳಿಯಲುಬೇಡ**

**ಅನ್ಯರಿಗೆ ಅಸಹ್ಯ ಪಡಬೇಡ**

**ಇದೇ ಅಂತರಂಗ ಶುದ್ಧಿ**

**ಇದೇ ಬಹಿರಂಗ ಶುದ್ಧಿ**

**ಇದೇ ನಮ್ಮ ಕೂಡಲ ಸಂಗನ ಒಲಿಸುವ ಪರಿ.**

ಇಲ್ಲಿ ವಿಶದಪಡಿಸಿದ್ದು ಅಂತರಂಗ ಹಾಗೂ ಬಹಿರಂಗ ಶುದ್ಧಿಯಿದ್ದರೆ ಸಾಕ್ಷಾತ್ ದೇವರನ್ನು ಒಲಿಸಿಕೊಳ್ಳಬಹುದೆಂಬುದು.

ಅಂತರಂಗ ನಮ್ಮ ಕಲ್ಪನೆ, ವಿಚಾರ, ಚಿಂತನೆ, ಇತ್ಯಾದಿಗಳಿಗೆ ಸಂಬಂಧಿಸಿದ್ದಾದರೆ, ಬಹಿರಂಗವು ನಡೆ, ನುಡಿ, ಆಚರಣೆಗಳಿಗೆ ಸಂಬಂಧಿಸಿದ್ದಾಗಿದೆ. ವಿಕಾರ, ವಿಕ್ಷಿಪ್ತ ಹಾಗೂ ಅತೃಪ್ತ ಅಂತರಾಳ ಅಥವಾ ಮನಸ್ಸು ಏನೆಲ್ಲ ಅನಾಹುತಗಳನ್ನೂ ಹುಟ್ಟು ಹಾಕಬಹುದಾಗಿದೆ. ಹಾಗೆ ನೋಡಿದರೆ ಇಂದಿನ ಭಯೋತ್ಪಾದನೆ ಹಾಗೂ ಯುದ್ಧ ವಿಚಾರಗಳು ಮಾನವನ ವಿಕೃತ ಮನಸ್ಸಿನ ಉತ್ಪಾದನೆಗಳೇ. ಆದ್ದರಿಂದ ಬುದ್ಧ ಹೇಳಿದ ಮಾತು ಆಸೆಯೇ ದುಃಖಕ್ಕೆ ಮೂಲ ಕಾರಣ ಎಂಬುದು ಅಕ್ಷರಃಶ ಸತ್ಯವಾದದ್ದು.

ಅಂತರಂಗಕ್ಕೆ ಒಳದನಿ ಎಂದೂ ಕರೆಯಲಾಗುತ್ತದೆ. ಅನ್ಯಾಯವನ್ನು ಮಾಡುವಾಗ ನಮ್ಮ ಮನಸ್ಸು ಇದು ಸರಿಯಲ್ಲ ಎಂದು ಒಳಧ್ವನಿಯಾಗಿ ಎಚ್ಚರಿಸುತ್ತದೆ. ಇದನ್ನೆ ಜನಕಂಜಿ ನಡೆಯದೇ ಮನಕಂಜಿ ನಡೆ ಎಂಬ ಗಾದೆ ಸ್ಪಷ್ಟಪಡಿಸುತ್ತದೆ. ಮ್ಯಾಕ್‌ಬೆತ್‌ನು ಕೊಲೆ ಮಾಡುವ ಪೂರ್ವದಲ್ಲಿ To do or not to do (ಮಾಡುವದೊ ಬಿಡುವದೊ) ಎಂದು ಅನುಮಾನಿಸುತ್ತಿರುವಾಗ ತಾನು ಮಾಡುವುದು ಘೋರಾಪರಾಧ ಎಂದು ಹೇಳಿದ್ದೇ ಆತನ ಅಂತರ್ಧ್ವನಿ, ಅದನ್ನು ಕೇಳದೇ ಪಾಲಿಸದೇ ದುಡುಕಿದ್ದರಿಂದ ದೊಡ್ಡ ಅಘಾತವನ್ನೆದುರಿಸಬೇಕಾಯ್ತು ಮುಂದೆ ಆತ ಜೀವನದಲ್ಲಿ, ಅಂತೆಯೇ ಕನಕದಾಸರು ತಮ್ಮ ಗುರುಗಳು ತಮ್ಮ ಶಿಷ್ಯರೆಲ್ಲರಿಗೆ ಹಣ್ಣೊಂದನ್ನು ಕೊಟ್ಟು ಯಾರೂ ಇರದ ಸ್ಥಳಕ್ಕೆ ಹೋಗಿ ಅದನ್ನು ತಿಂದು ಬರಬೇಕೆಂದು ತಿಳಿಸಿದಾಗ, ಎಲ್ಲೆಡೆ ಸುತ್ತಾಡಿ, ದೇವರು ಸರ್ವಾಂತರ್ಯಾಮಿಯಾಗಿದ್ದು ಆತನಿಲ್ಲದ ಜಾಗೆಯೇ ಇಲ್ಲವೆಂದು ನಿರ್ಧರಿಸಿ, ಹಣ್ಣನ್ನು ತಿನ್ನಲಾರದೇ ಮರಳಿದ್ದು ಎಂತಹ ಅದ್ಬುತ ಉದಾಹರಣೆ ! ಇಲ್ಲಿ ಕನಕದಾಸರು ತಮ್ಮ ಅಂತರಾತ್ಮನ ಧ್ವನಿಗೆ ಒಗೊಟ್ಟದ್ದು ಅವರ ಶ್ರೇಷ್ಠತೆಯ ಕುರುಹಾಯಿತು.

ಅಪರಾಧ ಕಾನೂನು (ಕ್ರಿಮಿನಲ್ ಲಾ)ನಲ್ಲಿಯೂ ಅಪರಾಧಿ ಮನೋಭಾವ (ಮೆನ್ಸ್ ರಿಯಾ) ಬಹಳ ಮುಖ್ಯವಾದದ್ದು. ಮನಸ್ಸಿನಲ್ಲಿ ಅಪರಾಧವೆಸಗುವ ಉದ್ದೇಶವಿರದೇ ಇದ್ದಲ್ಲಿ ಮಾಡಿದ ತಪ್ಪಿಗೂ ಈ ದಿಶೆಯಲ್ಲಿ ರಿಯಾಯಿತಿ ಉಂಟು. ಅಂದರೆ ಅಂತರಂಗ ಶುದ್ಧಿ ಇಟ್ಟುಕೊಂಡಾಗ ಅಚಾನಕವಾಗಿ ಆಗುವ ತಪ್ಪುಗಳೂ ಪೂರ್ತಿ ಅಪರಾಧದ ಸಾಲಿನಲ್ಲಿ ನಿಲ್ಲಲಾರವು. ಆದ್ದರಿಂದ ನಮ್ಮ ಅಂತರಂಗ ಹಾಗೂ ಬಹಿರಂಗ ಎರಡೂ ಸರಿಸಮಾನಾಗಿಯೇ ಪರಿಶುದ್ಧ ಇರಬೇಕಾದದ್ದು ತೀರ ಅವಶ್ಯಕ.

# ಸಮಯಾವಕಾಶ

ಮುತ್ತಿಗಿಂತ ಹೊತ್ತು ಉತ್ತಮ ಎಂಬುದು ಬಹಳ ಪ್ರಚಲಿತ ಮಾತು. ಆದರೆ ಈ 'ಹೊತ್ತ'ನ್ನು ಎಷ್ಟೊಂದು ಸಮರ್ಥವಾಗಿ ನಾವು ಬಳಸಿಕೊಳ್ಳುತ್ತೇವೆ ಎಂಬುದರ ಮೇಲೆ ಇದರ ತಥ್ಯ ನಿಂತಿದೆ. ಸಮಯ ಹಾಗೂ ತೆರೆಗಳು (ಟೈಮ್ ಅಂಡ್ ಟೈಡ್) ಯಾರಿಗೂ ಕಾಯುವುದಿಲ್ಲವೆಂಬಂತೆ ನಮಗರಿವಿಲ್ಲದಂತೆಯೇ ನಮ್ಮ ವೇಳೆ ಸರಿಯುತ್ತ ಹೋಗುತ್ತದೆ. ಅದಕ್ಕಾಗಿಯೇ 'ಹೊತ್ತು ಹೋಗದ ಮುನ್ನ ಶಿವನನ್ನು ಒಲಿಸಿಕೊ' ಎಂದು ವಚನವೊಂದು ಸಾರಿದೆ.

ಅನೇಕ ವೇಳೆ ನನ್ನ ಕತೆ, ಕವನಗಳು ಪತ್ರಿಕೆಗಳಲ್ಲಿ ಅಚ್ಚಾದಾಗ, ಪುಸ್ತಕಗಳು ಹೊರಬಿದ್ದಾಗ ಓದುಗ ಮಿತ್ರರನೇಕರು 'ನಿಮಗೆ ಬರೆಯಲು ಸಮಯ ಹೇಗೆ ಸಿಗುತ್ತದೆ? ಎಂದು ನನ್ನನ್ನು ಪ್ರಶ್ನಿಸಿ, ನೌಕರಿ ಮಾಡುವವರಿಗೆ ಇದೆಲ್ಲ ಇಷ್ಟೊಂದು ಹೇಗೆ ಸಾಧ್ಯ' ಎಂಬರ್ಥದಲ್ಲಿ ಕೇಳುತ್ತಾರೆ. ವಿಚಿತ್ರವೆಂದರೆ ಇಂತಹ ಪ್ರಶ್ನೆಗಳು ಸಮಾಜದಲ್ಲಿಯ ರಾಜಕಾರಣಿಗಳಿಗೆ, ಉದ್ದಿಮೆದಾರರಿಗೆ, ವೈದ್ಯ, ವಕೀಲರುಗಳಿಗೆ ಹಾಗೂ ಇನ್ನಿತರ ಕೆಲಸದ ಬಾಹುಲ್ಯ ಹೆಚ್ಚಿರುವವರಿಗೆಲ್ಲ ಎದುರಾಗಿರಲು ಸಾಕು. ಹಲವಾರು ಕೆಲಸ ಕಾರ್ಯಗಳ ನಡೆಯುವೆಯೂ ಮತ್ತೊಂದನ್ನು ಮಾಡಲು ಹೇಗೆ ಸಾಧ್ಯ? ಎಂಬುದು ಸಹಜ ಮಾತಾದರೆ 'A busy man always gets time? (ಕ್ರಿಯಾಶೀಲನಾದವನಿಗೆ ಸದಾ ಸಮಾಯಾವಕಾಶವಿರುತ್ತದೆ ಎಂಬುದೇ ಅದಕ್ಕುತ್ತರವಾಗುತ್ತದೆ. ಇದನ್ನೆ ತುಸು ಮುಂದುವರೆಸಿ ....and a lazy man never gets time' (ಸೋಮಾರಿಯಾದವಗೆ ಸಮಯವೆಂದೂ ಸಿಗದು) ಎಂದೂ ಪೋಣಿಸಬಹುದಾಗಿದೆ.

ಹಾಗೆ ನೋಡಿದರೆ ನಾವೆಲ್ಲ ಸಮಯದ ದಾಸರೇ (ಶೇಕ್ಸ್ ಪಿಯರ್: Weare all time's fools.) ಒಂದು ನಿರ್ದಿಷ್ಟ ಕೆಲಸವನ್ನು ನಿಗದಿತ ವೇಳೆಗೆ ಮಾಡದಿದ್ದರೆ ಒಂದಿದ್ದದ್ದು ಎರಡಾಗಿ, ಎರಡು ನಾಲ್ಕಾಗಿ 'ಬಾಕಿ' ಕಾರ್ಯದ ಕೊಳೆ ಹೆಚ್ಚುತ್ತಲೇಹೋಗುತ್ತದೆ. ಇಲ್ಲದಿದ್ದಲ್ಲಿ 'A stitch in time saves nine' ಎಂಬ ಗಾದೆ ಚಾಲ್ತಿಗೆ ಬರುತ್ತಿರಲಿಲ್ಲ.

ಈಗ ಒಬ್ಬ ವ್ಯಕ್ತಿ ದಿನದ 24 ಗಂಟೆಗಳನ್ನು ಹೇಗೆ ಕಳೆಯುತ್ತಾನೆ ಎಂಬುದನ್ನು ನೋಡೋಣ. 7 ಗಂಟೆ ನಿದ್ರೆ ವಿಶ್ರಾಂತಿ, 2 ಗಂಟೆ ಸ್ನಾನ, ತಿಂಡಿ, ಊಟ, 8 ಗಂಟೆ ಕಛೇರಿ ಕೆಲಸ, 2ಗಂಟೆ ಪ್ರಯಾಣ, 2ಗಂಟೆ ವಾಕಿಂಗ್, ಮನರಂಜನೆ, ಇತ್ಯಾದಿ. ಹೀಗೆ ಭಲೆರೇ ಎಂದರೂ 21 ಗಂಟೆ ವ್ಯಯವಾಗಿ ಕನಿಷ್ಟ ದಿನಕ್ಕೆ ಮೂರು ಗಂಟೆ ಸಮಯ ನಾವು ಬೇಡಬೇಡವೆಂದರೂ

ಉಳಿದುಬಿಡುತ್ತದೆ. ಅಲ್ಲದೆ ಪ್ರತಿ ರವಿವಾರ ಹಾಗೂ ಇನ್ನಿತರ ರಜಾದಿನಗಳಲ್ಲಂತೂ ಸಮಯವನ್ನು ಹೇಗೆ ಕಳೆಯುವದೆಂಬಂತೆ ಏನಿಲ್ಲವೆಂದರೂ 8-10 ಗಂಟೆಗಳಷ್ಟು ಕಾಲ ನಮಗೆ ದೊರೆಯುತ್ತದೆ. ಹಾಗಿದ್ದರೆ ನಾವು ಈ ಉಳಿಕೆ ವೇಳೆಯನ್ನು ಹೇಗೆ ಕಳೆಯುತ್ತೇವೆ? ಸಾಯಂಕಾಲದ ಪಾರ್ಟಿಗಳಲ್ಲೊ, ಹಾಳು ಹರಟೆಗಳಲ್ಲೊ, ಇಲ್ಲಾ ಸೋಫಾಕ್ಕೆ ಒರಗಿ ಕುಳಿತು ಟಿ.ವಿ. ನೋಡುವುದರಲ್ಲೊ. ಇದರಿಂದ ನಮಗೆ ಆಗುವುದು ನಷ್ಟವೇ ಹೊರತು ಯಾವ ಲಾಭವೂ ಇಲ್ಲ. ಅದಕ್ಕಾಗಿಯೇ 'ಮಾತು ಮಾರು ಹೊಲ ಕೆಡಸೀತು' ಎಂಬ ಗಾದೆ ಬಂದಿರಬೇಕು; ಅಂತೆಯೇ ಟಿ.ವಿ.ಯನ್ನು ಯಾರೊ 'ಸೋಮಾರಿ ಪೆಟ್ಟಿಗೆ' ಎಂದು ವ್ಯಾಖ್ಯಾನಿಸಿರಲೂ ಸಾಕು.

ತಮ್ಮ ದಿನನಿತ್ಯದ ವಿಪರೀತ ಕೆಲಸದ ಒತ್ತಡದ ನಡುವೆಯೂ ಸೃಜನಶೀಲ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಅದ್ಭುತ ಕೃತಿ ರಚಿಸಿದ ಹಲವಾರು ಉದಾಹರಣೆಗಳು ನಮ್ಮೆದುರು ಇವೆ. ಯುದ್ಧದ ಪ್ರಧಾನಿ ಎಂದು ಹೆಸರಾದ ಇಂಗ್ಲೆಂಡ್‌ನ ವಿನ್‌ಸ್ಟನ್ ಚರ್ಚಿಲ್ ಸಾಹಿತಿಯಾಗಿ ನೊಬೆಲ್ ಪ್ರಶಸ್ತಿ ಪಡೆದಿದ್ದರು. ನೃಪತುಂಗ ರಾಜನಾಗಿಯೂ, ಪಂಪ ಕಲಿಯಾಗಿಯೂ, ಬಸವಣ್ಣ ಪ್ರಧಾನಿಯಾಗಿಯೂ, ಮಹತ್ತರವಾದ ಸಾಹಿತ್ಯ ಸೃಜಿಸಿದರು. ಇದೇ ಸಾಲಿನಲ್ಲಿ ನೆಹರು, ರಾಧಾಕೃಷ್ಣನ್‌ರನ್ನೂ ಹೆಸರಿಸಬಹುದು. ಜೀವಮಾನವಿಡೀ ದೇಶಸೇವೆಗೇ ತಮ್ಮನ್ನರ್ಪಿಸಿಕೊಂಡ ಸರ್.ಎಂ.ವಿಶ್ವೇಶ್ವರಯ್ಯನವರು ನಿವೃತ್ತಿಯ ನಂತರ 42 ವರ್ಷಗಳಷ್ಟು ದೀರ್ಘಕಾಲ ಗ್ರಂಥರಚನೆ ಮತ್ತು ಯೋಜನೆಗಳನ್ನು ಹಾಕಿಕೊಡುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅಂತೆಯೇ ತೊಂಭತ್ತೆರಡರ ಇಳಿವಯಸ್ಸಿನಲ್ಲೂ ಗಂಗಾ ನದಿಯ ನೀರಾವರಿ ಯೋಜನೆ ರೂಪಿಸಿಕೊಡುವ ಕೆಲಸವನ್ನು ಕೈಗೆತ್ತಿಕೊಂಡು ಸಮರ್ಥವಾಗಿ ನಿರ್ವಹಿಸಿದರು. ಡಾ. ಅಂಬೇಡ್ಕರ್‌ರವರು ದೇಶದ ಕಾನೂನು ಮಂತ್ರಿಯ ಕಾರ್ಯಬಾಹುಲ್ಯದ ಮಧ್ಯೆಯೂ ಬರವಣಿಗೆಯಲ್ಲಿ ತೊಡಗಿರುತ್ತಿದ್ದರಲ್ಲದೇ ತಮಗೆ ಓದಲು ಕೇವಲ ಎರಡು ಕಣ್ಣುಗಳು ಮಾತ್ರ ಸಾಲವು ಎನ್ನುತ್ತಿದ್ದರು. ಮಹಾತ್ಮಾ ಗಾಂಧೀಜಿಯವರಂತೂ ತಮ್ಮ ಅಹರ್ನಿಸಿ ಸ್ವಾತಂತ್ರ್ಯ ಹೋರಾಟದ ನಡುವೆಯೂ ಹಲವಾರು ಉತ್ಕೃಷ್ಟ ಗ್ರಂಥಗಳನ್ನು ರಚಿಸಿದ್ದಲ್ಲದೇ 'ಯಂಗ್ ಇಂಡಿಯಾ' ಹಾಗೂ 'ಹರಿಜನ' ಎಂಬ ಪತ್ರಿಕೆಗಳನ್ನು ನಡೆಸುತ್ತಿದ್ದರು. ಕುವೆಂಪು, ಕಾರಂತರು ಹತ್ತಾರು ಜನ್ಮಗಳಲ್ಲಿ ಒಬ್ಬ ವ್ಯಕ್ತಿ ಮಾಡಲಾರದಷ್ಟು ಸಾಹಿತ್ಯ ರಚನೆ ಮಾಡಿ ಸಾಹಿತಿಗಳ ಸೃಜನಶಕ್ತಿಗೆ ಸವಾಲಾಗಿ ನಿಂತಿದ್ದಾರೆ. ತೊಂಭತ್ತಾರರ ಇಳಿವಯಸ್ಸಿನಲ್ಲೂ ಕಾರಂತರು ಕಾಲಿಗೆ ಗೆಜ್ಜೆ ಕಟ್ಟಿ ನೃತ್ಯ ಮಾಡುತ್ತಿದ್ದುದು, ಪರಿಸರ ಚಳುವಳಿಗಳಲ್ಲಿ, ಸಾಹಿತ್ಯ ಗೋಷ್ಠಿ, ಸಮ್ಮೇಳನಗಳಲ್ಲಿ ಪುಟಿಯುವ ಜೀವನೋತ್ಸಾಹದಿಂದ ಭಾಗಿಯಾಗುತ್ತಿದ್ದುದು ಸಮಯವನ್ನು ಹೇಗೆ ಬಳಸಿಕೊಳ್ಳಬೇಕೆಂಬುದಕ್ಕೆ ಒಂದು ಅದ್ಭುತ ಉದಾಹರಣೆಯಾಗಿದೆ.

ಇನ್ನು ವಿಜ್ಞಾನಿಗಳು, ಕಲಾಕಾರರು, ಕ್ರೀಡಾಪಟುಗಳು, ರೈತರೇ ಮುಂತಾದವರು ಹಗಲು ರಾತ್ರಿಯೆನ್ನದೇ ಶ್ರಮಪಡುವುದನ್ನು ನೋಡಿದಾಗ ನಾವೆಷ್ಟು ಕಡಿಮೆ ಸಮಯ ಕೆಲಸ ಮಾಡುತ್ತಿದ್ದೇವೆ ಎಂಬುದು ಅರಿವಾಗುತ್ತದೆ. ಥಾಮಸ್ ಆಲ್ವಾ ಎಡಿಸನ್‌ನ ಅವಿರತ ಶ್ರಮದಿಂದ ಹೊರಹೊಮ್ಮಿದ ಅನೇಕ ಸಂಶೋಧನೆಗಳ ಫಲ ಮಾನವಕುಲಕ್ಕೆ ವರದಾನವಾಗಿದೆ. ಮಹಾನ್ ವಿಜ್ಞಾನಿ ಐನ್‌ಸ್ಟೀನ್ ತನ್ನ ಅಹರ್ನಿಸಿ ದುಡಿತದಿಂದಲೇ ನೋಬೆಲ್ ಪ್ರಶಸ್ತಿ ಬಂದಿದ್ದರೂ ತನ್ನದು ಜ್ಞಾನಸಾಗರದಲ್ಲೊಂದು 'ಕಣ' ಮಾತ್ರ ಎಂದಂದುಕೊಳ್ಳುತ್ತಿದ್ದನು.

ಸಮಯದ ಸದುಪಯೋಗಪಡಿಸಿಕೊಳ್ಳದಿದ್ದರೆ ಸದವಕಾಶಗಳು ಕೈತಪ್ಪಿಹೋಗುವ ಸಂದರ್ಭಗಳೇ ಹೆಚ್ಚಾಗುತ್ತವೆ. ಹೀಗೆ ಅವಕಾಶ ವಂಚಿತರಾಗಬಾರದೆನ್ನುವ ಸಾಧಕರು ಸದಾ ಜಾಗರೂಕತೆಯಿಂದಿದ್ದು ಸಮಯದ ಸರಿಯಾದ ಲಾಭವನ್ನು ಮಾಡಿಕೊಳ್ಳಬೇಕು. ಇದನ್ನೇ ಮಹಾಭಾರತದಲ್ಲಿ .... ಸಕಲ ಜೀವಿಗಳಿಗೆ ರಾತ್ರಿ ಇಹುದು ಹಗಲು ಯೋಗಿಗೆ...' ಎಂದು ವಿವರಿಸಲಾಗಿದೆ. ಎಲ್ಲರಿಗೂ ಇರುವ ಸಮಯ ಒಂದೇ ಆದರೂ ಅದನ್ನು ಹೇಗೆ ಮತ್ತು ಎಷ್ಟು ಸಮರ್ಥವಾಗಿ ಬಳಸಿಕೊಳ್ಳುತ್ತೇವೆಂಬುದರ ಮೇಲೆ ನಮ್ಮ ಸಾಧನೆಯ ಫಲ ನಿಂತಿರುತ್ತದೆ. ಅದಕ್ಕಾಗಿಯೇ ದೇವ ಸಾಕ್ಷಾತ್ಕಾರಕ್ಕಾಗಿ ಮಾಡುವ ಕಠಿಣ ಸಾಧನೆಗೆ 'ತಪಸ್ಸು' ಎಂದು ಕರೆಯಲಾಗಿದೆ ಮತ್ತು ಶೀಘ್ರ ಸಾಕ್ಷಾತ್ಕಾರಕ್ಕಾಗಿ ಉಗ್ರ ತಪಸ್ಸೂ ಅವಶ್ಯವಾಗಿದೆ.

ಕಾಲ ಯಾರಿಗಾಗಿಯೂ ಕಾಯುವುದಿಲ್ಲ. ಇದನ್ನೇ ಬೇಂದ್ರೆಯವರ 'ಹಕ್ಕಿ ಹಾರುತಿದೆ ನೋಡಿದಿರಾ' ಎಂಬ ಕವನದಲ್ಲಿ ಹಗಲು ರಾತ್ರಿಗಳನ್ನು ರೆಕ್ಕೆಗಳ ಮಾಡಿಕೊಂಡು ರಾಜ್ಯ ಸಾಮ್ರಾಜ್ಯಗಳ ತೇಲಿಸಿ ಮುಳುಗಿಸಿ ಕಾಲದ ಹಕ್ಕಿ ಹಾರಿಹೋಗುತ್ತದೆ ಎಂದು ಬಲು ಮಾರ್ಮಿಕವಾಗಿ ವರ್ಣಿಸಿದ್ದನ್ನು ಕಾಣಬಹುದು. ಆದ್ದರಿಂದ 'ಕಾಲ' ಎಂದರೆ ಮರಣವೆಂದೂ ವ್ಯಾಖ್ಯಾನಿಸಲಾಗುತ್ತದೆ. ಕ್ಷಣಕ್ಷಣಕ್ಕೂ ಜೀವನ ಕಳೆಯುತ್ತಲೇ ಕಾಲನೆಡೆಗೆ ಕಾಲು ಹಾಕುತ್ತಿರುತ್ತದೆ. ನಾವೆಲ್ಲ ಸುಮ್ಮನೆ ಇದ್ದರೂ ಇಪ್ಪತ್ತನೆ ಶತಮಾನ, ಎರಡನೇ ಸಹಸ್ರಮಾನಗಳು ಹೋಗಿ ಇಪ್ಪತ್ತೊಂದನೆ ಶತಮಾನ ಹಾಗೆಯೇ ಹೊಸ ಸಹಸ್ರಮಾನ ಬಂದುಬಿಟ್ಟವಲ್ಲ! ಬಹುಶಃ ನಾವು ಬೇಡ ಬೇಡ ಎಂದು ಗೋಳು ಹೊಯ್ದುಕೊಂಡಿದ್ದರೂ ಇದು ಹೀಗೆಯೇ ಆಗುತ್ತಿತ್ತಲ್ಲವೇ ? ಆದ್ದರಿಂದ ನಮಗೆ ಸಿಗುವ ಸಮಯದಲ್ಲಿಯೇ ಅವಕಾಶ ಮಾಡಿಕೊಂಡು ಅದನ್ನು ಸಮರ್ಥವಾಗಿ ಸದುಪಯೋಗಪಡಿಸಿಕೊಂಡು ಸತ್ಕಾರ್ಯದಲ್ಲಿ ತೊಡಗಿಸಿಕೊಳ್ಳುವುದೇ ಸೂಕ್ತವಾದದ್ದು.

# ಕಾರಂತರ 'ಜಗದೋದ್ಧಾರ-ನಾ'

ಕಾದಂಬರಿಕಾರರೆಂದರೆ ಕಾರಂತರು, ಕಾರಂತರೆಂದರೆ ಕಾದಂಬರಿಕಾರರು ಎಂಬ ಭಾವನೆ ಕನ್ನಡದ ಸಾಮಾನ್ಯ ಓದುಗರಲ್ಲಿ ಸಹಜವಾಗಿಯೇ ಬೇರೂರಿದೆ. ಇದಕ್ಕೆ ಹಲವಾರು ಕಾರಣಗಳಿದ್ದರೂ ನಾಲ್ಕುನೂರಾ ಹದಿನೇಳರಷ್ಟು ಗ್ರಂಥಗಳನ್ನು ರಚಿಸಿ ನಾಡಿನವರ ಗಮನಸೆಳೆದ ಕಾರಂತರು ಪ್ರಮುಖವಾಗಿ ರಚಿಸಿದ್ದು, ತೀವ್ರವಾಗಿ ಪ್ರಭಾವಿಸಿದ್ದು ತಮ್ಮ ಕಾದಂಬರಿಗಳ ಮೂಲಕವೇ.

ಅಪಾರ ಪ್ರತಿಭೆಯ ಕಾರಂತರ ಇಡೀ ವಿದ್ವತ್ತನ್ನು ಯಾವ ಒಂದು ಕಾದಂಬರಿಯೂ ಹಿಡಿದಿಡಲಾರದು, ಅವರನ್ನು ಒಂದೇ ಒಂದು ಕಾದಂಬರಿಯ ಮೂಲಕವಾಗಲೀ ಅಥವಾ ಇನ್ನಿತರ ಯಾವುದೇ ಒಂದು ನಿರ್ದಿಷ್ಟ ಗ್ರಂಥದಿಂದಾಗಲೀ ಗುರುತಿಸುವುದು ತೀರಾ ಕಷ್ಟಕರವಾದದ್ದು. ಆದಾಗ್ಯೂ ಮಾನವತಾವಾದದಂತಹ ಜೀವನ ಮೌಲ್ಯ, ವೈಚಾರಿಕ ವಿಶ್ಲೇಷಣೆಗಳಂತಹ ಅಪೂರ್ವ ಅಂಶಗಳನ್ನು ಸರ್ವೇಸಾಮಾನ್ಯವಾಗಿ ಅವರ ಎಲ್ಲ

ಕಾದಂಬರಿಗಳಲ್ಲೂ ಕಾಣಬಹುದಾಗಿದೆ. ಇವುಗಳ ಜೊತೆ ಜೊತೆಗೇನೇ ವ್ಯಂಗ್ಯ ಹಾಗೂ ವಿಡಂಬನೆಗಳೂ ಅಲ್ಲಲ್ಲಿ ಇಣುಕಿ ಹಾಕದೇ ಇರಲಾರವು. ಸುತ್ತಲಿನ ಸಮಾಜದಲ್ಲಿ ನಡೆವ ಆಗುಹೋಗುಗಳಿಗೆ ಕಾರಂತರು ಎಂದೂ ಕಣ್ಮುಚ್ಚಿಕೊಂಡು, ಕೈಕಟ್ಟಿಕೊಂಡು ಕುಳಿತವರಲ್ಲ. ನೇರ ನಡೆನುಡಿಗಳಿಂದ ಅದೂ ಪ್ರಭಾವಿಸದಾದಾಗ ಕಟು ವ್ಯಂಗ್ಯೋಕ್ತಿಗಳಿಂದ ತಿವಿದು ಎಚ್ಚರಿಸುವದು ಅವರ ಮೂಲಭೂತ ಗುಣಗಳಲ್ಲೊಂದು.

ಇಂತಹ ವ್ಯಂಗ್ಯ ತಂತ್ರವನ್ನೇ ಆಧಾರವಾಗಿಟ್ಟುಕೊಂಡು ಹೆಣೆದ 'ಜಗದೋದ್ಧಾರ-ನಾ' (1960) ಕಾದಂಬರಿಯು ಅವರ "ದೇವದೂತರು" (1930) ಎಂಬ ಇನ್ನೊಂದು ವ್ಯಂಗ್ಯ ಕಾದಂಬರಿಯ ನಂತರದ್ದು. ಉಪನಿಷತ್ತು, ಭಗವದ್ ಗೀತೆಗಳ ಹೆಸರಿನಲ್ಲಿ ಅಲ್ಲಿಂದ ಮತ್ತ್ಯಾವುದೋ ವಿಚಾರಗಳನ್ನು ಜನತೆಯ ಮನದಲ್ಲಿ ಬಿತ್ತುತ್ತಾ, ಸಾಮಾಜಿಕ ಮೌಢ್ಯವನ್ನೇ ಬಂಡವಾಳವನ್ನಾಗಿಸಿಕೊಂಡು, ಅನೇಕ ಸಾರಿ ವಿದ್ಯಾವಂತರನ್ನೂ ಬಲಿಗೆ ಹಾಕಿಕೊಳ್ಳುತ್ತಾ ಸಾಗುವ, ಸನ್ಯಾಸಿ, ಬಾಬಾ, ಭಗವಾನರನ್ನು ಬಯಲಿಗೆಳೆದು ಖಂಡಿಸುವ ಸದುದ್ದೇಶವೇ ಈ ಕಾದಂಬರಿಯ ಉಗಮಸ್ಥಾನ. ಘೋಷಣೆ ಭಾಷಣಗಳಿಂದಲೇ ಜನ ಸಮೂಹಕ್ಕೆ ಮೋಡಿ ಹಾಕುತ್ತ ಸನ್ನಿ ಹಿಡಿಸುತ್ತಾ ದೇವರ ಅಸ್ತಿತ್ವವನ್ನೇ ಬಹಿಷ್ಕರಿಸಿ ಆ ಸ್ಥಾನದಲ್ಲಿ ತನ್ನನ್ನು ಹಾಗೂ ತನ್ನಂತಹ ಸೈತಾನರನ್ನು ಸ್ಥಾಪಿಸುತ್ತಾ ಸಾಗುವ ನವ ದೇವತಾ ಪುರುಷನೊಬ್ಬನ ಜೀವನ ಚರಿತ್ರೆಯೇ 'ಜಗದೋದ್ಧಾರ-ನಾ' ಕಾದಂಬರಿಯ ಕಥಾವಸ್ತುವಾಗಿದೆ.

ಕಥಾನಾಯಕ ವಿಷ್ಣುಯಾಜಿ, ಸಾದಾ "ಸ್ವಾಹಾ ವಿಷ್ಣು"ವಾಗಿದ್ದವ, ಲೋಕೋದ್ಧಾರದ ಮುಖವಾಡ ಧರಿಸಿ, ಕೆಲಕಾಲ ಯಶಸ್ವಿಯಾಗಿ, ಅವತಾರ ಪುರುಷನೆನ್ನಿಸಿಕೊಳ್ಳುವದು, ಕೊನೆಯಲ್ಲಿ ಆತನ ಭಂಡವಾಳ ಬಯಲಿಗೆಳೆಯಲ್ಪಡುವದು ಕಾದಂಬರಿಯ ಸಾರಾಂಶ. ಜನರಿಗೆ ಸೈತಾನರಾರು, ದೇವರು ಯಾರು ಎಂಬುದನ್ನು ತಿಳಿಯುವಲ್ಲಿ ಯಾವ ಅವತಾರವೂ ಲೋಕೋದ್ಧಾರಕ್ಕೆ ಬೇಕಿಲ್ಲ ಎಂಬುದು ಕಾರಂತರ ಸ್ಪಷ್ಟ ನಿಲುವು.

ಜನರ ಕುರುಡು ಭಕ್ತಿ ವೈಚಾರಿಕ ಶೋಷಣೆಗೆ ಎಡೆಮಾಡಿಕೊಡುವುದನ್ನು ನೋಡುವ ಕಾರಂತರಿಗೆ ಸಿಟ್ಟು ಹಾಗೂ ದುಃಖ ಒಮ್ಮೆಲೇ ಉಂಟಾಗುತ್ತದೆ. ಕೋಪತಪ್ತ ಅವರ ಲೇಖನಿ ಕಾದಂಬರಿಯುದ್ದಕ್ಕೂ ವ್ಯಂಗ್ಯ ತಂತ್ರವನ್ನೇ ಬಳಸಿಕೊಂಡಿದೆ. ಹಾಗೆಂದು ಅವರು ಹೇಗೆಂದರೆ ಹಾಗೆ ವ್ಯಂಗ್ಯವಾಡುವವರಲ್ಲ, ವ್ಯಂಗ್ಯದ ಮೇಲಿನ ಅವರ ಅಭಿಪ್ರಾಯ ನೋಡಿ: ಮುನ್ನುಡಿಯಲ್ಲೇ ವ್ಯಂಗ್ಯ ಸಾಹಿತ್ಯ ವಿವೇಕವನ್ನು ಜಾಗ್ರತಗೊಳಿಸುವ ಒಂದು ಸಾಧನ. ವ್ಯಕ್ತಿಯ ಮೇಲಿನ ಸೇಡು ಅದರ ಗುರಿಯಲ್ಲ. ಕೆಲವು ಮೂಕ ಪ್ರವೃತ್ತಿಗಳ ಅಣಕ ಅದರ ಗುರಿ" ಇಲ್ಲಿ ವ್ಯಂಗ್ಯದ ರೀತಿ, ನೀತಿ, ಉದ್ದೇಶ ಹಾಗೂ ಅದರ ಸಫಲತೆಗಳ ಬಗ್ಗೆ ಅವರಿಗಿರುವ ಕಾಳಜಿ ಕಳಕಳಿ ಹಾಗೂ ಜವಾಬ್ದಾರಿಗಳನ್ನು ಕಾಣಬಹುದಾಗಿದೆ. ಇದು ಕೇವಲ ವ್ಯಕ್ತಿಗತ ದೋಷ ಹಾಗೂ ಅಸೂಯೆಗಳ ಮೇಲೆಯೇ ಹೊರಹೊಮ್ಮುತ್ತಿರುವ ಇಂದಿನ ಬರಹಗಳು, ಟೀಕೆಗಳು, ಪತ್ರಿಕೆಗಳು ಗಮನಿಸಬೇಕಾದ ಸೂಚನೆಯೇ ಆಗಿದೆ.

ಒಟ್ಟು 24 ಅಧ್ಯಾಯಗಳಲ್ಲಿ ವಿಭಾಗಿಸಲ್ಪಟ್ಟ ಈ ಕಾದಂಬರಿಯ ಪ್ರತಿಯೊಂದು ಭಾಗಕ್ಕೂ ಒಂದೊಂದು ಉಪ ತಲೆಬರಹ ಕೊಡಲಾಗಿದೆ. 'ಪೀಠಿಕಾ ಸಂಧಿ' ಎಂದು ಪ್ರಾರಂಭವಾಗುವ ಮೊದಲ ಅಧ್ಯಾಯ ಯಾವುದೋ ಒಂದು 'ಅವತಾರ'ದ ಬಗೆಗೇ ಈ ಕಾದಂಬರಿ ಇದ್ದಿರಬೇಕು ಎಂಬ ಸೂಚನೆ ಕೊಡುತ್ತದೆ. ಓದುಗರೊಡನೆ ನೇರ ಲೇಖಕರೇ ಸಂಭಾಷಣೆ ಮಾಡಿದಂತೆ ನಿರೂಪಣೆ ಇದೆ. ವ್ಯಂಗ್ಯ ಎಲ್ಲೆಲ್ಲೂ ಎದ್ದು ಕಾಣುತ್ತದೆ. (ಅದು ಈ

ಕಾದಂಬರಿಯ ಜೀವಾಳ ಕೂಡಾ) ನಾಯಕ ಸ್ವಾಹಾ ಹಾಗೂ ಸಾಕ್ಷಾತ್ ಮಹಾವಿಷ್ಣುವಿನ ಅವತಾರಗಳ ಜನ್ಮ ತಾಳುವಿಕೆ ಬಗ್ಗೆ ಜಿಜ್ಞಾಸೆ ಇದೆ. ಕಾರಂತರು ಎಷ್ಟೊಂದು ನಿಷ್ಠುರಿಯೆಂದರೆ, “ಸದಾ ನಿದ್ರೆಯಲ್ಲೇ ಇರುವ ವೈಕುಂಠದ ವಿಷ್ಣು” ಎಂದು, ಭಕ್ತರು ಹೋಗಿ ರಕ್ಷಿಸು ದೇವಾ ಎನ್ನುವವರೆಗೂ ಸುಮ್ಮನೇ ಇರುವ ಆ ದೇವರನ್ನೂ ಟೀಕಿಸದೇ ಬಿಡಲಾರರು. ಯಾರೇ ಇರಲಿ, ನಿಷ್ಕ್ರಿಯತೆ ಖಂಡನಾರ್ಹ ಎಂಬುದೇ ಅವರ ವಾದ. ಈ ವ್ಯಂಗ್ಯದ ವಾದಸರಣಿ ತರ್ಕಬದ್ಧವಾಗಿ ಮುನ್ನಡೆಯುವದು ಕಾರಂತರ ವೈಶಿಷ್ಟ್ಯವೆಂದೇ ಹೇಳಬೇಕು. ಉದಾ.... ಹೀಗೆ (ದೇವರು) ಹುಟ್ಟಿ ಬೆಳೆದು, ಬಲಿತು ದುಷ್ಟಸಂಹಾರ ಮಾಡುವ ತನಕ ಆರ್ತರ ಗತಿಯೇನು? ರಾಕ್ಷಸರ ಉಪಟಳದಿಂದ ಅವರು ಬದುಕಿದ್ದು ಹೇಗೆ ? ವಿಷ್ಣು ಅವತರಿಸುವ ತನಕವೂ ಕಾದಿರಬಹುದಾದ ತಾಳ್ಮೆಯುಳ್ಳ ಅವರು ಇನ್ನೂ ಹತ್ತು ವರ್ಷಗಳ ಕಾಲ ಜಾಸ್ತಿ ಕಾದಿದ್ದರೆ, ವಯೋಧರ್ಮಕ್ಕೆ ಸರಿಯಾಗಿ ತಾವೂ ಸಾಯುತ್ತಿದ್ದರು. ಆ ದುಷ್ಟರೂ ಸಾಯುತ್ತಿದ್ದರು. ಆಗ ವಿಷ್ಣುವಿಗೂ ತಾಪತ್ರಯವಿರುತ್ತಿರಲಿಲ್ಲ (ಯದಯದಾಹಿ ಧರ್ಮಸ್ಯ ಗ್ಲಾನಿರ್ಭವತಿ.... ಎಂಬುದರ ಮೇಲೆ).

ಎಲ್ಲರ ವ್ಯಂಗ್ಯದಂತೆ ಕಾರಂತರ ವ್ಯಂಗ್ಯವಲ್ಲ. ಅದು ನಮ್ಮನ್ನು ತಿವಿಯುತ್ತ, ಎಚ್ಚರಿಸುತ್ತ ನಮ್ಮಲ್ಲಿಯ ವೈಚಾರಿಕತೆ ಕೆರಳಿಸುತ್ತ ನಮ್ಮನ್ನು ಚಿಂತನೆ ಮಾಡಲು ಪ್ರೇರೇಪಿಸುತ್ತದೆ. ಉದಾ.... ಲೋಕದ ದೊಡ್ಡ ದೊಡ್ಡ ವ್ಯಕ್ತಿಗಳೆಲ್ಲರೂ ನಮ್ಮೂರಿನಲ್ಲಿಯೇ ಹುಟ್ಟಬೇಕಾದದು ನ್ಯಾಯ. ನಮ್ಮೂರಿನಲ್ಲಲ್ಲದೆ ಅನ್ಯರ ಊರಿನಲ್ಲಿ ಹುಟ್ಟಿದವರು ನಮ್ಮಷ್ಟು ದೊಡ್ಡವರಾಗಲಾರರು. ಕಾಳಿದಾಸನಿಗಿಂತ ಶೇಕ್ಸಪಿಯರ್ ದೊಡ್ಡವನಾದಾನೆಯೇ? ಕನ್ಫ್ಯೂಶಿಯಸ್ ಬೃಹಸ್ಪತಿಗಿಂತ ಹಿರಿಯನಾದಾನೆಯೇ? ಲೋಕದ ಯಾವುದೇ ತಂತ್ರಜ್ಞಾನಿ ನಮ್ಮ ಆಚಾರ್ಯತ್ರಯರಿಗಿಂತಲೂ ಹಿರಿಯರಾಗುವದು ಶಕ್ಯವೇ ? (ಪುಟ-3).

'ವೇದೋದ್ಧರಣಂ' ಎಂಬ ಎರಡನೆಯ ಅಧ್ಯಾಯದಲ್ಲಿ ವಿಷ್ಣುಯಾಜಿಯ ಶಿಕ್ಷಣದ ಬಗ್ಗೆ ಚರ್ಚಿಸುತ್ತಲೇ ಲೇಖಕರು ನಮ್ಮ ಮಕ್ಕಿಕಾಮಕ್ಕಿ ಶಿಕ್ಷಣ ಪದ್ಧತಿಯ ಬಗ್ಗೆ ಸಂಕ್ಷಿಪ್ತವಾಗಿ ಪರೋಕ್ಷವಾಗಿ ಟಿಪ್ಪಣಿಸುತ್ತಾರೆ. ಜ್ಞಾನದ ಹೆಸರಿನಲ್ಲಿ, ಒಂದು ಒಂದ್ಲೆ ಒಂದು, ಎರಡು ಎರಡ್ಲೆ ಎರಡು ಎಂದು ಬಾಯಿಪಾಠ ಮಾಡಿಸುವ, ಪ್ರಶ್ನೆ ಕೇಳಿದರೆ ಉತ್ತರಿಸದೇ ದಬಾಯಿಸುವ ನಮ್ಮ ಕಲಿಕೆಯ ಪರಿಯ ನಿರೂಪಣೆ ನೋಡಿ “ನೀನು ಪ್ರಶ್ನೆ ಕೇಳದೇ ಸುಮ್ಮನಿದ್ದುದಾದರೆ, ನಿನಗೇನಾದರೂ ತಿಂಡಿತೀರ್ಥ ಕೊಡಿಸುತ್ತೇನೆ” ಎಂದು ಪದೇ ಪದೇ ಪ್ರಶ್ನೆಗಾಗಿ ಪ್ರಶ್ನೆ ಕೇಳುತ್ತಿದ್ದ ವಿದ್ಯಾರ್ಥಿ ವಿಷ್ಣುಯಾಜಿಗೆ ಆತನ ಶಿಕ್ಷಕರು ಹೇಳುತ್ತಾರೆ, ಹೀಗೆ ಯಾವ ಉದ್ದೇಶವಿಲ್ಲದೇ ಛೇಡಿಸುವ ತನ್ನ ಪ್ರಶ್ನೆಗಳಿಂದ ತಂತಾನೆ ಖುಷಿಗೊಂಡ ವಿಷ್ಣು ಕಲಿಕೆಯಲ್ಲಿ ಮನಸ್ಸು ತೊಡಗಿಸದೇ ಯೋಗ್ಯ ಶಿಕ್ಷಣದಿಂದ ದೂರ ಉಳಿಯುತ್ತಾನೆ.

ಮುಂದೆ ಹೇಗೆಗೊ ಬೆಳೆದು ದೊಡ್ಡವನಾಗಿ ಲೇಖಕರಿಗೆ ಕಾರವಾರದಲ್ಲಿ ಸಾಧು ಆಗಿ ಆಕಸ್ಮಾತ ಭೆಟ್ಟಿಯಾಗಿ ಮುಂದೆ ಮೈಸೂರಿನ ವಿಶಾಲ ಮನೆ 'ಜ್ಞಾನಮಂದಿರ'ದಲ್ಲಿ ತನ್ನ ಗ್ರಂಥ ಭಂಡಾರ ತೋರಿಸುತ್ತ “ಇವೊಂದನ್ನೂ ನಾನು ಬೆಲೆಗೆ ಕೊಂಡಿಲ್ಲ. ಶಾಲೆಗೆ ಹೋಗುತ್ತಿದ್ದಾಗ, ನನ್ನ ಮೇಷ್ಟ್ರುಗಳು ಯಾರ್ಯಾರ ಪುಸ್ತಕಗಳನ್ನು ಸಂಗ್ರಹಿಸಿ ಒಳ್ಳೊಳ್ಳೆಯ ಲಾಯಬ್ರರಿ ಮಾಡಿದ್ದನ್ನು ನೋಡಿದ್ದೇನೆ ! ಪುಸ್ತಕ ಸಂಗ್ರಹಕ್ಕೆ ಅಭಿರುಚಿ ಬೇಕು, ಮನಸ್ಸು ಬೇಕು, ಒಳ್ಳೆಯದನ್ನು ಆರಿಸಲು ಅಭಿರುಚಿ, ಅದನ್ನು ತಂದು ಮರಳಿ ಕೊಡದೆ ಭದ್ರವಾಗಿಡಿಸಲು ಮನಸ್ಸು. ನೋಡಿ ಬನ್ನಿ, ಇನ್ನೊಮ್ಮೆ ನೋಡಿ ಅವನ್ನು... ನಾನು ಓದಬೇಕು ಯಾಕೆ? ಆ ಅವಶ್ಯಕತೆ ಈ ತನಕ ಬಂದಿಲ್ಲ. ಪಾಂಡಿತ್ಯ ಓದಿ ಬರಬೇಕಾಗಿಲ್ಲ.....

ಅನೇಕರು ಓದಿ, ಬಾಯಿಪಾಠವಾಡಿ ಹೆಜ್ಜೆ ಹೆಜ್ಜೆಗೆ ಉರುಳಿಸುತ್ತಾರಲ್ಲ, ಪ್ರಯೋಜನ ಅವರಿಗೇನಿದೆ?" (ಪುಟ-14) ಇಲ್ಲಿಯ ವ್ಯಂಗ್ಯದಲ್ಲಿಯೂ ಪಾಠ ಹಾಗೂ ಸಂದೇಶ ಇರುವದನ್ನು ತಿಳಿದುಕೊಳ್ಳುವದು ಒಳ್ಳೆಯದು. ಡಾಂಭಿಕತೆ, ಹುಸಿ ಪ್ರದರ್ಶನ ವ್ಯರ್ಥ ಯಾಕೆಂದರೆ ಜ್ಞಾನದರ್ಶನ ಪ್ರದರ್ಶನಕ್ಕಾಗಿ ಅಲ್ಲ ಎಂದು ಕಾರಂತರೇ ತಿಳಿಸುತ್ತಾರೆ.

ಕಾದಂಬರಿಯ ಓಟದಲ್ಲಿ ಲೇಖಕರೇ ಭಾಗಿಯಾಗುವದರಿಂದ ಕೆಲಸಾರೆ ಇದ್ವೇಗೆ ಸಾಧ್ಯ ಎಂಬ, ಜರುಗುವ ಸಣ್ಣಪುಟ್ಟ ಘಟನೆಗಳ ಬಗ್ಗೆ ಅನುಮಾನಗಳು ಓದುಗನ ಮನದಲ್ಲಿ ಏಳಬಹುದಾದರೂ ಒಟ್ಟಾರೆ ಕಥೆಯ ಬೆಳವಣಿಗೆಯ ದೃಷ್ಟಿಯಿಂದ ಅವು ಅಷ್ಟೇನೂ ಮಹತ್ವದವುಗಳೆನ್ನಿಸುವದಿಲ್ಲ. ಲೇಖಕರು ಅಲ್ಲಲ್ಲಿ ಮೊದಲು ಕಾರವಾರದ ಕಡಲ ತೀತ ನಂತರ ಮೈಸೂರು, ಹೈದರಾಬಾದ, ಗಾಣಗಾಪೂರ, ಕೊಪ್ಪಳ, ಬೆಳಗಾವಿ, ಪಂಡರಪೂರ, ಕುಮಟಾ, ಪುಣೆ ಇತ್ಯಾದಿ ಸ್ಥಳಗಳಲ್ಲಿ ನಾಯಕ ವಿಷ್ಣುಯಾಜಿ ಅಥವಾ ಅವನ ಅನುಯಾಯಿಗಳನ್ನು ಭೇಟಿಯಾಗುವ ಸನ್ನಿವೇಶಗಳಲ್ಲಿ ಕೆಲಸಾರೆ ಇಂತಹ ಸಂದರ್ಭ ಬಂದಿರುವದನ್ನು ಕಾಣಬಹುದಾಗಿದೆ.

ಮೂರನೆಯ ಅಧ್ಯಾಯದಲ್ಲಿ ಒಂದುಕಡೆ ಧಾರವಾಡದ ಸೀಮೆಯಲ್ಲಿ 'ಅಮ್ಮ' ಎನ್ನುವದು 'ವಿಧವೆಗೆ' ಮಾತ್ರ ಎಂದು ವಿವರಣೆ ನೀಡಿದ್ದು, ಈ ಒಂದು ತಪ್ಪು ಮಾಹಿತಿಯನ್ನು ಲೇಖಕರಿಗೆ ಯಾರು ಕೊಟ್ಟರೋ ಅನಿಸುತ್ತದೆ. (ಪುಟ-19, 20) ಧಾರವಾಡ ಕಡೆ 'ಅಮ್ಮ' ಎಂದರೆ ಅಜ್ಜಿ ಅಥವಾ ವಯಸ್ಸಾದವಳು ಇಲ್ಲವೇ ಗೌರವ ಸೂಚಕವಾದ ಒಂದು ಸಂಬೋಧನೆ ಆಗಿದೆ ಎಂಬುದು ನಮಗೆ ತಿಳಿದಿರುವ ಸಂಗತಿ. ಉದಾ: ಚನ್ನಮ್ಮ, ಮಲ್ಲಮ್ಮ, ಗಂಗಮ್ಮ ಇತ್ಯಾದಿ.

ಒಂದು ಕುತೂಹಲಕರ ವಿಷಯವೆಂದರೆ ಕಾರಂತರು ತಮ್ಮ ವಸ್ತು, ವಿಷಯ, ಕಥಾನಾಯಕನ ಬಗ್ಗೆ ವಿವರಣೆಗಳು, ಇವುಗಳಿಗಾಗಿ ಸದಾ ಅನ್ವೇಷಕನ ರೀತಿಯಲ್ಲಿರುವದು ಹಾಗೂ ಅವಶ್ಯವೆನಿಸುವ ಊರುಗಳನ್ನು ಹಾಗೂ ಜನರನ್ನು ಅರಸಿ ಅವರಿದ್ದಲ್ಲಿಗೇ ಹೋಗುವದು, ಹೀಗೆ ಪ್ರಮಾಣಿಸುವಾಗ ಸಿಕ್ಕ ವ್ಯಕ್ತಿ, ವಿಷಯಗಳ ಮೇಲೆ ಬೆಳಕು ಚೆಲ್ಲುತ್ತಾ ಆಯಾ ಪ್ರದೇಶಗಳ ಸ್ಥೂಲ ಪರಿಚಯ ಮಾಡಿಕೊಡುತ್ತಾರೆ. ಮೇಲೆ ವಿವರಿಸಿದಂತಹ ಹಲವಾರು ಶಹರಗಳಿಗೆ ಇರುವ ವಿಶಿಷ್ಟವಾದ ಭಾಷೆ, ಜನ ಸಮುದಾಯ, ಆಚಾರ ವಿಚಾರ ಇತ್ಯಾದಿಗಳನ್ನು ಬಲು ಸೊಗಸಾಗಿ, ವಿಡಂಬನಾತ್ಮಕವಾಗಿಯಾದರೂ ವಿವರಿಸುತ್ತಾ ಹೋಗುತ್ತಾರೆ.

ಈ ಪುಸ್ತಕದ ಹೆಸರು 'ಜಗದೋದ್ಧಾರ-ನಾ' ಕ್ಕೆ ಸಮರ್ಥನೆಗಾಗಿಯೋ ಎನ್ನುವಂತೆ 'ಭೂದೇವಿಯನ್ನೇ ಉದ್ಧರಿಸಿದ್ದು' ಎಂಬ ಒಂದು ಅಧ್ಯಾಯವಿದೆ (ಅಧ್ಯಾಯ 6). ಈ ವೇಳೆಗಾಗಲೇ ಸ್ವಾಹಾವಿಷ್ಣು ಕೆಲವರನ್ನು ವಂಚಿಸಿದ್ದು, ಅದಕ್ಕೂ ಮೊದಲೇ ಹೈಸ್ಕೂಲು, ಕಾಲೇಜುಗಳ ದಿನಗಳಿಂದಲೇ ಈ ಮೋಸಗಾರಿಕೆಯನ್ನು ಹೇಗೆ ಕೈವಶಮಾಡಿಕೊಂಡನೆಂಬ ವರ್ಣನೆ ಇದೆ. ಬೆಳೆವ ಕೊಳೆ ಮೊಳಕೆಯಲ್ಲೆಂಬಂತೆ ತನ್ನದೇ ಹೆಸರಿನ ವಿಷ್ಣುಮೂರ್ತಿ ಎಂಬುವನ ಸಹಿಯನ್ನು ಖೊಟ್ಟಿಯಾಗಿ ಸೃಷ್ಟಿಸಿ ಆತ ಮಾಡದ ಸಾಲದ ಹೊರೆಯನ್ನು ಹೇಗೆ ಆತನ ಮೇಲೆ ಹೊರಿಸಿ ಉದ್ಧರಿಸಿದ್ದನೆಂಬುದನ್ನು ಬಲು ಸ್ವಾರಸ್ಯಕರವಾಗಿ ವಿವರಿಸಲಾಗಿದೆ. ಇಲ್ಲಿ ಒಬ್ಬ ವಿಷ್ಣು ಮತ್ತೊಬ್ಬ ವಿಷ್ಣುವನ್ನು ಮೋಸಗೊಳಿಸಿದ ರೀತಿಯನ್ನು ಹೇಳುತ್ತ, ವಿಷ್ಣು ಹಾಗೂ ಶಿವ ಇಬ್ಬರೂ ದೇವರುಗಳ ಬಗ್ಗೆ ಒಂದು ತರ್ಕಬದ್ಧವಾದ ಹಾಗೂ ಐತಿಹಾಸಿಕ

ಹಿನ್ನೆಲೆಯುಳ್ಳ ಒಂದು ವಾದಸರಣಿಯನ್ನೇ ಸೃಷ್ಟಿಸಲಾಗಿದೆ ನೋಡಿ: "ನೀವು ಶಿವಳ್ಳಿಯವರಲ್ಲವೇ? ನೀವು ವಿಷ್ಣು ಭಕ್ತರೇ? ನಾವು ನೋಡಿ, ಕೋಟದವರು, ವಿಷ್ಣು ಮತ್ತು ಶಿವ ಇಬ್ಬರ ವಿಚಾರದಲ್ಲೂ ನಮಗೆ ಪಕ್ಷಪಾತವಿಲ್ಲ. ಆದರೂ ಈ ಇಬ್ಬರು ದೇವರೊಳಗೆ ಬೂದಿಬಡಕ ಶಿವನೇ ವಾಸಿ, ಅವನಲ್ಲಿ ಠಕ್ಕಿಲ್ಲ. ನೀವೇ ಯೋಚಿಸಿ, ನಿಮ್ಮ ಈ ವಿಷ್ಣು ಯಾವ ಕೆಲಸವನ್ನು ಸಾದಾ ಆಗಿ ಮಾಡಿದ್ದಾನೆ? ಭಸ್ಮಾಸುರ ಮೋಹಿನಿ ಸಾದಾಕತೆಯೇ? ಅಮೃತ ಮಥನದಲ್ಲಿ ಏನು ಮಾಡುತ್ತೇನೆಂದು ಹೇಳಿ, ಏನು ಮಾಡಿದ? ಅಸುರರಿಗೆ ಟೋಪಿ ಹಾಕಿ, ಸುರರ ಉದ್ಧಾರಕ್ಕೆ ಹೊರಟ, ಸುರರು ಅಂದರೆ ಯಾರು? ಸದಾ ಹೆಂಡ ಕುಡಿದು ಬಿದ್ದಿರುವವರು, ಅವರ ಉದ್ಧಾರಕ್ಕೆ ಎಷ್ಟು ಸಾರಿ ಈ ವಿಷ್ಣು ಹಾಗೆ ಮಾಡಲಿಲ್ಲ? ಹೇಳಿ ! ಅದರ ಬದಲು, ನೆಟ್ಟಗೆ ಅವನು ಭೂಲೋಕದಲ್ಲಿ ಪ್ರೊಹಿಬಿಷನ್ ಜಾರಿಗೆ ತಂದಿದ್ದರೆ ಸುರರ ಉದ್ಧಾರ ತನ್ನಂತೆಯೇ ಆಗುತ್ತಿರಲಿಲ್ಲವೇ? ಆ ರಾಕ್ಷಸರು ಘಟಿಂಗರು, ಕುಡುಕರಾದ ಇಂದ್ರನ ಪಂಗಡದವರು ಸಂಭಾವಿತರು-ಎಂದು ಯಾಕೆ ತಿಳಿಯಬೇಕು? ಅಲ್ಲೇ ಇರುವುದು ತಪ್ಪು, ಸುರರಿಗೂ, ಅಸುರರಿಗೂ ಯಾವ ಭೇದವೂ ಇಲ್ಲ. ಅವರೇ ಇವರು, ಇವರೇ ಅವರು, ಇರಾನಿನ ಪುರಾಣಗಳಲ್ಲಿ ಸುರರು ಎಂದರೆ 'ರಾಕ್ಷಸರು', ಅಸುರರು ಎಂದರೆ 'ದೇವತೆಗಳು', ಅಲ್ಲಿಂದ ಬಂದವರಲ್ಲವೇ ನಮ್ಮ ಆರ್ಯರು? ಹಿಂದೂಸ್ಥಾನಕ್ಕೆ ಬಂದ ಮೇಲೆ ಅವರಿಗೆ ಇಂಥ ಒಬ್ಬ ವಿಷ್ಣುವು ಸಿಕ್ಕಿ, ಹೀಗೆಲ್ಲಾ ಆಯಿತು. ಸುರರು ಅಸುರರಾದರು. ಅಸುರರು ಸುರರಾದರು... ಆ ವಿಚಾರ ಮರೆತುಬಿಡಿ." (ಪುಟ 41).

ಈ ವಿಷ್ಣುಯಾಜಿ ಭಗವಾನನ ಸ್ಥಾನಕ್ಕೇರಿದ್ದೂ ಕೇವಲ ಸಾಮಾನ್ಯ ಜನರಿಗೆ ಮೋಡಿ ಮಾಡಿಯಲ್ಲದೇ, ಮೀರಜದ ಕಡಂಬಳಿತ್ತಾಯ, ಹೈದರಾಬಾದಿನ ದೇಶಪಾಂಡೆ, ಕಾರವಾರದ ನಾಡಕರ್ಣಿ, ಸಿರ್ಸಿಯ ದೀಕ್ಷಿತ ವಕೀಲರು ಮುಂತಾದ ಪ್ರಬುದ್ಧ ವಿದ್ಯಾವಂತರಿಗೂ ಬೌದ್ಧಿಕ ವಂಚನೆ ಮಾಡಿಯೇ ಎಂಬುದನ್ನು ಓದಿದಾಗ, ಇಂತಹ ಅಪಾರ ಜನಸಂಖ್ಯೆ ಹೊಂದಿರುವ ನಮ್ಮ ಪುಣ್ಯಭೂಮಿ ಭಾರತದಲ್ಲೇ ಮಹಾವಿಷ್ಣುವಿನ ಎಲ್ಲ ದಶಾವತಾರಗಳೂ ಸಂಭವಿಸಿದ್ದು ಸಹಜ ಎಂಬ ಲೇಖಕರ ವಾದವನ್ನು ನಾವೂ ಒಪ್ಪಬೇಕಾಗುತ್ತದೆ. ಭಗವಾನಜಿಗಳ ತೀವ್ರ ಪ್ರಭಾವಕ್ಕೊಳಗಾಗಿ ತಾವು ಭಗವಾನನ ಅಂಶವೇ ಎಂದು ಭ್ರಮಿಸುವವರು ಇರುವದನ್ನು, "ಭಾರತದ ಹವಾಗುಣದಲ್ಲಿ ದೇವರನ್ನು ಅರಸಿಕೊಂಡು ಹೋಗುವ ಭಕ್ತರೆಲ್ಲರೂ, ಅವನು ಸಿಗಬಹುದಾದ ಕಾಲದೊಳಗೇನೇ ತಾವೇ ದೇವರಾಗಿಬಿಡುವದು ಒಂದು ವಿಚಿತ್ರ ವಿದ್ಯಮಾನ, ಅಂಥ ಕಾಯಿಲೆ" (ಪುಟ 51) ಯಲ್ಲಿ ಕಾಣಬಹುದಾಗಿದೆ.

ಇದೇ ರೀತಿಯ ಇನ್ನಿತರ ಉದಾಹರಣಗಳೆಂದರೆ: ಕಾರವಾರದ ನಾಡಕರ್ಣಿಯವರು ಈ ಭಗವಾನ ವಿಷ್ಣುವಿನ ಪ್ರಭಾವಕ್ಕೊಳಗಾಗಿ, ತಾವೂ ಯಾವುದೋ ಒಂದು ಅಗೋಚರ ಶಕ್ತಿ ಸಂಪಾದಿಸಿದವರಂತೆ ವರ್ತಿಸುವದು ಹಾಗೂ ಅವರಿಗೂ ಅಪಾರ ಶಿಷ್ಯಬಳಗ ದೊರೆತು ಅವರೆಲ್ಲ ಉದ್ದಂಡ ನಮಸ್ಕರಿಸುವದು. (ಪುಟ 113,115)ಸ್ವಾಹಾವಿಷ್ಣು ಜನತೆಯ ಗರ್ಭದಲ್ಲಿ ಮಗದೊಂದು ಪ್ರಹ್ಲಾದನನ್ನು ಹುಟ್ಟಿಸಿ, ಏನಾದರೂ ಪ್ರತೀಕಾರವನ್ನು ಸಾಧಿಸಬಹುದು (ಪುಟ 139) ಎಂಬ ಲೇಖಕರ ಸಂಶಯ ನಿಜವಾಗಿ ಆತನ ಸಹೋದರನ ಮಗ ಶಂಕರಯಾಜಿಯು ಕಾದಂಬರಿಯ ನಾಯಕನ ಹಿಂಬಾಲಕನಾಗಿ, ಶಂಕರ ನಾಯಕನಾಗಿ ಕೇವಲ ಧಾರ್ಮಿಕ ಕ್ಷೇತ್ರವನ್ನಲ್ಲದೇ ಸತ್ಯಾಗ್ರಹದಂತಹ ಕಾರ್ಮಿಕ ಮುಖಂಡತ್ವದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವದು. (ಪುಟ 140, 148 ಕ್ರಾಂತ್ಯಾವತಾರ).

ನಾಯಕ ಭಗವಾನ ಸ್ವಾಹಾ ವಿಷ್ಣುವಿನ ವಿವಿಧ ಅವತಾರಗಳಿಗೆ ಒಂದೊಂದು ಅಧ್ಯಾಯ ಮಾಡಿ ಕತೆಯನ್ನು ಮುಂದುವರಿಸಲಾಗಿದೆ. ಕೊಡಲಿಯನ್ನು ಗೆದ್ದ ಕೊಡಲಿ ರಾಮ, ಬತ್ತಲೆ ಬುದ್ಧಗೆ ಮಂಗಳ ಜಯ ಮಂಗಳ, "ಓ ರಾಧೆ, ಓ ಕೃಷ್ಣ, ಕಲ್ಕ್ಯಾವತಾರ ಭಕ್ತಿಯುಗ, ಕ್ರಾಂತ್ಯಾವತಾರ, ಕೊನೆಯ ಸಂಕ್ರಾಂತ್ಯಾವತಾರ (16, 17, 18, 19, 22, 23, 24ನೇ ಅಧ್ಯಾಯಗಳು) ಇವೆಲ್ಲವುಗಳಲ್ಲಿ ಈ ಭಗವಾನನ ವಿಷಯಲಂಪಟತೆ ಹಾಗೂ ಭಕ್ತರಿಗೆ ಸನ್ನಿ ಹಿಡಿಸುವ ಕಾರ್ಯಗಳ ವಿವರ ಇದ್ದು, ಕೊನೆಯ ಸಂಕ್ರಾಂತ್ಯಾವತಾರದಲ್ಲಿ ಆತ "ಲಲಿತ ಲಲಿತ" ಎಂದು ಮಾಜಿ ಪ್ರೇಯಸಿಯೊಬ್ಬಳನ್ನು ನೆನೆಯುತ್ತಾ ಬುದ್ಧಿವಿಕಾರನಾಗಿ ಹೋಗುವದನ್ನು ಚಿತ್ರಿಸಲಾಗಿದೆ. ತಾನು ಆಡಿದ ಮಾತಿನ ಹಾಗೂ ಮಾಡಿದ ಉಪದೇಶದ ಹಾಗೂ ಕುಕೃತ್ಯಗಳ ಬಲೆಯಲ್ಲಿ ತಾನೇ ಮೋಸಹೋಗಿ ಸಿಕ್ಕಿಕೊಳ್ಳುವುದರೊಂದಿಗೆ ಕಾದಂಬರಿ ಮುಕ್ತಾಯವಾಗುತ್ತದೆ.

ಕಾರಂತರ ಬಹುತೇಕ ಕಾದಂಬರಿಗಳಲ್ಲಿ ವಾಸ್ತವತೆಗೆ ಹೆಚ್ಚು ಮಹತ್ವವಿರುವದನ್ನು ಹಾಗೂ ಅನಿಯಂತ್ರಿತ ಉದ್ವೇಗ ಆವೇಶಗಳ ಗೈರು ಹಾಜರಿಯನ್ನು ನಾವು ಕಂಡುಕೊಂಡಂತೆ ಈ 'ಜಗದೋದ್ಧಾರ-ನಾ'ದಲ್ಲಿಯೂ ನೋಡಬಹುದಾಗಿದೆ. ಎಂತಹ ಸನ್ನಿವೇಶದಲ್ಲೂ ಕಾರಂತರು ಒಂದು ನಿರ್ದಿಷ್ಟ ನೈತಿಕ ನೆಲೆಗಟ್ಟನ್ನು ಬಿಟ್ಟು ಹೋಗಲಾರರು. ಪ್ರೇಮ, ಕಾಮ, ಸಲ್ಲಾಪ ಇತ್ಯಾದಿಗಳು ಸೂಚ್ಯವಾಗಿ ಪರೋಕ್ಷವಾಗಿ ನಿರೂಪಿಸಲ್ಪಡುತ್ತವೆಯೇ ಹೊರತು ಅಲ್ಲಿ ಮಿತಿಮೀರಿದ ಯಾವದೇ ಶಬ್ದ, ವಾಕ್ಯ, ನಿರೂಪಣೆ, ಇಣಕಿ ಹಾಕಲಾರವು; ಅಶ್ಲೀಲತೆಯ ಸೋಂಕು ಅವರ ಲೇಖನಿಗೆ ಎಂದೂ ತಗಲಿದ್ದಿಲ್ಲ, ಇದು ಕಾರಂತರ ಬರಹದ ವೈಶಿಷ್ಟ್ಯವೇ ಎನ್ನಬಹುದು; ಇದನ್ನು ಪ್ರಸ್ತುತ ಕಾದಂಬರಿಯ ಸ್ತ್ರೀ ಪಾತ್ರಗಳು ನಾಯಕನ ಆಕರ್ಷಣೆಗೆ ಒಳಗಾಗಿ ತಮ್ಮ ಮೂಲವನ್ನೇ ತಿರಸ್ಕರಿಸಿ, ಆತನೇ ತಮ್ಮ ಉದ್ಧಾರಕ ಇತ್ಯಾದಿಯೇನೋ ಎಂಬಂತೆ ವರ್ತಿಸಿದರೂ ಸ್ತ್ರೀ ಘನತೆಗೆ ಧಕ್ಕೆ ತರುವಂತಹ ಒಂದೂ ನಿರೂಪಣೆ ಇಲ್ಲದಿರುವುದರಲ್ಲಿ ಕಾಣಬಹುದಾಗಿದೆ. ಹೈದರಾಬಾದಿನ ಕುಸುಮಾಬಾಯಿ ಮೈಸೂರಿನ ಜ್ಞಾನಮಂದಿರ ಸೇರಿದ್ದು, ಕೊಪ್ಪಳದ ಗುಂಡ, ವೆಂಕ, ಕಿಟ್ಟ, ಪದ್ದರ ಮುದಿ ತಾಯಿ ತನ್ನ ಈ ನಾಲ್ಕು ಮಕ್ಕಳನ್ನೂ ತೊರೆದು ಭಗವಾನಜೀಯೇ ತನ್ನ ಹೊಟ್ಟೆಮಗ ಎಂದು ಭ್ರಮಿಸುವದು, ಮಹಾಬಲಿ ಮಾಸ್ತರರ ಹೆಂಡತಿ ಮಹಾಬಲಿ ಆಗುವದು, ಲಲಿತಾಬಾಯಿ ಪಂಚವಟಿ ಆಶ್ರಮವಾಸಿಯಾಗಿದ್ದು ನಂತರ ದಾಬಡೆ ಬಾಳಪ್ಪನ ಜೊತೆ ಹೋಗುವದು, ಹದಿನೆಂಟನೇ ಅಧ್ಯಾಯ 'ಬತ್ತಲೆ ಬುದ್ಧಗೆ ಮಂಗಳ ಜಯಮಂಗಳಂ'ದಲ್ಲಿ ನಾಯಕ ಸ್ವಾಮಿ (ಅಥವಾ ಭಗವಾನ) ಬೆಳಗಾವಿಯ ಜಗನ್ನಾಥರಾಯರ ಮನೆಯಲ್ಲಿ ಅವರ ಪತ್ನಿ ಭಗವಾನ ಪಾದಸೇವೆ ಮಾಡುತ್ತಲಿದ್ದಾಗ ಅವಳೊಡನೆ ಆತನ ಅನುಚಿತ ವರ್ತನೆಯ ವರ್ಣನೆ - ಇಂತಹ ಹಲವಾರು ಸನ್ನಿವೇಶಗಳಲ್ಲೂ ತಮ್ಮ ಸಂಯಮತೆಯ ಶೈಲಿಯಿಂದ ಕಾರಂತರು ಒಂಚೂರು ಅತ್ತಿತ್ತ ಸರಿಯದಿದ್ದುದನ್ನು ಮೆಚ್ಚಲೇಬೇಕು.

ಜೀವನೋತ್ಸಾಹ ಹಾಗೂ ಲವಲವಿಕೆಗಳನ್ನು ಕಾರಂತರ ಜೀವನ ಮತ್ತು ಲೇಖನ ಎರಡರಲ್ಲೂ ನೋಡಬಹುದಾಗಿದೆ. ಜೀವಿಸುವುದಕ್ಕಾಗಿ, ಜೀವನ ಸಾರ್ಥಕ್ಯಕ್ಕಾಗಿ ನಾವು ಬಾಳಿ ಬದುಕಬೇಕು. ಸಾರ್ಥಕ ಜೀವನ ಸಾಧ್ಯವಾಗುವುದಾದರೆ ಎಷ್ಟು ಸಾರೆಯಾದರೂ ಪುನರ್ಜನ್ಮ ತಾಳಬಹುದೆಂಬುದು ಅವರ ವಾದ ಹಾಗೂ ಹಂಬಲ. ಅವರ ಹಾಗೂ ನಾಡಕರ್ಣಿಯವರ ಜೊತೆಗಿನ ಒಂದು ಸಂಭಾಷಣೆ ಹೇಗಿದೆ ನೋಡಿ, "ಏನ್ರಿ ಹಾಗೆ ತಿರುತಿರುಗಿ, ಐನೂರು ಸಾವಿರವಲ್ಲ ಕೋಟಿ ಕೋಟಿ ಜನ್ಮಗಳನ್ನೆತ್ತುವ ಲವಲವಿಕೆಯೇ?" "ಯಾಕೆ ಕೂಡದು, ಹೇಳಿ?" "ಎಲ್ಲರೂ ಪುನರ್ಜನ್ಮ ಸಾಕು, ಮೋಕ್ಷ ಬೇಕು ಅನ್ನುತ್ತಾರೆ" ನೀವು ಕೂಡ ಹಾಗೇನು?"

“ಮೋಕ್ಷವೆಂದರೆ ಪ್ರಪಂಚದ ದುಃಖದಿಂದ ಬಿಡುಗಡೆಯಲ್ಲವೇ? ಪ್ರಪಂಚದ ದುಃಖದಿಂದ ಬಿಡುಗಡೆಯಾದರೆ ಅದರ ಸುಖದಿಂದಲೂ ಬಿಡುಗಡೆಯೇ ನನಗೆ ಪ್ರಪಂಚದ ಸುಖಗಳು ಬೇಕು. ಆದುದರಿಂದ ತಿರುಗಿ ಹುಟ್ಟಲೇಬೇಕು ಅನಿಸುತ್ತದೆ. ನನಗೂ ನಿಮಗೂ ಇರುವ ಮಹತ್ತರದ ಒಂದು ಪ್ರಶ್ನೆಯೆಂದರೆ ಪುನರ್ಜನ್ಮದ್ದು. ಮೇಲಿಂದ ಮೇಲೆ ಹುಟ್ಟಿ ಬದುಕಿ ಸಾಯುವ ಕೆಲಸ ಯಾರಿಗೂ ಬೇಸರ ಬರಿಸುವಂಥದಲ್ಲವೇ? ಇರುವ ಆಯುಷ್ಯದಲ್ಲಿ ಒಂದೂ ಮೂರನೆಯ ಅಂಶ ಬಾಲ್ಯವೆಂಬ ತಯಾರಿಕೆಯ ಕೆಲಸದಲ್ಲಿ ಹಾಳಾಗುತ್ತದೆ. ಇನ್ನೊಂದು ಮೂರನೆಯ ಅಂಶ ‘ವೃದ್ಧಾಪ್ಯ ಇಲ್ಲವೇ ವಾನಪ್ರಸ್ತ, ಸನ್ಯಾಸಗಳಿಗೆ ಹೋಗುತ್ತದೆ. ಬದುಕುವ ಆಯುರ್ಮಾನದಲ್ಲಿ ಬರಿಯ ಮೂರನೆಯ ಒಂದಂಶ ಸಾರ್ಥಕವಾಗುವಂಥದು', ಅದರಲ್ಲಿಯೂ ಅರೆವಾಸಿ ಸಮಯ ನಿದ್ರೆಗೆ, ಹೀಗಾಗುವದು ಪರಮಾತ್ಮನ ಇಚ್ಛೆಯೇ? ಎಂದೂ ಇರಲಾರದೆಸುತ್ತದೆ ನನಗೆ ಸಮಯ ಹಾಳು ಮಾಡುವುದಕ್ಕೆ ಅವನೆಂದೂ ಇಷ್ಟಪಡಲಾರ' ‘ಆರಾಮ ಹರಾಮ ಹೈ' ಎಂದು ನಮಗೆ ಗೊತ್ತಿರುವಷ್ಟೂ ಅವನಿಗೆ ಗೊತ್ತಿಲ್ಲವೇ? ಅದಕ್ಕಿಂತಲೂ ಎಷ್ಟೆಲ್ಲ ಕಾಲ ಜೀವನ ಪರಿಹಾರಕ್ಕೆ ಅವಶ್ಯವಾಗುತ್ತದೋ ಅಷ್ಟು ಕಾಲವೂ ಒಮ್ಮೆಗೇ ಬದುಕಿಬಿಡುವುದು ಒಳ್ಳೆಯದೆಂಬುದೇ ನನ್ನ ಅಭಿಪ್ರಾಯ” (ಪುಟ 122) ‘ಕಲಿಕಿದಾತನೇ ಕಲ್ಕಿ' ಅಧ್ಯಾಯದ ಪ್ರಾರಂಭದ ಈ ನಿರೂಪಣೆಯಿಂದು ಇದು ಸ್ಪಷ್ಟವಾಗುತ್ತದೆ.

ಒಂದು ಕಾದಂಬರಿ ಓದಿದಾಗ ಎಷ್ಟೊಂದು ಮಾಹಿತಿ, ಜ್ಞಾನ, ಉಪಯೋಗ, ನೀತಿಪಾಠ ಹಾಗೂ ಆನಂದ ದೊರಕುವವು ಎಂಬ ದೃಷ್ಟಿಯಿಂದ ನೋಡಿದಾಗ್ಯೂ ನಮಗೆ ಈ ಕಾದಂಬರಿ ಉತ್ತಮವಾದದ್ದೆನಿಸುವುದರಲ್ಲಿ ಅನುಮಾನವೇ ಇಲ್ಲ. ಕಥೆಯ ವಿವರಣೆಯಲ್ಲಿಯೇ ಓದುಗನಿಗೆ ಹಲವಾರು ಪ್ರಮುಖ ಅಂಶಗಳಾದ, ಲೇಖಕ ಸಾಹಿತಿಗಳ ಬಗ್ಗೆ, ಪ್ರಜಾಪ್ರಭುತ್ವದ ಬಗ್ಗೆ, ಕನ್ನಡ ನಾಡಿನ ಜನರ ಬಗ್ಗೆ, ದೇವರ ಅಸ್ತಿತ್ವ, ಅವತಾರಗಳ ಬಗ್ಗೆ, ಪ್ರಬುದ್ಧ ವಿವರಣೆಗಳೂ ಸಮರ್ಥ ವಿಶ್ಲೇಷಣೆಗಳೂ ದೊರೆಯುತ್ತವೆ. ನೋಡಿ: “ಕತೆ ಬರೆಯುವವರಿಗೆ ತೆಪ್ಪಗೆ ಕುಳಿತಿರುವುದಕ್ಕೆ ಆಗುವುದಿಲ್ಲ ಅದೇ ದೋಷ..... ಬರಹಗಾರರಿಗೆ ಕನ್ನಡಿ ಇಲ್ಲದೆಯೂ ತಮಗೆ ತಾವು ಬೃಹಸ್ಪತಿಗಳಾಗಿ ಕಾಣಿಸುವದು ಸಹಜ.... ತಾವು ಸರ್ವಜ್ಞರು ಎಂದು ತಿಳಿಯುವದು ಅವರ ಪ್ರಕೃತಿ ಸಹಜವಾದ ಗುಣ. ಆದ್ದರಿಂದ ತಮಗೆ ಏನೂ ಗೊತ್ತಿಲ್ಲ ಎಂಬುದೇ ಅವರಿಗೆ ಗೊತ್ತಿಲ್ಲ” (ಪುಟ 35) ಹೀಗೆ ಲೇಖಕರನ್ನು ವ್ಯಾಖ್ಯಾನಿಸುವ ಕಾರಂತರು, ಕೆಲಸಾರೆ ಪ್ರಸಂಗವೊಂದನ್ನು ಸಮರ್ಥವಾಗಿ ಕೇವಲ ಕನ್ನಡದಲ್ಲೇ ಸಂಪೂರ್ಣ ವಿವರಿಸುವುದು ಎಷ್ಟೊಂದು ಕಷ್ಟ ಹಾಗೂ ತಮ್ಮ ಕನ್ನಡದ ಶಬ್ದಭಂಡಾರ ಎಷ್ಟು ಕಡಿಮೆ ಎಂದು ಪ್ರಾಂಜಲ ಮನಸ್ಸಿನಿಂದ ಒಪ್ಪಿಕೊಳ್ಳುವಿಕೆ (ಪುಟ 48) ಇತರ ಲೇಖಕರಿಗೆ ಮಾದರಿಯೆನಿಸಿ ತಮ್ಮ ತಮ್ಮ ಸ್ಥಾನ ಎಲ್ಲಿವೆ ಎಂಬುದನ್ನು ಅವರಿಗೂ ಸೂಕ್ಷ್ಮವಾಗಿ ತೋರಿಸಿದಂತೆನಿಸುತ್ತದೆ.

ಸಾಹಿತ್ಯದಿಂದಲೇ ಎಲ್ಲವನ್ನು ಸಾಧಿಸುತ್ತೇನೆ ಎಂಬುದು ಅಸಾಧ್ಯದ ಮಾತು ಹಾಗೂ ಅದರ ಇತಿಮಿತಿಯೊಳಗೆ ಮಾತ್ರ ಸಾಹಿತ್ಯ ಪರಿಣಾಮಕಾರಿಯಾಗಬಲ್ಲದು ಎಂಬುದನ್ನು.... ನಾನು ಸಾಹಿತ್ಯವನ್ನು ವ್ಯವಸಾಯವಾಗಿ ತೆಗೆದುಕೊಳ್ಳುವ ಬದಲು ಆ ‘(ಬಾಣಸಿಗ) ವಿದ್ಯೆಯನ್ನಾದರೂ ಕಲಿತಿದ್ದರೆ ಇದರ ನೂರುಮಡಿ ಒಡಲುಗಳಿಗೆ ತೃಪ್ತಿಯನ್ನು ಕೊಡುತ್ತಿದ್ದೆ,.... (ಪುಟ 74) ಇಲ್ಲಿ ಇನ್ನಿತರ ಸಾಧಾರಣ ವಿದ್ಯೆ ಕಲೆಗಳೂ ಹೇಗೆ ಸಾಹಿತ್ಯ ಕೃಷಿಯನ್ನು ಮೀರಿಸಬಲ್ಲವೆಂಬುದನ್ನು ಸೂಕ್ಷ್ಮವಾಗಿ ಸಾಹಿತಿಗಳಿಗೆ ತಿಳಿಹೇಳಿದಂತಿದೆ.

ಅಶ್ಲೀಲ ಅಥವಾ ಅಸಂಬದ್ಧ ಸಾಹಿತ್ಯ ಹೇಗೆ ಕ್ರಮ-ಕ್ರಮೇಣ ಓದುಗರ ರುಚಿಯನ್ನೇ ಕೆಡಿಸಬಲ್ಲದೆಂಬುದನ್ನು.... ನಿಮ್ಮ ಸಾಹಿತಿಗಳ ಹಿಂಡು, ಹೀಗೆ ಸತ್ಯವನ್ನು ಒಂದು ಕಾಸಿಗೆ ಮಾರಾಟಮಾಡಿ ಮಿಥ್ಯವನ್ನು ಮೆರೆಯಿಸುವುದಕ್ಕೆ ಎಂದೂ ಹಿಂದು ಮುಂದು ನೋಡುವುದಿಲ್ಲ. ವಿಷವನ್ನು ಕೂಡಾ ಪ್ರತಿದಿನವೂ ಸ್ವಲ್ಪಸ್ವಲ್ಪವಾಗಿ ತಿಂದರೆ, ಮುಂದೆ ಅದು ನಾಟುವದಿಲ್ಲ. ವಿಷಕ್ಕೆ ಇಮ್ಯುನಿಟಿ ಬರುತ್ತದೆ. ದಾಕು ಹಾಕುವದೆಂದರೇನು? ಮೈಲಿಗೆಯನ್ನೇ ಚುಚ್ಚುವದು. ಆ ಮೂಲಕ ಅದಕ್ಕೆ ಇಮ್ಯುನಿಟಿ ತರಿಸುವದು "ನಿಮ್ಮ ಸಾಹಿತ್ಯವೆಂದರೆ ದಾಕಿನಂತಲ್ಲದೇ? ಮಾನ ಮರ್ಯಾದೆಗಳಿಗೆಲ್ಲ ಇಮ್ಯುನಿಟಿ ತರುವ ದಾಕುದಾರರು ನೀವು ಅಲ್ಲವೇ?" (ಪುಟ 106) ಎಂಬ ಸಂಭಾಷಣೆಯಲ್ಲಿ ಎತ್ತಿ ತೋರಿಸಲಾಗಿದೆ.

ಜನರನ್ನು ವಂಚಿಸುವಲ್ಲಿ ಸಾಧುಸಂತರು ಪರಿಣಾಮಕಾರಿಗಳಾಗಿದ್ದರೂ ಅಂಥವರಲ್ಲಿ ಸಾಹಿತಿಗಳೂ ಸೇರಿಕೊಂಡರೆ ಸಮಾಜ ಇನ್ನಷ್ಟು ಹೆಚ್ಚೆಚ್ಚು ಶೋಷಣೆಗೆ ಒಳಗಾಗುತ್ತದೆ, ಅಷ್ಟೇ ಅಲ್ಲ ನಮ್ಮ ಅನೇಕ ಪರಿಯ ಪ್ರಾರಂಭಿಕ ಸಂಶಯಾತ್ಮಕ ನಂಬಿಕೆಗಳು ಬರಬರುತ್ತ ಸತ್ಯಕತೆಗಳಾಗಿ ಮಾರ್ಪಡುತ್ತವೆ, ಇದಕ್ಕೆ 17ನೇ ಅಧ್ಯಾಯ 'ನಂಬಿಕೆಟ್ಟವರುಂಟೇ'ದಲ್ಲಿ "ನಂಬಿ ಕೆಟ್ಟವರುಂಟೆ ರಂಗಯ್ಯನ ನಂಬದೆ ಕೆಟ್ಟರೂ" ಎಂದು ಒಬ್ಬ ದಾಸರು ಹೇಳಿದರು. 'ನಾನು ನಂಬಿದ್ದನ್ನು ನೀನೂ ನಂಬು' ಎಂದು ಹೇಳುವುದೇ ದಾಸರ ಪಂಥ. ಹಾಗೆ ನೀವು ನಡೆದರೆ ನೀವು ದಾಸಾನುದಾಸರು, ಇನ್ನು ಕೆಲವು ದಾಸರಿರುತ್ತಾರೆ. ಅವರು ನಮ್ಮಂತೆ ನೀವು ನಂಬದಿದ್ದರೆ ಕೆಡುತ್ತೀರಿ ಎಂದು ಜನರನ್ನು ಬೆದರಿಸುವುದು ಮಾತ್ರವಲ್ಲ, ನಂಬದಿದ್ದವರು ನರಕಕ್ಕೆ ಹೋಗುತ್ತಾರೆ ಎಂದು ಖಂಡಿತವಾಗಿಯೂ ಹೇಳಿಬಿಡುತ್ತಾರೆ. ಅಂಥವರು ಸಾಹಿತಿಗಳಾಗಿದ್ದರೆ ಇಲ್ಲವೆ ಅಂಥವರ ಪಂಥಕ್ಕೆ ಸಾಹಿತಿಯೊಬ್ಬ ಹೊಂತಗಾರನಾಗಿ ದೊರಕಿದರೆ, ತಕ್ಕುದಾದ ಪುರಾಣವನ್ನು ಹೊಸೆಯುತ್ತಾರೆ. ಹಾಗೆ ಹೊಸದು, ಆ ಕತೆ ಪ್ರಚಾರಗೊಂಡ ಮೇಲೆ ಅದು ಸತ್ಯಕ್ಕಿಂತಲೂ ಹೆಚ್ಚಿನ ಸಿದ್ಧಾಂತವಾಗುತ್ತದೆ. ಅದಕ್ಕಲ್ಲವೇ ಪುರಾಣಗಳು ನಿರ್ಮಾಣವಾಗುವದು? (ಪುಟ 109,110) ಇದು ನಮ್ಮ ಪುರಾಣಪುಣ್ಯ ಕತೆಗಳನ್ನು ನೇರವಾಗಿ ತರಾಟೆಗೆ ತೆಗೆದುಕೊಳ್ಳುತ್ತದಲ್ಲವೇ?

ಇನ್ನು ಪ್ರಜಾಪ್ರಭುತ್ವ ಡೆಮಾಕ್ರಸಿ ಆಗದೇ ಡೆಮಾಕೃಷಿ ಆಗುತ್ತಿದೆಂಬುದನ್ನು "ಎಲ್ಲದಕ್ಕೂ ಬಹುಮತ ಸಿಗಬೇಕು ಬಹುಮತ ಇರುವ ಸುಳ್ಳು ಸತ್ಯ" ಎಂಬುದರಲ್ಲಿ ಹಾಗೂ (ಪುಟ 113)ರಲ್ಲಿ "ಬಹುಮತವಿಲ್ಲದಲ್ಲಿ ಮನುಷ್ಯ ಸೇರಿಕೊಳ್ಳುವದೇ ತಪ್ಪು, ಅಂಥ ಸಂದರ್ಭಗಳಲ್ಲಿ ಬಹುಮತೀಯರನ್ನು ನಾವು ಅನುಸರಿಸಲೇಬೇಕು. ಡೆಮಾಕೃಷಿ ಎಂದರೆ ಅದೇ ಅಲ್ಲವೇ ?" ಎಂಬಲ್ಲಿ ಸ್ಪಷ್ಟಪಡಿಸಿದ್ದಾರೆ.

ಕಾರಂತರ ಶಬ್ದಪ್ರಯೋಗ ಬಲವನ್ನು ಈ ಕಾದಂಬರಿಯಲ್ಲಿ ವಿಶೇಷವಾಗಿ ಕಾಣಬಹುದಾಗಿದೆ. ಕಾದಂಬರಿಯುದ್ದಕ್ಕೂ ವ್ಯಂಗ್ಯ ಹಾಗೂ ವಿಡಂಬನೆ ಮುಖ್ಯವಾಗಿದ್ದುದರಿಂದ ಶಬ್ದ ಶಬ್ದಗಳ ಜೋಡಣೆ ಹೇಗಿದೆ ನೋಡಿ. ಸತಿವ್ರತಾ-ಪತಿವ್ರತಾ, ಅವಿದ್ಯಾವಂತ-ನೈವೇದ್ಯಾಂತ, ಉಳಿದ ಒಂದೇ ಪಾದರಕ್ಷೆಗೆ-ನನಗೆ ಒಂದೇ ರಕ್ಷೆ ಆ ಪಾದರಕ್ಷೆ (ಇನ್ನೊಂದು ಕಳೆದು ಹೋದಾಗ), ಅಡ್ಡ ಹೆಸರು-ಉದ್ದ ಹೆಸರು, ಡೆಮಾಕ್ರಸಿ-ಡೆಮಾಕೃಷಿ, ತಮ್ಮವರ ದುಡ್ಡು-ತಮ್ಮ ದುಡ್ಡು, ಉಪನ್ಯಾಸ-ಅಪನ್ಯಾಸ, ವಿರಕ್ತ-ಸರಕ್ತ, ನಾಡಕರಣಿ-ವಯ್ಯಾಕರಣಿ, ತಲೆಪ್ರಿಂಟರ್ ಟೆಲಿಪ್ರಿಂಟರ್, ಸಮಕಾಲೀನ-ಅಸಮಕಾಲೀನ, ದವಾಖಾನೆ-ದವಾಲೆಸ್‌ಖಾನೆ, ಪೋಲಿಸರ-ಯಾವಸರ, ಬಡಬಾನಲ-ಅಸುಯಾನಲ, ಇಂತಹ ಪದಪುಂಜಗಳು ನಮಗೆ ಹೊಸತೆನಿಸಿದರೂ ಇವುಗಳನ್ನು ಸಂದರ್ಭೋಚಿತವಾಗಿ ಅತ್ಯಂತ

ಕನಿವಿನ್‌ಸಿಂಗ್ ಆಗಿ ಬಳಸಲಾಗಿದೆ. ಇವುಗಳಿಂದಾಗಿ ಅಲ್ಲಲ್ಲಿ ನವಿರಾದ ಹಾಸ್ಯ ಓದುಗರ ಮನಸ್ಸಿಗೆ ತಂಪು ನೀಡುತ್ತದೆ. ಕೆಲವೊಮ್ಮೆ ಕಾರಂತರು ಅವಸರದಲ್ಲಿ "ಮನುಷ್ಯನ ತಲೆಯೆಂದರೆ ಒಂದು ಕಸದ ಬುಟ್ಟಿ" (ಪುಟ 63) ಶ್ವಾನಗಳು ನನ್ನನ್ನು ಮೂಸಲೂ ಸಹ ಇಲ್ಲ. ಕನ್ನಡ ರಾಜ್ಯದಲ್ಲಿ ಸಾಹಿತಿಯನ್ನು ನಾಯಿ ಮೂಸವದಿಲ್ಲ ಎನ್ನುವುದಕ್ಕೆ ಬೇರೆ ಸಾಕ್ಷಿ ಬೇಕೆ?" (ಪುಟ 67) ಇಂತಹ ಲಘುಮಾತುಗಳನ್ನಾಡಿದರೂ ಅವುಗಳ ಹಿಂದೆ ಯಾವದೇ ದುರುದ್ದೇಶ ಇಲ್ಲದಿರುವುದನ್ನು ಕಾದಂಬರಿಯ ಓಟ ಸ್ಥಿರಪಡಿಸುತ್ತದೆ ಹಾಗೂ ಅವುಗಳಲ್ಲಿ ಅವು ತಮ್ಮದೇ ಆದ ಸೂಕ್ಷ್ಮ ಅರ್ಥ ಒಳಗೊಂಡಿರುವುದನ್ನೂ ಕಾಣಬಹುದಾಗಿದೆ.

ಒಟ್ಟಿನಲ್ಲಿ ಬರೀ ಬಾಯಿ ಬಡುಕುತನ ಹಾಗೂ ಮಾತಿನ ಮೋಡಿಯಿಂದ ಮುಗ್ಧ ಜನರನ್ನು ವಂಚಿಸುತ್ತಿರುವ ಬಾಬಾ, ಭಗವಾನ, ಸ್ವಾಮೀಜಿ, ಸಾಧು ಮುನಿ ಮುಂತಾದವರ ವಾಮಮಾರ್ಗಗಳನ್ನು ಬಯಲಿಗೆಳೆಯುತ್ತಲೇ, ಸಮಾಜದ ಆರೋಗ್ಯಪೂರ್ಣ ವಾತಾವರಣ ಕಲುಶಿತವಾಗದಂತೆ ತಡೆಯುವ ಒಂದು ಸಮರ್ಥ ಪ್ರಯತ್ನ ಈ 'ಜಗದೋದ್ಧಾರ-ನಾ'ದಲ್ಲಿ ಸಫಲವಾಗಿದೆ.

# ಜನಗಣಮನ- ಒಂದು ಅನಿಸಿಕೆ

ಒಂದು ದೇಶದ ರಾಷ್ಟ್ರಧ್ವಜ, ಲಾಂಛನ, ರಾಷ್ಟ್ರಗೀತೆ, ಮುದ್ರೆ, ಪಕ್ಷಿ ಮುಂತಾದವುಗಳೆಲ್ಲ ಆಯಾ ದೇಶದ ಸಂಸ್ಕೃತಿ, ಐತಿಹಾಸಿಕ ಮಹತ್ವ, ಉಚ್ಚ ಪರಂಪರೆ ಮುಂತಾದವುಗಳನ್ನು ಪ್ರತಿಬಿಂಬಿಸುವಂತೆ ಆಯಾ ದೇಶದ ಸಮಗ್ರತೆಯ ದ್ಯೋತಕಗಳೂ, ಐಕ್ಯತೆಯ ಪ್ರತಿಪಾದಕಗಳೂ ಆಗಿರುತ್ತವೆ. ಉದಾಹರಣೆಗೆ ನಮ್ಮ ರಾಷ್ಟ್ರಧ್ವಜವನ್ನೇ ತೆಗೆದುಕೊಳ್ಳೋಣ. 1947ನೇ ಜುಲೈ 22ಕ್ಕೆ ಸಂವಿಧಾನ ಸಭೆಯಲ್ಲಿ ಭಾರತದ ರಾಷ್ಟ್ರಧ್ವಜ ಕೇಸರಿ, ಬಿಳಿ, ಕಡು ಹಸಿರು ಬಣ್ಣಗಳು ಸಮಾಂಶದಲ್ಲಿರುವ ತ್ರಿವರ್ಣವುಳ್ಳದ್ದಾಗಿರಬೇಕು; ಬಿಳಿಪಟ್ಟಿಯ ಮಧ್ಯದಲ್ಲಿ ನೀಲಿ ಬಣ್ಣದ ಒಂದು ಚಕ್ರವಿರಬೇಕು; ಈ ಚಕ್ರ ಸಾಮ್ರಾಟ ಅಶೋಕನ ಸಾರನಾಥ ಸಿಂಹಸ್ತಂಭದ ಚೌಕಟ್ಟಿನಲ್ಲಿರುವ ಚಕ್ರದಂತಿರಬೇಕು ಎಂದು ನಿರ್ಣಯಿಸಿ ಈಗಿನ ಸ್ವರೂಪದ ಧ್ವಜವನ್ನು ರಾಷ್ಟ್ರಧ್ವಜವೆಂದು ಅಂಗೀಕರಿಸಲಾಯ್ತು ಹಾಗೂ ಈ ಬಣ್ಣಗಳಿಗೆ ಮತೀಯ ಮಹತ್ವವಿಲ್ಲವೆಂದೂ ನಿರ್ಣಯಿಸಲಾಯಿತು. ತಿರುಮಲೇಶರವರು "ಧೈರ್ಯ ತ್ಯಾಗಗಳ ಕೇಸರಿ ವರ್ಣ, ಸತ್ಯ ಶಾಂತಿಗಳ ಶುಭ್ರಧವಳಿದು ಧರ್ಮ ಶೌರ್ಯಗಳ ಶಾದ್ವಲ ವರ್ಣ ಸೂಚಿಸಿ ಮೆರೆಯುವದಿಂತು ತ್ರಿವರ್ಣ" ಎಂದು ಹಾಡಿಹೊಗಳಿದ್ದಾರೆ.

ಇದನ್ನೇ ಡಾ.ರಾಧಾಕೃಷ್ಣನ್‌ರವರು ತಮ್ಮ ಆಧ್ಯಾತ್ಮಿಕ ಅರ್ಥದಲ್ಲಿ ಕೇಸರಿ ಬಣ್ಣ ವೈರಾಗ್ಯ ಅಥವಾ ಅನಾಸಕ್ತಿಯನ್ನು ಸೂಚಿಸುತ್ತದೆ. ನಮ್ಮ ಧುರೀಣರು ವಾಸ್ತವಿಕ ಲಾಭಗಳ ಬಗ್ಗೆ ಅನಾಸಕ್ತರಾಗಿ ತಮ್ಮ ಕೆಲಸಕ್ಕೆ ಜೀವನವನ್ನು ಮುಡುಪಾಗಿಡಬೇಕು ಎಂದಿದ್ದಾರೆ. ಪತಾಕೆಯ ಬಿಳಿ ಬಣ್ಣ ಬೆಳಕನ್ನೂ, ನಮ್ಮ ವರ್ತನೆಯನ್ನು ಮುಂದೆ ಸಾಗಿಸುವ ಸತ್ಯ

ಮಾರ್ಗವನ್ನೂ ಸೂಚಿಸುತ್ತದೆ. ಹಸಿರು ಬಣ್ಣ ನಮಗೆ ಮಣ್ಣಿನೊಡನಿರುವ ಹಾಗೂ ಇತರ ಜೀವಿಗಳಿಗೆಲ್ಲ ಆಧಾರವಾದ ಸಸ್ಯ ಜೀವನದೊಡನಿರುವ ಸಂಬಂಧವನ್ನು ಸೂಚಿಸುತ್ತದೆ. ಬಿಳಿಪಟ್ಟಿಯ ಮಧ್ಯದಲ್ಲಿರುವ ಅಶೋಕ ಚಕ್ರವು ಧರ್ಮಚಕ್ರವಾಗಿದೆ. ಇದು ಧರ್ಮ, ಶಾಂತಿ, ನ್ಯಾಯ, ನೀತಿಗಳ ಕುರುಹಾಗಿರುವಂತೆಯೆ ಚಲನೆ ಅಂದರೆ ಪ್ರಗತಿಯ ಪ್ರತೀಕವೂ ಆಗಿದೆ. ಅದರಂತೆಯೆ ಹಲವು ರಾಜ್ಯಗಳ ಒಂದೇ ಗಣರಾಜ್ಯ (ರಿಪಬ್ಲಿಕ್) ಆದ ನಮ್ಮೀ ಭಾರತ ದೇಶದಲ್ಲಿ ಅದರ ಅಂಗಾಂಗಗಳಂತಿರುವ ರಾಜ್ಯಗಳೂ ಕೂಡಾ ತಮ್ಮದೇ ಆದ ರಾಜ್ಯ ಲಾಂಛನ, ನಾಡ ಗೀತೆಗಳನ್ನೂ ಹೊಂದಿವೆ. ಆದಾಗ್ಯೂ ರಾಷ್ಟ್ರಗೀತೆ, ರಾಷ್ಟ್ರಧ್ವಜಗಳಿಗೆ ರಾಜ್ಯಗಳ ನಾಡಗೀತೆ ಮುಂತಾದವುಗಳಿಗಿಂತ ಹೆಚ್ಚಿನ ಪ್ರಾಶಸ್ತ್ಯ ಇದ್ದೇ ಇದೆ.

ಈ ಸಂದರ್ಭದಲ್ಲಿ ನಾವು ವಿಶೇಷವಾಗಿ ನಮ್ಮ ರಾಷ್ಟ್ರಗೀತೆಯಾದ ಜನಗಣಮನದ ಬಗ್ಗೆಯೇ ವಿಚಾರಿಸೋಣ.

ಇದು ರಾಷ್ಟ್ರದ ಜಯಗೀತೆ. ಗುರುದೇವ ರವೀಂದ್ರನಾಥ ಠಾಕೂರರಿಂದ ರಚಿಸಲ್ಪಟ್ಟಿದೆ. ಇದು ಯಾವಾಗ ಎಲ್ಲಿ ಕೇಳಿಬಂದರೂ ಎದ್ದು ನಿಂತು ಹಾಡು ಮುಗಿಯುವವರೆಗೂ ಲಕ್ಷ್ಯಗೊಟ್ಟು ಕೇಳಿ ಗೌರವಿಸಬೇಕಾದುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ಜಗತ್ತಿನ ಪ್ರತಿಯೊಂದು ರಾಷ್ಟ್ರಕ್ಕೂ ರಾಷ್ಟ್ರಧ್ವಜವಿರುವಂತೆ ತನ್ನದೇ ಆದ ರಾಷ್ಟ್ರಗೀತೆಯೂ ಇರುತ್ತದೆ. ಈ ರಾಷ್ಟ್ರಗೀತೆ ಆಯಾ ರಾಷ್ಟ್ರದ ಐತಿಹಾಸಿಕ ಮಹತ್ತರವಾದ ಘಟನೆಯನ್ನೊ ಕಾಲವನ್ನೊ ಕುರಿತದ್ದಾಗಿರಬಹುದು ಇಲ್ಲವೆ ಆ ದೇಶ ಸಾಧಿಸಬೇಕೆಂದಿರುವ ಗುರಿ ಹಾಗೂ ಮಾರ್ಗವನ್ನು ಸೂಚಿಸಬಹುದು, ಮತ್ತೆ ಕೆಲವು ತಮ್ಮ ತಾಯ್ನಾಡಿನ ಮೇಲಿನ ಪ್ರೀತಿ ಅಭಿಮಾನಗಳನ್ನು ವಿವರಿಸಬಹುದು. ರಾಷ್ಟ್ರೀಯ ದಿನಗಳಲ್ಲೂ ಸಾರ್ವಜನಿಕ ಸಮಾರಂಭಗಳ ಕೊನೆಯಲ್ಲೂ ರಾಷ್ಟ್ರಗೀತೆಯನ್ನು ಹಾಡುವುದು ಪದ್ಧತಿ. ರಾಷ್ಟ್ರಗೀತೆ ಯಾವುದಿರಬೇಕು ಎನ್ನುವುದನ್ನು ಸಾಮಾನ್ಯವಾಗಿ ಆಯಾ ರಾಷ್ಟ್ರದ ಸರಕಾರ ನಿರ್ಧರಿಸುತ್ತದೆ.

ಎಲ್ಲ ರಾಷ್ಟ್ರಗೀತೆಗಳು ರಾಷ್ಟ್ರೀಯ ಭಾವನೆಯಿಂದ ತುಂಬಿ ತುಳುಕುತ್ತಿರುವುದು ಸಾಮಾನ್ಯ ಲಕ್ಷಣವಾದರೂ ಇದಕ್ಕೂ ಒಂದು ವಿನಾಯಿತಿ ಲಕ್ಸೆಂಬರ್ಗಿನ ರಾಷ್ಟ್ರಗೀತೆ. ಆ ದೇಶದಲ್ಲಿ ರೈಲುಬಂಡಿಯನ್ನು ಮೊಟ್ಟಮೊದಲಿಗೆ ಓಡಿಸಿದ ಸಂದರ್ಭದಲ್ಲಿ ರಚಿತವಾದ “ಬೆಂಕಿಯ ಬಂಡಿಯು ಸಿದ್ಧವಾಗಿದೆ” ಎಂಬ ಹಾಡೇ ಅಲ್ಲಿಯ ರಾಷ್ಟ್ರಗೀತೆ.

ಗುರುದೇವ ರವೀದ್ರನಾಥ ಠಾಕೂರರು 1911ರಲ್ಲಿ ಬಂಗಾಳಿಯಲ್ಲಿ ರಚಿಸಿ ದೀರ್ಘಗೀತೆಯ ಮೊದಲ ಪದ್ಯದ ಸಾಲುಗಳನ್ನು ಅಂದರೆ ಐದು ಪ್ಯಾರಾಗಳಲ್ಲಿ ಮೊದಲನೆ ಪ್ಯಾರಾದ ವಾಕ್ಯಗಳನ್ನು ಮಾತ್ರ ಆರಿಸಿಕೊಂಡು ನಮ್ಮ ಸಧ್ಯದ 'ಜನಗಣಮನ' ರಾಷ್ಟ್ರಗೀತೆಯನ್ನು ರಚಿಸಿದ್ದಾಗಿದೆ. ಮೊದಲನೆ ನುಡಿಯ ನಂತರ ಜಯಹೇ, ಜಯಹೇ' ಎಂದು ಜಯಕಾರದ ಸಾಲು ಸೇರಿದ ಭಾಗವೇ ನಮ್ಮ ಅಧಿಕೃತ ರಾಷ್ಟ್ರಗೀತೆ.

ನಮ್ಮ ಸಂವಿಧಾನ ರಚನಾ ಸಭೆ 1950ರ ಜನವರಿ 24ರಂದು 'ಜನಗಣಮನ'ವನ್ನು ಅಧಿಕೃತ ರಾಷ್ಟ್ರಗೀತೆ ಎಂದು ಅಂಗೀಕರಿಸಿತು. ಅದೇ ವರ್ಷ ಗಣರಾಜ್ಯದ ದಿನ ದಿನಾಂಕ 26ರಂದು ಅಧಿಕೃತವಾಗಿ ಅದು ನುಡಿಸಲ್ಪಟ್ಟಿತು. ಅಲ್ಲಿಯವರೆಗೆ ಸ್ವತಂತ್ರ ಸಂಗ್ರಾಮದಲ್ಲಿ ಸ್ಫೂರ್ತಿಯ ಸೆಲೆಯಾಗಿ ಇಡೀ ದೇಶದ ಜನರ ಹೃದಯ ಬಡಿದೆಬ್ಬಿಸಿದ 'ವಂದೇ ಮಾತರಂ' ಗೀತೆಯನ್ನು 'ರಾಷ್ಟ್ರಸ್ತವ' ಎಂದು ಸ್ವೀಕರಿಸಿ ಅದಕ್ಕೂ ರಾಷ್ಟ್ರಗೀತೆಯ ಸ್ಥಾನಮಾನ

ನೀಡಲಾಯಿತು. ಸಭೆ ಸಮಾರಂಭಗಳಲ್ಲಿ 'ವಂದೇ ಮಾತರಂ' ಪ್ರಾರ್ಥನೆಯಾಗಿಯೂ ಜನಗಣಮನ' ಮಂಗಳ ಗೀತೆಯಾಗಿಯೂ ಹಾಡಲ್ಪಡುತ್ತವೆ.

'ಜನಗಣಮನ'ವು ರಾಷ್ಟ್ರ ಇಬ್ಭಾಗವಾಗುವುದಕ್ಕೆ ಮೊದಲು ಬರೆದ ಗೀತೆಯಾದರೂ ಇದರಲ್ಲಿ ಬರುವ ರಾಷ್ಟ್ರದ ವಿವಿಧ ಪ್ರದೇಶಗಳ ಹೆಸರುಗಳನ್ನು ಆನಂತರವೂ ಬದಲಾಯಿಸಿಲ್ಲ. ಆ ಹೆಸರುಗಳು ವಿವಿಧ ಭಾರತೀಯ ಜನಾಂಗಗಳಿಗೂ ಅನ್ವಯಿಸುತ್ತವೆ. ಆದ್ದರಿಂದ ಮೂಲಗೀತೆ ಈವರೆಗೂ ಯಾವುದೇ ಬದಲಾವಣೆಯನ್ನು ಹೊಂದದೇ ಹಾಗೆಯೇ ಉಳಿದು ಬಂದಿದೆ. ಈ ಹೊತ್ತಿನಲ್ಲಿ ಈ ಗೀತೆಯಲ್ಲಿ ಬರುವ ಪ್ರದೇಶ ಅಥವಾ ಜನಾಂಗಗಳ ಹೆಸರುಗಳನ್ನು ನೋಡುವಾ: ಪಂಜಾಬ, ಸಿಂಧ, ಗುಜರಾತ, ಮರಾಠಾ, ದ್ರಾವಿಡ, ಉತ್ಕಲ (ಓರಿಸ್ಸಾ), ವಂಗ (ಬಂಗಾಲ), ವಿಂಧ್ಯ ಹಿಮಾಚಲ (ಹಿಮಾಲಯ) ಇತ್ಯಾದಿ. ಗೀತೆ ರಚಿಸಿದ್ದು 1911ರಲ್ಲಿ ಆದ್ದರಿಂದ ಆಗಿನ ಹೆಸರುಗಳನ್ನು ಈ ಗೀತೆ ಹೊಂದಿದೆ ಎಂದರೂ 'ದ್ರಾವಿಡ' ಎನ್ನುವ ಶಬ್ದದ ಬಗ್ಗೆ ಮಾತ್ರ ಈ ಮಾತು ಸಮಂಜಸವೆನಿಸಲಾರದು. ಯಾಕೆಂದರೆ ನಮ್ಮ ಇಂಡಿಯಾ ದೇಶದ ಇತಿಹಾಸದ ಪ್ರಾರಂಭದಲ್ಲಿ ಆರ್ಯ, ದ್ರಾವಿಡ ಎಂಬ ಜನಾಂಗಗಳು ಇದ್ದರೂ ಕ್ರಮೇಣ ಕಾಲ ಕಳೆದಂತೆ ಅದೂ 20ನೇ ಶತಮಾನದಲ್ಲಿ ಅಂದರೆ ಜನಗಣಮನ ಗೀತೆ ರಚಿಸಿದಾಗ ಯಾರು ದ್ರಾವಿಡ, ಯಾರು ಆರ್ಯ ಎಂದು ನಿಖರವಾಗಿ ಹೇಳುವುದು ಅಸಾಧ್ಯ. ನಾವು ದ್ರಾವಿಡರು ಎಂದು ಹೇಳುತ್ತಾ ತಮಿಳುನಾಡಿನಲ್ಲಿ ರಾಜಕೀಯ ಪಕ್ಷ ಕಟ್ಟುವವರನ್ನು ಸೀಮಿತ ದೃಷ್ಟಿಯವರು ಸಂಕುಚಿತ ಭಾವನೆಯವರು ಎಂದು ಕರೆಯುವಾಗ ನಮ್ಮ ರಾಷ್ಟ್ರಗೀತೆಯಲ್ಲಿಯೇ 'ದ್ರಾವಿಡ' ಎಂದು ಇಡೀ ದಕ್ಷಿಣ ಭಾರತೀಯರನ್ನು ಸಂಬೋಧಿಸಿದ್ದು ಎಷ್ಟೊಂದು ಸಮಂಜಸ ಎನ್ನುವುದನ್ನು ನಮ್ಮ ವಿಚಾರವಂತರೇ ಪರಿಶೀಲಿಸಬೇಕು. ಉತ್ತರ, ಪೂರ್ವ, ಪಶ್ಚಿಮದವರನ್ನು ಅವರವರ ರಾಜ್ಯ (ಪ್ರದೇಶ) ಅಥವಾ ಜನಾಂಗದ ಹೆಸರಿನಿಂದ ಸಂಬೋಧಿಸಿ ಇಡೀ ದಕ್ಷಿಣ ಭಾರತೀಯರಾದ ಕರ್ನಾಟಕ, ಆಂಧ್ರ ತಮಿಳುನಾಡು, ಕೇರಳದವರನ್ನು ದ್ರಾವಿಡ ಎಂದು ಗುರ್ತಿಸಲಾಗಿದೆ. ಇದು ಪೂರ್ಣ ದ್ರಾವಿಡ ನಾವಲ್ಲ ಎಂದು ತಿಳಿದವರಿಗೆ ನೋವನ್ನುಂಟುಮಾಡುತ್ತದೆ. ಆರ್ಯ ದ್ರಾವಿಡರು ಎಂದೋ ಒಂದಾಗಿ ಹೋಗಿದ್ದಾರೆಂಬ ಪರಿಕಲ್ಪನೆಗೆ ಪೆಟ್ಟು ಬಿದ್ದು ಮತ್ತೆ ನಾವು ದ್ರಾವಿಡರೇ ಎಂಬ ಅರಿವು ಸುರುವಾಗಲು ಪ್ರಚೋದನೆ ನೀಡಿದಂತಾಗುತ್ತದೆ. ಇಂತಹ ಬೆಳವಣಿಗೆ ದೇಶದ ಐಕ್ಯತೆ ಸಮಗ್ರತೆ ದೃಷ್ಟಿಯಿಂದ ಆರೋಗ್ಯಕರವಲ್ಲ. ಈ ಸಂದರ್ಭದಲ್ಲಿ 'ಜನಗಣಮನ' ಗೀತೆಯು 1911ರಷ್ಟು ಹಿಂದೆಯೇ ರಚಿತವಾದದ್ದು ಆಗ ಈಗಿನ ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳಗಳು ಇರಲೇಇಲ್ಲ ಎಂಬ ವಾದವನ್ನು ಮುಂದೊಡ್ಡಿದರೂ ಕೂಡಾ ಅದೇ ವೇಳೆಗೆ ಈ ರಾಜ್ಯಗಳವರೆಲ್ಲ ಪೂರ್ಣ ದ್ರಾವಿಡರು ಆಗಿರಲಿಲ್ಲ ಎಂಬ ಅಂಶ ನಿರ್ವಿವಾದ. ಅದರಂತೆಯೇ ಈ ಗೀತೆಯಲ್ಲಿ ಹೆಸರಿಸಿದ ಇತರ ಪ್ರದೇಶಗಳು ಕೂಡಾ ಈಗಿನ ಸ್ವರೂಪದಲ್ಲಿ ಅಸ್ತಿತ್ವದಲ್ಲಿರಲಿಲ್ಲ ಎಂಬುದು ಅಷ್ಟೇ ನಿಜವಾದದ್ದು.

ಇದು ಕವಿ ರವೀಂದ್ರರಿಗಾಗಲಿ ರಾಷ್ಟ್ರಗೀತೆಗಾಗಲಿ ಅವಮಾನಪಡಿಸಬೇಕೆಂಬ ದೃಷ್ಟಿಯಿಂದ ಬರೆದುದಲ್ಲ. ತಮ್ಮ ಮೇರುಕೃತಿಗಳಿಂದ ವಿಶಾಲ ಮನೋಭಾವನೆಯಿಂದ ವಿಶ್ವ ಕವಿಯೆಂದು ಮನ್ನಿಸಲ್ಪಟ್ಟು ಸ್ವತಃ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರಿಂದ 'ಗುರುದೇವ ಎಂದು ಕರೆಯಿಸಿಕೊಂಡ ರವೀಂದ್ರನಾಥರ ಬಗ್ಗೆ ಉಚ್ಚತಮ ಗೌರವವನ್ನಲ್ಲದೆ ಮತ್ತೇನು ಹೊಂದಲು ಸಾಧ್ಯ? ಇನ್ನು ರಾಷ್ಟ್ರಗೀತೆಗೆ ಅವಮಾನಪಡಿಸುವದಂತೂ ಅಸಾಧ್ಯ ಹಾಗೂ ಅಸಂಭವದ ಮಾತೇ ಸರಿ. ಅಲ್ಲದೇ ಆ ಪ್ರಶ್ನೆಯೆ ಇಲ್ಲಿ ಅಪ್ರಸ್ತುತ.

1745ರಷ್ಟು ಹಿಂದೆಯೇ ರಾಷ್ಟ್ರಗೀತೆಯ ಕಲ್ಪನೆಯನ್ನು ಎಲ್ಲಕ್ಕೂ ಮೊದಲು ಪ್ರಾರಂಭಿಸಿದ ರಾಷ್ಟ್ರವೆಂದರೆ ಇಂಗ್ಲೆಂಡ್, ಆ ರಾಷ್ಟ್ರದ ದೊರೆ ಎರಡನೇ ಜಾರ್ಜ್ ವೈರಿಗಳ ಆಕ್ರಮಣಕ್ಕೊಳಗಾಗಿ ತೊಂದರೆಯಲ್ಲಿದ್ದಾಗ ನಾಟಕದಲ್ಲಿಯ ಸಂಗೀತ ನಿರ್ದೇಶಕನಾಗಿದ್ದ ಥಾಮಸ್ ಆರ್ನೆ ಎಂಬುವನೊಬ್ಬನು:

**"ದೇವರೆ ನಮ್ಮಯ ದೊರೆಯನು ಹರಸು**

**ಉದಾತ್ತನಾಗಿಹ ಜಾರ್ಜ್ ದೊರೆಯನು ಉಳಿಸು"**

ಎಂದು ಹಾಡೊಂದನ್ನು ಕಟ್ಟಿ ನಾಟಕದ ಕೊನೆಯಲ್ಲಿ ಹಾಡತೊಡಗಿದ್ದೇ ಮುಂದೆ ಪ್ರಸಿದ್ಧಿ ಪಡೆದು ಇಂಗ್ಲೆಂಡಿನ ರಾಷ್ಟ್ರಗೀತೆಯಾಯಿತು. ದೇಶಭಕ್ತಿಯ ಸಂಕೇತವಾಗಿದ್ದ ಈ ಹಾಡಿನ ಸಾಹಿತ್ಯದಲ್ಲಿ ಸಂದರ್ಭೋಚಿತ ಬದಲಾವಣೆಗಳು ಕಾಲಕಾಲಕ್ಕೆ ಆಗುತ್ತಾ ಬಂದುವು. ಆದರೆ ನಮ್ಮ ರಾಷ್ಟ್ರಗೀತೆಯಲ್ಲಿ ಯಾವ ಬದಲಾವಣೆಗಳೂ ಈವರೆಗೆ ಆಗಿಲ್ಲ. ಹೀಗೆಂದೊಡನೆ ಈ ಗೀತೆಯಲ್ಲಿ ಸಮಗ್ರ ಬದಲಾವಣೆ ತರಬೇಕೆನ್ನುವವನೂ ನಾನಲ್ಲ. ಆದರೆ ಈ ದ್ರಾವಿಡವೆನ್ನುವ ಶಬ್ದದ ಬದಲಾಗಿ ಬೇರಾವುದಾದರೂ ಸೂಕ್ತ ಶಬ್ದವನ್ನು ನಮ್ಮ ಹಿರಿಯ ಸಾಹಿತಿಗಳು, ಮೇಧಾವಿಗಳು, ವಿದ್ವಾಂಸರು, ಸೂಚಿಸಬಹುದಲ್ಲವೇ? ಪರ್ಯಾಯವಾಗಿ 'ದಕ್ಷಿಣ ಎಂಬಂತಾದರೆ ಹೇಗಾದೀತು? ಇದು ಕೇವಲ ನನ್ನ ಅನಿಸಿಕೆ. ವಿಚಾರ ಮಂಥನ ನಡೆದು ದೇಶದ ಹಿರಿಯರು ಈ ಬಗ್ಗೆ ನಿರ್ಣಯ ಕೈಗೊಳ್ಳಲಿ.

# ಕನಕದಾಸರ ಜೀವನಸಿದ್ಧಿ

ಭಾರತೀಯ ಸಾಹಿತ್ಯ ಪರಂಪರೆಯು ಪ್ರಮುಖವಾಗಿ ಧಾರ್ಮಿಕ ನೆಲಗಟ್ಟಿನದು, ಸಂಸ್ಕೃತದ, ಪ್ರಾಕೃತದ ಮೂಲಗಳನ್ನಾಧರಿಸಿದ್ದು, ಹೆಚ್ಚಾನು ಹೆಚ್ಚು ದೇವರು, ಧರ್ಮ ಭಕ್ತಿ ಇತ್ಯಾದಿ ಅಲೌಕಿಕ ವಿಷಯಗಳ ಮೇಲಿಯೇ ರಚಿತವಾದದ್ದು. ಇದಕ್ಕೆ ಕನ್ನಡ ಸಾಹಿತ್ಯವೂ ಹೊರತಾಗುವುದಿಲ್ಲವಾದರೂ ವಚನ ಸಾಹಿತ್ಯದಂತಹ ತೀರ ವಿರಳ ಪ್ರಕಾರಗಳನ್ನು ಬಿಟ್ಟರೆ ಅಲ್ಲೊಂದು, ಇಲ್ಲೊಂದು, ಅಲ್ಲೊಬ್ಬ, ಇಲ್ಲೊಬ್ಬ ಕ್ರಾಂತಿಕಾರಿ ವೈಚಾರಿಕ ಹಿನ್ನೆಲೆಯ ಕವಿಪುಂಗವರನ್ನು ಅಪವಾದವೆನ್ನುವಂತೆ ಹೆಸರಿಸಬಹುದು. ಇಂತಹ ಅಪರೂಪದ ಉದಾಹರಣೆಗಳಲ್ಲಿ ಕನಕದಾಸರದು ಅತೀ ಎದ್ದುಕಾಣುವಂತಹ ಹೆಸರಾಗಿದೆ.

ದಾಸ ಪರಂಪರೆಯು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆಂಬುದರಲ್ಲಿ ಎರಡು ಮಾತಿಲ್ಲ. ಆದರೆ ಈ ಪರಂಪರೆಯ ಆರಾಧನೆಯಲ್ಲಿ ಮೇರು ವ್ಯಕ್ತಿತ್ವದ ಕನಕದಾಸರ ಹೆಸರು ಸ್ಮರಿಸಲ್ಪಡದಿರುವುದು ತೀರಾ ವಿಷಾದನೀಯವಾಗಿ ನಮ್ಮ ಒಟ್ಟು ವ್ಯವಸ್ಥೆಯ ಕುತ್ಸಿತತೆಗೆ ಸಾಕ್ಷಿಯನಿಸುತ್ತದೆ. ಅದೇನೆಯಿದ್ದರೂ ಜನಪ್ರಿಯತೆಯಲ್ಲಿ ಮಾತ್ರ ಕನಕದಾಸರು ತಮ್ಮ ಸಮಕಾಲೀನರಾದ 'ದಾಸರೆಂದರೆ ಪುರಂದರ ದಾಸರಯ್ಯಾ' ಎಂಬ ಹೆಗ್ಗಳಿಕೆಗೆ ಪಾತ್ರರಾದ ಪುರಂದರದಾಸರ ಹೆಸರಿನ ಜೊತೆ ಜೊತೆಯಲ್ಲಿಯೇ ಎಲ್ಲರ ಮನದಲ್ಲಿ ಅಚ್ಚೊತ್ತಿದಂತೆ ಅಳಿಯದೇ ಉಳಿದುಕೊಂಡು ಬಂದಿದ್ದಾರೆ. ಇದಕ್ಕೆ ಕಾರಣವೆಂದರೆ ಸಂಪ್ರದಾಯದ ಭೂಮಿಕೆ ಮೇಲೆ ನಿಂತುಕೊಂಡೆ ಕನಕದಾಸರು, ಸಾಮಾಜಿಕ ಹಾಗೂ ಧಾರ್ಮಿಕ ವಿಷಯಗಳ ಬಗ್ಗೆ ಪ್ರಾಮಾಣಿಕವಾಗಿ ಮಾತನಾಡಿದ ಹಾಗೂ ಆಗಾಗ ತಮ್ಮ ನಿಷ್ಠುರ ನುಡಿಗಳಿಂದ ಅವುಗಳನ್ನು ಟೀಕಿಸಿದ ವ್ಯಕ್ತಿ. ಇದೇ ಅವರ ಜೀವನದ ವೈಶಿಷ್ಟ್ಯ ಹಾಗೂ ಪರಿಮಿತಿ.

ಧಾರವಾಡ ಜಿಲ್ಲೆಯ ಬಾಡಗ್ರಾಮದಲ್ಲಿ ಬೀರಪ್ಪ ಹಾಗೂ ಬಚ್ಚಮ್ಮ ದಂಪತಿಗಳಿಗೆ ತಿರುಪತಿ ತಿಮ್ಮಪ್ಪನ ಆಶೀರ್ವಾದದಿಂದ ಜನಿಸಿದ ಮಗುವಿಗೆ ತಿಮ್ಮಪ್ಪನೆಂದು ಹೆಸರಿಡಲಾಯ್ತು. ಈ ತಿಮ್ಮಪ್ಪ ತನ್ನ ತಂದೆಯ ದಣ್ಣಾಯಕ ಕೆಲಸವನ್ನು ನಿಭಾಯಿಸುತ್ತಿದ್ದುದಕ್ಕಾಗಿ ಮುಂದೆ ತಿಮ್ಮಪ್ಪನಾಯಕನೆಂದು ಕರೆಯಲ್ಪಟ್ಟ. ಒಮ್ಮೆ ಭೂಮಿಯನ್ನು ಅಗೆಯುತ್ತಿದ್ದಾಗ ಬಹಳಷ್ಟು ಬಂಗಾರದ ನಿಧಿ ದೊರಕಿದ್ದರಿಂದ ತಿಮ್ಮಪ್ಪನನ್ನು ಕನಕಪ್ಪನೆಂದು ಕರೆಯತೊಡಗಿದರೆಂದು ಐತಿಹ್ಯ. ಆ ಮೇಲೆ ಯುದ್ಧವೊಂದರಲ್ಲಿ ಸ್ಮೃತಿ ತಪ್ಪಿ ನಂತರ ಎಚ್ಚರವಾದಾಗ ಅದು ಕೇವಲ ದೈವಿಶಕ್ತಿಯಿಂದ ಮಾತ್ರ ಸಾಧ್ಯವೆಂದು ತರ್ಕಿಸಿದ ತಿಮ್ಮಪ್ಪನಾಯಕನಿಗೆ ಲೌಕಿಕದಲ್ಲಿ ಅಭಿರುಚಿ ಹೋಗಿ ತನ್ನ ಮನೆತನದ ಆರಾಧ್ಯದೈವ ತಿಮ್ಮಪ್ಪನಿಗೇ ತನ್ನನ್ನು ತಾನು ಅರ್ಪಿಸಿಕೊಂಡು, ಸಕಲೈಶ್ವರ್ಯ ಪದವಿ ತ್ಯಾಗಮಾಡಿ ಕನಕಪ್ಪನಿಂದ 'ಕನಕದಾಸ'ನಾದನು. ಇವರು ದಾಸವರೇಣ್ಯರಾದ ಶ್ರೀ ವಾದಿರಾಜ, ತಾತಾಚಾರಿ ಹಾಗೂ ಶ್ರೀವೈಷ್ಣವ ಮತ ಪ್ರವರ್ತಕರಾದ ರಾಮಾನುಜಚಾರ್ಯರನ್ನು ಅತೀ ಗೌರವದಿಂದ ಅಲ್ಲಲ್ಲಿ ನೆನೆದು ಅವರ ನಿಕಟ ಸಂಪರ್ಕ ತಮಗಿತ್ತೆನ್ನುವದನ್ನು ಜಾಹೀರಗೊಳಿಸಿದ್ದರೂ ವಿಧಿವತ್ತಾಗಿ ಇವರಿಗೆ ದಾಸ ದೀಕ್ಷೆ ಆದ ಬಗ್ಗೆ ಎಲ್ಲಿಯೂ ಸ್ಪಷ್ಟ ನಿದರ್ಶನಗಳಿಲ್ಲ.

**ಚತುರ್ವಿಧ ಫಲವೀವ ತಾತಾಚಾರಿಯರಡಿಗೆ ವಂದಿಸುವೆ ಹಾಗೂ**

**"ಚಕ್ರ ಕಂಟಕವನ್ನುತ್ತರಿಸಿ ಗಜೇಂದ್ರನ ವಕ್ತ್ರವ ತೀರ್ಕಣೆಗೈದ**

**ಚಕ್ರಪಾಣಿಯ ಕೂರ್ತು ಕೃತಿವೇಳು ತನಗ ತಿವಿಕ್ರಮದಾಸಸ್ಯದಾಸ**

**(ಸೋಸೆಯಲ್ಲಿ ತ್ರಿವಿಕ್ರಮದೇವರನ್ನು ಪ್ರತಿಷ್ಠಾಪಿಸಿರುವ ಶ್ರೀ**

**ವಾದಿರಾಜರನ್ನು ಕುರಿತಾಗಿ) - ಮೋಹನ ತರಂಗಿಣಿಯ ಪೀಠಿಕಾ**

**ಭಾಗದಲ್ಲಿ.**

ಕನಕದಾಸರು ಯಾವ ಕುಲದವರು? ಎನ್ನುವ ಬಗ್ಗೆ ಸುದೀರ್ಘವಾದ ಚರ್ಚೆಯು ನಡೆದಿದೆ. ಶ್ರೀ ವೈಷ್ಣವ ಸಂಪ್ರದಾಯದಲ್ಲಿ ಕನಕದಾಸರು ತಮ್ಮನ್ನು ಗುರುತಿಸಿಕೊಂಡಿದ್ದರಿಂದ ಅವರನ್ನು ನಾಯಕ (ಬೇಡ) ಜಾತಿಗೆ ಸೇರಿದವರೆಂದು ವಾದಿಸುವ ಗುಂಪು ಶ್ರೀ ಕಟ್ಟಿ ಶೇಷಾಚಾರ್ಯರು (ಕವಿ ಕನಕದಾಸರು -ಗ್ರಂಥಕರ್ತೃ), ಶ್ರೀಯುತರುಗಳಾದ ಬೆಟಗೇರಿ ಕೃಷ್ಣಶರ್ಮ ಮತ್ತು ಬೆಂಗೇರಿ ಹುಚ್ಚುರಾಯರು (ಶ್ರೀಕನಕದಾಸರ ಭಕ್ತಿ ಗೀತೆಗಳು - ಗ್ರಂಥ ಸಂಪಾದಕರು) ಹಾಗೂ ಎಲ್.ಜಿ. ಹಾವನೂರ ಇತ್ಯಾದಿ ಒಂದೆಡೆಯಾದರೆ, ಅವರನ್ನು ನಿರ್ಧಿಷ್ಟವಾಗಿ ಕುರುಬರೇ ಎಂದು ವಾದಿಸುವ ಗುಂಪು-ಬೇಲೂರು ಕೇಶವದಾಸರು (ಶ್ರೀ ಕರ್ನಾಟಕ ಭಕ್ತವಿಜಯ) ಎಸ್.ಕೆ. ರಾಮಚಂದ್ರರಾವ್ (ಕಾಗಿನೆಲೆಯ ಕನಕ-ಪ್ರಬಂಧ) ಬಿ.ಶಿವಮೂರ್ತಿ ಶಾಸ್ತ್ರಿಗಳು (ಕನಕದಾಸರು-ಕೀರ್ತನೆಗಳು) - ಇನ್ನೊಂದೆಡೆ. ಇದಲ್ಲದೇ ಡಾ.ರಂಗನಾಥ ದಿವಾಕರ ಅವರು ತಮ್ಮ ಲೇಖನ 'ಭಾಗವತ ಶ್ರೇಷ್ಠ ಕನಕದಾಸರು" (ಕನಕದಾಸ ಚತುರ್ಯ ಶತಮಾನೋತ್ಸವ ಸಂಸ್ಮರಣ ಸಂಪುಟ, 1965ಪುಟ - 3)ರಲ್ಲಿ ಕನಕದಾಸರು ಅಂಡೆ ಕುರುಬ ಜಾತಿಯವರೆಂದೂ ಮಂಡಿಸಿದ್ದಾರೆ.

ಕನಕದಾಸರು ನಾಯಕರೆಂಬ ವಾದದವರು ಅಲ್ಲಲ್ಲಿ ಕಾಣುವ ಅವರ ಕೃತಿಗಳಲ್ಲಿಯ ಶ್ರೀವೈಷ್ಣವ ಮತ ಪಕ್ಷಪಾತ, ಶ್ರೀ ರಾಮಾನುಜ, ತಾತಾಚಾರ್ಯ, ವಾದಿರಾಜರ ಮೇಲಿನ ಭಕ್ತಿ ಸಮಕಾಲೀನ ಪುರಂದರದಾಸರ ಒಡನಾಟ ಇವುಗಳನ್ನೇ ಆಧಾರವಾಗಿಟ್ಟುಕೊಂಡಿದ್ದಾರೆ. ಆದರೆ ಅವರನ್ನು ಕುರುಬರೆನ್ನುವವರು ಬಹಳ ವಿಸ್ತಾರವಾಗಿ ಹಾಗೂ ಪ್ರಬಲವಾಗಿ ತಮ್ಮ

ವಿಚಾರವನ್ನು ಮಂಡಿಸಿದ್ದಾರೆ. ಅದರಲ್ಲಿ ಕೆಲಮುಖ್ಯ ಅಂಶಗಳೆಂದರೆ, ಕರ್ನಾಟಕದಲ್ಲಿ ಕುರುಬರಲ್ಲಿ ಮಾತ್ರ ತೋರಿಬರುವ ಬೀರಪ್ಪ ಎನ್ನುವ ಶೈವಶೈಲಿಯ ಹೆಸರು ಕನಕದಾಸರ ತಂದೆಗಿರುವುದು, ಇತರ ದಾಸರಂತೆ ಕೇವಲ ಶ್ರೀಹರಿಯನ್ನು ಮಾತ್ರ ಕೊಂಡಾಡದೆ ಕನಕರು ಶಿವನನ್ನು ಕೂಡಾ ಅನೇಕಸಾರೆ ಸ್ತುತಿಸುವದು ಇತ್ಯಾದಿಗಳನ್ನು ಉಲ್ಲೇಖಿಸಿದ್ದಾರೆ.

ಉದಾ: "ಆರುಬಲ್ಲರು ಹರಿ ಹರರ ಮಹಿಮೆಯನ್ನು

ವಾರಜೋಧ್ವರ ಸುರೇಂದ್ರಾದಿಗಳವಲ್ಲ."

(ಕ.ಭ.ಗೀ.ಸಂ. 82)

**ಶಿವಶಿವಶಿವ ಎನ್ನಿರೋ – ಮೂಜಗದವರೆಲ್ಲ,**

**ಶಿವಶಿವಶಿವ ಎನ್ನಿರೋ....**
**(ಕನಕದಾಸರ ಹಾಡುಗಳು ಜನಪ್ರಿಯ ಕನಕ ಸಂಪುಟ ಪುಟ -4) ಮತ್ತು ಕನಕದಾಸರೇ**

**ನಾವು ಕುರುಬರು ನಮ್ಮ ದೇವರೂ ಬೀರಯ್ಯ**

**ಕಾವ ನಮ್ಮಜ್ಜ ನರಕುರಿಯ ಹಿಂಡುಗಳ" (ಜ.ಕ.ಸಂ.ಪರ-30)**

**"ಹಲವು ದಾಸರ ಮನೆಯ ಹೊಲೆದಾಸನಾನಯ್ಯ ಕುಲವಿಲ್ಲದ ದಾಸ**

**ಕುರುಬದಾಸ" (ಕವಿ ಕನಕದಾಸರು ಪುಟ-125)**

ಇಂಥ ಪದ್ಯಗಳನ್ನು ಉದಾಹರಿಸುತ್ತಾರೆ. ಎರಡೂ ಕಡೆಯ ವಾದವಿವಾದಗಳನ್ನು ಕೂಲಂಕುಶವಾಗಿ ಅಭ್ಯಸಿಸಿದಾಗ ಕನಕದಾಸರು ಕುರುಬರೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಇದೂ ಅಲ್ಲದೇ ಅವರನ್ನು ಕಬ್ಬಲಿಗ (ಅಂಬಿಗ) ಜಾತಿಗೆ ಸೇರಿದವರಾಗಿದ್ದವರೆಂದೂ ಕೆಲವರು ವಾದಿಸಿದ್ದು. ಅದಕ್ಕೆ ಯಾವುದೇ ಬಲವಾದ ಕಾರಣಗಳನ್ನು ನೀಡಲಾಗಿಲ್ಲ.

ಕನಕದಾಸರ ಜೀವನ ದೃಷ್ಟಿ ಹಾಗೂ ಸಿದ್ಧಿಯೆಂದರೆ ಶ್ರೀವೈಷ್ಣವ, ಮಾಧ್ವ, ಶೈವ, ವೀರಶೈವಗಳ ನಡುವಿನ ಸಮನ್ವಯಕಾರರಂತೆ ಕೃತಿಗಳನ್ನು ರಚಿಸಿದ್ದು ಹಾಗೂ ಕುಲ, ಜಾತಿ, ಮತ ಪಂಥಗಳ ಗಡಿಗಳನ್ನು ದಾಟಿ ವಿಚಾರ ಮಾಡಿದ್ದು; ಇಂದಿನ ಭಾರತದ ಹಾಗೂ ವಿಶ್ವದ ಜ್ವಲಂತ ಸಮಸ್ಯೆಯಾದ ಜಾತೀಯತೆಗೆ ನಾಲ್ಕುನೂರು ವರ್ಷಗಳ ಹಿಂದೆಯೇ ಪರಿಹಾರ ಕಂಡುಕೊಂಡ ದಾಸರು ತಮ್ಮ ಕೀರ್ತನೆ, ಹಾಡು ಹಾಗೂ ಉಗಾಭೋಗಗಳಲ್ಲಿ ಮತೀಯವಾದಿಗಳನ್ನು ತರಾಟೆಗೆ ತೆಗೆದುಕೊಂಡರು. ಈ ಬಗೆಗಿನ ಅವರ ಕೃತಿಗಳಲ್ಲಿಯ ಕೆಲ ಉದ್ಧೃತ ಭಾಗಗಳನ್ನು ನೋಡೋಣ:

**ಕುಲಕುಲಕುಲವೆನ್ನು ತಿಹರು**

**ಕುಲವ್ಯಾವದು ಸತ್ಯಸುಖವುಳ್ಳ ಜನರಿಗೆ...**

**ಆತ್ಮ ಯಾವ ಕುಲ ಜೀವ ಯಾವ ಕುಲ**

**ತತ್ವೇಂದ್ರಿಯಂಗಳ ಕುಲ ಪೇಳಿರಯ್ಯ**

**(ಜನಪ್ರಿಯ ಕನಕ ಸಂ.ಪು. 25)**

**ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ**

**ಕುಲದ ನೆಲೆಯನೇನಾದರೂ ಬಲ್ಲಿರ....**

**ಜಲವೇ ಸಕಲ ಕುಲಕ್ಕೆ ತಾಯಲ್ಲವೆ**

**ಜಲದ ಕುಲವೇನಾದರೂ ಬಲ್ಲಿರ (ಅದೇ ಪುಟ 26)**

**ಯಾತರವನೆಂದುಸಿರಲಿ ಜಗ**

**ನ್ನಾಥ ಮಾಡಿದನೊಂದನರರೂಪವಯ್ಯ**

**ಕರುಳ ಖಂಡ ನರನಾರುವ ಚ**

**ರ್ಮಮೋಹಿತ ಪಂಜರ ಹುರುಳಿಲ್ಲವೋ**

**ನರರುಹೊತ್ತು ತಿರುಗುವಂಥ**

**ತಿರುಕ ತನಗಿನ್ಯಾತರ ಕುಲವಯ್ಯ**

**ಹಚ್ಯಡದ ಮೇಲೆ ಲಕ್ಷಣವಿಟ್ಟಂತೆ**

**ಹೆಚ್ಚು ಕಡಿಮೆ ಎಂದು ಹೆಣಗಾಡುತ್ತ**

**ನಿಚ್ಚ ಕಾಗಿನೆಲೆಯಾದಿ ಕೇಶವನ**

**ಹುಚ್ಚುದಾಸಗೆ ಇನ್ಯಾತರ ಕುಲವಯ್ಯ**

**ತೀರ್ಥವನು ಪಿಡಿದರೆಲ್ಲ ತಿರುನಾಮಧಾರಿಗಳೆ ಜನ್ಮ**

**ಸಾರ್ಥಕವಿಲ್ಲದವರೆಲ್ಲ ಭಾಗವತರೆ**

**ಲಿಂಗಾಂಗದೊಳಗಿರುವ ಚಿನುಮಯವ ತಿಳಿಯದೆ**

**ಅಂಗಲಿಂಗದ ಸೆಲೆಯ ಗುರುತರಿಯದೆ**

**ಜಂಗಮ ಸ್ಥಾವರದ ಹೊಲಬನರಿಯದ ಇಂಥ**

**ಭಂಗಿ ಮುಕ್ಕುಗಳೆಲ್ಲ ಲಿಂಗವಂತರು ಅಹುದೆ ?**

**ಅಲ್ಲಾ ಖುದಾ ಎಂಬ ಅರ್ಥವನ್ನು ಅರಿಯದೆ**

**ಮುಲ್ಲಾ ಶಾಸ್ತ್ರದ ನೆಲೆಯ ಗುರುತರಿಯದೆ**

**ಕಳ್ಳಕೂಗಸೆ ಕೂಡಿ ಬೊಗಳಿ ಬಾಯ್ದಿರೆವಂಥ**

**ಕಳ್ಳರಿಗೆ ತಾ ವೀರಸ್ವರ್ಗ ದೊರಕುವುದೆ ? (ಅದೇ ಪುಟ ೭೨)**

ಈ ಮೇಲಿನ ಹಾಡನ್ನು ಗಮನಿಸಿದರೆ ಕನಕದಾಸರು ಕೇವಲ ಹಿಂದೂ ಧರ್ಮದ ಬಗ್ಗೆ ಅಲ್ಲದೇ ಇಸ್ಲಾಮ್ ಧರ್ಮದ ಬಗ್ಗೆಯೂ ತಮ್ಮ ಆದರ ತೋರಿಸಿ, ಸರ್ವಧರ್ಮ ಸಹಿಷ್ಣುಗಳಾಗಿ

ನಮಗೆ ಗೋಚರಿಸುತ್ತಾರೆ. ಬಹುಶಃ ಈ ಕಾರಣಕ್ಕಾಗಿಯೇ ನಾವು ಅವರನ್ನು ವಿರಳರಲ್ಲಿ ವಿರಳ ಮಹಾನ್ ಸಂತರೆಂದು ಕರೆಯಬೇಕಾಗಿದೆ. ಸ್ವತಃ ಕಡಿಮೆ ಕುಲವೊಂದರಲ್ಲಿ ಜನಿಸಿ (ಅಂದಾಜು ಕ್ರಿ.ಶ.೧೪೮೮) ಸಮಾಜದಲ್ಲಿಯ ಅವಮಾನ ಅಪಮಾನ ಜರಿಕೆಗಳನ್ನು ಅನುಭವಿಸಿ ಅದನ್ನೇ ತಮ್ಮ ಕೃತಿಗಳಲ್ಲಿ ಪ್ರತಿರೋದಿಸಿದ್ದಾರೆ. ಅಪಹಾಸ್ಯಗೈದಿದ್ದಾರೆ.

ದಾಸ ಪಂಥೀಯರು ಮುಖ್ಯವಾಗಿ ತಮ್ಮ ರಚನೆಗಳನ್ನೆಲ್ಲ, ದೇವರ ಸ್ಮರಣೆ ಹಾಗೂ ಆತನನ್ನು ಕಾಣುವ ಉತ್ಕಟೇಚ್ಛೆ ಮತ್ತು ಭಕ್ತಿಯ ವರ್ಣನೆಗಳಿಗಾಗಿಯೇ ಮುಡುಪಾಗಿಸಿದ್ದರೆ ಕನಕದಾಸರಂತೂ ಭಕ್ತಿಯ ಮಹಿಮೆಯ ಮಹಾಸಾಗರದ ದರ್ಶನವನ್ನೇ ನಮಗೆ ಮಾಡಿಸಿದ್ದಾರೆ. ಎಲ್ಲವೂ ದೇವರಿಗೇ ಮೀಸಲು ಎಲ್ಲರನ್ನು ಸಲಹುವನು ದೇವರೇ ಆದ್ದರಿಂದ ನಮ್ಮನ್ನು ನಾವು ದೇವರಿಗೆ ಅರ್ಪಿಸಿಕೊಳ್ಳಬೇಕೆಂದು ಸಮರ್ಪಣಾ ಮನೋಭಾವನೆಯ ಅಭಿವ್ಯಕ್ತಿಯನ್ನು ಅವರ ಅನೇಕ ಪದಗಳಲ್ಲಿ ಕಾಣಬಹುದಾಗಿದೆ.

**ಉದಾ:- ದಾಸ ದಾಸರ ಮನೆಯ ದಾಸಿಯರ ಮಗ ನಾನು**

**ಸಾಸಿರ ನಾಮದೊಡೆಯ ರಂಗಯ್ಯನ ಮನೆಯ**

**ತನಗೆ ದೇಹಾನುಬಂಧುಗಳೇ ಬಂಧುಗಳೆಂದು**

**ಮನವಿ ನಿಶ್ಚಯವಾಗಿ ನಂಬಬೇಡ**

**ಘನಕೃಪಾನಿಧಿ ಕಾಗಿನೆಲೆಯಾದಿ ಕೇಶವನ**

**ಅನುದಿನ ನಂಬಿದವಗಿಹಪರದಿ ಸುಖವು**

**(ಜ.ಕ.ಸಂ.ಪು-೧೨)**

**ತಲ್ಲಣಿಸದಿರು ಕಂಡ್ಯ ತಾಳು ಮನವೆ**

**ಎಲ್ಲರನು ಸಲಹುವನು ಇದಕ್ಕೆ ಸಂಶಯವಿಲ್ಲ.**

**ಕಲ್ಲಿನಲ್ಲಿ ಹುಟ್ಟಿ ತಾ ಕೂಗುವ ಕಪ್ಪೆಗೆ**

**ಅಲ್ಲಿ ಆಹಾರವನ್ನು ತಂದೀಯುವವರ್ಯಾರೂ**

**ಬಲ್ಲಿದನು ಕಾಗಿನೆಲೆಯಾದಿ ಕೇಶವರಾಯ**

**ಎಲ್ಲರನು ಸಲಹುವನು ಇದಕ್ಕೆ ಸಂಶಯವಿಲ್ಲ.**

**(ಜ.ಕ.ಸ.ಪು-೧೪)**

**ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೆ**

**ಕೂಗಿದರೂ ಧ್ವನಿಕೇಳಲಿಲ್ಲವೇ ನರಹರಿಯೇ**

ಈ ಕೊನೆಯ ಹಾಡನ್ನು ದಾಸರು ಹಾಡಿದಾಗ ಉಡುಪಿಯ ಶ್ರೀಕೃಷ್ಣನೇ ಹಿಂದು ಮುಂದಾಗಿ ತಿರುಗಿ ಗೋಡೆಯೊಡೆದು ಅಲ್ಲಿ ಕಿಂಡಿಯಾಗಿ ಕನಕರಿಗೆ ದರ್ಶನವಿತ್ತನೆಂದೂ

ಪ್ರತೀತಿ ಹಾಗೂ ಇಂದಿಗೂ ಅಲ್ಲಿ ಅದನ್ನು ಪ್ರತ್ಯಕ್ಷ ಕಾಣಬಹುದಾಗಿದೆ. ಇಲ್ಲಿ ಬೇರೇನೋ ಅಂಬೋಣವಿದ್ದರೂ ಕನಕದಾಸರ ಭಕ್ತಿಯ ಶಕ್ತಿ ಮಾತ್ರ ಅಪಾರ ಹಾಗೂ ಅಗತ್ಯವಾದದ್ದೆಂಬುದರಲ್ಲಿ ಸಂಶಯವೇಯಿಲ್ಲ. ಈ ಭಕ್ತಿಯ ಉತ್ಕಟತೆ ಎಷ್ಟಿದೆಯೆಂದರೆ ದೇವರಿಗೇ ಸವಾಲೆಸೆಯುವ ದಿಟ್ಟತನವನ್ನೂ ಕನಕರ ಈ ಕೆಳಗಿನ ಹಾಡಿನಲ್ಲಿ ಕಾಣಬಹುದಾಗಿದೆ.

**ಆರು ಬದುಕಿದರಯ್ಯ ಹರಿ ನಿನ್ನ ನಂಬಿ**

**ತೋರು ಈ ಧರೆಯೊಳಗೆ ಒಬ್ಬರನೂ ಕಾಣೆ ಕೃಷ್ಣ**

ಮೇಲ್ನೋಟಕ್ಕೆ ನಾಸ್ತಿಕತೆ ಎನಿಸಿದರೂ ಇದೊಂದು ಬಗೆಯ ನಿಂದಾಸ್ತುತಿ ಎಂದೇ ಹೇಳಬಹುದು. ಅಂದರೆ ಅನ್ಯಾಯವಾದರೆ ದೇವರನ್ನೂ ತರಾಟೆಗೆ ತೆಗೆದುಕೊಳ್ಳಬಲ್ಲ ಎಂಟೆದೆಯ ಭಂಟ ಕನಕದಾಸರೆನ್ನಬಹುದು. ಇದು ಅವರ ಉಪದೇಶದ ಸಾರಕೂಡಾ

ಜ್ಞಾನವೇ ಬಲವೆಂಬುದನ್ನು ಮನಗಂಡ ಕನಕರು ಜ್ಞಾನ ಹಾಗೂ ಜ್ಞಾನವಂತರ ಸಂಗವೇ ಶ್ರೇಷ್ಠವೆಂದು ತಿಳಿಸುತ್ತಾರೆ:

**ನಾನು ನೀನು ಎನ್ನದಿರೊ ಹೀನ ಮಾನವ**

**ಜ್ಞಾನದಿಂದ ನಿನ್ನ ನೀನ್ ತಿಳಿದು ನೋಡಲೊ**

**(ಅದೇ ಪುಟ-54)**

**ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ**

**ನಿತ್ಯ ಜ್ಞಾನಿಯಾದಮೇಲೆ ಚಿಂತೆಯಾತಕೆ...**

**ಜ್ಞಾನವಿಲ್ಲದೆ ನೂರುಕಾಲ ಬದುಕಲ್ಯಾತಕೆ**

**(ಅದೇ ಪುಟ-35)**

**ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂತ**

**ಸುಜ್ಞಾನಿಗಳ ಕೂಡ ಜಗಳವೇ ಲೇಸು**

**(ಅದೇ ಪುಟ-52)**

ಹೀಗೆ ಜ್ಞಾನದ ಮಹಿಮೆಯನ್ನು ಕೊಂಡಾಡುತ್ತ ತಮ್ಮ ಅಪರಿಮಿತ ಜ್ಞಾನದ ಬಲದಿಂದಲೇ ತಮ್ಮ ಶ್ರೇಷ್ಠತೆಯನ್ನು ರುಜುವಾತುಮಾಡುತ್ತಾರೆ.

ಜೀವನದಲ್ಲಿ, ಭಕ್ತಿಯಲ್ಲಿ, ಆರಾಧನೆಯಲ್ಲಿ ಯಾವ ಅಡಂಬರ ಬೂಟಾಟಿಕೆ ಬೇಡವೆಂದು ಸಾರುವ ದಾಸರು ತಮ್ಮ ತ್ಯಾಗಮಯ ನಿರಾಡಂಬರ ಜೀವನ ನಡೆಯಿಂದ ಪ್ರಾತಃ ಸ್ಮರಣೀಯರಾಗುತ್ತಾರೆ, ನೋಡಿ:

**ಎಳ್ಳು ಕಾಳಿನಷ್ಟು ಭಕುತಿಯನ್ನೊಳಗಿಲ್ಲ**

**ಕಳ್ಳರಿಗೆ ಕಳ್ಳನಂತೆ ಬೆಳ್ಳಕ್ಕಿಯಂದದಿ ಡಂಭ**

ಕನಕದಾಸರನ್ನು ಎಷ್ಟೇ ಸಂಪ್ರದಾಯವಾದಿಗಳೆಂದು ವಾದಿಸಿದರೂ, ಅವರು ತಮ್ಮ ಸ್ವತಂತ್ರ ಮನೋಭಾವನೆಯಿಂದ ಎಂದೂ ದೂರ ಸರಿಯುವುದಿಲ್ಲ. ಹೋಮಹವನಗಳ ಬಗ್ಗೆ:

**ನೇಮವಿಲ್ಲದ ಹೋಮವೇತಕಯ್ಯ ರಾಮ**

**ನಾಮವಿಲ್ಲದೇ ಮತ್ತೆ ನಮಗೆ ಬೇರೊಂದೆ ?**

ಅಂದರೆ ಯೋಗ್ಯ ನಡವಳಿಕೆಯಿಲ್ಲದ ಹೋಮ ವ್ಯರ್ಥವೆಂದು ಸಾರುತ್ತಾರೆ. ಅದರಂತೆಯೇ 'ಧರಣಿಯ ಕಲ್ಲಿಗೆ ಶರಣೆಂದು ಪೂಜೆಯ ಮಾಡಬಾರದು" ಎಂದೂ ಘೋಷಿಸುತ್ತಾರೆ: ಮೂರ್ತಿ ಪೂಜೆಯ ಖಂಡಿಸುತ್ತಾರೆ.

ಕನಕದಾಸರ ಇನ್ನೊಂದು ವೈಶಿಷ್ಟವೆಂದರೆ ಏಕದೇವೋಪಾಸನ ಹಾಗೂ ಅಹಿಂಸಾತ್ಮಕವಾದ, ಇವನ್ನು ಈ ಕೆಳಗಿನ ಅವರ ಮಾತುಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದು;

**ಏಕನಾತಿ ಎಲ್ಲಮ್ಮ ಮಾರಿ ದುರ್ಗಿಯ ಚೌಡಿ**

**ಅಕ್ಕರೆಯಿಂದಲಿ ಪೂಜೆ ಮಾಡಬೇಕೆ?**

**ಸಂಭ್ರಮದಲ್ಲೊಂದ್ವೊತ್ತು ನೇಮದಲಿದ್ದು**

**ತಂಬಿಟ್ಟನಾ ದೀಪ ಹೊರಲೇತಕೆ**

**ಕೊಂಬು ಹೋತು ಕುರಿಕೋಣನಾ ಬಲಿಗೊಂಬ**

**ದೊಂಬಿ ದೈವಗಳ ಭಜಿಸದಿರು ಮನವೆ**

**ಚಿಗುರೆಲೆ ಬೇವಿನಸೊಪ್ಪು ಸಾರಸೀರೆ**

**ಬಗೆಬಗೆಯಿಂದ ಶೃಂಗಾರವ ಮಾಡಿ**

**ನೆಗೆನೆಗೆದು ಆಡಲು ಕುಡಿಯಲು ನಿನಗಿನ್ನು**

**ಮಿಗಿಲಾದ ಮುಕುತಿಯುಂಟೆ ಹುಚ್ಚ ಮನವೆ**

ಕನಕದಾಸರು ಭಕ್ತಿಭಾವದಿಂದ ಆಧ್ಯಾತ್ಮ ಸಿದ್ದಿಗಾಗಿ ಕೀರ್ತನೆ, ಹಾಡುಗಳನ್ನು ಬರೆದರೂ ಅವೆಲ್ಲ ತಮ್ಮ ಸ್ವಯಂ ಕಾಂತಿಯಿಂದ ಕಾವ್ಯಗಳಾಗಿ ಮಿಂಚಿದ್ದು ಅವರ ಕಾವ್ಯ ರಚನಾ ಸಾಮಾರ್ಥ್ಯವನ್ನು ಎತ್ತಿ ತೋರಿಸುತ್ತವೆ. ಇದರಿಂದಾಗಿ ಅವರು ಒಬ್ಬ ಶ್ರೇಷ್ಠ ಕವಿಯಾಗಿಯೂ ಗೋಚರಿಸುತ್ತಾರೆ. ಬಹುಶಃ ತಮ್ಮ ಕುಲಹಿಡಿದು ಟೀಕಿಸಿದವರಿಗೆ ಉತ್ತರ ಕೊಡಲೋ ಎಂಬಂತೆ, ಸ್ವತಃ ತಾವು ಒಂದು ಅವಿದ್ಯಾವಂತರೇ ಅಧಿಕವಾಗಿದ್ದ ಜನಸಮುದಾಯದಿಂದ ಬಂದಿದ್ದರೂ, ಸರಳವಾಗಿ ಹೇಳಬಹುದಾಗಿದ್ದ "ಮೋಹನ ತರಂಗಿಣಿಯನ್ನು ಅಷ್ಟದಶ ವರ್ಣನೆಯಿಂದ ಅಲಂಕರಿಸಿ ಕ್ಲಿಷ್ಟಕರವಾಗಿ ಮಾಡಿದರೇನೋ ಅನ್ನಿಸುತ್ತದೆ. ಈ ದಿಶೆಯಲ್ಲಿ ಅವರ "ಮುಂಡಿಗೆ"ಗಳನ್ನು ಉದಾಹರಿಸಬಹುದಾಗಿದೆ. ಇವಂತೂ ಜ್ಞಾನಿಗಳಾಗಿದ್ದವರೂ ಸಹಿತ ಸರಳವಾಗಿ ಅರ್ಥಮಾಡಿಕೊಳ್ಳದಂತಹ ಕಠಿಣ ಒಗಟಿನ ರೂಪಗಳಾಗಿವೆ. ಬೇರೆಲ್ಲ ದಾಸರವುಗಳಿಗಿಂತ ಜಟಿಲವಾಗಿ ಅವರಿಗೂ ಎಸೆದ

ಸವಾಲಿನಂತಿದ್ದವು. ಆದ್ದರಿಂದಲೇ "ಕನಕನನ್ನು ಕೆಣಕಬೇಡ, ಕೆಣಕಿ ತಿಣುಕಬೇಡ" ಎಂಬ ಗಾದೆ ಮಾತು ಪ್ರಚಲಿತದಲ್ಲಿವೆ.

ಆದರೆ ಕನಕದಾಸರ ಬಹುತೇಕ ಇತರ ರಚನೆಗಳು ಜನಸಾಮಾನ್ಯರಿಗೆ ತಿಳಿಯುವಂತೆ ಸಂಸ್ಕೃತದ ಲೇಪನ ಅಷ್ಟಾಗಿ ಇರದ, ಆಡು ಭಾಷಾ ಪದ ಪ್ರಯೋಗಗಳೊಂದಿಗೆ ಮೂಡಿಬಂದಿವೆ. 'ರಾಮಧಾನ್ಯ ಚರಿತೆ'ಯಲ್ಲಂತೂ ರಾಗಿ ಹಾಗೂ ಭತ್ತದ ಹೋಲಿಕೆಯೊಂದಿಗೇನೆ ಕಥೆ ಹೆಣೆಯಲಾಗಿದೆ. ಉಚ್ಚಕುಲದ ಭತ್ತ (ಅಕ್ಕಿ)ಗಿಂತ ದುಡಿಯುವ ವರ್ಗದವರ ರಾಗಿ ಮೇಲೆಂದು ಸಾರಲಾಗಿದೆ. ಕುರಿ, ಟಗರು, ಗಜುಗ, ಹೇವ ಇತ್ಯಾದಿ ಜನಪದ ಶಬ್ದಗಳನ್ನೂ ಉಪಯೋಗಿಸಲಾಗಿದೆ.

"ಯಾವ ಕವಿಯ ಕೃತಿಗಳು ಶತಶತಮಾನಗಳ ತನಕ ಜನತೆಯ ಬದುಕಿಗೆ ಬೆಳಕಾಗಿ ಜೀವಸತ್ವವಾಗಿ ಕಾಮಧೇನುವಾಗಿ ಉಳಿಯುತ್ತವೆಯೋ ಅವನೇ ಅಮರ ಕವಿ, ಕನಕದಾಸರು ಅಂಥ ಕವಿಗಳ ಗುಂಪಿಗೆ ಸೇರಿದವರು" ಎಂದು ಡಾ: ರಂ.ಶ್ರೀ ಮುಗಳಿಯವರು ವರ್ಣಿಸಿದ್ದಾರೆ ಹಾಗೂ ಏಕಕಾಲದಲ್ಲಿ ಕೀರ್ತನಕಾರರೂ ಕವಿಗಳೂ ಆದ ದಾಸರೆಂದರೆ ಕನಕದಾಸರೊಬ್ಬರೇ ಎಂದು ಡಾ.ದೇ. ಜವರೇಗೌಡ ಅವರು ಅಭಿಪ್ರಾಯಪಟ್ಟಿದ್ದಾರೆ. ಇದಲ್ಲದೆ "ಕನಕದಾಸರು ಕವಿ ಸಂತರ ಸಂಗಮ ಅವರ ಬೋಧೆ ಕಾವ್ಯಮಯವಾಗಿದೆ: ಅವರ ಕಾವ್ಯದಲ್ಲಿ ಭೋದನೆಯೂ ಇದೆ. ಅಸ್ತವ್ಯಸ್ತವಾಗಿರುವ ನಮ್ಮ ಸಮಾಜ ಜೀವನಕ್ಕೆ ಅವುಗಳಲ್ಲಿ ಒಂದು ಮಾರ್ಗ, ನೆಮ್ಮದಿ, ಸಮಾಧಾನಗಳು ಕಾಣಿಸುತ್ತವೆ. ಇದೇ ಪ್ರಸ್ತುತತೆ" ಎಂದು ಡಾ: ಹಾ.ಮಾ. ನಾಯಕ ಅವರು ಕನಕರನ್ನು ಬಣ್ಣಿಸುತ್ತಾರೆ (ಕನಕ ಕಿರಣ, ಮೆಚ್ಚುಮಾತು) ಡಾ: ಜಿ.ಎಸ್. ಶಿವರುದ್ರಪ್ಪನವರಂತೂ "ಹಾಗೆ ನೋಡಿದರೆ ಪುರಂದರದಾಸರ ಕೀರ್ತನೆಗಳಿಗಿಂತ ಕನಕದಾಸರ ಕೀರ್ತನೆಗಳ ಕಾವ್ಯಗುಣ ಒಂದು ಕೈ ಮಿಗಿಲಾಗಿಯೇ ಇರುವಂತೆ ತೋರುತ್ತದೆ" ಎಂದು ವಿಶ್ಲೇಷಿಸಿದ್ದಾರೆ.

"ಮುಂಡಿಗೆ"ಗಳನ್ನು ಕೃತಿ ಚೌಕಟ್ಟಿನಲ್ಲಿ ಪ್ರಯೋಗಿಸಿದ್ದು ಕನ್ನಡ ಸಾಹಿತ್ಯಕ್ಕೆ ಕನಕರು ಕೊಟ್ಟ ಅಪೂರ್ವ ಕೊಡುಗೆ ಎಂದೇ ಹೇಳಬಹುದು. ಈ ಹೊಸ ಪ್ರಕಾರವನ್ನು ಭಾರತೀಯ ಸಂಗೀತದಲ್ಲಿ ಪ್ರವೇಶ ಮಾಡಿಸಿದ ಯಶಸ್ಸು ಕನಕದಾಸರಿಗೇ ಸಲ್ಲಬೇಕು, ಎಂದು ಡಾ: ರಾ. ಸತ್ಯನಾರಾಯಣ ವಿವರಿಸುತ್ತಾರೆ (ಕನಕ ಕಿರಣ ಪುಟ 289). ಆದರೆ ಇಂತಹ ಸಾಹಿತ್ಯ ಕನ್ನಡಕ್ಕೆ ಮಾತ್ರ ಹೊಸತೇನೂ ಅಲ್ಲವೆಂದೂ, ಹನ್ನೆರಡನೆ ಶತಮಾನದಲ್ಲಿಯೇ ಅಲ್ಲಮ ಪ್ರಭುವಿನ ಬೆಡಗಿನ ವಚನಗಳಲ್ಲಿ ಇಂತಹ ಉದಾಹರಣೆಗಳನ್ನು ಕಾಣಬಹುದಾಗಿದೆ ಎಂದೂ ಅವರು ಹಾಗೂ ಜಿ.ಎಸ್.ಎಸ್ ಮತ್ತು ಎನ್.ಎಸ್. ತಾರಾನಾಥ ಅವರು ಅಭಿಪ್ರಾಯಪಡುತ್ತಾರೆ.

ಒಟ್ಟಿನಲ್ಲಿ ಕನಕದಾಸರು ಒಬ್ಬ ಶ್ರೇಷ್ಠ ಸಂತ, ಅಪ್ರತಿಮ ಕೀರ್ತನಕಾರ, ಉತ್ಕೃಷ್ಟಕವಿ, ದಾರ್ಶನಿಕ ಹೀಗೆ ಹಲವಾರು ಮುಖಗಳಲ್ಲಿ ನಮಗೆ ಗೋಚರಿಸುತ್ತಾರೆ. ಸನಾತನ ಧರ್ಮದ ತಳಹದಿಯ ಮೇಲೆ ನಿಂತೂ ಸಮಾಜವನ್ನು ಪ್ರಾಮಾಣಿಕವಾಗಿ ವಿಡಂಬಿಸುವ ದಿಟ್ಟತನ ತೋರಿ, ಯಾವ ಮತವರ್ಗಕ್ಕೂ ವಿಧ್ಯುಕ್ತವಾಗಿ ಸೇರಿಕೊಳ್ಳದೇ, ಧರ್ಮ ಸಮನ್ವಯತೆಗೆ ಸಾಕ್ಷಿಯಾಗಿ ದೇವರ ಸಾಕ್ಷಾತ್ಕಾರಕ್ಕೆ ಅಪರೂಪದ ಮಾರ್ಗತೋರಿದ ದಾಸವರೇಣ್ಯರೆನಿಸಿದ್ದೇ ಅವರ ಜೀವನಸಿದ್ಧಿ ಎನ್ನಬಹುದು.

**ಗ್ರಂಥ ಋಣ:-**

**1. ಜನಪ್ರಿಯ ಕನಕ ಸಂಪುಟಗಳು**

**2. ಕನಕ ಕಿರಣ**

**3. ಕನಕ ಸಾಹಿತ್ಯ ದರ್ಶನ**

**4. ಕನಕಸಿರಿ.**

# ಕೃತಕತೆ

"ಮ್ಯಾನ್ ಈಜ್ ಬಾರ್ನ್ ಫ್ರೀ ಅಂಡ್ ಬೌಂಡ ಎವರಿ ವೇರ್' ಎನ್ನುವ ಮಾತನ್ನು ರುಸ್ಸೊ ಬಹಳ ಹಿಂದೆಯೇ ಹೇಳಿದ್ದಾನೆ. ಹುಟ್ಟುವಾಗ ಮಾನವ ಈ ನಿಸರ್ಗದಷ್ಟೇ ಸಹಜ ಹಾಗೂ ಸರಳವಾಗಿರುತ್ತಾನೆ. ಬೆಳೆಯುತ್ತಾ ಬೆಳೆಯುತ್ತಾ ಅವನ ಹಾವಭಾವ, ಆಚಾರ ವಿಚಾರ ಉಡಿಗೆ, ತೊಡಿಗೆ ಆಹಾರ ವಿಹಾರಗಳಲ್ಲಿ ಕೃತ್ರಿಮತೆ ಇಣಕಿ ಹಾಕುತ್ತದೆ. ಕೆಲವೊಂದು ಸಾರಿ ಇದು ಎಷ್ಟರಮಟ್ಟಿಗೆ ಹೋಗುತ್ತದೆಂದರೆ ಒಬ್ಬನ ಮೂಲ ವ್ಯಕ್ತಿತ್ವಕ್ಕೂ ಹಾಗೂ ಆತ ಕೃತ್ರಿಮವಾಗಿ ಅಳವಡಿಸಿಕೊಂಡದ್ದಕ್ಕೂ ಅಜಗಜಾಂತರ ವ್ಯತ್ಯಾಸವೆನಿಸಿ ನಮಗೆ ಅವನ ಸಮಗ್ರ ವ್ಯಕ್ತಿತ್ವದ ಬಗ್ಗೆ ಸಂಶಯವೇ ಬರುತ್ತದೆ.

ಹಳ್ಳಿಯಲ್ಲಿ ಹುಟ್ಟಿ ಬೆಳೆದು ನಂತರ ಒಮ್ಮೆಲೆ ಆಗರ್ಭ ಶ್ರೀಮಂತ ಹಾಗೂ ಅತೀವವಾಗಿ ಮುಂದುವರೆದ ಆಧುನಿಕ ಕನ್ಯೆಯ ಕೈಹಿಡಿದ ಮುಗ್ಧಯುವಕ ತನ್ನ ಸಹಜತೆಯನ್ನು ಮರೆತು ತನಗೆ ಹೊಸತಾದ ಈ ಪರಿಸರದಲ್ಲಿ ಹೊಂದಿಕೊಳ್ಳಲು ಹಾಗೂ ಒಂದಾಗಲು ಪಡುವ ಪಾಡು ಅಷ್ಟಿಷ್ಟಲ್ಲ. ಆದರೆ, ಕೆಲ ಗಟ್ಟಿಗರು ಯಾವುದೇ ಕೃತ್ರಿಮವಾದ ಆಚಾರವಿಚಾರಗಳಿಗೆ ಮಾರು ಹೋಗದೆ ತಮ್ಮ ಸ್ವಂತಿಕೆಯನ್ನು ಅಂದರೆ ಸಹಜತೆ ಹಾಗೂ ಸರಳತೆಯನ್ನು ಉಳಿಸಿ-ಬೆಳೆಸಿಕೊಂಡು ಬರುತ್ತಾರೆ. ಮಾತನಾಡುವಾಗ ವಾಕ್ಯಕ್ಕೊಮ್ಮೆ ಸಾರಿ ಅಥವಾ ಪ್ಲೀಜ್ ಅನ್ನುವದಾಗಲಿ, ಗೆಳೆತನದಲ್ಲಿ ಭಾವುಕತೆ ಹಾಗೂ ಪರಸ್ಪರ ಸಂಬಂಧಕ್ಕಿಂತ ಕೇವಲ ನಯವಾದ ಮಾತಿನಿಂದ, ಅತಿಯಾದ ಅಟಿಕೇಟ್ಸ್ ಮ್ಯಾನರ್ಸ್‌ಗಳಿಂದ ವರ್ತಿಸಿದರೆ ಗೆಳೆತನದ ಕೊಂಡಿಯೇ ಸಿಥಿಲಗೊಳ್ಳುವ ಸಂಭವವಿರುತ್ತದೆ. ಗೆಳೆಯ ಗೆಳೆಯರ ನಡುವೆಯೇ ಆಗಲಿ, ಸಹೋದರ ಸಹೋದರರ ನಡುವೆಯೇ ಆಗಲಿ, ಗಂಡ ಹೆಂಡಿರ ನಡುವೆಯೇ ಆಗಲಿ, ನಾವು ಎಷ್ಟೊಂದು ಆಕರ್ಷಕವಾಗಿ ಮಾತನಾಡುತ್ತೇವೆ ಅಥವಾ ಸೊಗಸಾಗಿ ಹಾವಾಭಾವ ಮಾಡುತ್ತೇವೆ ಎನ್ನುವುದಕ್ಕಿಂತ, ನಮಗೆ ಪರಸ್ಪರ ಪ್ರೀತಿ ವಿಶ್ವಾಸ, ಗೌರವ ಇವೆಯೇ ಎನ್ನುವುದು ಮುಖ್ಯ.

ಮನುಷ್ಯ ಸಿನೇಮಾ ನಾಟಕ ನೋಡಿಯೋ, ಕಥೆ ಕಾದಂಬರಿ ಓದಿಯೊ, ವಿದೇಶಿಯರ ಬಗ್ಗೆ ಕೇಳಿ ತಿಳಿದೋ, ಪ್ರವಾಸ ಮಾಡಿಯೊ ಅನೇಕ ಹೊಸತುಗಳನ್ನು ಕಲಿಯುತ್ತಾನೆ. ಅಲ್ಲಿ ಬರುವ ನಾಯಕ ನಾಯಕಿಯರುಗಳು ಕ್ಷಣ ಕ್ಷಣಕ್ಕೆ ಉಸುರುವ ವಾಕ್ಯಗಳು, ಮಾಡುವ ಚಲನವಲನಗಳು ಇವನ ಮೇಲೆ ಬಹಳಷ್ಟು ಪರಿಣಾಮ ಬೀರುತ್ತವೆ. ಅದರಿಂದ

ಆಕರ್ಷಿತನಾದ ಈತ ಅದನ್ನೇ ಅನುಕರಿಸಲು ಹೋಗಿ ತನ್ನ ಮೂಲ ವ್ಯಕ್ತಿತ್ವವನ್ನೂ ಮರೆತು ಅನೇಕ ಸಾರೆ ಅಪಹಾಸ್ಯಕ್ಕೀಡಾಗುತ್ತಾನೆ. ವಿದೇಶದಿಂದ ಮರಳಿ ಬಂದಾತ ತನ್ನ ಕೂಡುವಿಕೆ, ನಿಲ್ಲುವಿಕೆ, ನಡೆಯುವಿಕೆ, ಮಾತನಾಡುವಿಕೆ, ಕೊನೆಗೆ ನೋಡುವಿಕೆಯಲ್ಲಿಯೂ ಅತ್ಯಾಧುನಿಕತೆಯನ್ನು ವ್ಯಕ್ತಪಡಿಸಲು ಹೋಗಿ 'ಕೃತ್ರಿಮ' ಗೊಂಬೆ ಅನಿಸುತ್ತಾನೆ.

ಪಾಠ ಮಾಡುವ ಪ್ರಾಧ್ಯಾಪಕ ವಿಷಯವನ್ನು ಎಷ್ಟೊಂದು ಆಳವಾಗಿ ಅಭ್ಯಸಿಸಿ ಅದನ್ನು ಎಷ್ಟೊಂದು ಮನಮುಟ್ಟುವಂತೆ ವಿದ್ಯಾರ್ಥಿಗಳಿಗೆ ಹೇಳುತ್ತಾನೆ ಎನ್ನುವುದು ಮುಖ್ಯ. ಇದಲ್ಲದೆ, ಆತ ಬರೀ ತನ್ನ ಕೈಕಾಲುಗಳನ್ನು ವನಪು ವೈಯಾರದಿಂದ ಅಲುಗಾಡಿಸುತ್ತಾ ಮತ್ತೆ ತನ್ನ ಕೈಗಳ ವಿನ್ಯಾಸವನ್ನು ತಾನೇ ನೋಡುತ್ತಾ ಮೈಮರೆತು ವಿಷಯಾಂತರ ಮಾಡುವ ಅನೇಕ ಉದಾಹರಣೆ ನಾವು ನೋಡಿದ್ದೇವೆ. ಸಂದರ್ಶಿಸಲು ಬಂದ ಹಾಗೂ ಬರುವ ಸಾರ್ವಜನಿಕರಿಗೆ ಅಧಿಕಾರಿಯಾದವನು ಅವರ ಕೆಲಸವನ್ನು ಎಷ್ಟು ಬೇಗ ಹಾಗೂ ಸಮರ್ಥವಾಗಿ ಮಾಡಿಕೊಡುತ್ತಾನೆ ಎನ್ನುವುದು ಮುಖ್ಯ. ಅದಬಿಟ್ಟು ಬರುವಾತ ಸರಿಯಾಗಿ ಒಳಬರಲಿಲ್ಲ ಬೇಕಾದ ಪ್ರಾರ್ಮ್ಯಾಲಿಟೀಜಿಗಳನ್ನು ಅಬ್ಸರ್ವ ಮಾಡಲಿಲ್ಲವೆಂಬ ವ್ಯರ್ಥ ಕಾರಣಕ್ಕಾಗಿ ಬಂದವನ ಮೇಲೆ ರೇಗುವ ಅನೇಕ ಅಧಿಕಾರಿಗಳನ್ನೂ ನೋಡುತ್ತೇವೆ. ಜೀವನದ ಪ್ರತಿ ಹೆಜ್ಜೆಯಲ್ಲಿಯೂ ಕೃತ್ರಿಮತೆ ತಾಂಡವವಾಡುತ್ತಿದೆ. ಸಹಜತೆ, ಸರಳತೆ, ಮುಗ್ಧತೆಗಳು ಹಿಂದೆ ಹಿಂದೆ ಸರಿಯುತ್ತಿವೆ.

ಹೀಗೆಂದ ಮಾತ್ರಕ್ಕೇನೆ ನಾವು ಆಕರ್ಷಕವಾಗಿ ಮಾತನಾಡುವುದು, ನಡೆಯುವುದು, ಡ್ರೆಸ್ ಮಾಡಿಕೊಳ್ಳುವುದು ಮುಂತಾದವುಗಳು ಬೇಡ ಅಂದಂತಲ್ಲ. ಆದರೆ ಇವು ಊಟಕ್ಕೆ ಉಪ್ಪಿನಕಾಯಿ ಎಷ್ಟು ಅವಶ್ಯವೊ ಅಷ್ಟೆ ಅವಶ್ಯ ಹಾಗೂ ಅಷ್ಟೆ ಪರಿಮಿತ. ಪ್ರೀತಿ ಹಾಗೂ ನ್ಯಾಯ ಕೇವಲ ಮಾಡಿದರೆ ಸಾಲದು, ಅವುಗಳನ್ನು ತೋರಿಸಿಕೊಳ್ಳುವುದೂ ಅಷ್ಟೇ ಮುಖ್ಯ ಎನ್ನುವಂತೆ ನಾವು ಮಾಡುವ ಪ್ರೀತಿ ವಿಶ್ವಾಸಗಳನ್ನು ವ್ಯಕ್ತಪಡಿಸಲೇಬೇಕಾಗುತ್ತದೆ. ಹೀಗೆ ವ್ಯಕ್ತಪಡಿಸುವಾಗ ನಾಟಕೀಯತೆ ಎಲ್ಲಿಯೂ ಸೋಂಕದಂತೆ ನೋಡುವುದು ಅನಿವಾರ್ಯವಾಗುತ್ತದೆ. ನಾವು ತೋರುವ ಪ್ರೀತಿ, ವಿಶ್ವಾಸ, ಅನುಕಂಪ ಸುರಿಸುವ ಕಣ್ಣೀರುಗಳು ಸಹಜವಾಗಿರಲಿ ಹಾಗೂ ನಿಷ್ಕಪಟ ನಿಷ್ಕಲಂಕವಾಗಿರಲಿ. ಕೇವಲ ಬಾಯಿ ಮಾತಿನ ಮೊಸಳೆ ಕಣ್ಣೀರು ಆಗದಿರಲಿ.

ಕೃತಕ ವೀರ್ಯ, ಕೃತಕ ಹೃದಯ, ಪ್ರಣಾಳ ಶಿಶುಗಳ ಈ ಯುಗದಲ್ಲಿ ಸಹಜತೆ ಕಾಪಾಡಿಕೊಳ್ಳುವುದು ಕಷ್ಟಸಾಧ್ಯ. ಆದಾಗ್ಯೂ ಕಾಶ್ಮೀರ ಸ್ವಿಝರ್ಲೆಂಡ್‌ಗಳ ಸಹಜಸಿರಿ ಜಗತ್ತಿನ ಯಾವುದೇ ಕೃತ್ರಿಮ ಉದ್ಯಾನವನಕ್ಕಿಂತಲೂ ಸುಂದರವೇ ಆಗಿಲ್ಲವೇ?

# ಹುತಾತ್ಮ ಮಹಾದೇವ ಮೈಲಾರ

ಕಾಂತನ ಕಳಕೊಂಡ ಕಾಮಿನಿಯಂತೆ ಭಾರತ ಹಾಕ್ವದು ಕಣ್ಣೀರ

ಶಾಂತಿ ಸಮರದೊಳು ಗುಂಡಿನೇಟಿನೊಳು ಮಡಿದ ಮಹಾದೇವಪ್ಪ

ಮೈಲಾರ

ಕರುನಾಡಿನ ಕಲಿ ವೀರಕೇಸರಿ ನೆನಪಿರಲೆನ್ನುತ ನಿರಂತರ

ಬರೆದನು ಲಾವಣಿ ಲಾವಣಿಕಾರ ಹರಸಿದ ಹಾಡನು ನಾನಾತರ.

ಸಮ್ಮದ್ ಸಾಹೇಬರ ಈ ಲಾವಣಿ ಸ್ವಾತಂತ್ರ್ಯ ಪೂರ್ವದ ನಾಲ್ಕು ವರ್ಷ, ನಂತರದ ಎರಡು ದಶಕಗಳಷ್ಟು ಕಾಲ ಕರ್ನಾಟಕದ ಮನೆಮನೆಗಳ ಮಾತಾಗಿ ಸರ್ವಜನರ ಬಾಯಲ್ಲಿ ನಲಿದಾಡಿ ಭಾರತ ಸ್ವಾತಂತ್ರ್ಯಾಂದೋಲನಕ್ಕೆ ಆಗಿನ ಸೇನಾನಿಗಳನ್ನು ಹುರಿದುಂಬಿಸುತ್ತಿತ್ತು. ಮೈಲಾರ ಮಹಾದೇವರ ತ್ಯಾಗ ಬಲಿದಾನದ ಕಥೆ, ಕೇಳುಗರ ರಕ್ತ ಕುದಿಯುವಂತೆ ಮಾಡಿ ಅಸಂಖ್ಯ ಹೋರಾಟಗಾರರಿಗೆ ಸ್ಫೂರ್ತಿಯ ಚಿಲುಮೆಯಾಗಿತ್ತು. ಇದಕ್ಕೆ ಕಾರಣ ಮೈಲಾರ ಮಹಾದೇವರ ಇಡೀ ಬದುಕು ರಾಷ್ಟ್ರಕ್ಕಾಗಿ ಮೀಸಲಿತ್ತು, ಅವರು ಮನೆ, ಮಠ, ಕುಟಂಬ, ಊರು ಕೇರಿ ಎಲ್ಲ ತೊರೆದು ತಮ್ಮ ಹದಿಹರೆಯದಲ್ಲೇ ಶಾಲೆಗೆ ಶರಣು ಹೊಡೆದು ಮಹಾತ್ಮಾ ಗಾಂಧೀಜಿಯವರ ಕರೆಗೆ ಓಗೊಟ್ಟು ಅವರ ಎಲ್ಲ ವಿಧಾಯಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗಿಯಾಗಿ ಅಪ್ರತಿಮ ಹೋರಾಟ ನಡೆಸಿದರು ಹಾಗೂ ಅದೇ ಹೋರಾಟದಲ್ಲಿ ಕೊನೆಗೆ ಬ್ರಿಟಿಷರ ಗುಂಡಿಗೆ ಆಹುತಿಯಾಗಿ ಹುತಾತ್ಮರೆನಿಸಿದರು. ಅಂತೆಯೇ ಅವರು ಭಾರತ ಸ್ವಾತಂತ್ರ್ಯಾಂದೋಲನಕ್ಕೆ ಕರ್ನಾಟಕ ನೀಡಿದ ಮಹಾನ್ ಕೊಡುಗೆಗಳಲ್ಲಿ ಅಗ್ರಗಣ್ಯರು, ಆಗ್ರಮಾನ್ಯರು, ಮಾಡು ಇಲ್ಲವೇ ಮಡಿ ಎಂಬ ಮಹಾತ್ಮರ ಕರೆಯನ್ನು ಅಕ್ಷರಶಃ ಪಾಲಿಸಿ ಸರ್ವಸ್ವವನ್ನೂ ದೇಶಕ್ಕಾಗಿ ಧಾರೆ ಎರೆದ ಅದಮ್ಯ ಚೇತನ, ಸಾಹಸಸಿಂಹ. ಮೈಲಾರರವರು ಗಾಂಧೀಜಿಯ ಆತ್ಮೀಯ ಶಿಷ್ಯನಾಗಿ, ಅಂತರಂಗದ ಅನುಯಾಯಿಯಾಗಿ ಸತ್ಯ ಶಾಂತಿ ಅಹಿಂಸಾತ್ಮಕ ಹೋರಾಟವನ್ನು ಜೀವನದ ಉಸಿರನ್ನಾಗಿ ಮಾಡಿಕೊಂಡು ಕರ್ನಾಟಕದಾದ್ಯಂತ ಸ್ವಾತಂತ್ರ್ಯ ಹೋರಾಟಗಾರರ ಪಡೆಯನ್ನೇ ಕಟ್ಟಿ ಜೀವವನ್ನೇ ಬಲಿದಾನ ಮಾಡಿದ ಅದ್ವಿತೀಯ ಸಮರಶೂರರು.

ಮಹಾದೇವ ಮೈಲಾರರು ಆಗಿನ ಧಾರವಾಡ ಜಿಲ್ಲೆಯ ದಕ್ಷಿಣ ಭಾಗದ ಈಗಿನ ಹಾವೇರಿ ಜಿಲ್ಲೆಯ ಮೋಟೆಬೆನ್ನೂರಿನ ಮಧ್ಯಮವರ್ಗದ ಒಂದು ರೈತ ಕುಟುಂಬದಲ್ಲಿ (ಜೂನ್ 8, 1911) ಜನಿಸಿದರು. ತಂದೆ ಮಾರ್ತಂಡಪ್ಪ ತಾಯಿ ಬಸಮ್ಮ. ಬಾಲಕ ಮಹಾದೇವನಿಗೆ ಸ್ವಾತಂತ್ರ್ಯ, ಪ್ರೀತಿ, ದೇಶಭಕ್ತಿ ರಕ್ತಗತವಾಗಿಯೇ ಬಂದಿತ್ತೆನ್ನಬಹುದು. ಯಾಕೆಂದರೆ ತಾಯಿ ಬಸಮ್ಮ ಶುದ್ಧ ಖಾದಿಧಾರಿ. ಸ್ವಾತಂತ್ರ್ಯಾಂದೋಲನದ ಸೇನಾನಿಗಳಿಗೆ ಬೆಂಗಾವಲಾಗಿ ನಿಂತು ಹಿಂದಿನಿಂದಲೇ ಪ್ರೋತ್ಸಾಹ ನೀಡುತ್ತಿದ್ದ ಮಹಾತಾಯಿ. ಮಗನ ಎಲ್ಲ ಚಟುವಟಿಕೆಗಳಿಗೆ ಬೆನ್ನುಲುಬಾಗಿ ನಿಂತವರು. ಪ್ರಾರಂಭದಲ್ಲಿ ತಂದೆ ಇನ್ನಿತರ ಹಿರಿಯರ ವಿರೋಧವಿದ್ದರೂ ನಂತರ ಮಹಾದೇವನ ತೀವ್ರ ದೇಶಭಕ್ತಿ ಅವರನ್ನೂ ಅವನೆಡೆಗೆ ಸೆಳೆದುಕೊಂಡುಬಿಟ್ಟಿತು.

ಪ್ರಾಥಮಿಕ ಶಿಕ್ಷಣ ಸ್ವಗ್ರಾಮ ಮೋಟೆಬೆನ್ನೂರಿನಲ್ಲೇ ಆಯಿತು. ಆಗ ಹಿರಿಯ ದೇಶಭಕ್ತರೊಬ್ಬರ ಭಾಷಣ ಕೇಳಿ ತನ್ನ ತಲೆ ಮೇಲಿನ ವಿದೇಶಿ ಟೊಪ್ಪಿಗೆ ತೆಗೆದು ನೆಲಕ್ಕೆಸೆದ ಮಹಾದೇವ. ಇದೇ ಆತನ ಸ್ವಾತಂತ್ರ್ಯ ಸಮರದ ಮೊದಲ ಕಹಳೆ ಅಥವಾ ಪ್ರಥಮ ಹೆಜ್ಜೆ ಎನ್ನಬಹುದು. ನಂತರ ಮುಂದಿನ ವ್ಯಾಸಂಗಕ್ಕಾಗಿ ಅಂದು ಆಗಲೇ ಹೆಸರುಮಾಡಿದ್ದ ಹಂಸಭಾವಿಯ ಶಾಲೆಗೆ ದಾಖಲಾದ ಬಾಲಕ ಮಹಾದೇವ. ಅಲ್ಲಿ ಹಿರಿಯ ಸ್ವಾತಂತ್ರ್ಯ ಸೇನಾನಿಗಳಾದ ಕೆ.ಎಫ್.ಪಾಟೀಲ ಹಾಗೂ ಟಿ.ಆರ್.ನೇಸ್ವಿ ಅವರ ಶಿಷ್ಯತ್ವ ದೊರೆತದ್ದು ಒಂದು ಸುಯೋಗವೆಂದೇ ಹೇಳಬಹುದು. ವಿದ್ಯಾರ್ಥಿಗಳಿಗೆಲ್ಲ ಅವರು ವೀರಗಲ್ಲು, ಮಾಸ್ತಿಕಲ್ಲುಗಳ ಪರಿಚಯ ಮಾಡಿಸುತ್ತ ದೇಶಕ್ಕಾಗಿ ತ್ಯಾಗಮಾಡಿದ ವೀರರ ಕಥೆಗಳನ್ನು ಹೇಳುತ್ತ ಅಂತಹ ಪ್ರವಾಸಿ ಸ್ಥಳಗಳ ದರ್ಶನ ಮಾಡಿಸುತ್ತಿದ್ದರು. ಆಲೂರು ವೆಂಕಟರಾಯರ 'ಕರ್ನಾಟಕ ಗತವೈಭವ' ಓದಿ ಹೇಳುತ್ತಿದ್ದಂತೆಯೇ ವಿದ್ಯಾರ್ಥಿಗಳ ಕಣ್ಣಲ್ಲಿ ನೀರು ಬರುತ್ತಿತ್ತು. ಈ ಐತಿಹಾಸಿಕ ಪುಸ್ತಕಗಳ ಪ್ರಭಾವ ಎಳೆಯರ ದೇಶಪ್ರೇಮವನ್ನು ಜಾಗೃತಗೊಳಿಸುತ್ತಿತ್ತು. ಸರ್ವಜ್ಞನ ಅಬಲೂರಿಗೂ ಒಮ್ಮೆ ಈ ಎಲ್ಲ ವಿದ್ಯಾರ್ಥಿಗಳನ್ನು ಕರೆದೊಯ್ದಿದ್ದರು. ಮಹಾತ್ಮಾ ಗಾಂಧೀಜಿಯವರ ಯಂಗ್ ಇಂಡಿಯಾ ಪತ್ರಿಕೆಯನ್ನು ನಿಯಮಿತವಾಗಿ ಓದುತ್ತ ಅವರ ಸತ್ಯ, ಶಾಂತಿ, ಅಹಿಂಸೆ ಬಗ್ಗೆ ಅವರ ಸತ್ಯಾಗ್ರಹದ ಕಾರ್ಯಕ್ರಮಗಳ ಬಗ್ಗೆ ಈಗಾಗಲೇ ಸಾಕಷ್ಟು ತಿಳಿದಿದ್ದ ಮಹಾದೇವ ಶಾಲೆಯ ಓದನ್ನು ಮುಂದುವರಿಸದಾದ. ಖಾದಿ ನೂಲನ್ನು, ಬಟ್ಟೆಯನ್ನು ತಲೆಮೇಲೆ ಹೊತ್ತು ಮಾರಾಟ ಮಾಡಲು ಪ್ರಾರಂಭಿಸಿದ. ತಾನೇ ಖಾದಿಯನ್ನು ತಯಾರಿಸಬಾರದೇಕೆ? ಎಂಬ ವಿಚಾರ ತಲೆಯಲ್ಲಿ ಬಂದು ಅಂದು ಖಾದಿ ಕೇಂದ್ರವಾಗಿದ್ದ ಬಿಜಾಪೂರ ಜಿಲ್ಲೆಯ ಕಲಾದಗಿಗೆ ಪ್ರಯಾಣ ಬೆಳೆಸಿದ. ಮನೆಯವರಿಗೆ ಇದು ತಿಳಿಯದಾಗಿತ್ತು. ಅಷ್ಟೊತ್ತಿಗಾಗಲೇ (ಹದಿಮೂರನೇ ವಯಸ್ಸಿನಲ್ಲಿಯೆ) ಮಹಾದೇವನ ಮದುವೆಯಾಗಿತ್ತು. ಹೆಂಡತಿ ಸಿದ್ದಮ್ಮ ಅಲ್ಪವಯಿ. ಮನೆಮಂದಿಯೊಂದಿಗೆ ಅವಳೂ ಚಿಂತಾಕ್ರಾಂತಳಾಗಿದ್ದಳು. ಆದರೆ ಅವಳಿಗೆ ಹೋಗುವಾಗ ಹೇಳಿ ಹೋಗಿದ್ದರಿಂದ ಹಾಗೂ ಬೇರೆ ಯಾರಿಗೂ ಹೇಳಬಾರದೆಂದು ವಚನ ತೆಗೆದುಕೊಂಡಿದ್ದರಿಂದ ಆಕೆ ಅಸಹಾಯಕಳಾಗಿದ್ದಳು.

ಮಹಾದೇವ ತಾನೇ ಒಂದು ಖಾದಿಕೇಂದ್ರವನ್ನು ಪ್ರಾರಂಭಿಸಬೇಕೆಂದೆನ್ನುವಾಗ ಅವನ ಮನೆಯವರು ಅವನನ್ನು ಪತ್ತೆಹಚ್ಚಿ ಮೋಟೆಬೆನ್ನೂರಿಗೆ ಕರೆತಂದರು. ಇತ್ತ ಶಾಲೆಯೂ ಇಲ್ಲ ಅತ್ತ ಮನೆತನದ ಒಕ್ಕಲುತನವೂ ಇಲ್ಲವೆಂದಾಗಲು ಅವನ ದೊಡ್ಡಪ್ಪ ಅವನಿಗೆ ವ್ಯಾಪಾರ ಮಾಡಿಸಬೇಕೆಂದು ದಾವಣಗೇರಿಗೆ ಕರೆದೊಯ್ದರು. ಆದರೆ ಮಹಾದೇವಪ್ಪನ ನಿರ್ಧಾರ ಅಚಲವಾಗಿತ್ತು. ದೇಶಕ್ಕಾಗಿಯೇ ತನ್ನ ಬಾಳು ಮೀಸಲು ಎಂಬ ನಿಲುವಿನಲ್ಲಿ ಎಳ್ಳಷ್ಟೂ ಬದಲಾಗಲಿಲ್ಲ. ದಾವಣಗೇರಿಯಲ್ಲಿ ಉಪಾಯದಿಂದ ದೊಡ್ಡಪ್ಪನಿಂದ ತಪ್ಪಿಸಿಕೊಂಡು, ಸ್ವಾತಂತ್ರ್ಯ ಹೋರಾಟದ ಕೇಂದ್ರವಾಗಿದ್ದ ಧಾರವಾಡಕ್ಕೆ ಹೋದನು. ಅಲ್ಲಿ ಭಾರತೀಯ ತರುಣ ಸಂಘ ಸೇರಿಕೊಂಡು ಸ್ವಾತಂತ್ರ್ಯ ಸಂಗ್ರಾಮದ ಕಾರ್ಯಕ್ರಮಗಳಲ್ಲಿ ಸಂಪೂರ್ಣ ತೊಡಗಿಸಿಕೊಂಡನು. 1925ರಲ್ಲಿ ಸಂಘದ ವತಿಯಿಂದ ಗಾಂಧೀ ಜಯಂತಿಯನ್ನು ಸಂಭ್ರಮದಿಂದ ಆಚರಿಸಿದರು. ಅಲ್ಲಿ ಮಹಾದೇವನ ಸಂಗಡಿಗರಾಗಿ ಎನ್.ಬಿ.ಹಿರೇಮಠ, ಜಿ.ವಿ.ಹಳ್ಳಿಕೇರಿ, ವ್ಹಿ.ಟಿ.ಮಾಗಡಿ ಮುಂತಾದ ಇಪ್ಪತ್ತಕ್ಕಿಂತಲೂ ಹೆಚ್ಚು ಜನರಿದ್ದರು.

## ಕರ್ನಾಟಕದ ಏಕಮೇವ ಪ್ರತಿನಿಧಿ:

ಧಾರವಾಡದಲ್ಲಿ ಇನ್ನು ಬಹಳ ದಿನ ಇದ್ದರೆ ಮನೆಯವರು ಸುಳಿವು ತಿಳಿದುಕೊಂಡು ಬರಬಹುದೆಂದು ಭಾವಿಸಿದ. ಅವನಲ್ಲಿ ಹೇಗಾದರೂ ಮಾಡಿ ಗಾಂಧೀಜಿಯ ಸಾಬರಮತಿ ಆಶ್ರಮಕ್ಕೆ ಹೋಗಿ ಸೇರಿಕೊಳ್ಳಬೇಕೆಂಬ ಬಯಕೆ ತೀವ್ರವಾಯಿತು. ಅದೇ ಹೊತ್ತಿಗೆ ಸರಿಯಾಗಿ ಗಾಂಧೀಜಿಯವರಿಂದ ಉಪ್ಪಿನ ಸತ್ಯಗ್ರಹದಲ್ಲಿ ಭಾಗವಹಿಸಲು ಒಬ್ಬಿಬ್ಬ ಕಟ್ಟಾಳುಗಳನ್ನು ಕಳಿಸಬೇಕೆಂದು ಹಿರಿಯರಾದ ರಂಗನಾಥ ದಿವಾಕರ ಅವರಿಗೆ ಕರೆಬಂತು. ಯುವಕ ಮಹಾದೇವ ಅಲ್ಲಿಗೆ ಹೋಗಲು ತುದಿಗಾಲ ಮೇಲೆ ನಿಂತು ತವಕಿಸುತ್ತಿದ್ದುದನ್ನು ತಿಳಿದುಕೊಂಡ ದಿವಾಕರರು ಅವನನ್ನು ಸಾಬರಮತಿಗೆ ಕಳುಹಿಸಿಕೊಟ್ಟರು. ಮಹಾದೇವನ ಆನಂದಕ್ಕೆ ಪಾರವೇ ಇರಲಿಲ್ಲ. ಅತ್ಯುತ್ಸಾಹದಿಂದ ಅಲ್ಲಿಗೆ ಹೋಗಿ ತಲುಪಿದನು. ಹತ್ತೊಂಭತ್ತರ ಹರೆಯದ ಇವನನ್ನು ಕಂಡು ಗಾಂಧೀಜಿ ಕೆಲ ಪ್ರಶ್ನೆಗಳನ್ನು ಕೇಳಿ, ಕೆಲ ಪರೀಕ್ಷೆಗಳನ್ನು ಒಡ್ಡಿದರು. ಮಹಾದೇವನು ಎಲ್ಲದರಲ್ಲೂ ತೇರ್ಗಡೆಯಾಗಿ ಮಹಾತ್ಮರಿಂದ ಭೇಷ್ ಅನ್ನಿಸಿಕೊಂಡು ಆಶ್ರಮದಲ್ಲಿರಲು ಅಡ್ಡಿಯಿಲ್ಲ ಎಂದು ಅನುಮತಿ ಪಡೆದುಕೊಂಡನು. ಆತನ ಜೀವನದ ಮಹಾತ್ವಾಕಾಂಕ್ಷೆ ಈಡೇರಿಸಿಕೊಂಡ ಆನಂದ ಅಭಿಮಾನ ಮಹಾದೇವನದಾಗಿತ್ತು.

12.03.1930 ಭಾರತದ ಸ್ವಾತಂತ್ರ್ಯಾಂದೋಲನದ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದಂತಹ ದಿನ. ಅಂದು ಮಹಾತ್ಮಾಗಾಂಧಿಯವರು ತಾವೇ ಆರಿಸಿಕೊಂಡ 79 ಸೇನಾನಿಗಳೊಂದಿಗೆ ಸಾಬರಮತಿಯಿಂದ ಉಪ್ಪಿನ ಸತ್ಯಾಗ್ರಹಕ್ಕಾಗಿ ದಂಡೀಯಾತ್ರೆ ಆರಂಭಿಸಿದ್ದರು. ಈ ತಂಡದಲ್ಲಿ ಕರ್ನಾಟಕದ ಏಕಮೇವ ಪ್ರತಿನಿಧಿಯಾಗಿ ಮಹಾದೇವ ಮೈಲಾರ ಇದ್ದದ್ದು ಆತನನ್ನು ನಿತ್ಯ ಹೊಳೆಯುವ ಧೃವನಕ್ಷತ್ರದಂತೆ ನಮ್ಮ ನೆನಪಿನಲ್ಲುಳಿಯುವಂತೆ ಮಾಡಿದೆ. ಅಂದಾಜು ಐನೂರು ಕಿಲೋಮೀಟರ್ ದೂರದ ದಾಂಡಿಯನ್ನು 25 ದಿನಗಳ ಪಾದಯಾತ್ರೆಯಿಂದ ತಲುಪಿ ಉಪ್ಪನ್ನು ಎತ್ತಿಕೊಂಡು ಕಾಯ್ದೆಭಂಗ ಮಾಡಿದಾಗ ಗಾಂಧೀಜಿಯೊಂದಿಗೆ ಮಹಾದೇವ ಮೈಲಾರರಿಗೂ ಆರು ತಿಂಗಳ ಕಾರಾಗೃಹ ಶಿಕ್ಷೆಯಾಯಿತು.

ತೀರ ಚಿಂತೆಯಲ್ಲಿದ್ದ ಮನೆಯವರಿಗೆ “ಈ ಅವಕಾಶ ದೊರೆತದ್ದು ನನ್ನ ಸೌಭಾಗ್ಯ” ಎಂಬ ಒಕ್ಕಣೆಯ ಮಹಾದೇವನ ಪತ್ರ ತಲುಪಿ ಅತ್ಯಾನಂದವಾಯಿತು. ಅವನು ಎಲ್ಲಿರುವನೋ ಹೇಗಿರುವನೋ ಎಂಬ ಕಾತರದಲ್ಲಿದ್ದ ಅವರಿಗೆ ಈ ಪತ್ರ ಕಾರಾಗೃಹದಿಂದಲೇ ಬರೆಯಲ್ಪಟ್ಟಿತ್ತು. ಜೈಲಿನಿಂದ ಬಿಡುಗಡೆಗೊಂಡು ಧಾರವಾಡಕ್ಕೆ ಬಂದಿಳಿದ ಮಹಾದೇವರಿಗೆ ವೀರೋಚಿತ ಸ್ವಾಗತ ದೊರಕಿತು. ನಂತರ ತನ್ನೂರು ಮೋಟೆಬೆನ್ನೂರಿಗೆ ತಲುಪಿದಾಗ ಅಲ್ಲಿಯೂ ಸಂಭ್ರಮದಿಂದ ಸ್ವಾಗತಿಸಲಾಯಿತು. ಈ ಹೊತ್ತಿಗಾಗಲೇ ಮನೆಯವರ ಧೋರಣೆಯ ಬದಲಾಗಿತ್ತು. ಅವರೂ ಅತೀವ ಹೆಮ್ಮೆ ಹರ್ಷಗಳಿಂದ ವೀರ ಪುತ್ರನನ್ನು ಬರಮಾಡಿಕೊಂಡರು. ಈಗ ಮಹಾದೇವಪ್ಪನಿಗೆ ತನ್ನ ಹೋರಾಟಕ್ಕೆ ಅಧಿಕೃತ ಅಪ್ಪಣೆ ಸಿಕ್ಕಂತಾಗಿತ್ತು. ಆತ ಪಾದರಸದಂತೆ ಸದಾ ಕ್ರಿಯಾಶೀಲನಾಗಿದ್ದ. ತಡಮಾಡದೇ ತನ್ನ ಧರ್ಮಪತ್ನಿಯನ್ನೂ ಕರೆದುಕೊಂಡು ಗಾಂಧೀಜಿ ಇದ್ದಲ್ಲಿಗೆ ಹೊರಡಲನುವಾದ. ಮನೆಯ ಮಗನಾಗಿ ಮಾತ್ರ ಆಗಿ ಇರದೇ ಭಾರತಾಂಬೆಯ ವೀರಪುತ್ರನೆಂದೆನಿಸಿ ಇರಬೇಕೆಂಬುದು ಆತನ ತೀವ್ರ ಹಂಬಲವಾಗಿತ್ತು. ಅಂತೆಯೇ ಬಾರ್ದೋಲಿಗೆ ಪತ್ನಿ ಸಮೇತ ಪ್ರಯಾಣ ಬೆಳೆಸಿದ. ಆಕೆಗೂ ರಾಷ್ಟ್ರದೀಕ್ಷೆ ಕೊಡಿಸಬೇಕೆಂಬ ತವಕದಲ್ಲಿದ್ದ. ಆದರೆ ಗಾಂಧೀಜಿ ತೀರ

ಚಿಕ್ಕವಯಸ್ಸಿನ ಸಿದ್ದಮ್ಮನನ್ನು ಕಂಡು ಅವಾಕ್ಕಾದರು. ಅಂತೆಯೇ ನೀನಿನ್ನೂ ಚಿಕ್ಕವಳು ಆಶ್ರಮದ ಕಠಿಣ ನಿಯಮಾವಳಿಗಳನ್ನು ಪಾಲಿಸುವುದು ನಿನಗೆ ಕಷ್ಟವಾಗಬಹುದು ಎಂದರು. ಅದಕ್ಕೆ ಸಿದ್ದಮ್ಮ ಸೌಮ್ಯವಾಗಿ ಆದರೆ ಅಷ್ಟೇ ದೃಢವಾಗಿ ತಾನು ಅದಕ್ಕೆ ತಯಾರಿರುವುದಾಗಿ ಹೇಳಿದಳು. ಅಲ್ಲಿಂದ ಅವಳಿಗೆ ಸಾಬರಮತಿ ಆಶ್ರಮಕ್ಕೆ ಹೋಗಲು ಗಾಂಧೀಜಿಯ ಅಪ್ಪಣೆ ದೊರೆಯಿತು. ಸಿದ್ದಮ್ಮನಿಗೆ ಗಾಂಧೀಜಿ ಪ್ರೀತ್ಯಾದರಗಳಿಂದ ಸಿದ್ದಮತಿ ಎಂದು ಕರೆಯುತ್ತಿದ್ದರು. 1932-33ರ ಅಸಹಕಾರ ಹಾಗೂ ಕಾಯ್ದೆ ಭಂಗ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಸಿದ್ದಮ್ಮನಿಗೂ ಆರು ತಿಂಗಳ ಜೈಲು ಶಿಕ್ಷೆಯಾಗಿ ಅಹಮದಾಬಾದಿಗೆ ಕಳಿಸಲ್ಪಟ್ಟಳು. ಕರ್ನಾಟಕಕ್ಕೆ ಮರಳಿ ಬಂದು ಚಳುವಳಿ ನಡೆಸಿದ್ದರಿಂದ ಮಹಾದೇವರಿಗೂ ಶಿಕ್ಷೆಯಾಗಿ ಹಿಂಡಲಗಾ ಜೈಲಿಗೆ ತಳ್ಳಲ್ಪಟ್ಟರು.

## ಕೊರಡೂರ ಗ್ರಾಮಸೇವಾಶ್ರಮ:

ಹೀಗೆ ನಾಲ್ಕಾರು ಬಾರಿ ಕಾರಾಗೃಹಕ್ಕೆ ಹೋಗಿ ಬಂದರೂ ಮಹಾದೇವಪ್ಪನವರು ಹೊರಗಿದ್ದಾಗಲೆಲ್ಲ ಖಾದಿ ಪ್ರಚಾರ, ದಲಿತೋದ್ಧಾರ ಮುಂತಾದ ಗಾಂಧೀಜಿಯವರ ಕಾರ್ಯಕ್ರಮಗಳನ್ನು ಮುಂದುವರೆಸುತ್ತಿದ್ದರು. ಇದಕ್ಕಾಗಿ ಕೊರಡೂರಿನಲ್ಲಿ ತಮ್ಮದೇ ಆದ ಒಂದು ಗ್ರಾಮ ಸೇವಾಶ್ರಮವನ್ನು 1937ರಲ್ಲಿ ಪ್ರಾರಂಭಿಸಿದರು. ಆ ಊರಲ್ಲಿ ಅಪಾರ ಅಭಿಮಾನಿಗಳನ್ನು ಹೊಂದಿದ್ದರಿಂದ ಮಹಾದೇವರ ಈ ಆಶ್ರಮ ಸ್ವಾತಂತ್ರ್ಯ ಸೇನಾನಿಗಳಿಂದ ತುಂಬಿಹೋಗಿ ಒಂದು ದೊಡ್ಡ ದಂಡೆ ನಿರ್ಮಾಣವಾಯಿತು. ಅಲ್ಲಿ ಸತಿಪತಿಗಳಿಬ್ಬರೂ ಈ ಗ್ರಾಮಸೇವಾಶ್ರಮದ ಸಂಚಾಲಕರಾಗಿ ಕೆಲಸ ಮಾಡುತ್ತಿದ್ದರು. ಚರಖಾದಿಂದ ನೂಲು ತೆಗೆಯುವುದು, ನಿಸರ್ಗ ಚಿಕಿತ್ಸೆ, ವ್ಯಾಯಾಮ, ಅಕ್ಷರ ಕಲಿಕೆ, ಸ್ವಾತಂತ್ರ್ಯ ಸಂಗ್ರಾಮದ ಮಾಹಿತಿ ನೀಡುವದೆ ಮುಂತಾದ ರಚನಾತ್ಮಕ ಕೆಲಸಗಳನ್ನು ಒಳ್ಳೆ ಶಿಸ್ತಿನಿಂದ ನಡೆಸಲಾಗುತ್ತಿತ್ತು. ಇಲ್ಲಿನ ವಿಶೇಷ ಕಾರ್ಯಗಳಿಗಾಗಿ ತಜ್ಞರ ಬಳಿ ತರಬೇತಿ ಅವಶ್ಯವೆಂದು ಮನಗಂಡ ಗಂಡ ಹೆಂಡತಿ ಇಬ್ಬರೂ ಮೊದಲೇ ಬೆಂಗಳೂರಿಗೆ ತೆರಳಿ ಮಹಾದೇವಪ್ಪನವರು ಕೆ.ವಿ. ಐಯ್ಯರ ವ್ಯಾಯಾಮ ಶಾಲೆಯಲ್ಲಿ ಸಿದ್ದಮ್ಮನವರು ವೈದ್ಯಕೀಯ ಜ್ಞಾನಕೇಂದ್ರದಲ್ಲಿ ಹೆಚ್ಚಿನ ವ್ಯಾಸಂಗ ಮಾಡಿಕೊಂಡು ಬಂದಿದ್ದರು. ಹೀಗೆ ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎನ್ನುವಂತೆ ಪತಿ ಪತ್ನಿಯರ ಈ ವಿಧಾಯಕ ಕಾರ್ಯಕ್ರಮಗಳು ತೀರ ಯಶಸ್ವಿಯಾದವು. ಈ ಆಶ್ರಮದಲ್ಲಿ ಖಾದಿಯ ಉತ್ಪಾದನೆ ಭರ್ಜರಿಯಾಗಿ ಆಗಲು, ಕಾರ್ಯಕರ್ತರು ಅದನ್ನು ತಲೆಮೇಲೆ ಹೊತ್ತುಕೊಂಡು ಊರೂರು ತಿರುಗಿ ಮಾರಾಟ ಮಾಡತೊಡಗಿದರು. ಹಾವೇರಿ, ಶಿರಹಟ್ಟಿ ತಾಲ್ಲೂಕು ಹಾಗೂ ಧಾರವಾಡ ಜಿಲ್ಲೆಯಲ್ಲೆಲ್ಲ ಇದು 'ಮಹಾದೇವನ ಖಾದಿ' ಎಂದು ಪ್ರಸಿದ್ಧಿ ಪಡೆಯಿತು. ಈ ವಿಧಾಯಕ ಚಟುವಟಿಕೆಯ ಜೊತೆ ಜೊತೆಯಲ್ಲಿಯೇ ಕಾಂಗ್ರೆಸ್ ಪಕ್ಷದ ಧ್ಯೇಯೋದ್ದೇಶಗಳನ್ನೂ ಮಹಾದೇವರು ಜನತೆಗೆ ಮನಮುಟ್ಟುವಂತೆ ತಿಳಿಹೇಳುತ್ತಿದ್ದರು.

ಅಂತೆಯೇ ಅವರನ್ನು 1940ರಲ್ಲಿ ಹಾವೇರಿ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಆರಿಸಲಾಯಿತು. ಕೊರಡೂರ ಆಶ್ರಮದ ಹೊತ್ತಿನಲ್ಲೇ ಪುನಃ ಗಾಂಧೀಜಿ ಸ್ವಾತಂತ್ರ್ಯಾಂದೋಲನ ತೀವ್ರಗೊಳಿಸಬೇಕೆಂದು ಕರೆಕೊಡಲು ಮಹಾದೇವಪ್ಪ ತನ್ನ ಹಲವಾರು ಹಿಂಬಾಲಕರು ಹಾಗೂ ಸಹೋದರರಾದ ಲಿಂಗಣ್ಣ ಗುಡ್ಡಪ್ಪರೊಂದಿಗೆ ಮತ್ತೆ ಚಳುವಳಿ ಮಾಡಿ ಪುನಃ ಜೇಲಿಗೆ ಹೋಗಬೇಕಾಗಿ ಬಂತು. ಇದನ್ನೆ ಲಾವಣಿಯೊಂದು ಹೀಗೆ ವಿವರಿಸಿದೆ ನೋಡಿ:

ಭಾರತ ದೇಶದ ಬಂಧವಿಮೋಚನೆಗೆ ಭಾರಿ ಕಷ್ಟವ ಸೋಸಿದರು

ತಾರುಣ್ಯವೆಲ್ಲವ ತುರಂಗದಲ್ಲಿ ಕಳೆದು ಮಡಿದ ಮಹಾಶೂರ

ಮೈಲಾರರರು

ಹೀಗೆ ತನ್ನ ತಾರುಣ್ಯದ ಅಪ್ಯಾಯಮಾನ ಸಮಯದ ಬಹುಭಾಗವನ್ನು ಮಹಾದೇವಪ್ಪ ಕಾರಾಗೃಹವಾಸದಲ್ಲೇ ಕಳೆಯಬೇಕಾಗಿ ಬಂದರೂ ಎಳ್ಳಷ್ಟೂ ಎದೆಗುಂದಲಿಲ್ಲ. ಅಷ್ಟೇ ಅಲ್ಲ ತನ್ನ ಹಿಂಬಾಲಕರೆಲ್ಲರಿಗೂ ಇಂತಹ ವೇಳೆಯಲ್ಲಿ ಅಪಜಯ ಅಸಾಧ್ಯತೆಗಳು ಸತ್ಯಾಗ್ರಹಿಗೆ ಸಲ್ಲವು ಎಂದು ಧೈರ್ಯ ತುಂಬುತ್ತ ಮನಸ್ಸಿದ್ದಲ್ಲಿ ಮಾರ್ಗವಿದೆ ಎಂದು ಮಾರ್ಗದರ್ಶನ ಮಾಡುತ್ತಿದ್ದರು.

## ಚಲೇಜಾವ್ ಚಳುವಳಿ:

1942ರ ಆಗಸ್ಟ 8ರಂದು ಮುಂಬಯಿಯಲ್ಲಿ ಗಾಂಧೀಜಿ ನೇತೃತ್ವದಲ್ಲಿ ಬ್ರಿಟೀಷರೇ ಭಾರತ ಬಿಟ್ಟು ತೊಲಗಿ ಎಂಬ ನಿರ್ಣಯವನ್ನು ಕಾಂಗ್ರೆಸ್ ಕೈಗೊಂಡಿತು. ಮಹಾತ್ಮರಂತೂ ಮಾಡು ಇಲ್ಲವೇ ಮಡಿ ಎಂದು ಘೋಷಿಸಿದರು. ದೇಶದ ಎಲ್ಲೆಡೆಯಂತೆ ಕರ್ನಾಟಕದಲ್ಲೂ ಇದಕ್ಕೆ ಅತ್ಯುತ್ತಮ ಪ್ರತಿಕ್ರಿಯೆ ದೊರತು ರಾಜ್ಯಾದ್ಯಂತ ಸರಕಾರದ ವಿರುದ್ಧ ದಂಗೆ ಹರತಾಳಗಳು ಏರ್ಪಟ್ಟವು. ಇಡೀ ಜನಜೀವನದಲ್ಲಿ ಗುಪ್ತಗಾಮಿನಿಯಾಗಿ ಪ್ರತಿಭಟನಾ ಮನೋಭಾವ ವ್ಯಕ್ತವಾಯಿತು. ಧಾರವಾಡ ಜಿಲ್ಲೆಯ ದಕ್ಷಿಣ ಭಾಗದಲ್ಲಿ ಈ ಚಳುವಳಿಯ ನೇತೃತ್ವ ಅಪ್ರತಿಮ ಗಾಂಧೀ ಅನುಯಾಯಿ ಮಹಾದೇವ ಮೈಲಾರರರದಾಗಿತ್ತು. ಹಾವೇರಿ ರೈಲ್ವೆ ಲೈನ್‌ನಲ್ಲಿ ಬಾಂಬ್ ಸಿಡಿಸುವುದು, ರೇಲ್ವೆರೆಕಾರ್ಡ್ ಸುಡುವುದು, ಅಂಚೆ ತಂತಿ ಕಛೇರಿಗಳಿಗೆ ಲಗ್ಗೆ ಹಾಕಿ ಲೂಟಿ ಮಾಡುವುದು, ರೈಲ್ವೆ ಕಂಬಿ ಕೀಳುವುದು, ಪೋಲೀಸ್ ಸ್ಟೇಷನ್, ಚೌಕಿ, ಗ್ರಾಮ ಚಾವಡಿ ದಾಖಲೆಗಳನ್ನು ಸುಡುವುದೇ ಮುಂತಾದ ವಿಧ್ವಂಸಕ ಕಾರ್ಯಕ್ರಮಗಳನ್ನು ಹಾಕಿಕೊಂಡು ಬ್ರಿಟೀಷ್ ಸರಕಾರದ ಆಡಳಿತ ಯಂತ್ರ ನಿಷ್ಕ್ರಿಯವಾಗುವಂತೆ ಮಾಡಲು ಎಲ್ಲ ಪ್ರಯತ್ನಗಳನ್ನೂ ಕೈಗೊಳ್ಳಲಾಯಿತು. ಇಷ್ಟೆಲ್ಲ ದೊಂಬಿ, ದಂಗೆಗಳು ನಡೆದರೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತಿತ್ತು. ಬಾಂಬ್ ಸ್ಫೋಟದಲ್ಲೂ ಕೂಡ ಕೇವಲ ಹೊಗೆಬಾಂಬ್‌ಗಳನ್ನು ಉಪಯೋಗಿಸಿ ಪ್ರಾಣಹಾನಿಯಾಗದಂತೆ ಜಾಗ್ರತೆ ವಹಿಸಲಾಗಿತ್ತು. ಹಾವೇರಿ, ಹೊಸರಿತ್ತಿ, ಕೊರಡೂರ, ನೆಗಳೂರ, ಗುತ್ತಲ, ಅಗಡಿ, ಕರ್ಜಗಿ, ಶಿಗ್ಗಿ, ದೇವಗಿರಿ, ಸಂಗೂರು, ಯಲ್ಲಾಪೂರ ಮುಂತಾದ ಗ್ರಾಮಗಳಲ್ಲಿ ಇಂತಹ ಚಟುವಟಿಕೆಗಳು ತೀವ್ರವಾಗಿದ್ದವು. ಮೈಲಾರರ ಮುಖಂಡತ್ವದ ಈ ಸತ್ಯಾಗ್ರಹದಲ್ಲಿ ವಾಯಿ ವೆಂಕಣ್ಣಾಚಾರ್ಯ, ಎಫ್.ಎಸ್.ತಾವರೆ (ಇಬ್ಬರೂ ನಂತರ ಶಾಸಕರಾಗಿದ್ದರು), ವೀರಯ್ಯ ಹಿರೇಮಠ, ತಿರಕಪ್ಪ ಮಡಿವಾಳರ, ಪರಮನಗೌಡ ಮುಂತಾದವರಿದ್ದರು. ಮಾರು ವೇಷದಲ್ಲಿ ಹೊಂಚುಹಾಕಿ ದಾಳಿ ಮಾಡುತ್ತಿದ್ದರು. ಅವರಂತೆಯೇ ಕೆಲ ಲಮಾಣಿ ತಾಂಡೆಗಳು, ಕಪ್ಪತಗುಡ್ಡ, ಹೊಳಲಮ್ಮನಗಡ ಮುಂತಾದ ಗುಪ್ತ ಸ್ಥಳಗಳಲ್ಲಿ ಜೋಳದ, ಕಬ್ಬು ಕೇದಿಗೆ ಮೆಳೆಗಳಲ್ಲಿ ಹಲವಾರು ದಿನಗಳವರೆಗೆ ರಹಸ್ಯ ವಾಸ್ತವ್ಯ ಹೂಡುತ್ತಿದ್ದರು. ಅವರಿಗೆ ಭೂಮಿಯೇ ಹಾಸಿಗೆ ಆಕಾಶವೇ ಹೊದಿಕೆಯಾಗಿತ್ತು. ಹಗಲು ರಾತ್ರಿಯೆನ್ನದೆ ಬಿಸಿಲು, ಛಳಿ, ಮಳೆಯೆನ್ನದೆ, ಊಟ ನಿದ್ರೆ ನೀರಡಿಕೆಗಳನ್ನು ಬದಿಗಿಟ್ಟು ಮೈಲಾರರು ತಮ್ಮ ತಂಡದೊಂದಿಗೆ ಶ್ರಮಿಸುತ್ತಿದ್ದರು. ಅವರ ಗುರಿಯೊಂದೇ ಸ್ವತಂತ್ರ ಭಾರತ, ದಾರಿ ಮಾತ್ರ ಮಹಾತ್ಮರ ಸತ್ಯಾಗ್ರಹದ್ದು ಅದೇ ಸತ್ಯ, ಶಾಂತಿ,

ಅಹಿಂಸೆಯದು. ಎಂತಹ ಕಠಿಣ ಸಂದರ್ಭದಲ್ಲೂ ಈ ಮಾರ್ಗದಿಂದ ಕೊನೆಯವರೆಗೂ ಮಹಾದೇವರು ಕಿಂಚಿತ್ತೂ ಕದಲಲಿಲ್ಲ. ಅಂತೆಯೇ ಅವರಿಗೆ ಗಾಂಧಿ ಹೊರತಾಗಿ ಬೇರೆ ದೈವವಿರಲಿಲ್ಲ.

## ಹುತಾತ್ಮ ಮಹಾದೇವ ಮೈಲಾರರು



ಸ್ವಾತಂತ್ರ್ಯ ಯಜ್ಞದಲ್ಲಿ ಪೂರ್ಣಾಹುತಿ

## ಕೊನೆಯ ಹೋರಾಟ:

ಗಾಂಧಿ ತತ್ವಗಳಲ್ಲಿ ಅಚಲಶ್ರದ್ಧೆ ಇಟ್ಟಿದ್ದ ಮಹಾದೇವನಿಗೆ ಸಹಜವಾಗಿಯೇ ಮಹಾತ್ಮರ ಮೇಲೆ ಅಪಾರ ಗೌರವ ಭಕ್ತಿ ಇತ್ತು. 1943ರವರೆಗೆ ಅಂದರೆ ಗಾಂಧೀಜಿಗೆ 74ವರ್ಷ ತುಂಬಿದಾಗ ಒಟ್ಟು 74 ವಿಧಾಯಕ ಕಾರ್ಯಗಳನ್ನು ನೆರವೇರಿಸಿದ ಮಹಾದೇವ ಈಗ 75ನೇ ಕಾರ್ಯಕ್ರಮದ ಯೋಜನೆ ಹಾಕಿಕೊಂಡರು. ಗಾಂಧೀಜಿಗೆ 75 ತುಂಬುವಾಗ ಇದು ಸಂಪೂರ್ಣ ಯಶಸ್ವಿಗೊಳ್ಳಬೇಕೆಂದು ನಿರ್ಧರಿಸಿದ್ದರು. ತಮ್ಮ ಅನುಯಾಯಿಗಳೆಲ್ಲರ ಗುಪ್ತ ಸಭೆ ಕರೆದು ಸಮಾಲೋಚನೆ ಮಾಡಿದರು. ಅದರಂತೆ 01.04.1943ರ ಬೆಳಿಗ್ಗೆ ಹೊಸರಿತ್ತಿಯ ಕಂದಾಯ ವಸೂಲಿ ಕಚೇರಿಯ ಮೇಲೆ ದಾಳಿ ನಡೆಸಿ ಅದನ್ನು ಧ್ವಂಸ ಮಾಡುವ ಯೋಜನೆ ಹಾಕಿಕೊಳ್ಳಲಾಯಿತು. ಇಷ್ಟೊತ್ತಿಗಾಗಲೆ ಸರಕಾರ ಮಹಾದೇವಪ್ಪನನ್ನು ಹಿಡಿದುಕೊಟ್ಟವರಿಗೆ ಬಹುಮಾನವನ್ನೂ ಘೋಷಿಸಿತ್ತು. ಆದರೆ ಆತ ಅದಾವುದಕ್ಕೂ ಲೆಕ್ಕಿಸುತ್ತಿರಲಿಲ್ಲ. ಸಾಬರಮತಿಯ ಆಶ್ರಮದಲ್ಲಿ ಪಕ್ಕಾ ತರಬೇತಿ ದೊರೆತಿದ್ದರಿಂದ ಎಲ್ಲ ಯೋಜನೆಗಳಿಗೂ ಸರಿಯಾದ ಪೂರ್ವ ತಯಾರಿ ಮಾಡಿಕೊಳ್ಳುತ್ತಿದ್ದ ಚತುರಮತಿ ಅವರಾಗಿದ್ದರು. ಹಿಂದಿನ ದಿನ ಎಲ್ಲರಿಗೂ ಕೆಲಸದ ವಿಧಾನ, ಸಮಯ ಎಲ್ಲ ತಿಳಿಸಿ ಹೇಳಲಾಗಿತ್ತು.

ಸರಕಾರ ಹೊಸರಿತ್ತಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಕರ ಸಂಗ್ರಹಣೆಗಾಗಿ ಹೊಸರಿತ್ತಿಯ ವೀರಭದ್ರ ದೇವರ ಗುಡಿಯನ್ನೇ ಕಂದಾಯ ಶೇಖರಣೆಯ ತಾತ್ಪೂರ್ತಿಕ ಕಛೇರಿಯನ್ನಾಗಿ ಮಾರ್ಪಡಿಸಿತ್ತು. ಕರ್ನಾಟಕ ಪೋಲೀಸರಿಗೆ ಮಹಾದೇವಪ್ಪನನ್ನು ಹಿಡಿಯಲು ಸಾಧ್ಯವಾಗುವುದಿಲ್ಲ ಹಾಗೂ ಅವರಲ್ಲಿಯ ಹಲವರು ಆತನನ್ನು ಮೆಚ್ಚಿಕೊಡಿದ್ದಾರೆಂದು ಅರಿತ ಸರಕಾರ ಮಹಾರಾಷ್ಟ್ರದಿಂದ ಸಶಸ್ತ್ರ ಪೊಲೀಸರನ್ನು ಸರ್ಕಲ್ ಇನ್ಸ್‌ಪೆಕ್ಟರ್ ಪೈ ನೇತೃತ್ವದಲ್ಲಿ ಕರೆ ತಂದಿತ್ತು. ಪೈಗೆ ಮಹಾದೇವಪ್ಪನೆಂದರೆ ಎಲ್ಲಿಲ್ಲದ ಕೋಪ ಹೇಗಾದರೂ ಮಾಡಿ ಆತನನ್ನು ಹಿಡಿದೇ ತೀರುವೆನೆಂದು ಘೋಷಿಸಿಬಿಟ್ಟಿದ್ದ. ಮಹಾದೇವಪ್ಪನಾದರೂ ಅಷ್ಟೆ, ಪೈಯ ರುಂಡ ಚಂಡಾಡಿ ಹಾವೇರಿ ಅಗಸಿ ಬಾಗಿಲಿಗೆ ಕಟ್ಟುತ್ತೇನೆ ಎಂದು ಮರುಘರ್ಜಿಸಿ ಅವನಿಗೂ ನಡುಕ ಹುಟ್ಟಿಸಿದ್ದ.

ನಿಗದಿಪಡಿಸಿದಂತೆ ಮಹಾದೇವಪ್ಪ ತನ್ನ ತಂಡದವರಾದ ತಿರಕಪ್ಪ ಮಡಿವಾಳರ, ವೀರಯ್ಯ ಹಿರೇಮಠ, ಪೀರ್‌ಸಾಬ್ ನದಾಫ್, ಗೋಣೆಪ್ಪ ಕಮತ, ಚಂದುಸಾಬ್, ಫಕ್ಕೀರಯ್ಯ ಕುಲಕರ್ಣಿ, ನಿಂಗಪ್ಪ ಕುರಗುಂದ, ಯಮನೂರಸಾಬ್, ನಿಂಗನಗೌಡ, ತಾವರೆ, ಇನ್ನೂ ಕೆಲ ವೀರಯೋಧರೊಂದಿಗೆ ಜಯಘೋಷ ಮಾಡುತ್ತ ವೀರಭದ್ರ ದೇವಸ್ಥಾನಕ್ಕೆ ಮುತ್ತಿಗೆ ಹಾಕಿದಾಗ ಬೆಳಗಿನ ಎಂಟು ಗಂಟೆಯಾಗಿತ್ತು. ಪ್ರಾಥರ್ವಿಧಿಗಾಗಿ ಕೆಲ ಪೋಲೀಸರು ಹೊಳೆಯ ಕಡೆ ಹೋಗಿದ್ದರೆ ಇನ್ನೂ ಕೆಲವರು ಮುಂಜಾನೆಯ ನಿದ್ರೆಯ ಮಂಪರಿನಲ್ಲಿದ್ದರು. ಮಹಾದೇವಪ್ಪ ನಾಲ್ಕು ಜನ ಸಶಸ್ತ್ರ ಪೊಲೀಸರನ್ನು ತನ್ನ ತೆಕ್ಕೆಯಲ್ಲಿ ಅಮುಕಿ ಹಿಡಿದು ಅವರನ್ನು ನಿಶಸ್ತ್ರೀಕರಣ ಮಾಡಲು ಕೇಳಿಕೊಂಡಾಗ ಆತನ ಸಹಚರರು ಬಂದೂಕುಗಳನ್ನೆಲ್ಲ ಕಸಿದುಕೊಂಡರು. ಅಷ್ಟರಲ್ಲಿ ಹೊರಹೋದ ಪೋಲೀಸರಿಗೆ ಸುದ್ದಿ ತಿಳಿದು ಡಂ ಡಂ ಎಂದು ಗುಂಡು ಹಾರಿಸುತ್ತ ಕಚೇರಿ ಕಡೆ ಬಂದರು. ಆದರೆ ಚಳುವಳಿಗಾರರಲ್ಲಿಯೂ ಮದ್ದುಗುಂಡುಗಳಿದ್ದುದರಿಂದ ಪೊಲೀಸರು ಹೆದರಿ ಕಂಗಾಲಾಗಿ

ಒಟಕಿತ್ತರು. ಅಂತೆಯೇ ಮಹಾದೇವಪ್ಪ ಪಕ್ಕದಲ್ಲಿದ್ದ ಕಿರು ಖಜಾನೆಗೆ ಕೈ ಹಾಕಿ ಬೀಗ ಮುರಿಯತೊಡಗಿದ. ಆದರೆ ವಿಧಿಯಾಟ ಬೇರೆಯೇ ಇತ್ತು. ಗರ್ಭಗುಡಿಯಲ್ಲಿ ಅವಿತು ಕುಳಿತ ಇಬ್ಬರು ಪೋಲೀಸರು ನೇರವಾಗಿ ಅವನ ಎದೆಗೆ ಗುಂಡು ಹಾರಿಸಿಬಿಟ್ಟರು. ಮಹಾದೇವಪ್ಪ ರಕ್ತದ ಮಡುವಿನಲ್ಲಿ ಹೊರಳಾಡತೊಡಗಿದ. ಉಳಿದ ವೀರರೂ ಗುಂಡು ಹಾರಿಸಲು ತಯಾರಾದರು. ಆದರೆ ಮಹಾದೇವಪ್ಪ ನಮ್ಮದು ಅಹಿಂಸಾತ್ಮಕ ಹೋರಾಟ, ಪೊಲೀಸರನ್ನು ಕೊಲ್ಲದಿರಿ, ಹಿಂಸೆ ಮಾಡದಿರಿ ಎಂದು ಹೇಳುತ್ತಲೇ ವೀರ ಸ್ವರ್ಗ ಸೇರಿದ. ಅವನ ಜೊತೆಗಾರರಾದ ತಿರಕಪ್ಪ ಮಡಿವಾಳರ ಹಾಗೂ ವೀರಯ್ಯ ಹಿರೇಮಠರೂ ಪೊಲೀಸರ ಗುಂಡಿಗೆ ಆಹುತಿಯಾದರು. ಈ ಸುದ್ದಿ ಕಾಡ್ಗಿಚ್ಚಿನಂತೆ ಎಲ್ಲೆಡೆ ಹರಡಿತು. ನಾಡು ಶೋಕಸಾಗರದಲ್ಲಿ ಮುಳುಗಿತು. ಹಲವಾರು ಹಾಡುಗಳು, ನೂರಾರು ಲಾವಣಿ ಗೀಗೀ ಪದಗಳು ಮಹಾದೇವಪ್ಪನ ಕಲಿತನ, ತ್ಯಾಗಬಲಿದಾನಗಳ ಮೇಲೆ ರಚಿಸಲ್ಪಟ್ಟವು. ಸಮ್ಮದ್ ಸಾಹೇಬನ ಲಾವಣಿಯ ಈ ಎರಡು ಸಾಲು ನೋಡಿ:

**..ತುಂಟರ ತುಂಟನು ಭಂಟರ ಭಂಟನು ಸಾತ್ವಿಕರೊಳಗೆ ಸರದಾರ**

**ದಿಟ್ಟಿನ ಹೆಸರನು ಹುಟ್ಟಿದ ಕೂಸಿಗೆ ಇಟ್ಟರೂ ತೀರದು ಉಪಕಾರ**

ಹೌದು ಮಹಾದೇವ ಮೈಲಾರರ ತ್ಯಾಗ ಅಮೂಲ್ಯವಾದದ್ದು, ಅದ್ವಿತೀಯವಾದದ್ದು, ಅವರ ಋಣ ಈ ದೇಶವಾಸಿಗಳ ಮೇಲೆ ಎಂದೆಂದಿಗೂ ಇರುವಂತಹುದು. ಅವರು ಚಿರಾಯು.

# ಗ್ರಾಹಕ ಪ್ರಜ್ಞೆ

ವಿಶ್ವದ ವಾಣಿಜ್ಯ ಹಾಗೂ ಉದ್ದಿಮೆ ಕ್ಷೇತ್ರ ಇಂದು ವಿಚಿತ್ರ ಸನ್ನಿವೇಶದಲ್ಲಿದೆ. ಎಲ್ಲೆಡೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಹುಟ್ಟುವಳಿ, ಸಂಸ್ಕರಣ, ಸಾರಿಗೆ ಸಂಚಾರ, ಸಂರಕ್ಷಣೆ, ಮಾರಾಟ ಹೀಗೆ ಹಲವು ಹಂತಗಳಲ್ಲಿ ವೈಶಿಷ್ಟ್ಯಪೂರ್ಣವಾದ ಸವಾಲುಗಳು ಎದುರಾಗಿವೆ. ಬೇಡಿಕೆಗಿಂತ ಉತ್ಪನ್ನ ಹೆಚ್ಚಾಗಿ ಕೊಳ್ಳುವ ಶಕ್ತಿ ಕಡಿಮೆಯಾಗುತ್ತ ನಡೆದಿದ್ದು ಒಂದು ಕಡೆಯಾದರೆ, ಇದಕ್ಕಿಂತಲೂ ಮುಖ್ಯವಾಗಿ "ಗ್ರಾಹಕ ಜಾಗೃತಿ"ಯು ಇದೆಲ್ಲದರ ಸಾಮಾನ್ಯ ಕಾರಣವಾಗಿದೆ. ಒಂದು ಕಾಲವಿತ್ತು ಗ್ರಾಹಕ ಯಾವುದೋ ಒಂದು ವಸ್ತುವನ್ನು ಕೊಳ್ಳಬೇಕಾದಲ್ಲಿ, ಎಲ್ಲೆಲ್ಲಿಯೂ ಸಾಲಿನಲ್ಲಿ (Q) ನಿಲ್ಲಬೇಕಾಗುತ್ತಿತ್ತು. ಆಹಾರ ಧಾನ್ಯಗಳಿಂದ ಹಿಡಿದು ದಿನನಿತ್ಯದ ಎಲ್ಲ ವಸ್ತುಗಳ ಹಾಗೂ ಭಾರಿ ಪ್ರಮಾಣದ ವಾಹನ ಇನ್ನಿತರ ಸಾಮಗ್ರಿಗಳು ಪೇಟೆಯಲ್ಲಿ ದುರ್ಲಭವಾಗುತ್ತಿದ್ದವು. ಗ್ರಾಹಕ ಬೇಕೆಂದಾಗ, ಬೇಕಾದಂತಹ ಹಾಗೂ ಬೇಕಾಗಿರುವಷ್ಟು ವಸ್ತುಗಳು ಕೈಗೆಟುಕುತ್ತಲೇಯಿರಲಿಲ್ಲ, ಹೀಗಾಗಿ ಬಹು ಹಿಂದೆಯೇ ಚಲಾವಣೆಯಲ್ಲಿದ್ದ "ಗ್ರಾಹಕ ರಾಜ"ನಿದ್ದಂತೆ (Customer is the king) ಎಂಬ ಮಾತು ಕೇವಲ ಪುಸ್ತಕಗಳೊಳಗೇ ಉಳಿಯುವಂತಾಗಿತ್ತು. ಏನೇ ಇರಲಿ, ಹಿಂದಿಗಿಂತ ಇಂದು ಗ್ರಾಹಕನಿಗೆ ಹೆಚ್ಚು ಮಹತ್ವ ಬಂದಿದ್ದನ್ನಂತೂ ನಾವೆಲ್ಲ ಒಪ್ಪಬೇಕಾದ ಮಾತು. ಹೀಗೆಂದಾಕ್ಷಣವೇ ವಾಣಿಜ್ಯ ವ್ಯವಹಾರವೆಲ್ಲ ಗ್ರಾಹಕನ ನಿಯಂತ್ರಣದಲ್ಲಿಯೇ ಇದೆ ಎಂದಾಗಲಿ ಅಥವಾ ಎಲ್ಲ ಗ್ರಾಹಕನ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡೇ ನಡೆಯುತ್ತೇವೆಂದಾಗಲಿ ಖಂಡಿತ

ಭಾವಿಸಕೂಡದು. ನಮ್ಮಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಬಳಕೆದಾರನ ಈ ಜಾಗೃತಿ-ಅದೆ ಗ್ರಾಹಕ ಪ್ರಜ್ಞೆ ಇನ್ನೂ ನಿಗದಿತ ಮಟ್ಟ ತಲುಪಿಲ್ಲ. ಆದ್ದರಿಂದ ಈ ಬಗ್ಗೆ ಹೆಚ್ಚೆಚ್ಚು ತಿಳಿದುಕೊಳ್ಳುವುದು ಅವಶ್ಯವಾಗಿದೆ.

ಬಹುಸಂಖ್ಯಾತರು ತಿಳಿದಿರುವಂತೆ ಈ “ಗ್ರಾಹಕ ಜಾಗೃತಿ” ಅಥವಾ “ಆಂದೋಲನ” ಇತ್ತೀಚಿನ ಬೆಳವಣಿಗೆ ಏನಲ್ಲ. ಸೈರಸ್ ಎಂಬ ಪರ್ಸಿಯನ್ ದೊರೆ, ಗ್ರೀಕ್ ಮಾರುಕಟ್ಟೆಯಲ್ಲಿನ ವಂಚನೆ ಬಗ್ಗೆ ಕ್ರಿ.ಶ. ಪೂರ್ವ 5000ದಲ್ಲೇ ದೂರು ನೀಡಿದ್ದ! ಬಹುಶಃ ಇದೇ, ಈವರೆಗಿನ ತಿಳುವಳಿಕೆ ಮಟ್ಟದಲ್ಲಿ ಮೊಟ್ಟಮೊದಲ ಗ್ರಾಹಕ ಪ್ರಜ್ಞೆಯ ಉದಾಹರಣೆ ಎನಿಸಿದೆ. ತದನಂತರ ದೊರೆಯುವ ದಾಖಲೆಯೆಂದರೆ ಕ್ರಿ.ಶ. ಪೂರ್ವ 1750ರಲ್ಲಿ ಮೆಸೊಪೊಟೊಮಿಯದಲ್ಲಿಯದು; ಆ ಕಾಲದಲ್ಲೆ ಮೆಸೊಪೊಟೊಮಿಯನ್ನರು ತೂಕ, ಅಳತೆ ಮತ್ತು ಬೆಲೆಗಳ ಬಗ್ಗೆ ಕಾನೂನನ್ನು ಪ್ರಾರಂಭಿಸಿದ್ದರು.

ಭಾರತೀಯ ಸಂದರ್ಭಗಳಲ್ಲಿ ಪುರಾಣ ಪುಣ್ಯ ಕತೆಗಳ ನಾರದ ಹಾಗೂ ಬೃಹಸ್ಪತಿಗಳು, ಕೊಡುಕೊಳ್ಳುವವರ ಹಿತದ ಬಗ್ಗೆ ವಿವರಿಸಿದ್ದು ಬಿಟ್ಟರೆ ಈ ಒಂದು ಗ್ರಾಹಕ ರಕ್ಷಣೆಯ ಪ್ರಸ್ತಾಪವನ್ನು ಕೌಟಿಲ್ಯನ ಚಿಂತನೆಯಲ್ಲಿ ನಾವು ಗುರುತಿಸಬಹುದಾಗಿದೆ. ಆದರೆ ಮೊಟ್ಟಮೊದಲ ಭಾರತೀಯ ಗ್ರಾಹಕ ಪ್ರಜ್ಞೆ ಕಂಡದ್ದು ಮಹಾತ್ಮ ಗಾಂಧೀಜಿಯ ಸತ್ಯಾಗ್ರಹದ ಪ್ರಾರಂಭದ ಘಟನೆಯೊಂದರಲ್ಲೆನ್ನಬಹುದು. ಅದೆಂದರೆ 1893ರಲ್ಲಿ ಗಾಂಧೀಜಿ ಪ್ರಥಮ ದರ್ಜೆಯ ಟಿಕೆಟ್ ಹೊಂದಿದಾಗ್ಯೂ ಬಿಳಿಯನಲ್ಲವೆಂಬ ಕಾರಣದಿಂದಾಗಿ ಆ ರೈಲಿನಲ್ಲಿಯ ಮೂರನೆ ದರ್ಜೆಯ ಡಬ್ಬಿಯೆಡೆ ತಳ್ಳಿಸಿಕೊಂಡಾಗ ! ಗಾಂಧೀಜಿಯ ಪ್ರತಿಭಟನೆ ಗ್ರಾಹಕ ಪ್ರಜ್ಞೆಯ ದ್ಯೋತಕವಾಗಿತ್ತು. ಅಂತೆಯೇ ಅವರು ಮುಂದೆ ಒಂದು ಕಡೆ:“A Customer is the most important Visitor on our premises. He is not dependanton us. We are dependant on him. He is not an outsider on our business. He is part of it. We are not doing him a favour by serving him. He is doingus a favour by giving us an opportunity to do so.'' ಎಂದು ಉಲ್ಲೇಖಿಸಿದರು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಗ್ರಾಹಕ ಆಂದೋಲನಕ್ಕಾಗಿಯೇ ಹಲವಾರು ಸಂಘಟನೆಗಳು, ಪತ್ರಿಕೆಗಳು ಕೆಲಸ ಮಾಡುತ್ತಿವೆ. “ಕನ್ಸುಮರ್ ಇಂಟರ್‌ನ್ಯಾಶನಲ್” ಪ್ರಕಾರ “ಖರೀದಿದಾರರನ್ನು ಗ್ರಾಹಕನನ್ನಾಗಿ ಪರಿವರ್ತಿಸಿ. ಕೊಳ್ಳುವವನಿಗೆ ಒಂದೇ ಕಣ್ಣು ಸಾಕಿದ್ದರೆ ಗ್ರಾಹಕನಿಗೆ ಸಾವಿರ ಕಣ್ಣಳು ಬೇಕಿವೆ”, ಬಹುಶಃ ಆಗ ಪ್ರಚಲಿತದಲ್ಲಿದ್ದ “Buyer Beware” (ಕೊಳ್ಳುವವನೆ ಎಚ್ಚರ !) ಎಂಬುದಕ್ಕೆ ಇದು ತಕ್ಕ ಉತ್ತರ ನೀಡಲು ಮಾಡುವ ಸಿದ್ದತೆ ಎಂದೆನ್ನಬಹುದು. ಅಂದರೆ “Seller beware” (ವರ್ತಕನೆ ಎಚ್ಚರ) ಎಂಬ ಕಡೆ ದಾಪುಗಾಲು ಹಾಕುವ ಸಮಯ ಬರುತ್ತಿದೆ ಎಂದರ್ಥ. ಏನೇ ಬಂದರೂ ಗ್ರಾಹಕರ ಅಂದೋಲನವು ಕೊಳ್ಳುವವರು ಎಷ್ಟರ ಮಟ್ಟಿಗೆ ಜಾಗೃತರಾಗಿದ್ದಾರೆ ಎಂಬುದರ ಮೇಲೆ ನಿಂತಿದೆ. ಗ್ರಾಹಕನು ಮಾರುಕಟ್ಟೆಯಲ್ಲಿ ವಂಚನೆಗೊಳಗಾದ ಅತೃಪ್ತಿ, ಅಕಸ್ಮಾತ್ ಅವನಿಗೆ ಅದನ್ನು ಪರಿಹರಿಸಿಕೊಳ್ಳುವ ಮಾರ್ಗೋಪಾಯಗಳು ತಿಳಿದಿದ್ದಲ್ಲಿ, ಗ್ರಾಹಕನ ಹಿತರಕ್ಷಣೆಯು ಒಂದು ಆಂದೋಲನವಾಗಿ ಹೊರಹೊಮ್ಮುತ್ತದೆ. ತಾನು ಕೊಂಡುಕೊಂಡ ಪದಾರ್ಥ ತನ್ನ ನಿರೀಕ್ಷಿತ ಮಟ್ಟಕ್ಕೆ ಹಾಗೂ ಮಾರಾಟಗಾರ ಹೇಳಿದ ಅಥವಾ ವರ್ಣಿಸಿದ ರೀತಿಯಲ್ಲಿ ಇರದೇ ಇದ್ದಲ್ಲಿ ಇಂತಹದೊಂದು ಅತೃಪ್ತಿ ಅಥವಾ ಅಸಮಾಧಾನ ಸಹಜವಾಗಿಯೇ ಕಂಡುಬರುತ್ತದೆ. ಹಿಂದಿನ ಕಾಲಕ್ಕೆ ಹೋಲಿಸಿದಲ್ಲಿ ಇಂದು ಮಾರುಕಟ್ಟೆ ವಿಪರೀತ ಬೆಳೆದಿದೆ. ಅಂದು ಕೆಲವೇ

ಕೆಲವು ಉತ್ಪನ್ನಗಳು, ಬ್ರ್ಯಾಂಡ್‌ಗಳು ಇರುತ್ತಿದ್ದವು. ಅಲ್ಲದೆ ಮಾರಾಟಗಾರನ ಹಾಗೂ ಖರೀದಿದಾರನ ನೇರ ಸಂಬಂಧವೂ ಇರುತ್ತಿತ್ತು. ಹೆಚ್ಚಾನು ಹೆಚ್ಚು ಪರಸ್ಪರ ನಂಬುಗೆಯ ಮೇಲೆಯೆ ವ್ಯವಹಾರ ನಡೆಯುತ್ತಿತ್ತು. ಆದರೆ ಇಂದು ಅಸಂಖ್ಯ ರೀತಿಯ ಒಂದೇ ನಮೂನೆಯ ವಸ್ತುಗಳು ನಮ್ಮೆದುರು ಇಡಲ್ಪಟ್ಟಿರುತ್ತವೆ. ಸಾಧಾರಣ ಗ್ರಾಹಕನ ವಿವೇಚನೆಗೆ ನಿಲುಕಲಾರದಷ್ಟು ಇಂದು ವ್ಯಾಪಾರಿ ಮಾಲುಗಳು ಬೆಳೆದು ನಿಂತಿವೆ. ಇದರಿಂದಾಗಿ ಬಳಕೆದಾರನ ದಿಕ್ಕು ತಪ್ಪುವಿಕೆಯನ್ನು ತಡೆಗಟ್ಟಲು ಗ್ರಾಹಕಪ್ರಜ್ಞೆ ಎಂದಿಗಿಂತ ಇಂದು ಹೆಚ್ಚು ಅವಶ್ಯಕ..

ಗ್ರಾಹಕನ ಪರಿಸ್ಥಿತಿ ಹೀಗಿದ್ದಾಗ ಮಾರಾಟಗಾರನದು ತದ್ವಿರುದ್ಧವಾದ ಬೆಳವಣಿಗೆ ಎನ್ನಬಹುದು. ಆತನ ಉತ್ಪನ್ನಗಳಿಗೆ ಮೊದಲಿಗಿಂತ ಇಂದು ಸಾಧನ, ಸೌಕರ್ಯ, ಸೌಲಭ್ಯಗಳು ಹೆಚ್ಚಾಗಿವೆ. ಮಾಧ್ಯಮಗಳ ಮೂಲಕ ಆತ ತನ್ನ ವಸ್ತುಗಳಿಗೆ ಮಾರುಕಟ್ಟೆ ದೊರಕಿಸುವಲ್ಲಿ ಯಶಸ್ಸು ಕಾಣುತ್ತಿದ್ದಾನೆ. ವಿಪರೀತ ಜಾಹೀರಾತುಗಳು ಬಹುಸಂಖ್ಯಾತ ಮುಗ್ಧ ಬಳಕೆದಾರರನ್ನು ದಿಕ್ಕು ತಪ್ಪಿಸುತ್ತಿವೆ. ಆದ್ದರಿಂದ ಗ್ರಾಹಕನಿಗೆ ಶಿಕ್ಷಣ, ತರಬೇತಿ, ಮಾಹಿತಿ ನೀಡಿ ಅವನನ್ನು ಪ್ರಜ್ಞಾವಂತ ಬಳಕೆದಾರನ್ನಾಗಿ ಮಾಡಬೇಕಿದೆ. ಇದಕ್ಕಾಗಿ ಸರಕಾರ ಹಾಗೂ ತಜ್ಞರು ಹೆಚ್ಚೆಚ್ಚು ಕೆಲಸ ಮಾಡಬೇಕಿದೆ, ಮಾರ್ಗೋಪಾಯಗಳನ್ನು ಹುಡುಕಬೇಕಿದೆ, ಸಂಶೋಧನೆಗಳನ್ನು ಕೈಗೊಳ್ಳಬೇಕಾಗಿದೆ. ಗ್ರಾಹಕ ಆಂದೋಲನ ಸಮಾಜಾಂದೋಲನ ಆಗಬೇಕಿದೆ. ಉತ್ಪಾದನೆಗಳನ್ನು ಪರೀಕ್ಷಿಸುವ ಜ್ಞಾನ ಪ್ರಸಾರಕ್ಕಾಗಿಯೇ ನಮ್ಮ ದೇಶದಲ್ಲಿ ಕೆಲವು ಸಂಘ ಸಂಸ್ಥೆಗಳು, ಸಂಶೋಧನಾ ಕೇಂದ್ರಗಳು ಇವೆ. ಮೈಸೂರಿನಲ್ಲಿಯೇ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆ, ಮುಂಬಯಿಯಲ್ಲಿ ಹಾಗೂ ಇನ್ನಿತರ ಮಹಾನಗರಗಳಲ್ಲಿ ಪೆಟ್ರೋಲ್, ಡೀಸೆಲ್‌ಗಳ ಗುಣಮಟ್ಟ ಪರಿಶೀಲಿಸುವ ಕೇಂದ್ರಗಳಿವೆ. ಬಹುತೇಕ ಎಲ್ಲ ಗ್ರಾಹಕ ವಸ್ತುಗಳನ್ನೂ ಪರೀಕ್ಷಿಸುವ ಸಂಶೋಧನಾ/ವಿಶ್ಲೇಷಣಾ ಸಂಸ್ಥೆಗಳು ಉಪಕರಣಗಳು ಈಗ ಲಭ್ಯ ಇವೆ. ಇವೆಲ್ಲವುಗಳಿಗೆ ಬೆನ್ನೆಲುಬಾಗಿ ಗ್ರಾಹಕ ಸಂರಕ್ಷಣಾ ಕಾನೂನಿನಡಿ "ಗ್ರಾಹಕರ ಹಿತರಕ್ಷಣ ವೇದಿಕೆ'' (ನ್ಯಾಯಾಲಯ)ಗಳಿವೆ. ಜಿಲ್ಲಾ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಬಳಕೆದಾರನು ತನಗನ್ಯಾಯವಾದ ಮೊತ್ತಕ್ಕನುಗುಣವಾಗಿ ಈ ಕೆಳಗಿನಂತೆ ದೂರು ನೀಡಬಹುದಾಗಿದೆ:

- ಪರಿಹಾರದ ಮೊತ್ತ / ಪಡೆದ ಸೇವೆ ಅಥವಾ ಖರೀದಿಸಿದ ವಸ್ತುಗಳ ಬೆಲೆ ಐದುಲಕ್ಷ ರೂಪಾಯಿಗಳವರೆಗೆ ಇದ್ದರೆ ಆಯಾ ಜಿಲ್ಲಾಮಟ್ಟದ ಗ್ರಾಹಕರ ನ್ಯಾಯಾಲಯಗಳು.
- ಅದು ಐದು ಲಕ್ಷಕ್ಕಿಂತ ಹೆಚ್ಚು ಹಾಗೂ ಇಪ್ಪತ್ತು ಲಕ್ಷ ರೂ.ಗಳ ವರೆಗಿದ್ದರೆ - ರಾಜ್ಯಮಟ್ಟದ ಗ್ರಾಹಕರ ನ್ಯಾಯಲಯ
- ಇಪ್ಪತ್ತು ಲಕ್ಷ ರೂ.ಗಳಿಗೂ ಹೆಚ್ಚಿನ ಪರಿಹಾರಕ್ಕಾಗಿ ರಾಷ್ಟ್ರಮಟ್ಟದ ಗ್ರಾಹಕರ ನ್ಯಾಯಾಲಯ.

ಈ ಗ್ರಾಹಕರ ನ್ಯಾಯಾಲಯಗಳಲ್ಲಿ ಕೇವಲ ಗ್ರಾಹಕನಷ್ಟೇ ದೂರು ಸಲ್ಲಿಸಬೇಕೆಂದೇನೂ ಇಲ್ಲ. ಆತನ ಪರವಾಗಿ ಆತನಿಂದ ಅಧಿಕಾರ ಪಡೆದ ಪ್ರತಿನಿಧಿ ಮಾಡಬಹುದಾಗಿದೆ. ಇದೂ ಅಲ್ಲದೇ ಸಂಬಂಧಿಸಿದ ರಾಜ್ಯ ಸರಕಾರಗಳು, ಕೇಂದ್ರಾಡಳಿತ ಪ್ರದೇಶಗಳು ಅಥವಾ ನೋಂದಾಯಿತ ಗ್ರಾಹಕ ಹಿತಚಿಂತಕ ಸ್ವಯಂ ಸೇವಾ ಸಂಸ್ಥೆಗಳು ದೂರು ನೀಡಲು ಅರ್ಹವಾಗಿವೆ.

ಹೀಗೆ ನೀಡುವ ದೂರಿನಲ್ಲಿ: ಫಿರ್ಯಾದಿದಾರನ (ಗ್ರಾಹಕನ) ಹೆಸರು, ವಿಳಾಸ; ಯಾರ ವಿರುದ್ಧ ದೂರು ದಾಖಲಾಗುತ್ತಿದೆಯೊ ಅವರ ಅಥವಾ ಆ ಅಂಗಡಿ, ಮಳಿಗೆಗಳ ಹೆಸರು ವಿಳಾಸ; ದೂರಿನ ಸರಿಯಾದ ವಿವರಗಳು; ಕಂಡುಬಂದ ದೋಷ, ಲೋಪ ಇತ್ಯಾದಿಗಳ ನಿಖರ ವಿವರಗಳು, ಖರೀದಿ ಬಗೆಗಿನ ರಸೀದಿ ಇತ್ಯಾದಿ ದಾಖಲೆಗಳು, ಬಯಸುವ ಪರಿಹಾರದ ಮೊತ್ತ ಅಥವಾ ವಸ್ತುಗಳ ಬದಲಾವಣೆ ಇತ್ಯಾದಿಗಳ ಬಗ್ಗೆ ವಿವರಗಳು, ಇಷ್ಟು ವಿವರಣೆ ನೀಡಿದ ಮೇಲೆ ಅರ್ಜಿಗೆ ದೂರುದಾರನು ಸಹಿ ಹಾಕಬೇಕು.

ನೀಡಿದ ದೂರು ಯೋಗ್ಯವಾಗಿದೆಯೆಂದು, ವಿಚಾರಣೆ ನಂತರ ನ್ಯಾಯಾಲಯಕ್ಕೆ ಮನವರಿಕೆಯಾದರೆ ಆಗ ಈ ಕೆಳಗಿನಂತೆ ಪರಿಹಾರ ಸಿಗಬಹುದಾಗಿದೆ:

- ಖರೀದಿಸಿದ ವಸ್ತುಗಳಲ್ಲಿರುವ ಕೊರತೆ ಅಥವಾ ದೋಷ ನಿವಾರಣೆ
- ಖರೀದಿಸಿದ ವಸ್ತುಗಳನ್ನು ಪೂರ್ತಿ ಬದಲಾವಣೆ ಮಾಡಿ ಸರಿಯಾದ ಹೊಸ ವಸ್ತು ನೀಡಿಕೆ
- ಕೊಟ್ಟ ಹಣವನ್ನು ಮರಳಿ ಪಡೆಯುವುದು
- ಆದ ಹಾನಿಗೆ ಅಥವಾ ಅನಾನುಕೂಲಕ್ಕೆ ಯೋಗ್ಯ ಪರಿಹಾರ

ಬಳಕೆದಾರನ ಈ ಹಕ್ಕುಗಳಿಗೆ ಪೂರಕವಾಗಿ ಆತನ ಕೆಲ ಕರ್ತವ್ಯಗಳು ಇವೆಯೆಂಬುದನ್ನು ಗ್ರಾಹಕ ಮರೆಯಬಾರದು. ಉದಾ: ಖೊಟ್ಟಿ ಜಾಹಿರಾತುಗಳ ಬಗ್ಗೆ ಎಚ್ಚರವಹಿಸುವುದು, ವ್ಯಾಪಾರ ಸ್ಥಳದಲ್ಲಿ ಸಾಲಿನಲ್ಲಿ ನಿಲ್ಲುವುದು/ಬರುವುದು, ಐ.ಎಸ್.ಐ ಹಾಗೂ ಅಗ್‌ಮಾರ್ಕ್ ಇದ್ದ ವಸ್ತುಗಳಿಗೇ ಆದ್ಯತೆ ನೀಡುವುದು, ಹಣ ಪಾವತಿಸಿದ ಬಗ್ಗೆ ರಸೀದಿಯನ್ನು ಕೇಳಿ ಪಡೆಯುವುದು, ಖರೀದಿಸಿದ ವಸ್ತುವಿನ ಮೇಲೆ ನೀಡಿದ ವಿವರದಂತೆಯೇ ಅದನ್ನು ಬಳಸುವುದು ಇತ್ಯಾದಿ. ಮತ್ತೆ ನೀಡುವ ದೂರು ಕ್ಷುಲ್ಲಕ ಅಥವಾ ಸ್ವಕಪೋಲಕಲ್ಪಿತ ಅಂಶಗಳ ಮೇಲಿರಕೂಡದು, ಅದು ಖಚಿತ ಹಾಗೂ ನಿಜಾಂಶಗಳ ಮೇಲಿರಬೇಕು.

ಇತ್ತೀಚೆಗಂತೂ ಕೇಂದ್ರ ಹಾಗೂ ರಾಜ್ಯ ಸರಕಾರಗಳು ನಮ್ಮ ದೇಶದಲ್ಲಿ ಗ್ರಾಹಕನ ಹಿತರಕ್ಷಣೆಗಾಗಿ ಹೆಚ್ಚೆಚ್ಚು ಗಮನ ಕೊಡುತ್ತಿವೆ. ಪ್ರತಿವರ್ಷ ಡಿಸೆಂಬರ್ 24ನ್ನು ರಾಷ್ಟ್ರೀಯ ಗ್ರಾಹಕ ದಿನಾಚರಣೆಯೆಂದಾಗಿ ಆಚರಿಸಲಾಗುತ್ತಿದೆ. (ಮಾರ್ಚ್ 15, ಅಂತರರಾಷ್ಟ್ರೀಯ ಗ್ರಾಹಕ ದಿನಾಚರಣೆ) ಈಗ ಸರಕಾರಗಳ ಬಹುತೇಕ ಎಲ್ಲ ಇಲಾಖೆಗಳೂ ನಾಗರಿಕ ಸನ್ನದು (ಸಿಟಿಜನ್ಸ್ ಚಾರ್ಟರ್)ಗಳನ್ನು ಪ್ರಕಟಿಸುತ್ತಿವೆ. ಇನ್ನು ಮಾಹಿತಿ ಹಕ್ಕು ಒಂದು ಅತ್ಯಂತ ನವೀನ ಕಲ್ಪನೆಯಾಗಿದ್ದು ನಾಗರೀಕರಿಗೆ ದೊರಕಿದ ವರದಾನವಾಗಿದೆ. ಸರಕಾರದ ಎಲ್ಲ ಆದೇಶ (ಸಾರ್ವಜನಿಕರಿಗೆ ಸಂಬಂಧಿಸಿದ್ದು)ಗಳ ಬಗ್ಗೆ ಮಾಹಿತಿ ಮಾಡಿಕೊಳ್ಳುವ ಅಧಿಕಾರ ಆತನ ತಿಳುವಳಿಕೆಯ ಕ್ಷಿತಿಜವನ್ನು ವಿಸ್ತರಿಸಿದೆ, ಹಾಗೆಯೇ ಆಡಳಿತದಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸಿದೆ. ಇದರಿಂದಾಗಿ ವಾಣಿಜ್ಯ ವ್ಯವಹಾರಗಳಲ್ಲಿಯೂ ಪಾರದರ್ಶಕತೆ ಅಡಿಯಿಟ್ಟು ಉತ್ತಮ ಗುಣಮಟ್ಟಗಳ ಸೇವೆ ಹಾಗೂ ವಸ್ತುಗಳ ಕಾಲ ಸನ್ನಿಹಿತವಾಗುತ್ತಿದೆ.

ಇಷ್ಟೆಲ್ಲ ಇದ್ದಾಗ್ಯೂ ಕೊನೆಯಲ್ಲಿ ಆರ್.ಅಂಜಲೋಜ್ ಎಂಬುವವರ “Know Quality, No Loss; No Quality, Know Loss” (ಗುಣಮಟ್ಟ ತಿಳಿದರೆ ಹಾನಿಯಿಲ್ಲ, ಗುಣಮಟ್ಟ ಇಲ್ಲದಿರೆ ಹಾನಿ ಖಂಡಿತ) ಎಂಬ ಈ ಮಾತು ಬಹಳ ಮಾರ್ಮಿಕವಾದ್ದೆನಿಸುತ್ತದೆ. ಆದ್ದರಿಂದ ಗುಣಮಟ್ಟದ ತಿಳುವಳಿಕೆ ಅತ್ಯಂತ ಅವಶ್ಯಕ ಹಾಗೂ ತನ್ನ ಸ್ವಯಂ ರಕ್ಷಣೆಗೆ ಗ್ರಾಹಕ ಎಚ್ಚೆತ್ತುಕೊಳ್ಳಬೇಕಿದೆ; ಅದೇ “ಗ್ರಾಹಕ ಪ್ರಜ್ಞೆ”.

# ಮಾತು

ಸಕಲ ಜೀವರಾಶಿಗಳಲ್ಲಿ ಅತ್ಯಂತ ವಿಶಿಷ್ಟನೆಂದು ಮಾನವನು ಕರೆಯಿಸಿಕೊಳ್ಳುವುದಕ್ಕೆ ಆತನ ಬುದ್ಧಿಮತ್ತೆ ಹಾಗೂ ಮಾತುಗಳೇ ಕಾರಣ. ಕೇವಲ ಸಂಜ್ಞೆಗಳ ಮೂಲಕ ತನ್ನ ವಿಚಾರ ವಿನಿಮಯ ಮಾಡಿಕೊಳ್ಳುತ್ತಿದ್ದ ಮನುಷ್ಯ, ಕ್ರಮೇಣ ತನ್ನ ಸ್ವರಗಳ ಮೂಲಕ, ನಂತರ ಶಬ್ದಗಳ ಮೂಲಕ ತನ್ನ ಭಾವನೆಗಳನ್ನು ಅಭಿವ್ಯಕ್ತಗೊಳಿಸತೊಡಗಿದ. ನಿರ್ಧಿಷ್ಟ ಸ್ವರೂಪದ ಇಂತಹ ಶಬ್ದಗಳ ಸಮೂಹ ಆತನಲ್ಲಿ ಹೆಚ್ಚೆಚ್ಚು ಸಂಗ್ರಹವಾಗುತ್ತಾ ಹೋದಂತೆ, ಆತನ ಮಾತುಗಳು ಅರ್ಥಪೂರ್ಣವಾಗಿ ಬೆಳೆಯುತ್ತಾ ಬಂದವು. ವಿಕಾಸವಾದದ ಪರಾಕಾಷ್ಠೆಯಾದ ಜ್ಞಾನಸಂಗ್ರಹಕ್ಕೆ ಮಾನವನ ಒಲವು ಹೆಚ್ಚಾದಂತೆ ಆತ ತನ್ನ ಶಬ್ದ ಹಾಗೂ ಮಾತುಗಳನ್ನು ಶಾಶ್ವತವಾಗಿ ದಾಖಲಿಸುವತ್ತ ಮನಸ್ಸು ಹಾಕಿದ. ಕಾಲಾಂತರದಲ್ಲಿ ಆತನ ಈ ಆಕಾಂಕ್ಷೆಯೇ ಮಾತುಗಳನ್ನು ಲಿಪಿ ಮೂಲಕ ಹೊರಗೆಡುಹಿ, ನಮಗೆ ಭಾಷೆ ಹಾಗೂ ಲಿಪಿಗಳ ದರ್ಶನವಾಯಿತು. ಹೀಗೆ ಮಾತು, ಜ್ಞಾನ, ಭಾಷೆ ಹಾಗೂ ಲಿಪಿಗಳ ಸಂಶೋಧನೆ ಮತ್ತು ವೃದ್ಧಿಗಳಿಗೆ ಕಾರಣವಾಯಿತು.

ಇಂದು ಮಾತು ತನ್ನ ಪರಿಪಕ್ವತೆಯನ್ನು ಕಂಡುಕೊಂಡಿದೆ. ಒಳ್ಳೆ ಮಾತುಗಾರರು ತಮ್ಮ ಭಾಷಣ ಹಾಗೂ ಲೇಖನಗಳಿಂದ ರಾಜ್ಯೋದಯ ಹಾಗೂ ರಾಜ್ಯಾಸ್ತಗಳನ್ನೇ ಸಾಧ್ಯ ಮಾಡಿಸಿತೋರಿಸಿದ್ದಾರೆ. ಅನೇಕ ಸಾಮ್ರಾಜ್ಯಗಳನ್ನು ವಶಪಡಿಸಿಕೊಳ್ಳುವಲ್ಲಿ ಪರಿಣಾಮಕಾರಿಯಾದ ಮಾತು ಕಾರಣೀಭೂತವಾಗಿದೆ. ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಕ ವಲಯಗಳಲ್ಲಿ ಮಾತುಗಳ ಪಾತ್ರ ಬಹುಮುಖ್ಯವಾಗಿದೆ. ಉಜ್ವಲ ದೇಶಪ್ರೇಮ ಬೆಳೆಸುವಲ್ಲಿ ನಾಡು-ನುಡಿಗಳ ಅಭಿಮಾನ ಹೆಚ್ಚಿಸುವಲ್ಲಿ, ಜನಾಭಿಪ್ರಾಯ ರೂಪಿಸುವಲ್ಲಿ ಮಾತುಗಳು ತೀವ್ರತರ ಕೆಲಸ ಮಾಡಬಲ್ಲವು. ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ಸುಭಾಷ್ ಚಂದ್ರ ಇಂತಹ ಮಹನೀಯರ ಹಾಗೂ ಇನ್ನಿತರ ಸ್ವಾತಂತ್ರ್ಯ ನೇತಾರರ ಸ್ಪೂರ್ತಿದಾಯಕ ಮಾತುಗಳೇ ನಮ್ಮ ಇಡೀ ಭಾರತ ದೇಶವನ್ನು ಬಡಿದೆಬ್ಬಿಸಿ, ಸ್ವಾತಂತ್ರ್ಯಾಂದೋಲನ ಯಶಸ್ವಿಯಾಗುವಂತೆ ಮಾಡಿದ್ದು ನಮಗೆಲ್ಲ ತಿಳಿದ ವಿಷಯವೇ. ವಿದ್ವಾನ್ ಸರ್ವತ್ರ ಪೂಜ್ಯತೆ ಎನ್ನುವಂತೆ ಉತ್ತಮ ಮಾತುಗಾರನೂ ಕೂಡ ಎಲ್ಲೆಲ್ಲೂ ಗೌರವಿಸಲ್ಪಡುತ್ತಾನೆ. ಆದ್ದರಿಂದಲೇ ಮಾತೆಂಬುದು ಜ್ಯೋತಿರ್ಲಿಂಗ, ನುಡಿಯೆಂಬುದು ಪರತತ್ವ ಎಂಬ ಶರಣವಾಣಿ ಮಾತು ಮಾಣಿಕ್ಯ, ನುಡಿಮುತ್ತುಗಳು ಎಂಬ ನಾಣ್ಣುಡಿಗಳೂ ಪ್ರಚಲಿತವಾಗಿವೆ.

ನಾವಾಡುವ ಮಾತುಗಳು ನೇರ, ಸ್ಪಷ್ಟ, ಹಿತಮಿತವಾಗಿ, ಮೃದು ಮನೋಹರವಾಗಿರಬೇಕು. ಕೇಳುಗರ ಮನೋಲ್ಲಾಸಗೊಳಿಸಬೇಕು. ಕೋಪದಿಂದಾಡುವ ಮಾತುಗಳು, ವ್ಯಂಗ್ಯ ನುಡಿಗಳು, ಕಠೋರ ಶಬ್ದಗಳು ಇತರರ ಮನ ನೋಯಿಸಿ ಅತಿ ದುಷ್ಪರಿಣಾಮ ಮಾಡಬಲ್ಲವು. ಇದನ್ನೇ ನಾವು ಮಾತಿಂಗೆ ಮಾತು ಮಥಿಸಲ್ಕೆ ವಿಧಿ ತಾ ಆತು ಕೂತಿರುವುದು ಸರ್ವಜ್ಞ ಎಂಬ ವಚನದಲ್ಲಿ ಕಾಣಬಹುದಾಗಿದೆ. ಊಟ ಬಲ್ಲವಗೆ ರೋಗವಿಲ್ಲ, ಮಾತು ಬಲ್ಲವಗೆ ಜಗಳವಿಲ್ಲ ಎಂಬ ಮಾತೂ ಇವೆ. ಆದ್ದರಿಂದಲೇ ನುಡಿದರೆ ಮುತ್ತಿನ ಹಾರದಂತಿರಬೇಕು ನುಡಿದರೆ ಸ್ಪಟಿಕದ ಶಲಾಖೆಯಂತಿರಬೇಕು, ನುಡಿದರೆ ಲಿಂಗಮೆಚ್ಚಿ ಆಹುದಹುದೆನಬೇಕು ಎಂಬ ವಚನ ನಮ್ಮ ನೆನಪಿನಲ್ಲಿ ಸದಾ ಇರಬೇಕಾಗುತ್ತದೆ. ಮುತ್ತಿನಂತಹ ಮಾತು ಎಂಬುದು ಉತ್ತಮ ಮಾತುಗಳಿಗೆ ಅನ್ವಯಿಸುವಂತಹುದು. ಅಂದರೆ

ಮಾತು ಯೋಗ್ಯವಾಗಿದ್ದಾಗ ಅದು ಮುತ್ತಿನಂತಾಗುತ್ತದೆಂಬುದು. ಅದರಂತೆಯೇ ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು ಎನ್ನುವ ಗಾದೆಯೂ ಪ್ರಚಲಿತದಲ್ಲಿದೆ. ನಾವು ಮಾತನಾಡುವಾಗ ಎಷ್ಟೊಂದು ಕಾಳಜಿ ವಹಿಸಬೇಕೆಂಬುದನ್ನು ಇದು ಸೂಚಿಸುತ್ತದೆ. ಇದನ್ನೇ ಇಂಗ್ಲೀಷ್ ಗಾದೆಯೊಂದು You are the master of words unuttered and slave of those uttered (ನೀನಾಡದ ಮಾತುಗಳ ಒಡೆಯ ನೀನು, ನೀನಾಡಿದ ಮಾತುಗಳ ಗುಲಾಮ ನೀನು) ಎಂದು ಸಾರಿದೆ.

ಇನ್ನು ಮಾತಿಗೆ ಸಂಬಂಧಿಸಿದಂತೆಯೇ, ಮಾತು ನೀಡು ಹಾಗೂ ಮಾತು ಕೊಡು ಎಂಬ ಮಾತುಗಳೂ ಬೆಳೆದುಬಂದಿವೆ. ಭಾಷೆ ಕೊಡು, ವಚನ ಕೊಡು ಎಂಬುದಕ್ಕೆ ಸರಿಸಮಾನವಾದ ಅರ್ಥ ಇಲ್ಲಿದೆ. ಅಂದರೆ ಆಡುವ ಮಾತಿಗೆ ನಾವು ಬದ್ಧರಾಗಿರಬೇಕೆಂದಂತೆ. ಇದನ್ನೇ ವಚನವೊಂದು ನುಡಿಯೊಂದಾಗಿ ನಡೆ ಮತ್ತೊಂದಾದೊಡೆ ಹಿಡಿದಿದ್ದ ಲಿಂಗವು ಘಟಸರ್ಪ ನೋಡಾ ಎಂದು ಎಚ್ಚರಿಸಿದೆ. ಕನಸಿನಲ್ಲಿ ಭಾಷೆ ನೀಡಿದ್ದನ್ನು ನಡೆಸಿಕೊಡಲು ಸತ್ಯಕ್ಕೆ ಹೆಸರಾದ ಹರಿಶ್ಚಂದ್ರನು ತನ್ನೆಲ್ಲ ಸಾಮ್ರಾಜ್ಯವನ್ನೂ ತ್ಯಜಿಸಬೇಕಾಯಿತು. ಎಷ್ಟೆಲ್ಲ ಕಷ್ಟಗಳು ಬಂದರೂ ಆತ ತನ್ನ ಮಾತಿಗೆ ಕಟ್ಟುಬಿದ್ದು ಆ ವಚನಬದ್ಧ ನಿಲುವಿನಿಂದ - ನೀಡಿದ ಮಾತಿನಿಂದ - ದೂರಾಗಲಿಲ್ಲ. ಅಂತೆಯೇ ಆತ ಜಗದ್ವಂದ್ಯನಾದ, ಅಮರನಾದ. ಇದು ಮಾತಿನ ಮಹತ್ವದ ಒಂದು ಉದಾಹರಣೆ ಮಾತ್ರ !

ಇಷ್ಟೆಲ್ಲ ಇದ್ದಾಗ್ಯೂ ಮಾತು ಬೆಳ್ಳಿ ಮೌನ ಬಂಗಾರ ಎಂಬ ಮಾತೂ ಬಹು ಜನಪ್ರಿಯವಾದದ್ದೇ ಆಗಿದೆ. ಬಹುಶಃ ಇದನ್ನೆ ಸರ್ವಜ್ಞ ಆಡದೆ ಮಾಡುವನು ರೂಢಿಯೊಳಗುತ್ತಮನು, ಆಡಿ ಮಾಡುವನು ಮಧ್ಯಮನು, ಅಧಮ ತಾ ಮಾತನಾಡಿ ಮಾಡದವನು ಎಂದು ಮಾರ್ಮಿಕವಾಗಿ ವಿವರಿಸಿದ್ದಾನೆ. ಆದರೆ ಇದಕ್ಕುತ್ತರವಾಗಿ ಮನಸ್ಸಿನಲ್ಲಿ ಮಂಡಿಗೆ ತಿಂದರೆ ಗೋಧಿ ಲೆಕ್ಕ ಕೊಡುವವರಾರು? ಎಂಬ ನಾಣ್ಣುಡಿ ಎದುರು ನಿಲ್ಲುತ್ತದೆ. ಮತ್ತೆ ವೈದ್ಯಕೀಯ ಶಾಸ್ತ್ರದಲ್ಲಿಯೂ ಕೂಡ ಒಳ್ಳೆಯ ಸಂವಾದ, ಚರ್ಚೆ ಹಾಗೂ ಅಭಿವ್ಯಕ್ತಿಗಳು ಮಾನಸಿಕ ಒತ್ತಡವನ್ನು ಕಡಿಮೆ ಮಾಡಿ, ಮನಸ್ಸನ್ನು ಉಲ್ಲಸಿತಗೊಳಿಸುತ್ತವೆಯೆಂದು ವಿವರಿಸಲಾಗುತ್ತದೆ. ಅಂದರೆ ಸತ್ಯ ಎಲ್ಲೊ ಎರಡರ ಮಧ್ಯೆ ಅಂದರೆ ಮೌನ ಹಾಗೂ ಮಿತಿಮೀರಿದ ಮಾತು ಎರಡರ ನಡುವೆ ಅಡಗಿದೆ ಎನ್ನಬಹುದು. ಬಹುಶಃ ಇದನ್ನೇ ಹಿಂದಿಯಲ್ಲಿಯ.... ಕಮ್ ಬೊಲೊ ಧೀರೆ ಬೊಲೊ.... (ಮಿತವಾಗಿ ಹಿತವಾಗಿ ಮಾತಿರಲಿ) ಎಂದೆನ್ನಲಾಗಿದೆ. ಸತ್ಯವೂ ಇದೇ ಆಗಿದೆ ಎನ್ನಬಹುದಲ್ಲವೇ? ಇದನ್ನೆ ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ, ರಸಿಕನಲ್ಲದವನ ಬರೀ ಮಾತು ಕಿವಿಯೊಳಗೆ ಕೂರಂಬುವನಿಟ್ಟಂತೆ ಎಂಬುದರಲ್ಲಿ ವಿಶದಪಡಿಸಲಾಗಿದೆ.

ವಾಕ್ ಎಂಬುದು ಮಾತಿಗೆ ಸರಿಮಾನನಾದ ಸಂಸ್ಕೃತ ಪದವಾಗಿದೆ. ವಾಕ್ + ದೇವಿ = ವಾಗ್ದೇವಿ (ಸರಸ್ವತಿ). ಇದರ ತಾತ್ಪರ್ಯವೆಂದರೆ ವಿದ್ಯಾಧಿದೇವತೆ ಶಾರದೆಯು ಮಾತಿನ ಅಧಿದೇವತೆ ಎಂಬರ್ಥ. ಇಲ್ಲಿ ಮಾತು ಎಂಬುದು ವಿದ್ಯೆಗೆ ಬುದ್ಧಿಗೆ ಸಮಾನಾಂತರವಾದ ಶಬ್ದ. ಇದು ಲೋಕದಲ್ಲಿಯ ಜ್ಞಾನವು ಮಾತು ಅಥವಾ ಭಾಷೆಯಲ್ಲಿ ಅಡಗಿದೆ ಎಂಬುದನ್ನು ಬಲು ಸೂಕ್ಷ್ಮವಾಗಿ ಸ್ಪಷ್ಟಗೊಳಿಸುತ್ತದೆ. ವಾಗರ್ಥಯೇ ಪ್ರತಿಪತ್ತೆಯೇಃ

ಅರ್ಥದ ವಾಹಕವಾಗಿ ಇಲ್ಲಿ ಮಾತು ಚಲಿಸುತ್ತದೆ. ಆದ್ದರಿಂದಲೇ ಅರ್ಥವಿಲ್ಲದ ಮಾತು ಬರೀ ಬುರುಡೆ (ಮೆದುಳುರಹಿತ, ಜ್ಞಾನರಹಿತ) ಆಗುತ್ತದೆ. ಬರೀ ಇಂತಹ ಮಾತುಗಳೇ

ಹೆಚ್ಚಾದಾಗ ಅದನ್ನಾಡುವವ ಬರೀ ಮಾತಿನ ಮಲ್ಲ ಎಂದೆನಿಸಿಕೊಳ್ಳುತ್ತಾನೆ. ಹೀಗೆ ಹಲವಾರು ಆಯಾಮಗಳನ್ನು ಹೊಂದಿದ ಮಾತನ್ನು ನಾವು ಬಹಳ ಜಾಗರೂಕವಾಗಿ ಬಳಸಿಕೊಳ್ಳಬೇಕಾಗುತ್ತದೆ. ಅದೇ ಜಾಣರ ಲಕ್ಷಣ.

# ಶ್ರೀಲ ಪ್ರಭುಪಾದರು

ಮಾನವನ ಜೀವನೋನ್ನತಿಗಾಗಿ, ಮೋಕ್ಷಸಾಕ್ಷಾತ್ಕಾರಕ್ಕಾಗಿ, ಅಲೌಕಿಕ ಆತ್ಮಸಿದ್ಧಿಗಾಗಿ ಹಲವಾರು ಮಾರ್ಗಗಳನ್ನು ಅನುಸರಿಸುತ್ತ ಬರಲಾಗಿದೆ. ವಿಭಿನ್ನ ಧಾರ್ಮಿಕ, ಸಾಮಾಜಿಕ ನೆಲೆಗಳ ಮೇಲೆ ವಿಭಿನ್ನವಾದ ಇಂತಹ ದಾರಿಗಳು ರೂಪುಗೊಂಡಿವೆ. ಒಂದೊಂದು ಸಾಂಸ್ಕೃತಿಕ ತಳಹದಿಗೂ ಒಂದೊಂದು ಧ್ಯೇಯಮಾರ್ಗ ಹೊರಹೊಮ್ಮಿದೆ. ಭಾರತೀಯ ಸಂದರ್ಭದಲ್ಲಂತೂ ಇಂತಹ ಅನೇಕ ವೈಚಾರಿಕ ವರ್ಗ (Schools of thought)ಗಳ ಪರಂಪರೆಯೇ ಇದೆ. ಇಪ್ಪತ್ತನೇ ಶತಮಾನದಾದ್ಯಂತ ಕೃಷ್ಣಪ್ರಜ್ಞೆಯ ಅಲೆಯೆಬ್ಬಿಸಿ ಈ ರೀತಿಯ ಒಂದು ಹೊಸ ಮಾದರಿಯ ಆಂದೋಲನವನ್ನು ಜಗತ್ತಿಗೆ ಪರಿಚಯಿಸಿದ ಕೀರ್ತಿ ಶ್ರೀಲ ಪ್ರಭುಪಾದರಿಗೆ ಸಲ್ಲುತ್ತದೆ.

ಇಂದು "ಇಸ್ಕಾನ್' (ISKCON - International Society for Krishna Consiousness) ಅಂತರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಸ್ಥೆ ವಿಶ್ವವ್ಯಾಪಿಯಾಗಿ ಹಬ್ಬಿದೆ. ವಿಶ್ವದಾದ್ಯಂತ ಮೂರು ನೂರಕ್ಕೂ ಹೆಚ್ಚು ಕೃಷ್ಣಮಂದಿರ, ಸಂಘಸಂಸ್ಥೆಗಳನ್ನು ಹೊಂದಿದೆ. ದೇಶ ವಿದೇಶಗಳಲ್ಲೆಲ್ಲ ಅಪಾರ ಸಂಖ್ಯೆಯ ಅನುಯಾಯಿಗಳನ್ನೂ ಪಡೆದಿದೆ. ಅಂತೆಯೇ "ಇಸ್ಕಾನ್' ಎಂಬ ಮೂರಕ್ಷರದ ಈ ಕಿರುಶಬ್ದ ಹಿರಿದಾದ ಮಾಂತ್ರಿಕ ಶಕ್ತಿಯಿಂದೊಡಗೂಡಿದೆ ಎಂದೆನಿಸುತ್ತಿದೆ. ಈ ಒಂದು ಅನನ್ಯ ಶಕ್ತಿ ಸಂಘಟನೆ ಮತ್ತು ಅಪೂರ್ವ ಆಂದೋಲನದ ಹರಿಕಾರರೇ **ಶ್ರೀ ಶ್ರೀಮದ್ ಎ.ಸಿ. ಭಕ್ತಿವೇದಾಂತ ಸ್ವಾಮಿ ಪ್ರಭುಪಾದರು.**

ಸ್ವಾಮಿ ಪ್ರಭುಪಾದರ ಮೂಲ ಹೆಸರು ಅಭಯ ಚರಣ್ ಡೇ. ತಂದೆ ಗೌರ್ ಮೋಹನ್ ಡೇ ಹಾಗೂ ತಾಯಿ ರಜನಿ. ಹೊನ್ನ ಕುಡಿಕೆಯಲ್ಲಿ ಹಾಲು ಕುಡಿಯುತ್ತ ಬೆಳೆದಂತಹ ಶ್ರೀಮಂತಿಕೆ. 1896ರ ಸೆಪ್ಟೆಂಬರ್ 1 ರಂದು ಕಲ್ಕತ್ತಾದ ಹ್ಯಾರಿಸನ್ ರಸ್ತೆಯಲ್ಲಿನ ಬಂಗಲೆಯೊಂದರಲ್ಲಿ ಜನಿಸಿದ ಈ ಕೂಸಿನ ಜಾತಕ ಅದ್ಭುತವಾಗಿದೆ ಎಂದೂ ತನ್ನ 69-70ನೇ ವಯಸ್ಸಿನಲ್ಲಿ ಈತ ಜಗದ್ವಂದ್ಯನಾಗುತ್ತಾನೆಂದೂ ಈತನ ಜಾತಕ ಬರೆದ ಜೋತಿಷಿಯು ಭವಿಷ್ಯ ನುಡಿದಿದ್ದ. ಕಾಕತಾಳೀಯ ಎಂದೆನ್ನುವವರೂ ಚಕಿತಗೊಳ್ಳುವಂತೆ ಅದು ಹಾಗೆಯೇ ಆಯಿತು. 1965ರ ನಂತರ ಅಮೇರಿಕಾಕ್ಕೆ ಬಂದ ಮೇಲೆ ಪ್ರಭುಪಾದರಿಗೆ ವಿಶ್ವವಿಖ್ಯಾತಿ ಪ್ರಾಪ್ತವಾಯಿತು. ಆವರೆಗೆ ಅವರು ಅಂದರೆ ವಿದೇಶ ಪ್ರಯಾಣ ಬೆಳೆಸುವ ಮೊದಲು ಕೇವಲ ಮೂರು ಪುಸ್ತಕಗಳನ್ನು ಬರೆದಿದ್ದರು, ಮುಂದಿನ 10- 12 ವರ್ಷಗಳಲ್ಲಿ ಅರವತ್ತಕ್ಕಿಂತ ಹೆಚ್ಚು ಪುಸ್ತಕಗಳನ್ನು ಬರೆದರು. ಆವರೆಗೆ ಕೇವಲ ಒಬ್ಬ ಶಿಷ್ಯನನ್ನು ಹೊಂದಿದ್ದವರು ಮುಂದಿನ ದಶಕದಲ್ಲಿ ನಾಲ್ಕು ಸಾವಿರಕ್ಕಿಂತ ಹೆಚ್ಚು ಜನರಿಗೆ ದೀಕ್ಷೆ ನೀಡಿದರು. ಆವರೆಗೆ ಎಂದೂ ದೇಶವನ್ನು ಬಿಟ್ಟು ಹೊರಗೆ ಹೋಗದೇ ಇದ್ದವರು ತಮ್ಮ 69ನೇ ವಯಸ್ಸಿನ ನಂತರ ವಿಶ್ವವನ್ನೆಲ್ಲ ಅನೇಕಬಾರಿ ಸುತ್ತಾಡಿ ಬಂದರು, ದೇಶವಿದೇಶಗಳಲ್ಲೆಲ್ಲ

ನೂರಾರು ಕೃಷ್ಣಪ್ರಜ್ಞಾ ಕೇಂದ್ರಗಳನ್ನು ಸ್ಥಾಪಿಸಿ ನಿರ್ವಹಿಸಿಕೊಂಡು ಬಂದರು. ಶ್ರೀಲ ಪ್ರಭುಪಾದರ ಹೆಸರು ಸಪ್ತಸಾಗರಗಳಾಚೆಯೂ ಹಬ್ಬಿ ಅವರ ಮೂಲ ಮಂತ್ರಘೋಷ:

**"ಹರೇಕೃಷ್ಣ ಹರೇ ಕೃಷ್ಣ, ಕೃಷ್ಣ ಕೃಷ್ಣ ಹರೇ ಹರೇ**

**ಹರೇ ರಾಮ ಹರೇ ರಾಮ, ರಾಮ ರಾಮ ಹರೇ ಹರೇ...."**

ಎಂಬುದು ದಶದಿಕ್ಕುಗಳಿಗೂ ಪಸರಿಸುವಂತಾಯಿತು, ಅವರ ಕೀರ್ತಿ ಅಜರಾಮರವಾಯಿತು.

ಬಾಲಕ ಅಭಯಚರಣನಿಗೆ ಮನೆಯಲ್ಲಿ ಸಂಪೂರ್ಣವಾದ ಕೃಷ್ಣಪ್ರಜ್ಞೆಯ ಆಧ್ಯಾತ್ಮಿಕ ವಾತಾವರಣ ಸಿಕ್ಕದ್ದೊಂದು ಯೋಗಾಯೋಗವೇ. ತಂದೆ ಗೌರಮೋಹನರು ಶ್ರೀಕೃಷ್ಣನ ಪರಮಭಕ್ತರು. ಚೈತನ್ಯ ಮಹಾಪ್ರಭುಗಳ ಸಂದೇಶದ ಕಟ್ಟಾ ಪರಿಪಾಲಕರು, ಶುದ್ಧ ಶ್ರೀವೈಷ್ಣವರಾದ ಅವರಿಗೆ ಭಗವದ್ಗೀತೆಯ ವಾಚನ ಮಾಡುವುದೆಂದರೆ, ಆಲಿಸುವುದೆಂದರೆ ಎಲ್ಲಿಲ್ಲದ ಸಂತೋಷ. ಪ್ರತಿರಾತ್ರಿ ತಮ್ಮ ಜವಳಿ ವ್ಯಾಪಾರವನ್ನು ಮುಗಿಸಿಕೊಂಡು ಮನೆಗೆ ಹಿಂದಿರುಗಿದ ಮೇಲೆ ಮಧ್ಯರಾತ್ರಿ ಸರಿದಿದ್ದರೂ ಶ್ರೀಕೃಷ್ಣನ ಪೂಜೆ, ಜಪ, ಕೀರ್ತನೆ ಮಾಡಿಯೇ ಊಟ ಮಾಡುತ್ತಿದ್ದರು. ಮಕ್ಕಳಿಗೂ ಕೂಡ ಚೈತನ್ಯ ಮಹಾಪ್ರಭುಗಳ ಉಪದೇಶದ ಸಾರವನ್ನು ಹಾಗೂ ಗೀತೆಯ ವಿವರಣೆಯನ್ನು ಮನಮುಟ್ಟುವಂತೆ ತಿಳಿಹೇಳುತ್ತಿದ್ದರು. ಇದೆಲ್ಲವನ್ನೂ ತೀವ್ರ ಆಸಕ್ತಿ ಹಾಗೂ ಶ್ರದ್ಧೆಯಿಂದ ನೋಡಿ, ಕೇಳಿ ಅಭಯಚರಣನೂ ತಾನೊಬ್ಬ ರಾಧಾಕೃಷ್ಣದಾಸನಾಗಬೇಕೆಂದು ಬಯಸತೊಡಗಿದ. ತಮ್ಮ ತಂದೆ ವರ್ಣಿಸುತ್ತಿದ್ದ ಪುರಿಯ ಜಗನ್ನಾಥ ರಥಯಾತ್ರೆಯನ್ನು ಊಹಿಸಿಕೊಂಡು ತನಗೂ ಯಾವಾಗ ಅದನ್ನು ನೋಡುವ ಯೋಗ ಬಂದೊದಗುತ್ತದೆಯೋ ಎಂದು ಪರಿತಪಿಸುತ್ತಿದ್ದ. ಹಾಗೆಯೇ ಮನೆಯಲ್ಲಿ ಚಿಕ್ಕದೊಂದು ಅಂತಹದೇ ರಥವನ್ನು ತಂದೆಯಿಂದ ಬೇಡಿ ತರಿಸಿಕೊಂಡು ಮನೆಮಂದಿ ಹಾಗೂ ಗೆಳೆಯರೊಡಗೂಡಿ ರಥಯಾತ್ರೆ ನೆರವೇರಿಸುತ್ತಿದ್ದ. "ಮುಂಬರುವ ಘಟನಾವಳಿಗಳು ತಮ್ಮ ಪೂರ್ವಸೂಚನೆ ಕೊಡುತ್ತವೆ" (coming events cast their shadows before) ಎಂಬಂತೆ ಮುಂದೆ ಅಮೇರಿಕದಂತಹ ವಿಭಿನ್ನ ಧರ್ಮದ, ವಿಭಿನ್ನ ಸಂಸ್ಕೃತಿಯ ದೇಶದಲ್ಲಿಯೂ ಕೃಷ್ಣ, ಬಲರಾಮ, ಸುಭದ್ರರ ರಥವನ್ನೆಳೆಸಿ ದಾಖಲೆ ನಿರ್ಮಿಸಿದ್ದಕ್ಕೆ ಈ ಬಾಲ್ಯದ ಘಟನೆ ಪೂರ್ವ ಪೀಠಿಕೆ ಬರೆಯಿತೆನ್ನಬಹುದು.

ಅಭಯರ ಬಾಲ್ಯದಲ್ಲಿ ಅವರ ತಂದೆತಾಯಿಗಳಿಬ್ಬರೂ ಬಹಳ ಆಸಕ್ತಿಯಿಂದ ಅವರನ್ನು ನೋಡಿಕೊಳ್ಳುತಿದ್ದರು. ತಂದೆ ತಮ್ಮ ಮಗ ತಮ್ಮಂತೆಯೇ ಶುದ್ಧ ವೈಷ್ಣವ ಪದ್ಧತಿಯನ್ನನುಸರಿಸುತ್ತ ರಾಧಾಕೃಷ್ಣ ದಾಸನಾಗಿ, ಗೀತೋಪದೇಶ ಪ್ರಸಾರ ಮಾಡುತ್ತ ಜೀವನ ವ್ಯವಹಾರ ನಡೆಸಬೇಕೆಂದು ಅವನಿಗೆ ಸಂಕೀರ್ತನೆ ಪಾಠ, ಮೃದಂಗ ಬಾರಿಸುವ ತರಬೇತಿ, ಪೂಜಾಪದ್ಧತಿ ಇತ್ಯಾದಿಗಳನ್ನು ಕಲಿಸುವ ಏರ್ಪಾಟು ಮಾಡಿದ್ದರು. ಆದರೆ ತಾಯಿಗೆ ಆತ ವಿದೇಶಕ್ಕೆ ಹೋಗಿ ಕಲಿತು ಬಂದು ದೊಡ್ಡ ಬ್ರಿಟೀಷ್ ವಕೀಲನಾಗಬೇಕೆಂಬ ಆಸೆಯಿದ್ದಿತು. ತೀಕ್ಷ್ಣವಾಗಿ ನೋಡಿದರೆ ಪ್ರಭುಪಾದರ ಮೇಲೆ ತಂದೆಯ ಪ್ರಭಾವವೇ ಜಾಸ್ತಿಯಾದಂತೆನಿಸುತ್ತದೆ. ತಾವು ದೊಡ್ಡವರಾದ ಮೇಲೆ ಅವರೇ ತಮಗೆ ತಮ್ಮ ತಂದೆ ಮೋಹನ ಡೇ ಅವರು ಧ್ಯಾನಸ್ಥರಾಗಿ ಕುಳಿತು ಶ್ರೀಕೃಷ್ಣನ ಪೂಜೆ ಮಾಡುವ, ತನ್ಮಯತೆಯಿಂದ ಕೀರ್ತನೆ ಹಾಡುತ್ತಿರುವ ಚಿತ್ರಗಳು ಆಗಾಗ ಕಣ್ಮುಂದೆ ಬರುತ್ತಲೇ

ಇರುತ್ತಿದ್ದವೆಂದು ಹೇಳುತ್ತಿದ್ದರು. ಮನೆಯ ಈ ಸಾತ್ವಿಕ ವಾತಾವರಣದಲ್ಲೇ ಅಭಯರ ಶಾಲಾಶಿಕ್ಷಣವೂ ಸುರಳೀತವಾಗಿ ಸಾಗಿತು.

ಯುವ ಅಭಯಚರಣ ಕಾಲೇಜಿಗೆ ದಾಖಲಾದ, ಕೊನೆಯ ವರ್ಷ ತಲುಪುವ ಮೊದಲೇ ರಾಧಾರಾಣಿದತ್ತ ಎಂಬ ಯುವತಿಯೊಂದಿಗೆ ಮದುವೆಯೂ ಆಯಿತು. ಕಾಲೇಜಿನಲ್ಲಿ ಅಭಯರಿಗೆ ಒಂದು ವರ್ಷ ಮುಂದೆ ನೇತಾಜಿ ಸುಭಾಷ್‌ಚಂದ್ರಭೋಸ್‌ರವರಿದ್ದರು. ಅವರ ಕ್ರಾಂತಿಕಾರಿ ವಿಚಾರಗಳು ಹಾಗೂ ಮಹಾತ್ಮಾ ಗಾಂಧೀಜಿಯವರ ಸ್ವಾತಂತ್ರ್ಯಾಲೋಲನದ ಕರೆ ಎರಡೂ ಇವರನ್ನು ತಟ್ಟಿದವು. ಗಾಂಧೀಜಿಯವರು ದಿನನಿತ್ಯ ಗೀತೆಯನ್ನು ಪಠಣ ಮಾಡುತ್ತಾರೆಂಬುದನ್ನು ಕೇಳಿ ತಿಳಿದ ಅಭಯನಿಗೆ "ಯಾಕೆ ಮಹಾತ್ಮರು ತಮ್ಮನ್ನು ತಾವು ಸಂಪೂರ್ಣವಾಗಿ ಗೀತೋಪದೇಶಕ್ಕೆ ಮೀಸಲಾಗಿರಿಸಿಕೊಳ್ಳಬಾರದು?" ಎಂಬ ವಿಚಾರ ಕಾಡತೊಡಗಿತು. ಮುಂದೆ ಈ ಬಗ್ಗೆ ಅವರ ಮನವೊಲಿಸಲು ಅವರಿಗೆ ಪತ್ರವನ್ನೂ ಬರೆದಿದ್ದರು. ಹಾಗೆಯೇ ಅವರ ಕರೆಗೆ ಓಗೊಟ್ಟು ತನಗೆ ಬರಬೇಕಾಗಿದ್ದ ಪದವಿಯನ್ನು ತಿರಸ್ಕರಿಸಿಯೂ ಬಿಟ್ಟರು.

ಭಾರತದ ಭಕ್ತಿಪಂಥದ ಪರಂಪರೆಯಲ್ಲಿ ಗುರುವಿಗೆ ವಿಶೇಷ ಸ್ಥಾನವಿರುವುದನ್ನು ನಾವೆಲ್ಲ ಗಮನಿಸಿದ್ದೇವೆ. "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕ್ತಿಪಥ", "ಎತ್ತಾಗಿ ತೊತ್ತಾಗಿ ಹಿತ್ತಲಿನ ಮರವಾಗಿ, ಮತ್ತೆ ಪಾದದ ಕೆರನಾಗಿ ಗುರುವಿನ ಹತ್ತಿರಿರೆಂದ ಸರ್ವಜ್ಞ" ಎಂಬ ನುಡಿಮುತ್ತುಗಳು, "ಗುರು ಬ್ರಹ್ಮ ಗುರುವಿಷ್ಣು ಗುರುದೇವೋ ಮಹೇಶ್ವರಃ ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ" ಎಂಬ ನಮ್ಮ ಅನಾದಿ ಕಾಲದ ಬುನಾದಿ ಮಾತುಗಳು ಇತಿಹಾಸದುದ್ದಕ್ಕೂ ಜೀವನ್ಮಾರ್ಗದ ದಾರಿದೀಪವೆಂದು ಗುರುವಿಗೆ ವಿಶೇಷ ಸ್ಥಾನಮಾನ ನೀಡಿವೆ. ಯೋಗ್ಯ ಆಚಾರ್ಯರಿಗಾಗಿ ಹುಡುಕಾಟ ನಿರಂತರ ನಡೆಯುತ್ತಲೇ ಬಂದಿದೆ. ಯೋಗಿಗಳು, ದಾರ್ಶನಿಕರು, ಸಾಧುಸಂತರೆಲ್ಲ ಗುರುವಿಗಾಗಿ ಕಾಯ್ದವರೇ. ಅಭಯಚರಣರಿಗೂ ಹೀಗೆಯೇ ತನಗೊಬ್ಬ ಗುರುವಿನ ಅವಶ್ಯಕತೆ ಇದೆ ಅನ್ನಿಸತೊಡಗಿತ್ತು. 1922ರಲ್ಲಿ ಅವರಿಗೆ ಭಕ್ತಿಸಿದ್ಧಾಂತ ಸರಸ್ವತಿ ಠಾಕೂರರ ದರ್ಶನವಾಯಿತು. ಆಧ್ಯಾತ್ಮ, ವೇದಾಂತಗಳಲ್ಲಿ ಸಾಕಷ್ಟು ಹೆಸರುಗಳಿಸಿದ ಆ ಮಹಾತ್ಮರು ಅಭಯನಿಗೆ ಕೇಳಿಯೇ ಬಿಟ್ಟರು, ನೀವೇಕೆ ಚೈತನ್ಯ ಮಹಾಪ್ರಭುಗಳ ಸಂದೇಶವನ್ನು ಜಗತ್ತಿನಾದ್ಯಂತ ಬೋಧಿಸಬಾರದು? ಎಂದು. ಈ ಮಾತು ಅಭಯರಿಗೆ ಒಂದು ಅನಿರ್ವಚನೀಯ ರೋಮಾಂಚನದ ಅನುಭವವನ್ನು ನೀಡಿತು. ತಾನು ತನ್ನ ಜೀವನದ ಕಾಡಿನಲ್ಲಿ ನಿರ್ದಿಷ್ಟ ಮಾರ್ಗವೊಂದಕ್ಕಾಗಿ, ಮೋಕ್ಷ ಬಳ್ಳಿಯೊಂದಕ್ಕಾಗಿ, ತೀವ್ರ ಹುಡುಕಾಟ ಮಾಡುತ್ತಿದ್ದಾಗ ಅದು ಕಾಲ್ತೊಡಕಿದಷ್ಟು ಆನಂದಾಶ್ಚರ್ಯಗಳು ಒಮ್ಮೆಲೆ ಆದವು. ಅಂದೇ ಸರಸ್ವತಿ ಠಾಕೂರರನ್ನು ತಮ್ಮ ಗುರುವನ್ನಾಗಿ ಸ್ವೀಕರಿಸಿದ್ದಾಗಿ ಮುಂದೆ ಅಭಯಚರಣರೇ ಹೇಳಿಕೊಂಡರು.

ಅಗಾಧ ಶಕ್ತಿಯ ಕೃಷ್ಣಪ್ರಜ್ಞೆ ಯಾವುದಕ್ಕೂ ಕಾಯಲಾರದು. 1922ರಲ್ಲಿಯ ಗುರುದರ್ಶನ ಅಭಯನನ್ನು 1932ರವರೆಗೂ ಆಧ್ಯಾತ್ಮದತ್ತ ಸೆಳೆಯುತ್ತಲೇ ಇತ್ತು. ಕೊನೆಗೆ 1932ರಲ್ಲಿ ಅವರು ಭಕ್ತಿಸಿದ್ಧಾಂತ ಸರಸ್ವತಿ ಠಾಕೂರರನ್ನು ವಿಧ್ಯುಕ್ತವಾಗಿ ಗುರುವೆಂದು ಸ್ವೀಕರಿಸಿ ದೀಕ್ಷೆಯನ್ನೇ ಪಡೆದುಕೊಂಡರು. "ಪ್ರಪಂಚದಲ್ಲಿ ಕೊರತೆಯೆಂಬುದೇ ಇಲ್ಲ ಒಂದೇ ಒಂದು ಕೊರತೆಯೆಂದರೆ ಕೃಷ್ಣಪ್ರಜ್ಞೆಯ ಕೊರತೆ ಮಾತ್ರ, ಕೃಷ್ಣಪ್ರಜ್ಞೆಯ ಪ್ರಸಾರವೇ ಇಂದಿನ ಜಗತ್ತಿನ ಅತ್ಯಂತ ಆವಶ್ಯಕತೆ" ಎಂದು ಗುರುಗಳು ಹೇಳಿದ್ದನ್ನು ನಡೆಸಿಕೊಂಡು

ಹೋಗಲು ಸಾಧ್ಯವಿದ್ದ ಎಲ್ಲ ಕ್ರಮಗಳನ್ನು ಕೈಗೆತ್ತಿಕೊಳ್ಳಲು ನಿರ್ಧರಿಸಿದರು. ಆ ಅಭಾವವನ್ನು ತುಂಬಲು "ಬ್ಯಾಕ್ ಟು ಗಾಡ್ ಹೆಡ್" ಎಂಬ ಪತ್ರಿಕೆಯನ್ನೂ ಪ್ರಾರಂಭಿಸಿದರು.

ಸಿರಿವಂತಿಕೆಯು ಮನುಷ್ಯನನ್ನು ಹೇಗೆ ಮುಕ್ತವಿಚಾರಗಳಿಗೆ ವಿಮುಖನನ್ನಾಗಿ ಮಾಡುತ್ತದೆಂಬುದನ್ನು ಹಲವಾರು ದಾರ್ಶನಿಕರು ತಿಳಿಯಪಡಿಸಿದ್ದಾರೆ. "ಹಾವು ತಿಂದವರ-ನುಡಿಸಬಹುದು, ಗರಹೊಡೆದವರ ನುಡಿಸಬಹುದು, ಸಿರಿಗರ ಹೊಡೆದವರ ನುಡಿಸಲುಬಾರದು; ಬಡತನ ಎಂಬ ಮಂತ್ರವಾದಿ ಹೋಗಲು ಒಡನೆ ನುಡಿವರಯ್ಯ" ಎಂದು ಬಸವಣ್ಣನವರೆಂದರೆ ಇದನ್ನೇ ಪುರಂದರದಾಸರು "ರೊಕ್ಕ ರೊಕ್ಕ ರೊಕ್ಕ ರೊಕ್ಕವೆರಡಕ್ಕೂ ದುಃಖ ಕಾಣಕ್ಕ ರೊಕ್ಕ" ಎಂದೂ ಅದನ್ನು 'ಕುರುಡು ಕಾಂಚಾಣ' ಎಂದೂ ಕರೆದಿದ್ದಾರೆ. ಈ ಎಲ್ಲದಕ್ಕೆ ಹಿನ್ನೆಲೆಯಾಗಿ ಗೀತೋಪದೇಶದಲ್ಲಿಯೂ ಶ್ರೀಕೃಷ್ಣನು, "ನಾನು ಯಾರ ವಶದಲ್ಲಾದರೂ ವಿಶೇಷವಾಗಿ ಕರುಣಾಪೂರಿತನಾದರೆ ಅವರ ಐಹಿಕ ಸ್ವತ್ತುಗಳನ್ನೆಲ್ಲಾ ಹಿಂದೆಗೆದುಕೊಳ್ಳುತ್ತೇನೆ. ಆಗ ಬಡತನಕ್ಕೆ ಸಿಲುಕುವ ಆತನನ್ನು ಬಂಧುಮಿತ್ರರೂ ದೂರಮಾಡುತ್ತಾರೆ" ಎಂದು ಸಾರಿದ್ದಾನೆ. ಅಭಯರ ವಿಷಯದಲ್ಲಿ ಇದು ವೇದವಾಕ್ಯವೇ ಆಯಿತು. ಆಧ್ಯಾತ್ಮ ಸಾಧನೆ, ಕೃಷ್ಣಪ್ರಜ್ಞೆಗಳ ಬೆಂಬತ್ತಿದ ಅವರಿಗೆ ಸಂಸಾರ, ವ್ಯಾಪಾರ, ವ್ಯವಹಾರಗಳಲ್ಲಿ ಅಭಿರುಚಿ ತಂತಾನೆ ಕ್ಷೀಣಿಸತೊಡಗಿತು, ಪರಿಣಾಮ ಗಳಿಕೆ ಆಸ್ತಿ ಅಂತಸ್ತುಗಳೂ ಕಡಿಮೆಯಾಗತೊಡಗಿದುವು. ಆದಾಗ್ಯೂ ಕೃಷ್ಣ ಸಂಕೀರ್ತನೆಯ ಅಲೆದಾಟ ನಿಲ್ಲಲಿಲ್ಲ. ದಿಲ್ಲಿ, ಝಾನ್ಸಿ, ವೃಂದಾವನ, ಕಲ್ಕತ್ತ ಎಲ್ಲೆಡೆಯ ತಿರುಗಾಟದಿಂದಾಗಿ ಆರ್ಥಿಕ ದುಸ್ಥಿತಿ ಎದುರಾಯಿತು.

ಒಂದು ದಿನ ವೃಂದಾವನದಲ್ಲಿ ಏಕಾಂತದಲ್ಲಿದ್ದಾಗ ಯಾಕೊ ಏನೊ ವೈರಾಗ್ಯ ಮನೋಭಾವ ಅವರನ್ನು ತೀವ್ರ ಕಾಡತೊಡಗಿತು. ಯಾವುದೋ ಒಂದು ಅನಿರ್ವಚನೀಯ ಭಾವ ಉಮ್ಮಳಿಸಿ ಬರತೊಡಗಿತು. ಹಾಗೆಯೇ ವೃಂದಾವನ ಭಜನ ಎಂಬ ಬಂಗಾಳಿ ಪದ್ಯವೊಂದು ಅವರ ಲೇಖನಿಯಿಂದ ಹೊರಹೊಮ್ಮತೊಡಗಿತು:

**"ನಿರ್ಗತಿಕ ನಾನಾದೆ, ತೊರೆದರೆನ್ನನು ಎಲ್ಲ**

**ಸತಿಸುತ ಬಂಧುಬಾಂಧವ ಮಿತ್ರರೆಲ್ಲ**

**ಈ ಕರುಣೆಯನು ನೋಡಿ ನಗೆಯು ಬರುತಿಗೆ ಎನಗೆ**

**ಏಕಾಂತದಲ್ಲಿ ನಾನು ನಕ್ಕೂ ಬಿಡುವೆ**

**ಈ ಮಾಯಾಪ್ರಪಂಚದಲಿ ಯಾರನ್ನು ಪ್ರೀತಿಸಲಿ ನಿಜವಾಗಿ?**

**ನನ್ನ ಪ್ರೀತಿಯ ತಂದೆತಾಯಿ ಎಲ್ಲಿಹರೀಗ ?**

**ನನ್ನೆಲ್ಲ ಹಿರಿಯರು ಬಂಧುಗಳು ಎಲ್ಲಿಹರು ?"**

ಹೀಗೆ ತಮ್ಮ ಅಂತರಾಳದ ನೋವನ್ನು ತೋಡಿಕೊಳ್ಳುತ್ತ "ಇಂತಹ ನಿರ್ಗತಿಕ ಸ್ಥಿತಿಯೆಂದರೆ ಆ ಪರಮಾತ್ಮನ ಕರುಣೆ" ಎಂದಂದುಕೊಂಡು ಸಮಾಧಾನಪಟ್ಟರು ಮತ್ತು ಐಹಿಕ ಪ್ರಕೃತಿಯ ನಗ್ನರೂಪವನೆನಗೆ ಕೃಷ್ಣ ತೋರಿಹನು ಎಂದು ಹಾಡುತ್ತ ನಡೆದರು. ಶ್ರೀಮದ್ಭಾಗವತದ, "ಯಾರ ಮೇಲೆ ಕರುಣೆ ತೋರುವೆನೊ ಅವನೆಲ್ಲ ಸಂಪದವ ಮೆಲ್ಲಮೆಲ್ಲನೆ ಒಯ್ಯುವನೆ ನಾನು" ಎಂಬ ಕೃಷ್ಣವಾಣಿಯನ್ನು (ಯಸ್ಯಾಹಂ ಅನುಗೃಹ್ಣಾಮಿ

ಪರಿಷ್ಯೇ ತದ್ಧನಂ ಶನ್ಯೈಃ) ಪದೇ ಪದೇ ನೆನಪಿಸಿಕೊಳ್ಳುತ್ತಲೇ ಇದ್ದರು. ಹೀಗೆ ಬಡತನ ಕ್ರಮೇಣ ಅವರ ಸಂಸಾರವನ್ನು ಅಲುಗಾಡಿಸತೊಡಗಿದಾಗ ಪ್ರಭುಪಾದರು ನಿರಾಕರಣವಾದದೆಡೆಗೆ ವಾಲಿ ಇದು ಕೂಡ ಆ ಕೃಷ್ಣನ ಪ್ರೇರಣೆಯೇ ಎಂದಂದುಕೊಂಡರು. ಬಹುಶಃ ತಾನು ಐಹಿಕ ಜೀವನವನ್ನು ಮುಖ್ಯವಾಗಿ ಅಲ್ಲಿಯ ಸುಖವನ್ನು ತ್ಯಜಿಸುವುದು ಅನಿವಾರ್ಯವೇನೋ ಎಂದೆನಿಸಿತವರಿಗೆ. ಆದರೆ ಈ ವಾದವನ್ನು, ಬಡತನ ಬವಣೆಯನ್ನು ತನ್ನ ಮನೆಯವರೂ ತನ್ನಂತೆಯೇ ಆನಂದಿಸಬೇಕೆಂದರೆ ಸಾಧ್ಯವೇ ? ಇಷ್ಟರಲ್ಲಿ ಪ್ರಭುಪಾದರು ತಮ್ಮ ವ್ಯವಹಾರವನ್ನೆಲ್ಲ ಅಲಹಾಬಾದಿಗೆ ವರ್ಗಾಯಿಸಿಯಾಗಿತ್ತು. ಅಲ್ಲಿ ನಡೆದ ಕಳ್ಳತನಕ್ಕೆ ಸಿಲುಕಿ ಅಪಾರ ನಷ್ಟ ಅನುಭವಿಸತೊಡಗಿದ್ದರು; ಮತ್ತು ಝಾನ್ಸಿಯಲ್ಲಿ ತಮ್ಮ ಗೀತೋಪದೇಶ ಮುಂದುವರಿಸಿಯೂ ಇದ್ದರು. ಶ್ರೀಮದ್ಭಾಗವತದ ಪ್ರಕಟಣೆಗಳ ಖರ್ಚಿನಿಂದಾಗಿ ಮತ್ತಷ್ಟು ಲೌಕಿಕ ವ್ಯವಹಾರ, ಕುಟುಂಬ ನಿರ್ವಹಣೆ ಕಡೆಗೆ ನಿರ್ಲಕ್ಷ್ಯವಾಯಿತು. ಸಹಜವಾಗಿಯೇ ಸಂಸಾರದಲ್ಲಿ ತಿಕ್ಕಾಟ ವೈರುಧ್ಯಗಳು ತಲೆದೋರಿದವು. ಅಭಯರು ಪತ್ನಿಗೆ ತಮ್ಮ ಸಂಪ್ರದಾಯದಂತೆ ಚಹ ಕುಡಿಯುವುದನ್ನು ಸಹ ನಿಷೇದಿಸಲು ಹೇಳುತ್ತಿದ್ದರು. ಆದರೆ ಅದು ಸಾಧ್ಯವಾಗದ ಮಾತಾಗಿತ್ತು. ಹೇಗೂ ಏರುಪೇರಿನೊಂದಿಗೆ ಟೀಕೆ ಟಿಪ್ಪಣಿಗಳೊಂದಿಗೆ ಸಂಬಂಧ ಮುಂದೊರೆದಿತ್ತು. ಆದರೆ ಅದೊಂದು ದಿನ ಆದ ಘನಘೋರ ತಪ್ಪಿನಿಂದಾಗಿ ಪ್ರಭುಪಾದರು ತಮ್ಮ ಪತ್ನಿಯಿಂದ ಸಂಪೂರ್ಣ ವಿಮುಖರಾಗಬೇಕಾಗಿ ಬಂತು. ಅಭಯರು ಮನೆಯಲ್ಲಿಲ್ಲದಾಗ ಅವರ ಶ್ರೀಮತಿಯವರು, ಮನೆಯಲ್ಲಿಟ್ಟಿದ್ದ ಶ್ರೀಮದ್ಭಾಗವತದ ಪ್ರತಿಯನ್ನೇ ಮಾರಿ ಚಹ ಬಿಸ್ಕತ್ತುಗಳನ್ನು ಕೊಂಡುಕೊಂಡರು. ಪತಿ ಮನೆಗೆ ಮರಳಿ ಆ ಬಗ್ಗೆ ವಿಚಾರಿಸಿದಾಗ ನಡೆದದ್ದನ್ನು ಸತ್ಯವೆಂದು ಪತ್ನಿ ಒಪ್ಪಿಕೊಂಡರು. ಅಭಯರಿಗೆ ದಿಕ್ಕೆ ತೋಚದಂತಾಗಿ ತೀವ್ರ ನೋವನನ್ನುಭವಿಸಿ ಇನ್ನು ಮೇಲೆ ಸಂಸಾರವನ್ನು ಸಂಪೂರ್ಣವಾಗಿ ತ್ಯಜಿಸಲೇಬೇಕೆಂದು ವಿಚಾರಿಸಿದರು. ಈ ವಿಚಾರ ಇನ್ನೂ ಗಟ್ಟಿಗೊಳ್ಳಲು ಕೆಲ ಸಮಯದ ನಂತರ ಸಂಸಾರ, ವ್ಯಾಪಾರ ಎರಡನ್ನೂ ಒಮ್ಮೆಲೆ ತ್ಯಜಿಸಿದರು.

ಹೀಗೆ 1950ರ ದಶಕದಲ್ಲಿ ಅಭಯರು ಸಂಪೂರ್ಣ ಏಕಾಂಗಿಯಾದರು. ಕಲ್ಕತ್ತದಿಂದ ಝಾನ್ಸಿಗೆ ಹೋದರೂ ಅಲ್ಲಿಯೂ ನೆಲೆ ನಿಲ್ಲಲಾಗಲಿಲ್ಲ. ತಂಗಲು ತುಂಡು ಸ್ಥಳವಿಲ್ಲದೇ ಅಲ್ಲಿಂದ ದೆಹಲಿಯ ಒಂದು ಆಶ್ರಮಕ್ಕೆ ಹೋದರು. ಆದರೆ ಎಲ್ಲಿಯೂ ಖಾಯಂ ಆಗಿ ನಿಲ್ಲಲಾಗದೇ ಭಿಕ್ಷುವಿನಂತೆ ತಿರುಗಾಟ ಪ್ರಾರಂಭಿಸಿದರು. ಯಾರಾದರೂ ಧರ್ಮಶ್ರದ್ಧೆಯುಳ್ಳವರು ಕರೆದರೆ ಅವರ ಮನೆಗಳಲ್ಲಿ ಕೆಲದಿನಗಳಿರತೊಡಗಿದರು. ಯಾವ ಆಮಂತ್ರಣವೂ ಇಲ್ಲದಾದಾಗ ಗುಡಿಗುಂಡಾರಗಳ ವಸತಿಯೇ ಅವರ ಪಾಲಿಗೆ ಬರುತ್ತಿತ್ತು. ಇದ್ಯಾವುದಕ್ಕೂ ವಿಚಲಿತರಾಗದೇ ಅಭಯರು ತಮ್ಮ ಬರವಣಿಗೆ ಹಾಗೂ ಪ್ರವಚನಗಳನ್ನು ನಿರಾತಂಕವಾಗಿ ಮುಂದೊರೆಸಿಕೊಂಡು ನಡೆದರು. ಮೇಲಾಗಿ ವಿಶ್ವವ್ಯಾಪಿಯಾದ ಭಕ್ತರ ಸಂಘವೊಂದನ್ನು ಸ್ಥಾಪಿಸಬೇಕೆಂಬ ಅವರ ನಿರ್ಧಾರವೂ ಬಲಗೊಳ್ಳುತ್ತಲೇ ನಡೆದಿತ್ತು. ದೆಹಲಿಯಲ್ಲಿ ತಾವು ಪುನಃ ಪ್ರಾರಂಭಿಸಿದ ಪಾಕ್ಷಿಕ **“ಬ್ಯಾಕ್ ಟು ಗಾಡ್ ಹೆಡ್''** ಪತ್ರಿಕೆಯನ್ನು ಹಾಗೂ ತಮ್ಮ ಶ್ರೀಮದ್ ಭಾಗವತ ಕೃತಿಯನ್ನು ಮಾರಾಟ ಮಾಡಲು ಕಾಲ್ನಡಗೆಯಲ್ಲಿ ಅಲೆಯುತ್ತಿದ್ದಾಗ ತೀವ್ರ ಬಿಸಿಲಿನ (114ಎಫ್ ಎಚ್) ತಾಪದಿಂದಾಗಿ ರಸ್ತೆಯಲ್ಲಿಯೇ ಬಿದ್ದು ಮೂರ್ಚೆ ಹೋದ ಪ್ರಸಂಗವೂ ಬಂದಿತು. ಆದರೆ ತಮ್ಮ ಆಂದೋಲನವನ್ನು ಬಿಟ್ಟುಬಿಡಬೇಕೆಂಬ ವಿಚಾರ ಮಾತ್ರ ಕಿಂಚಿತ್ತೂ ಅವರಿಗೆ ಎಂದೂ ಬಾಧಿಸಲಿಲ್ಲ. ಯಾರಾದರೂ ಮಹನೀಯರು ಇಷ್ಟೊಂದು ಕಷ್ಟಪಟ್ಟು ಯಾಕೆ ತಾವು ಈ ಪತ್ರಿಕೆ ಮತ್ತು ಆಂದೋಲನ ಕೈಗೊಂಡಿರುವುದು ಎಂದು ಕೇಳಿದರೆ ಅದೇ ನನ್ನ ಜೀವನ

ಧ್ಯೇಯ” ಎಂದು ದೃಢವಾಗಿ ಹೇಳುತ್ತಿದ್ದರು. “ಬ್ಯಾಕ್ ಟು ಗಾಡ್ ಹೆಡ್” ಪತ್ರಿಕೆಯನ್ನು ಎಲ್ಲ ಕಷ್ಟಕಾರ್ಪಣ್ಯ ಕೊರತೆಗಳ ಮಧ್ಯೆಯೂ ಮುದ್ರಿಸಿ ತಾವೇ ವಿತರಣಾ ಕಾರ್ಯವನ್ನೂ ಕೈಗೊಳ್ಳುತ್ತಿದ್ದರು. ಅದರಲ್ಲಿ, ಐಹಿಕ ಭೋಗಪ್ರವೃತ್ತಿ ಹಾಗೂ ನಾಸ್ತಿಕ ಮನೋವೃತ್ತಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಈ ಪತ್ರಿಕೆಯನ್ನು ಓದಲು, ಸ್ವೀಕರಿಸಲು ಪುರುಸೊತ್ತೇ ಇಲ್ಲದಂತೆ ವರ್ತಿಸುತ್ತಿದ್ದ ಮಂದಿಯನ್ನು ಕುರಿತು, "ಸಮಯವಿಲ್ಲ ಎಂದೆಂಬುದು ಜನಸಾಮಾನ್ಯರ ಪ್ರಬಲ ವ್ಯಾಧಿ” ಎಂಬ ಶೀರ್ಷಿಕೆಯಡಿ ಒಂದು ಅಗ್ರ ಲೇಖನ ಬರೆದು ಟೀಕಿಸಿದರು.

ಪ್ರಭುಪಾದರ ಕೃಷ್ಣಪ್ರಜ್ಞೆ ಹಾಗೂ ಗೀತೋಪದೇಶದ ಆಕಾಂಕ್ಷೆ ಎಷ್ಟೊಂದು ಪ್ರಬಲವಾಗಿತ್ತೆಂದರೆ ಗಾಂಧೀಜಿಯವರಿಗೂ ತಮ್ಮ ಬೋಧನೆ ಮತ್ತು ಸಂದೇಶಗಳನ್ನು ಕುರಿತು ಅವರು ಒಂದು ಪತ್ರ ಬರೆದರು. ಅದರಲ್ಲಿ ಅವಮಾನಕರ ಮರಣ ನಿಮಗೆ ಇಷ್ಟವಿರದಿದ್ದಲ್ಲಿ ಸಕ್ರಿಯ ರಾಜಕಾರಣದಿಂದ ನೀವು ತಕ್ಷಣ ನಿವೃತ್ತರಾಗಬೇಕು ಎಂದು ಪ್ರಾಮಾಣಿಕ ಸ್ನೇಹಿತನಾಗಿ ನಿಮಗೆ ತಿಳಿಸಬಯಸುತ್ತೇನೆ ಎಂದು ಉಲ್ಲೇಖಿಸಿ, ಗಾಂಧೀಜಿ ಬಗ್ಗೆ ತಮಗೆ ಅಪಾರ ಗೌರವವಿರುವುದಾಗಿಯೂ ತಿಳಿಸಿದ್ದರು ಮತ್ತು ಗಾಂಧೀಜಿ ಈಗ ಜೀವನದ ಸಂಧ್ಯಾಕಾಲದಲ್ಲಿರುವುದರಿಂದ ರಾಜಕೀಯವನ್ನು ಬಿಟ್ಟು ಆಧ್ಯಾತ್ಮ ಹಾಗೂ ಪರಮ ಸತ್ಯದೆಡೆಗೆ ಸಾಗುವುದು ಉಚಿತವೆಂದು ಕೇಳಿಕೊಂಡಿದ್ದರು. ಈ ಪತ್ರಕ್ಕೆ ಉತ್ತರ ಬರುವ ಮೊದಲೇ ಮುಂದೊಂದು ತಿಂಗಳಲ್ಲಿ ಗಾಂಧೀಜಿಯವರ ದೇಹಾಂತವಾಯಿತು.

1922ರಷ್ಟು ಹಿಂದೆಯೇ ಅಭಯರು ತನ್ನ ಗೆಳೆಯನೋರ್ವನೊಡನೆ ತಮ್ಮ ಗುರುಗಳಾದ ಭಕ್ತಿಸಿದ್ಧಾಂತ ಸರಸ್ವತೀ ಅವರನ್ನು ಪ್ರಥಮ ಬಾರಿ ಭೇಟಿಯಾದಾಗ ಅವರು, “ನೀವು ವಿದ್ಯಾವಂತರಾದ ತರುಣರು. ಚೈತನ್ಯ ಮಹಾಪ್ರಭುಗಳ ಸಂದೇಶವನ್ನು ನೀವೇಕೆ ಪ್ರಪಂಚದಾದ್ಯಂತ ಬೋಧಿಸಬಾರದು ?” ಎಂದು ಕೇಳಿದ್ದರು. ಈ ಮಾತು ಆಗಾಗ ಅಭಯರ ತಲೆಯಲ್ಲಿ ಸುಳಿಯುತ್ತಲೇ ಇತ್ತು. ತದನಂತರದ 12 ಭೆಟ್ಟಿಗಳಲ್ಲೂ ಇಂತಹ ಹಲವಾರು ವಿಚಾರಗಳು, ಚೈತನ್ಯ ಮಹಾಪ್ರಭುಗಳ ಸಂದೇಶ, ಶ್ರೀಮದ್ಭಾಗವತದ ಬಗೆಗಿನ ಜಿಜ್ಞಾಸೆ, ಕೃಷ್ಣಪ್ರಜ್ಞೆ ಮೇಲಿನ ಚರ್ಚೆ ಇತ್ಯಾದಿ ಆಧ್ಯಾತ್ಮಿಕ ಸಂವಾದಗಳಲ್ಲಿ ತಾನು ಜಗತ್ತಿಗೆ ಏನೋ ಒಂದು ವಿಶೇಷ ಕಾರ್ಯವನ್ನು ಮಾಡುವುದಿದೆ ಎಂದು ಅಭಯರಿಗೆ ಪ್ರೇರಣೆಯಾಗುತ್ತಲೇ ಇತ್ತು. ಮೊದಲ ಭೇಟಿಯಲ್ಲೇ ಗುರುವನ್ನು ಸ್ವೀಕರಿಸುವ ಮನಸ್ಸಾಗಿದ್ದರೂ ಅವರೊಡನೆ ತೀವ್ರ ಚರ್ಚೆ ಮತ್ತು ಪ್ರಶ್ನೋತ್ತರ ನಡೆಸಿದ್ದೊಂದು ವಿಶೇಷ ಎನ್ನಬಹುದು. ಅಂದರೆ ಅಭಯರ ನಂಬುಗೆ ಕೇವಲ ಅಂಧಾನುಕರಣೆಯಾಗಿರಲಿಲ್ಲ. ಆಗ ದೇಶದೆಡೆಯೆಲ್ಲ ನಡೆಯುತ್ತಿದ್ದ ಸ್ವಾತಂತ್ರ್ಯಾಂದೋಲನ ಅತ್ಯಂತ ಮಹತ್ವದ್ದು ಹಾಗೂ ಅತೀ ಅವಶ್ಯಕವಾದದ್ದು ಎಂದು ಅಭಯರು ಹೇಳಿದರೆ ಗುರು ಭಕ್ತಿಸಿದ್ಧಾಂತರು ಅದಕ್ಕುತ್ತರವಾಗಿ ಸ್ವಾತಂತ್ರ್ಯ ಚಳುವಳಿಯು ಅನಿತ್ಯವಾದ ಅಪೂರ್ಣವಾದ ಕಾರಣಕ್ಕಾಗಿ ನಡೆದಿರುವಂತಹುದು ಎಂದರು. ಅಂದರೆ ಎಲ್ಲ ಸರಕಾರಗಳೂ ತಾತ್ಕಾಲಿಕ ಮತ್ತು ಕೇವಲ ಕೃಷ್ಣಪ್ರಜ್ಞೆ ಮಾತ್ರ ಶಾಶ್ವತವಾದ ವಾಸ್ತವಿಕತೆ, ಮನುಷ್ಯ ನಿರ್ಮಿತವಾದ ಯಾವ ರಾಜಕೀಯ ವ್ಯವಸ್ಥೆಯೂ ಮನುಕುಲಕ್ಕೆ ನೆರವಾಗದು ಎಂಬುದು ಅವರ ಗುರುಗಳ ನಿಲುವಾಗಿತ್ತು. ಇದು ವೈದಿಕ ಗ್ರಂಥಗಳ ತೀರ್ಮಾನವೂ ಹೌದು ಮತ್ತು ಈ ಗುರುಪರಂಪರೆಯ ಸಂದೇಶವೂ ಹೌದು, ಗುರುಗಳ ಈ ವಾದ ಅಭಯರಿಗೆ ಮನವರಿಕೆಯಾಯಿತು. ಇದರಿಂದ ಪ್ರಭಾವಿತರಾದ ಅವರಿಗೆ ತಾನು ರಾಷ್ಟ್ರೀಯವಾದಿಗಿಂತ ಹೆಚ್ಚಾಗಿ ಭಕ್ತಿಸಿದ್ಧಾಂತರ ಅನುಯಾಯಿ ಎಂದೆನಿಸತೊಡಗಿತು. ಇದನ್ನೆ ಮುಂದೊಮ್ಮೆ ಅವರು ಎಲ್ಲಿಯವರೆಗೆ ಜನರಲ್ಲಿ ಸ್ವಹಿತಾಸಕ್ತಿ

ಮತ್ತು ಇಂದ್ರಿಯ ಸುಖದ ಕಾಮನೆಗಳು ಇರುತ್ತವೆಯೊ ಅಲ್ಲಿಯವರೆಗೂ ಅವರು ಹೋರಾಡುತ್ತಲೇ ಇರುತ್ತಾರೆ; ಆಧ್ಯಾತ್ಮಿಕ ಅರಿವಿನ ವೇದಿಕೆಯಲ್ಲಿ ಹಾಗೂ ಭಗವಂತನ ಸೇವೆಯಲ್ಲಿ ಮಾತ್ರ ನಿಜವಾದ ಏಕತೆ ಸಾಧ್ಯವಾಗುತ್ತದೆ ಎಂದು ತಮ್ಮ ಪತ್ರಿಕೆ 'ಬ್ಯಾಕ್ ಟು ಗಾಡ್ ಹೆಡ್'ದ ಲೇಖನವೊಂದರಲ್ಲಿ ಸ್ಪಷ್ಟಪಡಿಸಿದ್ದರು.

ಹೀಗೆ ತಮ್ಮ ಗುರುಗಳ ಆದೇಶವನ್ನು ಅನುಷ್ಠಾನಕ್ಕೆ ತರಲೇಬೇಕೆಂದು ತಮ್ಮ 56ನೆಯ ವಯಸ್ಸಿನಲ್ಲಿ ಅಭಯಚರಣರು ಗಂಭೀರವಾಗಿ ಯೋಚಿಸಿದರು. ಇಡೀ ಪ್ರಪಂಚವೇ ಆಧ್ಯಾತ್ಮಿಕ ಕ್ರಾಂತಿಗಾಗಿ ಕಾಯುತ್ತಿದೆ ಎಂದು ತಮ್ಮ ಝೂನ್ಸಿಯ ಪರಿಚಿತ ಶ್ರೀ ಮಿತ್ರ ಎಂಬುವರೆದುರು ಹೇಳುತ್ತಿದ್ದರಂತೆ. ಇದಕ್ಕಾಗಿ ವಿಶ್ವವ್ಯಾಪಿ ಆಂದೋಲನವೊಂದನ್ನು ಹುಟ್ಟುಹಾಕಬೇಕೆಂದು "ಲೀಗ್ ಆಫ್ ಡಿವೋಟೀಸ್" ಎಂಬ ಆಧ್ಯಾತ್ಮಿಕ ವಿಶ್ವಸಂಸ್ಥೆಯನ್ನು ಕಾನೂನುಬದ್ಧವಾಗಿ ನೋಂದಾಯಿಸಿದರು. ಹೀಗೆಯೇ - ತಮ್ಮ ಸ್ವಂತದ ವ್ಯಾಪಾರ ವ್ಯವಹಾರ ಎಲ್ಲ ಮರೆತು ಕಾರ್ಯತತ್ಪರರಾದರು. ಕೃಷ್ಣಪ್ರಜ್ಞಾ ತಿರುಗಾಟ ಅಲೆದಾಟವೂ ಮುಂದೊರೆದಿತ್ತು. ಸಂಸಾರದಲ್ಲಿಯ ಭಿನ್ನಾಭಿಪ್ರಾಯಗಳೂ ಬಲಿಯತೊಡಗಿದ್ದವು. ಅನೇಕ ಸಾರಿ ತಾವು ಮದುವೆಯೇ ಆಗಬಾರದಿತ್ತೇನೋ ಎಂದೂ ವಿಚಾರಿಸುತ್ತಿದ್ದರು. ಕೊನೆಗೆ ವೃಂದಾನವನದಲ್ಲಿ ಒಂದು ರಾತ್ರಿ ಕನಸಿನಲ್ಲಿ ತಮ್ಮ ಗುರು ಭಕ್ತಿಸಿದ್ಧಾಂತರು ಬಂದು "ನೀನಿನ್ನು ಸನ್ಯಾಸಿಯಾಗು" ಎಂದುಪದೇಶಿಸಿದಂತಾಯಿತು. ಈ ಬಗ್ಗೆ ತೀವ್ರ ಪರಿಣಾಮಕ್ಕೊಳಗಾದ ಅಭಯಚರಣರು ತಮ್ಮ ದೈವಬಂಧು ಕೇಶವ ಮಹಾರಾಜರನ್ನು ಸಂಪರ್ಕಿಸಿ ಸಲಹೆ ಪಡೆದರು. ಗಹನ ಚಿಂತನೆ ಚರ್ಚೆ ನಡೆಸಿದ ನಂತರ ಸನ್ಯಾಸ ಸ್ವೀಕರಿಸಲು ಸಿದ್ಧರಾದರು. ವೃಂದಾವನದಲ್ಲಿ ಶಾಸ್ತ್ರೋಕ್ತವಾಗಿ ಸನ್ಯಾಸ ದೀಕ್ಷೆ ಪಡೆದು ಅಂದಿನಿಂದ 'ಅಭಯ ಚರಣಾರವಿಂದ ಭಕ್ತಿವೇದಾಂತ ಸ್ವಾಮಿ' ಎಂದು ಕರೆಯಲ್ಪಡತೊಡಗಿದರು.

ಸನ್ಯಾಸವನ್ನೇನೊ ಸ್ವೀಕರಿಸಿದ್ದಾಯಿತು. ಹೆಸರೂ ಬದಲಾವಣೆಯಾದದ್ದಾಯಿತು. ಆದರೆ ಮಾಡಬೇಕಾದ ಘನಕಾರ್ಯ ಇನ್ನೂ ಕೈಗೂಡಿರಲಿಲ್ಲ. ಕೃಷ್ಣಪ್ರಜ್ಞೆಯ ಪ್ರಸಾರಕ್ಕಾಗಿ ತಯಾರಿಯೇನೂ ಸಾಕಷ್ಟಿತ್ತು. ಆಳ ಅಧ್ಯಯನ, ಕೃತಿ ರಚನೆ, ನಿರಂತರ ಸಂಕೀರ್ತನ ಇದೆಲ್ಲ ಸರಂಜಾಮಾಗಿ ಬೆನ್ನಿಗಿತ್ತು. ಭಾಷಣ ಕಲೆ ಕೈಗೂಡಿತ್ತು. ಇದೆಲ್ಲ ಉಂಟು ಆದರೆ ಬೋಧನೆಯನ್ನು ಕೇಳುವವರಾರು? ಕೇಳಲು ಸಿದ್ಧರಿದ್ದವರು ಕೇವಲ ಕೈಬೆರಳೆಣಿಕೆಯಷ್ಟು ಜನ ಮಾತ್ರ. ಅಂದರೆ ಈಗ ಅವರನ್ನು ತಯಾರಿಸುವ, ಪ್ರೇರೇಪಿಸುವ ಸರಿಯಾಗಿ ಸಿದ್ಧಗೊಳಿಸುವ ಕೆಲಸ ಜರೂರಾಗಿ ಆಗಬೇಕೆಂದಂದುಕೊಂಡರು. ಅದಕ್ಕಾಗಿ ಇನ್ನೂ ಕೆಲಸಮಯ ತಾಳಬೇಕಾಗುವುದೆಂಬುದೂ ಅವರಿಗೆ ಮನವರಿಕೆಯಾಯಿತು. ಕೃಷ್ಣಪ್ರಜ್ಞೆ ಯಾವುದಕ್ಕೂ ಕಾಯಲಾರದೆಂದು ಅಚಲ ನಂಬಿಕೆಯಿಟ್ಟಿದ್ದ ಪ್ರಭುಪಾದರಿಗೆ ಆ ನಿಟ್ಟಿನಲ್ಲಿ ಸುಮ್ಮನೆ ಕೂಡುವುದು ಸಾಧ್ಯವೇ ಇರಲಿಲ್ಲ. ಕಾರಣ ಸನ್ಯಾಸ ಸ್ವೀಕರಣೆಯ ತದನಂತರದ ಹೆಚ್ಚಿನ ವೇಳೆಯನ್ನು ಗ್ರಂಥ ರಚನೆಗೇ ಮೀಸಲಿರಿಸಲು ನಿಶ್ಚಯಿಸಿದರು, ಜೊತೆಯಲ್ಲಿ "ಬ್ಯಾಕ್ ಟು ಗಾಡ್ ಹೆಡ್' ಪತ್ರಿಕೆಯನ್ನಂತೂ ಹೊರತರಲೇಬೇಕು. ತಮ್ಮ ಗುರುಗಳು ಹೇಳಿದಂತೆ ಕೃಷ್ಣಪ್ರಜ್ಞೆ ವಿಶ್ವವ್ಯಾಪಿಯಾಗಲು ಕಂಕಣಬದ್ಧರಾಗಿ, ಅದಕ್ಕೆ ಮೂಲಾಧಾರವಾದ ಶ್ರೀಮದ್ಭಾಗವತದ ಇಂಗ್ಲೀಷ್ ಅನುವಾದವನ್ನು ಪ್ರಾರಂಭಿಸಿದರು. ಹದಿನೆಂಟು ಸಾವಿರ ಶ್ಲೋಕಗಳ ಈ ಅರವತ್ತು ಸಂಪುಟಗಳಿಗಾಗಿ ಕನಿಷ್ಠ ಏಳು ವರ್ಷಗಳನ್ನಾದರೂ ಮೀಸಲಿಡಬೇಕೆಂದು ನಿಶ್ಚಯಿಸಿದರು. ಸ್ವತಃ ಇಂಗ್ಲೀಷ್ ಬೋಧನೆಗಾಗಿ ಹೆಸರುವಾಸಿಯಾಗಿದ್ದರೂ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಇಂಗ್ಲೀಷ್ ಪುಸ್ತಕ ವಿತರಣೆ, ಮಾರಾಟ ಮಾಡುವುದೆಂದರೆ ಏನೇನೂ ತಪ್ಪುಗಳಾಗಬಾರದೆಂದುಕೊಂಡರು. ಒಳಗೊಳಗೇ

ಈ ಅಳುಕು ಇತ್ತಾದರೂ ಅನುವಾದವನ್ನು ನಿಲ್ಲಿಸಲಿಲ್ಲ. “ಮನೆಗೆ ಬೆಂಕಿ ಬಿದ್ದವ ಹೊರಬಂದು ಸುತ್ತಮುತ್ತಲಿನವರಿಗೆ ಯಾವ ಭಾಷೆಯಲ್ಲಿ ಅರುಹಿದರೇನು ಸನ್ನಿವೇಶದ ಅರ್ಥವಾಗೇ ಆಗುತ್ತದೆ” ಎಂಬಂತೆ ಗೀತೋಪದೇಶದ ಸಾರವನ್ನು ಸಾರುವುದು ಮುಖ್ಯವಾಗಿರುವುದರಿಂದ ಅಲ್ಪಸ್ವಲ್ಪ ಅಡಚಣೆಗಳಾದರೂ ನಡೆಯುತ್ತದೆಂದು ಭಾವಿಸಿ ಮುನ್ನಡೆದರು. ಹಗಲು ಇರುಳೆನ್ನದೇ ಈ ಕೈಂಕರ್ಯವನ್ನು ಮುಂದೊರೆಸಿದರು. ಇದಕ್ಕಾಗಿ ಬಹುಕಾಲ ವೃಂದಾವನದಲ್ಲಿಯೇ ಉಳಿದರು.

ಪುಸ್ತಕ ರಚನೆ ಒಂದೆಡೆಯಾದರೆ ಅದರ ಮುದ್ರಣ, ಪ್ರಕಾಶನ, ಮಾರಾಟ ಇನ್ನೊಂದೆಡೆ. ವಿಪರೀತ ಹಣದ ಕೊರತೆ, ಅವರಿವರಿಗೆ ಹಸ್ತಪ್ರತಿ ತೋರಿಸಿ ಮನವೊಲಿಸಿ ಪ್ರಕಾಶಕರನ್ನು ಹುಡುಕಿ ಕಾಲ್ನಡಿಗೆಯಲ್ಲೇ ಮುದ್ರಣಾಲಯಕ್ಕೆ ಅಲೆದಲೆದು ಒಟ್ಟಿನಲ್ಲಿ 1962ರಷ್ಟೊತ್ತಿಗೆ ಪುಸ್ತಕದ ಪ್ರಥಮ ಸಂಪುಟ ಪ್ರಕಟಗೊಂಡಿತು. ಇದಕ್ಕೆ ಅತ್ಯಲ್ಪಕಾಲದಲ್ಲಿಯೇ ಉತ್ತಮ ಪ್ರತಿಕ್ರಿಯೆ ಬರತೊಡಗಿತು. ಖ್ಯಾತ ತತ್ವಜ್ಞಾನಿ ಡಾ. ಎಸ್.ರಾಧಾಕೃಷ್ಣನ್ ಅಂದಿನ ಉಪರಾಷ್ಟ್ರಪತಿ ಡಾ.ಝಾಕೀರ್ ಹುಸೇನ್‌ರ ಆದಿಯಾಗಿ ಹಲವಾರು ವಿದ್ವಾಂಸರು, ಪತ್ರಿಕೆಗಳು ಹೊಗಳಿಕೆಯ ಸುರಿಮಳೆಯನ್ನೇಗೈದವು. ಹಾಗೆಯೇ ಆಗಿನ ಪ್ರಧಾನಮಂತ್ರಿ ಶ್ರೀಲಾಲ್‌ಬಹಾದೂರ್ ಶಾಸ್ತ್ರಿ, ಅವರನ್ನು ಭೆಟ್ಟಿಯಾಗುವ ಅವಕಾಶವೂ ಲಭಿಸಿತು. ಶ್ರೀಮದ್ಭಾಗವತದ ಪ್ರತಿಯನ್ನು ಸ್ವೀಕರಿಸಿದ ಶಾಸ್ತ್ರೀಜಿ ಅದೊಂದು ಅಮೂಲ್ಯ ಗ್ರಂಥವೆಂದು ಉತ್ತರ ಕಳುಹಿಸಿದರು. ಹೀಗೆ ಬಂದ ಪ್ರಚಾರ ಖ್ಯಾತಿಯಿಂದಾಗಿ ಪುಸ್ತಕ ಮಾರಾಟ ತುಸು ಹೆಚ್ಚಾಗಿ ಪ್ರಭುಪಾದರಿಗೆ ಕೊಂಚ ನೆಮ್ಮದಿ ದೊರಕಿತು. ಹಾಗೆಯೇ ಭಾಗವತದ ಮೂರನೆಯ ಬೃಹತ್ ಸಂಪುಟವನ್ನು ಹೊರತರಲೂ ಸಿದ್ಧತೆ ನಡೆಸಿದರು. ಮನಸ್ಸಿನಲ್ಲಿ ಮೊಳೆಯುತ್ತಿದ್ದ ವಿದೇಶ ಯಾತ್ರೆಯ ವಿಚಾರ ಈಗ ಹೆಮ್ಮರವಾಗಿ ಯಾವುದೇ ಪರಿಸ್ಥಿತಿಯಲ್ಲೂ ತಾವು ಅಲ್ಲಿಗೆ ಹೋಗಲೇಬೇಕೆಂದು ನಿರ್ಧರಿಸಿದರು.

## ವಿದೇಶಯಾತ್ರೆ - ವಿಜಯಯಾತ್ರೆ:

ವಯಸ್ಸು ಎಪ್ಪತ್ತಕ್ಕೆ ಸಮೀಪಿಸುತ್ತಿದೆ, ಹಣಕಾಸಿನ ಪರಿಸ್ಥಿತಿಯೂ ಅಷ್ಟೇನೂ ಹೇಳಿಕೊಳ್ಳುವಂತಿಲ್ಲ, ಆರೋಗ್ಯವೂ ಅಷ್ಟಕ್ಕಷ್ಟೇ. ಆದಾಗ್ಯೂ ಕೃಷ್ಣಪ್ರಜ್ಞೆಯ ಪ್ರಚಾರ ಓಘ ಒತ್ತೊತ್ತಿ ಬರುತ್ತಿದೆ. ಆ ಮಹಾಪ್ರವಾಹದಲ್ಲಿ ಎಲ್ಲ ಅಡೆತಡೆ, ಸಂಕಷ್ಟ ಅಡಚಣೆಗಳು ತಂತಾನೆ ಪಕ್ಕಕ್ಕೆ ಸರಿಯುತ್ತಿವೆ. ದಾರಿ ಸುಗುಮವಾದಂತೆನಿಸುತ್ತದೆ. 1965ರಲ್ಲಿ ಅಂತಿಮವಾಗಿ, ಅಗರ್‌ವಾಲ್ (ಗೋಪಾಲ್ ಅಗರ್‌ವಾಲರ ತಂದೆ), ಶ್ರೀಮತಿ ಸುಮತಿ ಮೊರಾರ್ಜಿ ಹಾಗೂ ಅವರ ಕಾರ್ಯದರ್ಶಿ ಮಿ.ಮೋಕ್ಸಿ ಹಾಗೂ ಇನ್ನಿತರರ ಸಹಾಯ ಸಹಕಾರಗಳಿಂದಾಗಿ ಕಲ್ಕತ್ತಾಕ್ಕೆ ಬಂದು ಅಮೇರಿಕೆಗೆ ಹೋಗುವ ಸಿಂದಿಯಾ ನೇವಿಗೇಶನ್ ಕಂಪನಿಯ ಸರಕು ಸಾಗಣೆಯ ಹಡಗನ್ನು ಏರಿದ್ದಾಯಿತು (ಆಗಸ್ಟ 13). ಅದರಲ್ಲಿ ಒಂದು ಪ್ರಯಾಣಿಕರ ಕ್ಯಾಬಿನ್ ಇತ್ತು. ಅದರಲ್ಲಿಯೇ ಪ್ರಭುಪಾದರ ವಾಸ ಮತ್ತು ಪ್ರವಾಸ. ಅವರ ಸಾಮಾನುಗಳೆಂದರೆ ಒಂದು ಪೆಟ್ಟಿಗೆ, ಒಂದು ಕೊಡೆ, ಚೈತನ್ಯ ಚರಿತಾಮೃತ, ಒಂದಿಷ್ಟು ಆಹಾರ ಧಾನ್ಯಗಳು ಮಾತ್ರ. ಆದರೆ ಮುಖ್ಯ ಪರಿಕರಗಳಾದ ಶ್ರೀಮದ್ಭಾಗವತದ ಇಂಗ್ಲೀಷ್‌ನಲ್ಲಿಯ ಮೂರು ಸಂಪುಟಗಳ ಇನ್ನೂರು ಕಟ್ಟುಗಳು ಪ್ರಭುಪಾದರ ಆತ್ಮವಿಶ್ವಾಸವನ್ನು ಇಮ್ಮಡಿ, ಮುಮ್ಮಡಿ, ನೂರ್ಮಡಿಗೊಳಿಸುತ್ತಿದ್ದವು. ಸಂಸಾರದೊಡನೆ ಸಂಪರ್ಕ ಕಡಿದುಕೊಂಡಿದ್ದರಿಂದ ಒಂದು ಥರದ ನಿರುಮ್ಮಳತೆಯೂ ದೊರೆತಂತಿತ್ತು.

ಪ್ರಯಾಣದ ಪ್ರಾರಂಭದಲ್ಲಿ ಕೆಲಸಾರೆ ಆರೋಗ್ಯ ಹದಗೆಟ್ಟಿತು, ತಲೆಸುತ್ತುವುದು, ವಾಂತಿ, ಹಸಿವಾಗದಿರುವುದು ಮುಂತಾದ ಕಡಲರೋಗಗಳು ಬಾಧಿಸುತ್ತಿದ್ದವು. ಹೀಗಿರಲು ಅವರಿಗೆ ಕನಸೊಂದು ಬಿತ್ತು. ಅಲ್ಲಿ ಶ್ರೀಕೃಷ್ಣ ಪರಮಾತ್ಮನು ಹಲವಾರು ರೂಪ ತಾಳಿ ದೋಣಿವೊಂದರಲ್ಲಿ ಕುಳಿತು ಹುಟ್ಟು ಹಾಕತೊಡಗಿದ್ದ. ನೀನೇನು ಅಂಜಬೇಡವೆಂದು ಪ್ರಭುಪಾದರಿಗೆ ಧೈರ್ಯ ತುಂಬುತ್ತಿದ್ದ. ಇದರಿಂದಾಗಿ ಎಚ್ಚರವಾದ ಮೇಲೆ ಅವರಿಗೆ ಆತ್ಮಸ್ಥೈರ್ಯ ಇನ್ನೂ ಹೆಚ್ಚಿತು. ಹಾಗೆಯೇ ಬರಬರುತ್ತ ಎಲ್ಲ ಸುಗಮವಾಗಿ ಆರೋಗ್ಯವೂ ಸುಧಾರಿಸಿತು. ಮನಸ್ಸಿದ್ದಲ್ಲಿ ಮಾರ್ಗವಲ್ಲವೇ? ಹಾಗೆಯೇ ಆಯಿತು. ಈ ಹಿಂದೆಯೂ ಕನಸೊಂದು ಬಿದ್ದು ನೀನು ಸನ್ಯಾಸ ಸ್ವೀಕರಿಸು ಎಂದು ದೇವವಾಣಿಯಾದಂತೆನಿಸಿತ್ತು. ಈಗ ಮತ್ತೊಂದು ಕನಸಿನಲ್ಲಿ ಅಂಬಿಗನಾಗಿ ಶ್ರೀಕೃಷ್ಣದರ್ಶನ, ಅಂದರೆ ಪ್ರಾಯಶಃ ಅವರಿಗೆ ಕನಸುಮನಸಿನಲ್ಲಿಯೂ ಅದೇ ಧ್ಯಾನವೆಂದಾಯಿತು. ಹಡಗಿನಲ್ಲಿ ಪಯಣದುದ್ದಕ್ಕೂ ಸಹ ಪ್ರಯಾಣಿಕರ ಜೊತೆ ಗೀತಾಸಾರ ಹಾಗೂ ಕೃಷ್ಣಪ್ರಜ್ಞೆ ಬಗ್ಗೆಯೇ ಮಾತುಕತೆ, ಚರ್ಚೆ ನಡೆಯುತ್ತಿದ್ದವು. ಹಡಗಿನ ಕಪ್ತಾನನೇ ಮನಸೋತು ಶ್ರೀಮದ್ಭಾಗವತದ ಮೂರು ಪ್ರತಿಗಳನ್ನು ಕೊಂಡುಕೊಳ್ಳುವಂತಾಯಿತು. ಅಲ್ಲಿಯೂ ಇತರರು ವಿಶ್ರಾಂತಿ ಮಾಡುತ್ತಿದ್ದಾಗ ಇವರು ತಮ್ಮ ಓದುಬರಹ ಮುಂದೊರೆಸುತ್ತಿದ್ದರು. ಹಾಗೆಯೇ ಬಂಗಾಳಿಯಲ್ಲಿ ಒಂದು ಉದ್ದನೆಯ ಪದ್ಯವನ್ನು ಬರೆದರು, ಅದರ ಸಾರ ಪ್ರಮುಖವಾಗಿ ಈ ಕೆಳಗಿನ ಅಂಶಗಳ ಮೇಲಿತ್ತು.

**"ಅಮೇರಿಕಾಕ್ಕೆ ತಾವು ಬಂದಿರುವುದು ಕೃಷ್ಣನ ಆಜ್ಞೆಯಂತೆಯೆ.**

**ಯಾವುದೊ ಮಹತ್ಕಾರ್ಯ ತಮ್ಮಿಂದ ಆಗುತ್ತದೆಂಬುದೂ**

**ಆತನು ತಮ್ಮ ಮೇಲಿಟ್ಟ ನಂಬುಗೆಯಿಂದಲೇ.**

**ಐಹಿಕ ಸುಖಲೋಲುಪರಾಗಿರುವ ಅಮೆರಿಕದ**

**ಜನಕ್ಕೆ ಎಷ್ಟೊಂದು ಪರಿಣಾಮಕಾರಿಯಾಗಿ ಈ ಅಧ್ಯಾತ್ಮದ ಚೈತನ್ಯರ**

**ಸಂದೇಶದ ಸಾರವನ್ನು ತಿಳಿಸಿಕೊಡಬೇಕೊ ತಿಳಿಯದಾಗಿದೆ.**

**ಆದಾಗ್ಯೂ ದಾರಿಯನ್ನು ನೀನೇ (ದೇವರು) ತೋರಬೇಕು.**

**ನಿನ್ನ ಕರುಣೆಯಿಂದ ಇದೆಲ್ಲ ಸಾಧ್ಯ.**

**ದೇವರೆ ನಿನ್ನ ಇಚ್ಛೆ, ದಯೆ ಇರದಿದ್ದರೇ ಏನೂ ಆಗದು.**

**ಈ ಕಠಿಣ ಜನರನ್ನು ಮಾಯೆಯಿಂದ ಮುಕ್ತಗೊಳಿಸಲು, ತಿದ್ದಲು**

**ಶಕ್ತಿಕೊಡು ."**

**ಕವನದ ಕೊನೆಯ ಎರಡು ಸಾಲುಗಳು ಹೀಗಿದ್ದವು:**

"ನನ್ನಲ್ಲಿ ಭಕ್ತಿಯಿಲ್ಲ, ಜ್ಞಾನವಿಲ್ಲ. ಆದರೆ ಕೃಷ್ಣನ ಪವಿತ್ರ ನಾಮದಲ್ಲಿ ನನಗೆ ದೃಢವಾದ ಶ್ರದ್ಧೆ ಇದೆ. ನನ್ನನ್ನು ಭಕ್ತಿವೇದಾಂತ ಎಂದು ಕರೆಯುತ್ತಾರೆ. ಈಗ ನೀನು ಇಚ್ಛಿಸಿದರೆ ಆ ಭಕ್ತಿವೇದಾಂತದ ಭಾವಾರ್ಥವನ್ನು ಈಡೇರಿಸು." ಬಿಡಾರ-ಜಲದೂತ (ಹಡಗು) ಸಹಿ

ಕಾಮನ್ ವೆಲ್ತ್‌ಪಿಯರ್ ಅತ್ಯಂತ ದುರ್ದೈವಿ, ಕ್ಷುದ್ರಯಾಚಕ

ಬೋಸ್ಟನ್ ಮೆಸಾಚುಸೆಟ್ಸ್ ಎ.ಸಿ. ಭಕ್ತಿವೇದಾಂತ ಸ್ವಾಮಿ.

ದಿನಾಂಕ: 18ನೆ ಸೆಪ್ಟೆಂಬರ್ 1965

ಈ ಕವಿತೆಯ ಓಘ ಹಾಗೂ ಒಕ್ಕಣೆ ಪ್ರಭುಪಾದರನ್ನು ಭಾರತದ ಭಕ್ತಿ ಪರಂಪರೆಯ ಮಹಾಮಹಿಮರಲ್ಲಿ ಒಬ್ಬರನ್ನಾಗಿ ಎತ್ತಿ ತೋರಿಸುತ್ತದೆ. ಕರ್ನಾಟಕದ ಶರಣರು, ದಾಸರು ಉತ್ತರದ ಚೈತನ್ಯ ಮಹಾಪ್ರಭುಗಳು, ಮೀರಾಬಾಯಿ ಮುಂತಾದವರಂತೆಯೇ ಇವರೂ ದೇವರ ಅಸ್ತಿತ್ವ, ಸಕಲಕ್ಕೂ ಆತನೇ ಒಡೆಯ, ತನ್ನೆಲ್ಲ ಕ್ರಿಯೆಗಳ ನಿಯಂತ್ರಕ, ದಿಗ್ದರ್ಶಕ ದೇವರೇ, ತಾನು ತನ್ನ ಸರ್ವಸ್ವ ಆತನಿಗೇ ಮೀಸಲು ಎಂಬ ಶುದ್ಧ ಭಕ್ತಿ ಹಾಗೂ ಅರ್ಪಣಾಭಾವ ಇತ್ಯಾದಿಗಳನ್ನೇ ತಮ್ಮ ಉಸಿರಾಗಿಸಿಕೊಂಡವರು. ತನಗಿಂತ ಕಿರಿಯರಿಲ್ಲ ಎಂಬ ಬಸವಣ್ಣನ ವಚನ ವಾಕ್ಯದಂತೆಯೇ ಅನಿಸುತ್ತದೆ, ಈ ಕವನದ ಕೊನೆಯ ಸಾಲುಗಳು, ಶಬ್ಬಗಳು.

ಜಲದೂತ ಹಡಗು ನ್ಯೂಯಾರ್ಕ್ ಬಂದರಿಗೆ ಬಂದು ಲಂಗರು ಹಾಕಿದಾಗ ಪ್ರಭುಪಾದರ ಕಿಸೆಯಲ್ಲಿದ್ದುದು ಕೇವಲ ನಲವತ್ತು ರೂಪಾಯಿಗಳು. ಅಲ್ಲಿಂದ ಅವರ ಮಾರ್ಗದರ್ಶನಕ್ಕೆ ಬಂದ ಪ್ರವಾಸಿ ಏಜೆಂಟ್ ಅವರನ್ನು ಅವರ ಅತಿಥೇಯರಾದ ಶ್ರೀ ಗೋಪಾಲ್ ಅಗರವಾಲರ ಬಟ್ಲರ್‌ನಲ್ಲಿಯ ಅಪಾರ್ಟ್‌ಮೆಂಟ್‌ಗೆ ಕರೆದೊಯ್ದರು. ಅಲ್ಲಿ ಗೋಪಾಲ್‌ರವರ ಪತ್ನಿ ಅಮೇರಿಕೆಯವರೇ ಆದ ಸ್ಯಾಲಿಯವರು ಕೂಡ ಪ್ರಭುಪಾದರ ಸಾಮಿಪ್ಯದಲ್ಲಿ ತೀವ್ರ ಪ್ರಭಾವಿತರಾದಂತೆ ಕಂಡುಬರುತ್ತದೆ. ಈ ಬಗ್ಗೆ ಸ್ಯಾಲಿಯವರ ಮಾತಿನಲ್ಲೇ ಹೇಳುವುದಾದರೆ, “ನನ್ನ ಜೀವಮಾನದಲ್ಲಿ ಕಂಡ ಅತಿಥಿಗಳಲ್ಲಿ ಅವರು ಅತ್ಯಂತ ಸರಳರು.... ಅವರು ಎಷ್ಟು ಸರಳರು! ಅವರಿಗೆ ಎಂದೂ ಬೇಸರವೇ ಆಗುತ್ತಿರಲಿಲ್ಲ. ಅವರು ನಮ್ಮ ಮನೆಯಲ್ಲಿದ್ದಾಗ ನಮಗೆ ಯಾವುದೇ ಬಗೆಯ ಒತ್ತಡ ಆತಂಕ ಆಗುತ್ತಲೇ ಇರಲಿಲ್ಲ. ಹೆಚ್ಚು ಸಮಯ ಅವರು ಸಂಕೀರ್ತನೆ ಮಾಡುತ್ತಿದ್ದರು. ಜನರೆಲ್ಲ ಅವರನ್ನು ಇಷ್ಟಪಡುತ್ತಿದ್ದರು. ಅವರು ತೀಕ್ಷ್ಣಬುದ್ಧಿಶಕ್ತಿಯ ವ್ಯಕ್ತಿ. ಯಾರನ್ನಾದರೂ ಎರಡನೆ ಬಾರಿ ನೋಡಿದರೆ ಸಾಕು ಅವರ ಹೆಸರನ್ನು ನೆನಪಿಟ್ಟು ಹೇಳುತ್ತಿದ್ದರು. ಸ್ವಾಮಿಯವರೆಷ್ಟು ಬುದ್ಧಿಶಾಲಿಗಳೆಂದು ಜನರು ಆಶ್ಚರ್ಯಪಡುತ್ತಿದ್ದರು. ಹೊರಗಿನಿಂದ ಕಠೋರವಾಗಿ ಕಂಡರೂ ಅವರು ಬಹಳ ವಿನೋದ ಸ್ವಭಾವದ ಮನಮೋಹಕ ವ್ಯಕ್ತಿ” ಬಟ್ಲರ್‌ನಲ್ಲಿಯ ವಾಸದ ವೇಳೆಯಲ್ಲಿ ಹಲವಾರು ಜನ ಇವರ ದರ್ಶನಕ್ಕಾಗಿ ಬರತೊಡಗಿದರು. “ಬಟ್ಲರ್ ಈಗಲ್” ಪತ್ರಿಕೆ ಇವರನ್ನು ‘ವಿದ್ವಾಂಸ ಗುರು'ಗಳೆಂದೂ ಶ್ರೀಮದ್ಭಾಗವತವನ್ನು ಬೈಬಲ್ಲಿಗೆ ಸಂಬಂಧಿಸಿದ ಸಾಹಿತ್ಯವೆಂದೂ ವರ್ಣಿಸಿ ಲೇಖನವೊಂದನ್ನು ಪ್ರಚುರಪಡಿಸಿತು. ಇದರಲ್ಲಿಯ ಅತ್ಯಂತ ಮಹತ್ವದ ಅಂಶವೆಂದರೆ.... “ಜನರಲ್ಲಿರುವ ದೈವಪ್ರಜ್ಞೆಯನ್ನು ಪುನಚೇತನಗೊಳಿಸುವುದೇ ನನ್ನ ಆಂದೋಲನದ ಉದ್ದೇಶ, ಸಹಸ್ರಾರು ವಿವಿಧ ರೂಪಗಳಲ್ಲಿರುವ ಎಲ್ಲ ಜೀವಿಗಳಿಗೆ ದೇವರೇ ತಂದೆ” ಎಂಬ ಮಾತು. ಇಲ್ಲಿ ದ್ವೈತ ತತ್ವದಲ್ಲಿಯೂ ಅದ್ವೈತದ ಎಳೆ ಕಾಣುತ್ತಿರುವುದನ್ನು ಸೂಕ್ಷ್ಮವಾಗಿ ನಾವು ಗಮನಿಸಬಹುದಾಗಿದೆ.

ಮುಂದೊಂದು ತಿಂಗಳಲ್ಲಿ (ಅಕ್ಟೋಬರ್ 18) ಪ್ರಭುಪಾದರು ಬಟ್ಲರ್‌ನಿಂದ ಫಿಲಿಡೆಲ್ಫಿಯಾ ಮಾರ್ಗವಾಗಿ ನ್ಯೂಯಾರ್ಕ್‌ಗೆ ಹೊರಟರು. ಅಲ್ಲಿ ಮುಂಬಯಿಯ ತಮ್ಮ ಮಿತ್ರರೊಬ್ಬರಿಂದ ತಂದಿದ್ದ ಪರಿಚಯ ಪತ್ರದಿಂದಾಗಿ ಡಾ. ರಾಮಮೂರ್ತಿ ಮಿಶ್ರ ಎಂಬುವವರ ಮನೆಯಲ್ಲಿ ಇರತೊಡಗಿದರು. ಮಿಶ್ರರವರ ದೇಹಾರೋಗ್ಯ ಅಷ್ಟೇನೂ ಸರಿಯಿರಲಿಲ್ಲ. ವಯಸ್ಸು ಕೇವಲ 44 ಆಗಿದ್ದರೂ ಪ್ರಕೃತಿ ಶಿಥಿಲವಾಗಿತ್ತು. ಪ್ರಭುಪಾದರು ಸದಾ ಅಲ್ಲಿ ಸ್ವತಃ ಅಡಿಗೆ ಮಾಡಿಕೊಳ್ಳುತ್ತಿದ್ದರಷ್ಟೇ. ಈಗ ತಮ್ಮ ಕೈ ಅಡಿಗೆಯನ್ನೇ ಮಿಶ್ರರಿಗೂ ಉಣಬಡಿಸತೊಡಗಿದರು. ಪ್ರೀತಿಮಿಶ್ರಿತ ಈ ಭಕ್ಷ್ಯ ಹಾಗೂ ಅದು ತಮ್ಮ ಮೇಲೆ ಮಾಡಿದ ಪರಿಣಾಮದ ಬಗ್ಗೆ ಮಿಶ್ರರ ಮಾತಲ್ಲೇ ಹೇಳುವುದಾದರೆ, "ಸ್ವಾಮೀಜಿಯವರು ತಮ್ಮ ಪ್ರೀತಿಯಿಂದ ನಿಜವಾಗಿಯೂ ನನ್ನನ್ನು ಸೋಲಿಸಿಬಿಟ್ಟರು. ಅವರು ನಿಜವಾಗಿಯೂ ಪ್ರೀತಿಯ ಅವತಾರವೇ ಸರಿ. ನನ್ನ ದೇಹ ಅಸ್ಥಿಪಂಜರವಾಗಿತ್ತು. ತಮ್ಮ ಅಡಿಗೆ ಹಾಗೂ ವಿಶೇಷವಾಗಿ ತಮ್ಮ ಪ್ರೀತಿ ಹಾಗೂ ಕೃಷ್ಣಭಕ್ತಿಯಿಂದ ಅವರು ನಿಜವಾಗಿಯೂ ನನಗೆ ಮರುಜನ್ಮಕೊಟ್ಟರು.... ಅವರು ನನಗೆ ಕೇವಲ ರೊಟ್ಟಿಯನ್ನು ಕೊಡಲಿಲ್ಲ. ಪ್ರಸಾದವನ್ನು ಕೊಟ್ಟರು. ಅದು ಪ್ರಾಣ ಸ್ವರೂಪವಾಗಿತ್ತು. ಅವರು ನನ್ನ ಜೀವವನ್ನು ಉಳಿಸಿದರು. "ನಂಬುಗೆಯ ಆಧಾರದ ಮೇಲೆ ಹೇಳುವುದಾದರೆ ಡಾ. ಮಿಶ್ರ ಹಾಗೂ ಪ್ರಭುಪಾದರಿಗೆ ಸಾಮ್ಯವಿರಲಿಲ್ಲ. ಶ್ರೀರಾಮಾನುಜ, ಮಾಧ್ವರ ತತ್ವಗಳಿಗೆ ಪ್ರಭುಪಾದರು ಮಾರುಹೋಗಿದ್ದರೆ ಮಿಶ್ರರು ಶಂಕರಾಚಾರ್ಯರ ತತ್ವಾನುಯಾಯಿಗಳಾಗಿದ್ದರು. ವೈಚಾರಿಕ ವಿಭಿನ್ನತೆಗಳು ಹೀಗಿದ್ದಾಗ್ಯೂ ಕೂಡ ಮಿಶ್ರರು ತಮ್ಮ ಮೇಲಾದ ಆ ಪ್ರಭಾವವನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದು ಒಂದು ವಿಶೇಷವೇ ಎನ್ನಬಹುದು. ಆದರೆ ಪ್ರಭುಪಾದರ ಕೃಷ್ಣಪ್ರಜ್ಞೆಗೆ ಮಾತ್ರ ತಮ್ಮ ಶಿಷ್ಯಂದಿರು ಪ್ರಭಾವಿತರಾಗದಿರಲಿ ಎಂದೇ ಮಿಶ್ರರು ವಿಚಾರಿಸಿದಂತೆ ಕಾಣುತ್ತದೆ. ಆದ್ದರಿಂದ ಪ್ರಭುಪಾದರಿಗೆ ಬೇರೆಯೇ ಒಂದು ಕೋಣೆಯನ್ನು ಒದಗಿಸಿಕೊಟ್ಟರು.

"ಎಲ್ಲೆಲ್ಲೂ ನನ್ನ ಮನೆ ಇದೆ" ಎಂದು ತನ್ನ ಸಂಗಾತಿಗಳೆದುರು ಪ್ರಭುಪಾದರು ಹೇಳುತ್ತಿದ್ದರೂ ಅವರಿಗೆ ತನ್ನದೇ ಆದ ಒಂದು ಸ್ವಂತ ಮನೆಯಿರಲಿಲ್ಲ. ಕೃಷ್ಣಪ್ರಜ್ಞೆಯ ಪ್ರಚಾರಕ್ಕಾಗಿ, ಪ್ರವಚನ ನೀಡುವುದಕ್ಕಾಗಿ ಒಂದು ನೆಲೆ, ಕೃಷ್ಣನ ಮಂದಿರಕ್ಕಾಗಿ ಒಂದಿಷ್ಟು ಸ್ಥಳ ಅವರಿಗೆ ತೀರ ಅವಶ್ಯಕವಾಗಿದ್ದವು. ಇದಕ್ಕಾಗಿ ಮ್ಯಾನ್ ಹಟನ್, ಬೋವೊರಿ, ಲೋವರ್ ಈಸ್ಟ ಸೈಡ್ ಮುಂತಾದ ಕಡೆಗೆಲ್ಲ ಅವರು ಏಕಾಂಗಿಯಾಗಿ ಒಂಟಿ ಸಲಗನಂತೆ ತಮ್ಮ ಗುರಿಸಾಧನೆಗಾಗಿ ತಿರುಗಾಡುತ್ತಿದ್ದರು. ಕೆಲವೆಡೆ ಅಷ್ಟೇನೂ ಹೇಳಿಕೊಳ್ಳದಂತಹ ಹೆಸರಿನ ಬಡಾವಣೆಗಳೂ ಇದ್ದವು. ಕೆಲವೊಂದು ವಿಚಿತ್ರ ರೀತಿಯ ಯುವಕರು, ನಾಸ್ತಿಕರು ಇವರನ್ನು ಕಂಡು ಗೇಲಿ ಮಾಡಿದ್ದೂ ಉಂಟು. ಹಿಪ್ಪಿಗಳೆಂದು ಕರೆಯಲ್ಪಡುತ್ತಿದ್ದ ಅಮೇರಿಕದ ಪರಿತ್ಯಕ್ತ ಹಾಗೂ ನಿರಾಶೆಗೊಂಡ ಯುವಕರಲ್ಲಿ ಅನೇಕರು ಮೊದಮೊದಲು ಇವರನ್ನು ಅನುಮಾನದಿಂದ ನೋಡಿದರೂ ನಂತರ ಇವರ ತಾಳಬದ್ಧ ಭಜನೆಗೆ ಮಾರುಹೋದದ್ದು ಒಂದು ಐತಿಹಾಸಿಕ ದಾಖಲೆಯೇ ಎನ್ನಬಹುದು. ಐಹಿಕಾ ಭೋಗ ಲಾಲನೆಯೇ ಜೀವನದ ಪರಮಗುರಿ ಎಂದು ನಂಬಿದವರು ಈಗ ಅಲೌಕಿಕ ಹಾಗೂ ಆಧ್ಯಾತ್ಮಿಕ ಪರಮಸತ್ಯದೆಡೆಗೆ ತಿರುಗಿದ್ದು ಸಣ್ಣ ಮಾತೇನಲ್ಲ! ಅಷ್ಟೊಂದು ಬೇಗ ತಮ್ಮ ಸ್ವದೇಶದಲ್ಲೇ ಸ್ವಾಮೀಜಿಯವರಿಗೆ ಸಹಕಾರ ಸಿಕ್ಕಿರಲಿಲ್ಲವಲ್ಲವೇ? ಆದ್ದರಿಂದ ಹೀಗಾದ್ದೊಂದು ಕೃಷ್ಣನ ಕೃಪೆಯೇ ಎಂದಂದುಕೊಂಡರು. "ನಂಬಿ ನೆಚ್ಚಿ ಕರೆದೊಡೆ ಓ ಎನ್ನನೇ ಶಿವನು" ಎಂಬಂತೆ.

ಪ್ರಭುಪಾದರ ಬಗೆಗೆ ಜನಸಾಮಾನ್ಯರ ವಿಸ್ಮಯವೆಂದರೆ ಇವರು ಹಿಪ್ಪಿಗಳನ್ನು ಹೇಗಾದರೂ ಮಾಡಿ ಮನಪರಿವರ್ತನೆ ಮಾಡಿರಬಹುದು ಎಂಬುದು. ಇದು ಒಂದು

ನಿಜವಾಗಿಯೂ ಕಠಿಣತಮ ಹಾಗೂ ಕಷ್ಟಸಾಧ್ಯವಾದ ಕಾರ್ಯವೇ ಸರಿ. ಹಠವಾದಿಗಳಿಗಲ್ಲದೇ, ಒಂದು ಸದುದ್ದೇಶಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡವರಿಗಲ್ಲದೆ ಬೇರೆಯವರಿಂದ ಈ ಕಾರ್ಯ ಅಸಾಧ್ಯವಾದದ್ದು. ಇದಕ್ಕಾಗಿ ಪ್ರಭುಪಾದರು ಪಟ್ಟಪಾಡು ಹೇಳತೀರದು. ತಮ್ಮ ತಂದೆತಾಯಿಗಳ, ಹಾಗೂ ನಗರವಾಸಿಗಳ ಐಹಿಕ ಸುಖಭೋಗದ ವಾದ, ವಿವೇಕ ರಹಿತ ಸಂತೋಷ, ದೂರದರ್ಶಿತ್ವದ ಕೊರತೆ, ಇವೆಲ್ಲವುಗಳಿಂದಾಗಿ ಅಸಲು ಮಾರ್ಗದಿಂದ ವಿಮುಖರಾಗಿದ್ದು ತಮ್ಮ ಜೀವನದಲ್ಲಿ ತೀರ ಜಿಗುಪ್ಸೆಗೊಂಡ ಈ ಹಿಪ್ಪಿ ಯುವಜನಾಂಗ ಭ್ರಮನಿರಸಗೊಂಡು ಗುರಿಯಿಲ್ಲದ ಎರ್ರಾಬಿರ್ರಿ ಜೀವನ ಶೈಲಿಗೆ ಶರಣಾಗಿದ್ದರು. ತಮ್ಮೆಲ್ಲ ನೋವು ನಿರಾಸೆ ಮರೆಯಲು ಎಲ್.ಎಸ್.ಡಿ., ಮರಿಜುವಾನಾ, ಪಿಯೋಟ್, ಕೊಕಾಯಿನ್ನಳಂತಹ ಮಾರಕ ಮಾದಕ ವಸ್ತುಗಳಿಗೆ ದಾಸರಾಗಿದ್ದರು. ಇವುಗಳ ಸೇವನೆಯಿಂದ ಲಭಿಸುವ ಕೃತಕಾನಂದದ ನಶೆಯ ಮಡುವಿನಲ್ಲಿ ಸಿಕ್ಕು ನರಳುತ್ತಿದ್ದರು. ಈ ಅಷ್ಟಪದಿಯ ಕ್ರೂರ ಹಿಡಿತದಿಂದ ಅವರನ್ನು ಹೊರಗೆಳೆಯಲು ಅವರೆಲ್ಲರಿಗೆ ಆ ಅಮಲಿಗಿಂತಲೂ ಹೆಚ್ಚಿನದೇನನ್ನೋ ತೋರಿಸಬೇಕಿತ್ತು. ತಮ್ಮ ಅಮೋಘ ಕೀರ್ತನ, ಪ್ರವಚನಗಳ ಬಲದಿಂದ ಪ್ರಭುಪಾದರು ಆ ಮನಃಪರಿವರ್ತನೆ ಸಾಧ್ಯ ಮಾಡಿ ತೋರಿಸಿದ್ದೊಂದು ಪವಾಡಸದೃಶ ಕೆಲಸವೇ ಸರಿ. ಮಾದಕ ದ್ರವ್ಯಗಳಿಂದ ಎಷ್ಟೇ ಅಮಲು ಬಂದರೂ ಒಮ್ಮಿಲ್ಲ ಒಮ್ಮೆ ಅದು ಕೆಳಗಿಳಿಯಲೇಬೇಕು, ಆದರೆ ಶ್ರೀಕೃಷ್ಣಪ್ರಜ್ಞೆಯ ಅಮಲು ಎಲ್ಲಕ್ಕಿಂತ ಶ್ರೇಷ್ಠವಾದದ್ದು. ಒಮ್ಮೆ ಅದರ ರುಚಿ ಕಂಡುಕೊಂಡರೆ ಹಿಂದಿರುಗಿಬರುವ ಪ್ರಸಂಗವೇ ಇಲ್ಲ, ಕೆಳಗಿಳಿಯುವುದೂ ಸಾಧ್ಯವಿಲ್ಲ. ಅದೊಂದು ಅನನ್ಯ ಹಾಗೂ

ಅಪ್ರತಿಮ ಅಮಲು, ನಿರ್ಮಲ ಭಾವ ಎಂದು ಆ ಯುವ ಪೀಳಿಗೆಗೆ ಮನವರಿಕೆ ಮಾಡಿಕೊಟ್ಟರು. ಸ್ವತಃ ಮೃದಂಗ ತಾಳ ಹಿಡಿದುಕೊಂಡು ತಮ್ಮ ಕಂಚಿನ ಕಂಠದಿಂದ ಸಂಕೀರ್ತನೆಗೆ ತೊಡಗಿದರೆ ಪ್ರಭುಪಾದರಿಗೆ ಈ ಜಗತ್ತಿನ ಪರಿವೆಯೇ ಇರುತ್ತಿರಲಿಲ್ಲ. ಈ ಭಕ್ತಿಯ ಅಮಲು ವಿಸ್ತಾರಗೊಳ್ಳುತ್ತ ಮಹಾಪೂರಬಂದಂತಾಗಿ ಸುತ್ತಮುತ್ತಲಿನವರಿಗೂ ಆವರಿಸಿ ಅವರನ್ನೂ ಅದರಲ್ಲಿ ತೇಲಿಸಿಬಿಡುತ್ತಿದ್ದುದೊಂದು ವಿಶೇಷವೇ ಸರಿ.

ಪ್ರಭುಪಾದರಿಂದ ಪರಿವರ್ತನೆಗೊಂಡ ಹಯಗ್ರೀವ ಎಂಬ ವ್ಯಕ್ತಿ ತಾವು ಹೇಗೆ ಮಾದಕ ದ್ರವ್ಯಗಳನ್ನು ತ್ಯಜಿಸಿ ಕೃಷ್ಣಪ್ರಜ್ಞೆಗೆ ಬಂದುದಾಗಿ ವಿವರಿಸಿದ್ದನ್ನು ಇಲ್ಲಿ ನೋಡಿ: ಎಲ್.ಎಸ್.ಡಿ.ಯಿಂದ ನೀವು ಎಷ್ಟೇ ಉನ್ನತ ಸ್ಥಿತಿಗೆ ಹೋಗಿರಲಿ, ಕೊನೆಗೆ ಶಿಖರ ಸ್ಥಿತಿಯನ್ನು ಮುಟ್ಟಿದ ಮೇಲೆ ಕೆಳಗಿಳಿಯಲೇಬೇಕಾಗುವುದು. ಅದು ರಾಕೆಟ್ಟಿನಲ್ಲಿ ಬಾಹ್ಯಾಕಾಶಕ್ಕೆ ಯಾತ್ರೆ ಕೈಗೊಂಡಹಾಗೆ... ನಿಮ್ಮ ರಾಕೆಟ್ ಸದಾ ಪ್ರಯಾಣಿಸುತ್ತಲೇ ಇರಲು ಸಾಧ್ಯವಿಲ್ಲ. ಕಡೆಗೆ ಅದು ಭೂಮಿಗೆ ಇಳಿದು ಬರಲೇಬೇಕು... ಆದರೆ ಆಧ್ಯಾತ್ಮಿಕ/ಕೃಷ್ಣಪ್ರಜ್ಞೆಯನ್ನು ತಲುಪಿದರೆ ಆ ಉನ್ನತ ಸ್ಥಿತಿಯಲ್ಲಿಯೇ ಸದಾ ಉಳಿಯುತ್ತೀರಿ. ನೀವು ಕೃಷ್ಣನ ಬಳಿಗೆ ಹೋಗುವುದರಿಂದ ಕೆಳಗಿಳಿಯಲೇಬೇಕಿಲ್ಲ. ನೀವು ಶಾಶ್ವತವಾಗಿ ಉನ್ನತ ಸ್ಥಿತಿಯಲ್ಲಿಯೇ ಉಳಿಯಬಹುದು."

ತಮ್ಮ ಬೊವೆರಿಯ ವಾಸದ ಕಾಲದಲ್ಲಿಯೇ ಪ್ರಭುಪಾದರು ಒಮ್ಮೆ ನಮ್ಮ ಸಂಘವನ್ನು "ಇಸ್ಕಾನ್" ಎಂದು ಕರೆಯೋಣ ಎಂದು ಸಾರಿದರು. "ಅಂತರರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘ" ಎಂಬುದರ ಸಂಕ್ಷಿಪ್ತ ರೂಪವಾಗಿರುವ ಈ ಮೂರು ಅಕ್ಷರದ ಶಬ್ದ ಹೊರಹೊಮ್ಮಿದ್ದು ವಿದೇಶದಲ್ಲಿಯಾದರೂ ಇಂತಹದೊಂದು ಸಂಘಟನೆಯನ್ನು ಹುಟ್ಟುಹಾಕಬೇಕೆಂಬ ಹಂಬಲ ಮೊಳಕೆಯೊಡೆದಿದ್ದು ಅದಕ್ಕೂ ಕೆಲವರ್ಷ ಪೂರ್ವದಲ್ಲೆನ್ನಬಹುದು. "ಕೃಷ್ಣಪ್ರಜ್ಞೆ" ಎಂಬುದು ಶ್ರೀಲ ರೂಪಗೋಸ್ವಾಮಿಯವರು

ಹದಿನಾರನೆಯ ಶತಮಾನದಲ್ಲಿ ಬರೆದ ಪದ್ಯಾವಳೀ ಎಂಬ ಗ್ರಂಥದಿಂದ ಭಕ್ತಿವೇದಾಂತ ಸ್ವಾಮಿಗಳು ಅನುವಾದಿಸಿದ ನುಡಿಗಟ್ಟು. ಇದರ ಅರ್ಥ - **ಕೃಷ್ಣಭಕ್ತಿರಸ** ಭಾವಿತ ಕೃಷ್ಣನಿಗೆ ಭಕ್ತಿ ಸೇವೆಯನ್ನು ಸಲ್ಲಿಸುವಾಗ ಲಭಿಸುವ ಮಧುರ ರಸದಲ್ಲಿ ತಲ್ಲೀನನಾಗುವುದು ಎಂದಂತೆ. ಈ ಸಂಘದ ಏಳು ಮುಖ್ಯ ಉದ್ದೇಶಗಳು ಈ ಹಿಂದೆ ಪ್ರಭುಪಾದರು ಝಾನ್ಸಿಯಲ್ಲಿ ಸ್ಥಾಪಿಸಿದ "ಲೀಗ್ ಆಫ್ ಡಿವೋಟೀಸ್'ನ ಉದ್ದೇಶಗಳಿಗನುಗುಣವಾಗಿಯೇ ಇದ್ದವು. ಆಗ ಸಂಘಸ್ಥಾಪನೆಯ ಪ್ರಯತ್ನ ಯಶಸ್ವಿಯಾಗಿರಲಿಲ್ಲ. ಈಗ ಅದು ಸಫಲವಾಗಿದೆ.

**"ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘದ ಏಳು ಉದ್ದೇಶಗಳು'**

1. ವ್ಯಾಪಕವಾಗಿ ವ್ಯವಸ್ಥಿತವಾಗಿ ಸಮಾಜದಲ್ಲಿ ಆಧ್ಯಾತ್ಮಿಕ ಜ್ಞಾನವನ್ನು ಪ್ರಸಾರ ಮಾಡುವುದು. ಜೀವನದಲ್ಲಿನ ಮೌಲ್ಯಗಳ ಅಸಮತೋಲನವನ್ನು ತಡೆಯಲು ಮತ್ತು ಪ್ರಪಂಚದಲ್ಲಿ ನಿಜವಾದ ಏಕತೆ ಹಾಗೂ ಶಾಂತಿಯನ್ನು ಸಾಧಿಸಲು ಜನರಿಗೆ ಆಧ್ಯಾತ್ಮಿಕ ಜೀವನ ವಿಧಾನಗಳನ್ನು ಕುರಿತು ಶಿಕ್ಷಣವನ್ನು ಕೊಡುವುದು.

2. ಭಗವದ್ಗೀತೆ ಹಾಗೂ ಶ್ರೀಮದ್ಭಾಗವತದಲ್ಲಿ ಹೇಳಿರುವಂತೆ ಕೃಷ್ಣಪ್ರಜ್ಞೆಯನ್ನು ಪ್ರಸಾರ ಮಾಡುವುದು.

3. ಸಂಘದ ಸದಸ್ಯರನ್ನು ಪರಸ್ಪರ ಹತ್ತಿರ ತರುವುದು ಹಾಗೂ ಪರಮ ಪ್ರಭುವಾದ ಕೃಷ್ಣನ ಸಮೀಪ

ತರುವುದು. ಪ್ರತಿಯೊಂದು ಆತ್ಮವೂ ದೇವೋತ್ತಮನ (ಕೃಷ್ಣನ) ಗುಣದ ವಿಭಿನ್ನಾಂಶ ಎಂಬ

ಭಾವನೆಯನ್ನು ಸದಸ್ಯರಲ್ಲಿ ಹಾಗೂ ಸಮಸ್ತ ಮಾನವ ಸಮುದಾಯದಲ್ಲಿ ಮೂಡಿಸುವುದು.

4. ಶ್ರೀಚೈತನ್ಯ ಮಹಾಪ್ರಭುಗಳ ಬೋಧನೆಗಳಲ್ಲಿ ತಿಳಿಸಿರುವಂತೆ ಭಗವಂತನ ಪವಿತ್ರನಾಮವನ್ನು ಸಮೂಹ

ಭಜನೆಯಲ್ಲಿ ಹಾಡುವುದು ಹಾಗೂ ಸಂಕೀರ್ತನಾ ಆಂದೋಲನವನ್ನು ಬೋಧಿಸಿ ಪ್ರೋತ್ಸಾಹಿಸುವುದು.

5. ಕೃಷ್ಣ ಪರಮಾತ್ಮನ ದಿವ್ಯ ಲೀಲೆಗಳಿಗೆ ಮುಡಿಪಾದ ಪವಿತ್ರ ಸ್ಥಳವೊಂದನ್ನು ಸದಸ್ಯರಿಗಾಗಿ ಹಾಗೂ

ಸಮಸ್ತ ಸಮಾಜಕ್ಕಾಗಿ ನಿರ್ಮಿಸುವುದು.

6. ಸರಳವಾದ ಮತ್ತು ಹೆಚ್ಚು ಸಹಜವಾದ ಜೀವನ ವಿಧಾನವನ್ನು ಬೋಧಿಸುವುದಕ್ಕಾಗಿ ಸದಸ್ಯರನ್ನು

ಪರಸ್ಪರ ಹತ್ತಿರತರುವುದು.

7. ಮೇಲೆ ಹೇಳಿದ ಉದ್ದೇಶಗಳನ್ನು ಸಾಧಿಸುವುದಕ್ಕಾಗಿ ನಿಯತಕಾಲಿಕೆಗಳು, ಪತ್ರಿಕೆಗಳು, ಪುಸ್ತಕಗಳು

ಹಾಗೂ ಇತರ ಬರಹಗಳನ್ನು ಪ್ರಕಟಿಸುವುದು ಹಾಗೂ ವಿತರಣೆ ಮಾಡುವುದು.

ಸ್ವಾಮಿಯವರು ವಾಸಿಸುತ್ತಿದ್ದುದೊಂದು ಪುಟ್ಟ ಕೊಳಕು ಅಂಗಡಿ ಮಳಿಗೆಯಾಗಿತ್ತು. ಆದಾಗ್ಯೂ ಅವರ ಸಂಕೀರ್ತನ ಹಾಗೂ ಪ್ರವಚನಗಳಿಂದಾಗಿ ಜನ ಅದನ್ನು 'ದೇವಸ್ಥಾನ' ಎಂದು ಕರೆಯತೊಡಗಿದ್ದರು. ಮುಂದೆ ಅದನ್ನ ಮಾಟ್ ರಸ್ತೆಯ ಹುಡುಗರು ಬಂದು ಸಾಧ್ಯವಾದಷ್ಟು ಮಟ್ಟಿಗೆ ಅಲಂಕರಿಸಿದ್ದರು.

ತಮ್ಮ ಅನುಯಾಯಿಗಳ ಸಂಖ್ಯೆ ತುಸು ಜಾಸ್ತಿಯಾಗಲು ಸ್ವಾಮೀಜಿಯವರು ತಮ್ಮ ಕೀರ್ತನ ಭಜನೆಗಳನ್ನು ಹಾಗೆಯೇ "ಲೋಯರ್ ಈಸ್ಟ್ ಸೈಡ್"ನ ಪ್ರಮುಖ ಉದ್ಯಾನ ಟಾಂಪ್ಕಿನ್ಸ್ ಸ್ವೇರ್ ಪಾರ್ಕ್‌ಗೆ ಸ್ಥಳಾಂತರಿಸಿದರು. ಜನರಿಂದ ಗಿಜಿಗುಡುತ್ತಿದ್ದ ಈ ಉದ್ಯಾನವನ ಹಸಿರಿನಲ್ಲಿ ಹಾಯ್ದು ಹೋಗುವ ಕೆಲ ಕಾಂಕ್ರೀಟ್ ರಸ್ತೆಗಳು ಹಾಗೂ ಕಟಾಂಜನಗಳಿಂದಾಗಿ ಒಂದು ಚಕ್ರವ್ಯೂಹದ ಮಾದರಿಯಂತೆ ಕಾಣುತ್ತಿತ್ತು. ಅಲ್ಲಿ ತಮ್ಮ "ಹರೆಕೃಷ್ಣ ಹರೆಕೃಷ್ಣ ಕೃಷ್ಣ ಕೃಷ್ಣ ಹರೆಹರೆ, ಹರೆ ರಾಮ ಹರೆ ರಾಮ ರಾಮರಾಮ ಹರೆಹರೆ" ಮೂಲ ಮಂತ್ರದಿಂದ ಹಿಡಿದು ಹಲವಾರು ಸಂಸ್ಕೃತ ಸಂಕೀರ್ತನೆಗಳನ್ನು ಉಚ್ಚಕಂಠದಲ್ಲಿ ತಾಳ ಮೃದಂಗಗಳೊಡನೆ ಹಾಡತೊಡಗುತ್ತಿದ್ದರು. ಉದ್ದುದ್ದನೆಯ ಶ್ಲೋಕಗಳು ತಿಳಿಯುತ್ತಿರಲಿಲ್ಲವಾದ್ದರಿಂದ ಕೇವಲ ಹರೆಕೃಷ್ಣನನ್ನು ಮಾತ್ರ ಅನುಕರಿಸುತ್ತ ಸ್ವಾಮಿಯವರ ಜೊತೆ ಕೆಲವರು ಹೆಜ್ಜೆಹಾಕುತ್ತ ಕುಣಿಯತೊಡಗುತ್ತಿದ್ದರು. ಹಾಗೆಯೇ ಇದನ್ನು "ಸ್ವಾಮಿಗಳ ಹೆಜ್ಜೆ" (Swamy Steps) ತಾಳ ಎಂದು ಕರೆಯತೊಡಗಿದರು.

ಹರೆಕೃಷ್ಣದ ಖ್ಯಾತಿ ಬೆಳೆಯುತ್ತ ನಡೆಯಿತು. ಕೆಲವರು ಅದನ್ನು "ಹರೇ ಕೃಷ್ಣ ಆಸ್ಫೋಟ" ಎಂದು ಸಂಬೋಧಿಸಿದರು. ಈ ಬಗ್ಗೆ ಅಲ್ಲಿಯ ಪತ್ರಿಕೆಗಳು ವರದಿ ಮಾಡತೊಡಗಿದುವು. ಈ ಜನಪ್ರಿಯತೆ ಅಲ್ಲಿನ ಕ್ಲಬ್ಬುಗಳಿಗೂ ವ್ಯಾಪಿಸಿದ್ದೊಂದು ವಿಚಿತ್ರವೇ ಸರಿ. ಕ್ಲಬ್ ಗಾಯಕರು ಹರೇಕೃಷ್ಣದ ಕೆಲವೊಂದು ಇಂಪಾದ ಹಾಡುಗಳನ್ನೆತ್ತಿ ಕ್ಲಬ್ಬುಗಳಲ್ಲಿ ಹಾಡತೊಡಗಿದರು. ಅಲ್ಲಿಯೂ ಜನ ಅದರ ಜೊತೆ ಕುಣಿಯಲಾರಂಭಿಸಿದರು. ಸ್ವಾಮಿಜಿಯವರ ಉಸ್ತುವಾರಿಯಲ್ಲಿ ತಯಾರಿಸಲ್ಪಟ್ಟ ಪ್ರಸಾದದ ಉಂಡೆ, ಗುಳಿಗೆ ಪದಾರ್ಥಗಳಿಗೆ "ಇಸ್ಕಾನ್ ಬುಲೆಟ್'ಗಳು ಹಾಗೂ ಸಾರ್ವಜನಿಕ ಸಂತರ್ಪಣೆಗೆ "ಲವ್ ಫೀಸ್ಟ್" ಎಂದು ಕರೆಯಲಾಗುತ್ತಿತ್ತು. ಶುದ್ಧ ಶಾಖಾಹಾರದ ಈ ಪ್ರಸಾದ ಪದಾರ್ಥಗಳೂ ಅಲ್ಲಿಯ ಜನರಿಗೆ ಹಿಡಿಸತೊಡಗಿದವು.

ಭಾರತೀಯ ಪರಂಪರೆಯ ಬ್ರಾಹ್ಮಣರು, ಮಾಂಸಭಕ್ಷಕ ಹಾಗೂ ಮಾದಕದ್ರವ್ಯ ಸೇವಿಸುವ ಅಮೇರಿಕನ್ನರನ್ನು ಮ್ಲೇಚ್ಚರೆಂದು ಕರೆದು ಅವರನ್ನು ಅಸ್ಪೃಶ್ಯರೆಂದು ಗುರುತಿಸಿ ಅವರ ಸಂಗವನ್ನು ನಿಷಿದ್ಧ ಎಂದು ಭಾವಿಸುತ್ತಾರೆ. ಆದರೆ ಕೃಷ್ಣಪ್ರಜ್ಞೆಯನ್ನು ವಿಶ್ವದೆಲ್ಲೆಡೆ ಪಸರಿಸುವುದಕ್ಕಾಗಿ ಈ ಸಂಗ ಅವಶ್ಯಕ ಹಾಗೂ ಶಾಸ್ತ್ರಗಳಿಗೆ ಅನುಸಾರವಾಗಿಯೇ ಇದೆ ಎಂದು ಪ್ರಭುಪಾದರ ವಾದವಾಗಿತ್ತು. ಅಮೇರಿಕ ಕೂಡ ಜಗತ್ತಿನ ಒಂದು ಭಾಗವೇ, ಕೃಷ್ಣಪ್ರಜ್ಞೆಯನ್ನು ಎಲ್ಲ ಜನಾಂಗಗಳಿಗೂ ನೀಡಬೇಕು, ಪ್ರತಿಯೊಬ್ಬನೂ ಜೀವಾತ್ಮನೆ, ಯಾವನೇ ಆಗಿರಲಿ ಕೃಷ್ಣನಾಮ ಸಂಕೀರ್ತನೆಯಿಂದ ಅವನು ಆಧ್ಯಾತ್ಮಿಕತೆಯ ಉನ್ನತ ಸ್ಥಾನಕ್ಕೆರಬಹುದು ಎಂದು ವಿವರಿಸುತ್ತಿದ್ದರು. ಹರಿಕೃಷ್ಣ ಸಂಕೀರ್ತನೆಯು ಈ 'ಯುಗದ ಧರ್ಮ'ವೆಂಬುದು ಅವರ ಧೋರಣೆಯಾಗಿತ್ತು.

ನ್ಯೂಯಾರ್ಕ್‌ನಿಂದ ಮುಂದೆ ಪ್ರಭುಪಾದರು ಸ್ಯಾನ್ ಫ್ರಾನ್ಸಿಸ್ಕೊಗೆ ಪ್ರಯಾಣ ಬೆಳೆಸಿದರು. ಅಲ್ಲಿಯೂ ಅವರಿಗೆ ತಮ್ಮ ಅನುಯಾಯಿಗಳಿಂದ ಭವ್ಯ ಸ್ವಾಗತ ದೊರೆಯಿತು. ವಿಶೇಷವಾಗಿ ಮುಕುಂದ, ಮತ್ತು ಅವರ ಮಿತ್ರರು ಗೊತ್ತುಮಾಡಿದ್ದ ಸ್ಥಳದಿಂದ ಸ್ವಲ್ಪ ದೂರದಲ್ಲಿಯೇ ರಾಧಾಕೃಷ್ಣ ದೇವಸ್ಥಾನವು ಹೈಟ್ ಆಷ್‌ಬರಿ ಜಿಲ್ಲೆಯ ಫ್ರೆಡ್ರಿಕ್ ರಸ್ತೆಯಲ್ಲಿತ್ತು. ನ್ಯೂಯಾರ್ಕ್‌ನಲ್ಲಿಯದಂತೆಯೇ ಈ ದೇವಸ್ಥಾನವೂ ಒಂದು ಚಿಕ್ಕ ಅಂಗಡಿಯ ಮಳಿಗೆಯೇ ಆಗಿತ್ತು. ಸ್ವಾಮೀಜಿಯವರಿಗೆ ಮೂರು ಕೋಣೆಗಳ ಒಂದು ಅಪಾರ್ಟ್‌ಮೆಂಟನ್ನು ಗೊತ್ತು ಮಾಡಲಾಗಿತ್ತು. ಸ್ವಾಮೀಜಿಯವರ ಉಪನ್ಯಾಸಗಳ ನಂತರ ಪ್ರಶ್ನೋತ್ತರ ನಡೆಯುತ್ತಿತ್ತು. ಅದರಲ್ಲಿ 'ಕ್ರಾನಿಕಲ್' ಹಾಗೂ 'ಎಕ್ಸಾಮಿನರ್' ಪತ್ರಿಕೆಯ ವರದಿಗಾರರೂ ಭಾಗವಹಿಸಿದ್ದರು. ಮುಖ್ಯವಾಗಿ ಕೃಷ್ಣ ಸಂಘದ ಸದಸ್ಯತ್ವ ಪಡೆದುಕೊಳ್ಳಲು ಏನು ಮಾಡಬೇಕು ಹಾಗೂ ಅದಕ್ಕಿರುವ ಅರ್ಹತೆಗಳಾವವು ಎಂಬ ಬಗ್ಗೆಯೇ ಜಿಜ್ಞಾಸೆ ನಡೆಯುತ್ತಿತ್ತು. ಆಗ ಸ್ವಾಮಿಯವರು ಇದಕ್ಕಿರುವ ಅವಶ್ಯಕತೆಗಳನ್ನು ಹೀಗೆ ವಿವರಿಸಿದ್ದರು, "ನನ್ನ ವಿದ್ಯಾರ್ಥಿಗಳಿಗೆ ನಾಲ್ಕು ಅರ್ಹತೆಗಳು ಇರಬೇಕಾಗುತ್ತದೆ. ಅವರು ಗೆಳತಿಯನ್ನು ಇರಿಸಿಕೊಳ್ಳಲು ನಾನು ಅನುಮತಿ ಕೊಡುವುದಿಲ್ಲ. ಕಾಫಿ, ಟೀ, ಸಿಗರೇಟ್ ಸೇರಿದಂತೆ ಎಲ್ಲ ಬಗೆಯ ಮಾದಕ ವಸ್ತುಗಳನ್ನು ನಾನು ನಿಷೇಧಿಸುತ್ತೇನೆ. ಮಾಂಸ ಭಕ್ಷಣೆ ನಿಷೇಧ ಹಾಗೂ ನನ್ನ ವಿದ್ಯಾರ್ಥಿಗಳು ಜೂಜಾಟದಲ್ಲಿ ಭಾಗವಹಿಸುವಂತಿಲ್ಲ."

ಸ್ಯಾನ್‌ಫ್ರಾನ್ಸಿಸ್ಕೋದಲ್ಲಿರುವಷ್ಟು ಕಾಲವೂ ಅಲ್ಲಿಯ ಪತ್ರಿಕೆಗಳು ಹಾಗೂ ದೂರದರ್ಶನದವರು ಸ್ವಾಮಿಗಳಿಗೆ ಸಂಬಂಧಿಸಿದ ಸುದ್ದಿಗಳನ್ನು ಆಗಾಗ ಪ್ರಕಟಿಸುತ್ತಲೇ ಇದ್ದವು. ಇದರಿಂದಾಗಿ ಅಲ್ಲಿ ಅನುಯಾಯಿಗಳ ಸಂಖ್ಯೆ ಹೆಚ್ಚುತ್ತಾ ಹೋಗಿ ದೇವಸ್ಥಾನದ ಉದ್ಘಾಟನೆಯೂ ಸರಾಗವಾಗಿ ನೆರವೇರಿತು. ಇಂತಹ ದೇವಸ್ಥಾನಗಳನ್ನು "ಸ್ವಾಮಿಗಳ ಅಮೇರಿಕನ್ ಚರ್ಚ್" ಎಂದೂ ಅವರನ್ನು "ಸ್ವಾಮಿ ಜೀಸಸ್" ಎಂದೂ ಅಲ್ಲಿಯ ಜನ ಕರೆಯತೊಡಗಿದರು. ಆದರೆ ಪ್ರಭುಪಾದರು ಮಾತ್ರ ತಾವು ಯಾರ ಗುರುವೂ ಅಲ್ಲ ಕೇವಲ ಕೃಷ್ಣದಾಸ, ಅಂತೆಯೇ ಎಲ್ಲರ ದಾಸ ಎಂದು ಹೇಳಿ ಅವರನ್ನು ಚಕಿತಗೊಳಿಸುತ್ತಿದ್ದರು. ನಮ್ಮ ಮನಃಪರಿವರ್ತನೆಗೆ ಏನಾದರೂ ಔಷಧಿ ಕೊಡಿ ಎಂದು ಕೇಳುತ್ತಿದ್ದವರಿಗೆ "ನನ್ನಲ್ಲಿ ಬೇರೆ ಮದ್ದಿಲ್ಲ. ದಯವಿಟ್ಟು ಹರೇಕೃಷ್ಣ ಕೀರ್ತನೆ ಮಾಡಿ, ನನ್ನಲ್ಲಿ ಬೇರೆ ವಿವರಣೆ ಇಲ್ಲ ಬೇರೆ ಉತ್ತರವೂ ಇಲ್ಲ" ಎಂದು ಹೇಳಿಕಳಿಸುತ್ತಿದ್ದರು. ಸತ್ಯ ಹಾಗೂ ಅಹಿಂಸೆಗಳಲ್ಲಿ ಅಚಲ ನಂಬಿಕೆಯಿಟ್ಟಿದ್ದ ಮಹಾತ್ಮ ಗಾಂಧೀಜಿಯವರೂ ಸತ್ಯ ಮತ್ತು ಅಹಿಂಸೆಗಳು ಪರ್ವತದಷ್ಟೇ ಹಳೆಯವು, ಈ ಜಗತ್ತಿಗೆ ನಾನು ಹೊಸದಾಗಿ ಏನನ್ನೂ ಕಲಿಸುವುದಿಲ್ಲ ಎಂದು ಹೇಳುತ್ತಿದ್ದುದನ್ನು ನಾವೆಲ್ಲ ಇಲ್ಲಿ ನೆನೆಯಬಹುದಾಗಿದೆ. ಅಂದರೆ ಅವರ ನಂಬುಗೆಗಳು ಎಷ್ಟೊಂದು ಶಕ್ತಿಶಾಲಿಗಳಾಗಿದ್ದವು ಹಾಗೂ ಅವುಗಳಿಗೆ ಅವರ ಬದ್ಧತೆ ಎಷ್ಟೊಂದು ಪ್ರಬಲವಾಗಿತ್ತೆಂಬುದನ್ನೂ ನಾವು ಮನಗಾಣಬಹುದಾಗಿದೆ.

ಸ್ಯಾನ್‌ಫ್ರಾನ್ಸಿಸ್ಕೊ ಬಿಡುವ ಮೊದಲು ಸ್ವಾಮಿಗಳು ಅಲ್ಲಿ ಶ್ರೀಕೃಷ್ಣ, ಬಲರಾಮ ಹಾಗೂ ಸುಭದ್ರರ ಮೂರ್ತಿಗಳನ್ನಿಟ್ಟ ರಥಯಾತ್ರೆ ನಡೆಯುವಂತೆ ಮಾಡಿದರು. ರಥಯಾತ್ರೆಯ ಹಿಂದೆಮುಂದೆ ಹಲವಾರು ಯುವಕ ಯುವತಿಯರು, ಇನ್ನಿತರರು ಭಕ್ತರಾಗಿ ಕೀರ್ತನ ಮಾಡುತ್ತ ನರ್ತಿಸುತ್ತ ಹರೇಕೃಷ್ಣ ಹೇಳುತ್ತ ನಡೆದದ್ದನ್ನು ಕೇಳಿ ವಿಪರೀತ ಆನಂದಪಟ್ಟರು. ಇದೇ ಪ್ರಥಮ ಅಮೇರಿಕನ್ ರಥಯಾತ್ರೆಯಾಗಿತ್ತು.

ಸ್ವಾಮೀಜಿಯವರ ಆರೋಗ್ಯ ಹದಗೆಡುತ್ತಲೇ ಸಾಗಿತ್ತು. ಅನೇಕ ಸಾರೆ ತಾವು ಸತ್ತೇಹೋಗಬಹುದು ಎಂದು ತಮ್ಮ ಶಿಷ್ಯರೆದುರು ಹೇಳಿಯೂಬಿಡುತ್ತಿದ್ದರು. ಶಾಸ್ತ್ರೋಕ್ತ ವೈಷ್ಣವನಿಗೆ ವೃಂದಾವನದಲ್ಲಿಯ ಸಾವೇ ಮುಖ್ಯವಾದುದು. ಇದನ್ನು ಪ್ರಭುಪಾದರೂ ತಿಳಿದಿದ್ದರು. ಆದರೆ ಚೈತನ್ಯ ಮಹಾಪ್ರಭುಗಳು ಹೇಳಿದ, "ನೀವೆಲ್ಲಿರುವಿರೋ ಅದೇ ವೃಂದಾವನ" ಅಂದರೆ ಕೃಷ್ಣ ಕೀರ್ತನೆ ಸದಾ ಮಾಡುವವರಿಗೆ ಅವರೆಲ್ಲಿರುತ್ತಾರೋ ಅದೇ ವೃಂದಾವನವೆಂಬುದೂ ಅವರಿಗೆ ಅರಿವಿತ್ತು. ಆದಾಗ್ಯೂ ತಮ್ಮ ಕೊನೆಯುಸಿರು ವೃಂದಾವನದಲ್ಲಿ ಹೋದರೇ ಒಳ್ಳೆಯದೆಂದು ಮರಳಿ ಭಾರತಕ್ಕೆ ಪ್ರಯಾಣ ಬೆಳೆಸಲು ನಿಶ್ಚಯಿಸಿದರು. ನ್ಯೂಯಾರ್ಕ್ ಮಾರ್ಗವಾಗಿಯೇ ಹೋಗುವುದಾಗಿ ಭಕ್ತರಿಗೆ ತಿಳಿಸಿಯೂಬಿಟ್ಟರು. ಇದನ್ನು ಕೇಳಿದ ಭಕ್ತರಿಗೆ ತೀವ್ರ ನೋವಾಯಿತು. ಆಗ ಸ್ವಾಮೀಜಿ ಅವರಿಗೆ "ನಾನು ವೃದ್ಧ ಯಾವುದೇ ಕ್ಷಣದಲ್ಲಾದರೂ ಸಾಯಬಹುದು. ಆದರೆ ದಯವಿಟ್ಟು ನೀವೆಲ್ಲ ಆ ಸಂಕೀರ್ತನ ಮುಂದುವರೆಸಿಕೊಂಡು ಹೋಗಬೇಕು. ನೀವು ದೀನರೂ ಸಹಿಷ್ಣುಗಳೂ ಆಗಬೇಕು. ಹುಲ್ಲಿನ ದಳದಷ್ಟು ದೀನರಾಗಿ, ಮರದಷ್ಟು ಸಹಿಷ್ಣುಗಳಾಗಿ ಎಂದು ಚೈತನ್ಯ ಮಹಾಪ್ರಭುಗಳು ಹೇಳಿದ್ದಾರೆ. ಈ ಕೃಷ್ಣಪ್ರಜ್ಞಾತತ್ವದಲ್ಲಿ ಮುಂದುವರೆಯಲು ನಿಮಗೆ ಉತ್ಸಾಹ ಮತ್ತು ತಾಳ್ಮೆ ಇರಬೇಕು. ಭಾರತದಲ್ಲಿ ನನ್ನ ಗೃಹಸ್ಥ ಜೀವನದಿಂದ ಕೆಲವು ಮಕ್ಕಳನ್ನು ಪಡೆದಿದ್ದೇನೆ. ಆದರೆ ನೀವು ನಿಜವಾದ ಮಕ್ಕಳು. ಈಗ ನಾನು ಸ್ವಲ್ಪ ಕಾಲಕ್ಕಾಗಿ ಭಾರತಕ್ಕೇ ಹೋಗುತ್ತಿದ್ದೇನೆ."

ಭಾರತಕ್ಕೆ ಹೊದ ಸ್ವಾಮೀಜಿ ದೆಹಲಿ ಮತ್ತು ವೃಂದಾವನಗಳಲ್ಲಿ ಕೆಲಕಾಲ ಇದ್ದು ಪುನಃ ಸ್ಯಾನ್‌ಫ್ರಾನ್ಸಿಸ್ಕೊಕ್ಕೆ ಮರಳಿದರು. ಅಲ್ಲಿ ಕೆಲವಾರ ಕಳೆದ ಮೇಲೆ ಲಾಸ್ ಏಂಜಲೀಸ್‌ಗೆ ಹೋದರು. ಅಲ್ಲಿಂದ ಬೋಸ್ಟನ್‌ಗೆ ಅಲ್ಲಿ ತಮ್ಮ ಇಸ್ಕಾನ್ ಕೇಂದ್ರಕ್ಕೆ ಭೇಟ್ಟಿ ನೀಡಿದರು. ಅಲ್ಲಿ ತಮ್ಮ ಶಿಷ್ಯರಿಗೆ ತಮ್ಮ ಹೆಸರಿನ ಮುಂದೆ ಜಿ" ಎಂದು (ಸ್ವಾಮೀಜಿ ಇತ್ಯಾದಿ) ಲಗತ್ತಿಸುವುದು ಯೋಗ್ಯವಾದುದಲ್ಲವೆಂದು ಹೇಳಿದರು. ಆಗ ಶಿಷ್ಯರು ಮತ್ತೇಗೆ ಸಂಬೋಧಿಸಬೇಕೆಂದು ಕೇಳಿದಾಗ ಒಬ್ಬ ಗುರುವನ್ನು ಸಾಮಾನ್ಯವಾಗಿ ಗುರುದೇವ, ವಿಷ್ಣುಪಾದ, ಪ್ರಭುಪಾದ ಎಂಬು ಸಂಬೋಧಿಸುತ್ತಾರೆ ಎಂದುತ್ತರಿಸಿ ಪ್ರಭುಪಾದದ ಅರ್ಥವಿವರಣೆಯನ್ನು ಈ ರೀತಿಯಾಗಿ ನೀಡಿದರು.

"ಪ್ರಭುಪಾದ ಎಂಬ ಶಬ್ದ ವೈದಿಕ ಧಾರ್ಮಿಕ ವಲಯಗಳಲ್ಲಿ ಅತ್ಯಂತ ಗೌರವಪೂರ್ವಕವಾದದ್ದು. ಅದು ಸಂತರಲ್ಲಿ ಅತ್ಯಂತ ಶ್ರೇಷ್ಠ ಸಂತರನ್ನು ದ್ಯೋತಿಸುತ್ತದೆ. ಈ ಶಬ್ದಕ್ಕೆ ವಾಸ್ತವಿಕವಾಗಿ ಎರಡು ಅರ್ಥಗಳಿವೆ... ಮೊದಲನೆಯದಾಗಿ ಯಾರ ಪಾದಗಳ ಬಳಿ ಅನೇಕ ಪ್ರಭುಗಳಿದ್ದಾರೆಯೋ ಅಂತಹವರು ಎಂದು. ಎರಡನೆಯ ಅರ್ಥವೆಂದರೆ ಯಾರು (ಪರಮ ಪ್ರಭುವಾದ) ಕೃಷ್ಣನ ಪಾದಪದ್ಮಗಳಲ್ಲಿ ಸದಾ ಇರುತ್ತಾರೆ ಅವರು ಎಂದು. ಮಾನವ ಸಮುದಾಯಕ್ಕೆ ಕೃಷ್ಣಪ್ರಜ್ಞೆಯನ್ನು ನೀಡಿಕೊಂಡುಬಂದ ಗುರುಶಿಷ್ಯ ಪರಂಪರೆಯಲ್ಲಿ ಪ್ರಭುಪಾದರೆಂದು ಕರೆಯಲು ಯೋಗ್ಯರಾದ ಅಂತಹ ಅನೇಕ ಆಧ್ಯಾತ್ಮಿಕ ಮಹತ್ವದ ಮಹಾಪುರುಷರು ಆಗಿಹೋಗಿದ್ದಾರೆ.

ಶ್ರೀ ಚೈತನ್ಯ ಮಹಾಪ್ರಭುಗಳು ಬಯಸಿದ್ದನ್ನು ಅನುಷ್ಠಾನಕ್ಕೆ ತಂದವರು ಶ್ರೀಲರೂಪಗೋಸ್ವಾಮಿ. ಆದ್ದರಿಂದ ಅವರನ್ನು ಮತ್ತು ಅವರ ಸಹಚರರನ್ನು ಪ್ರಭುಪಾದರೆಂದು ಕರೆಯುತ್ತಾರೆ, ಶ್ರೀಲ ಭಕ್ತಿಸಿದ್ಧಾಂತ ಸರಸ್ವತೀ ಗೋಸ್ವಾಮಿ. ಆದ್ದರಿಂದ ಅವರನ್ನೂ ಪ್ರಭುಪಾದ ಎಂದು ಸಂಬೋಧಿಸುತ್ತೇವೆ. "ನಮ್ಮ ಗುರುಗಳಾದ ಓಂ ವಿಷ್ಣುಪಾದ

108 ಶ್ರೀಶ್ರೀಮದ್ ಭಕ್ತಿವೇದಾಂತ ಸ್ವಾಮಿ ಮಹಾರಾಜ ಅವರು ಇದೇ ರೀತಿಯಲ್ಲಿ ಕೃಷ್ಣಪ್ರೇಮವನ್ನು ಪಾಶ್ಚಾತ್ಯ ರಾಷ್ಟ್ರಗಳಿಗೆ ಕೊಂಡೊಯ್ಯುವ ಮೂಲಕ ಶ್ರೀಲ ಭಕ್ತಿಸಿದ್ಧಾಂತ ಸರಸ್ವತೀ ಗೋಸ್ವಾಮಿ ಪ್ರಭುಪಾದರ ಸಂದೇಶವನ್ನು ಅನುಷ್ಠಾನಕ್ಕೆ ತಂದು ಅವರ ಬಯಕೆಯನ್ನು ಈಡೇರಿಸಿದ್ದಾರೆ. ಆದ್ದರಿಂದ, ಸಂಕೀರ್ತನ ಆಂದೋಲನದ ನಾನಾ ಕೇಂದ್ರಗಳಲ್ಲಿರುವ ಪರಮ ಪೂಜನೀಯರ ದೀನ ಸೇವಕರಾದ ನಾವೆಲ್ಲ ಶ್ರೀಲ ರೂಪಗೋಸ್ವಾಮಿ ಪ್ರಭುಪಾದರ ಹೆಜ್ಜೆಗಳನ್ನೇ ಅನುಸರಿಸುತ್ತಾ ನಮ್ಮ ಗುರುಗಳನ್ನು ಪ್ರಭುಪಾದ ಎಂದು ಸಂಬೋಧಿಸಲು ಬಯಸುತ್ತೇವೆ. ಅದಕ್ಕೆ ಅವರು ಅಂಗೀಕಾರ ನೀಡಿದ್ದಾರೆ."

ಮುಂದೆ ಪ್ರಭುಪಾದರು ಅಮೇರಿಕಾದಲ್ಲಿ ಮಾಂಟ್ರಿಯಲ್ ಪಶ್ಚಿಮ ವರ್ಜಿನಿಯಾ, ನ್ಯೂಯಾರ್ಕ್, ಲಾಸ್ ಏಂಜಲೀಸ್‌ಗಳಲ್ಲೆಲ್ಲ ಸುತ್ತಾಡಿ ನಂತರ ಯೂರೋಪ್ ಪ್ರವಾಸವನ್ನೂ ಕೈಗೊಂಡರು. ಅಲ್ಲೆಲ್ಲ ಇಸ್ಕಾನ್ ಕೇಂದ್ರಗಳನ್ನು ನವ ವೃಂದಾವನವನ್ನು ಸಂದರ್ಶಿಸಿದರು. ಪ್ರಭುಪಾದರಿಗೆ ಎಪ್ಪತ್ತಮೂರು ವರ್ಷಗಳಾಗುವಷ್ಟೊತ್ತಿಗೆ ಇಪ್ಪತ್ತೊಂದು ದೇವಸ್ಥಾನಗಳನ್ನು ಪ್ರಾರಂಭಿಸಿದ್ದರು. 108 ಇಂತಹವುಗಳನ್ನು ನಿರ್ಮಿಸಬೇಕೆಂಬುದು ಅವರ ಬಯಕೆಯಾಗಿತ್ತು. ಈಗಿರುವವುಗಳನ್ನು - ನೋಡಿಕೊಳ್ಳಲು ಒಂದು ಆಡಳಿತ ಮಂಡಳಿಯನ್ನು ಸ್ಥಾಪಿಸಬೇಕೆಂದು ತಿಳಿಸಿ ಈ ಕೆಳಗಿನಂತೆ ದಾಖಲೆ ಬರೆಯಿಸಿಟ್ಟರು.

ಕೆಳಗೆ ಸಹಿ ಮಾಡಿದ ನಾನು, ಎ.ಸಿ. ಭಕ್ತಿವೇದಾಂತ ಸ್ವಾಮಿ, ಓಂ ವಿಷ್ಣುಪಾದ ಪರಮಹಂಸ 108 ಶ್ರೀಶ್ರೀಮದ್ ಭಕ್ತಿಸಿದ್ಧಾಂತ ಸರಸ್ವತೀ ಗೋಸ್ವಾಮಿ ಮಹಾರಾಜ್ ಪ್ರಭುಪಾದರ ಶಿಷ್ಯ, ಕೃಷ್ಣಪ್ರಜ್ಞಾ ಆಂದೋಲನವನ್ನು ಪ್ರಾರಂಭಿಸುವುದಕ್ಕಾಗಿ 1965ನೇ ಇಸವಿ ಸೆಪ್ಟೆಂಬರ್ ತಿಂಗಳು 18ನೆಯ ತಾರೀಖಿನಂದು ಅಮೆರಿಕಕ್ಕೆ ಬಂದೆ. ಒಂದು ವರ್ಷ ಕಾಲ ನನಗೆ ಆಶ್ರಯ ಎಂಬುದು ಇರಲಿಲ್ಲ. ಈ ರಾಷ್ಟ್ರದ ಅನೇಕ ಪ್ರದೇಶಗಳಲ್ಲಿ ನಾನು ಸಂಚಾರ ಮಾಡುತ್ತಿದ್ದೆ. ಆಮೇಲೆ 1966ರ ಜುಲೈ ತಿಂಗಳಿನಲ್ಲಿ ಈ ಸಂಸ್ಥೆಯನ್ನು **"ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘ"** ಅಥವಾ ಸಂಕ್ಷಿಪ್ತವಾಗಿ **"ಇಸ್ಕಾನ್"** ಎಂದು ಏಕೀಭವಿಸಿದೆ... ಕ್ರಮೇಣ ಸಂಘವು ವಿಸ್ತಾರಗೊಂಡಿತು. ಒಂದಾದ ಮೇಲೊಂದರಂತೆ ಶಾಖೆಗಳನ್ನು ಪ್ರಾರಂಭಿಸಲಾಯಿತು. ಈಗ ಇದರೊಡನೆ ಲಗತ್ತಿಸಿರುವಂತೆ ಮೂವತ್ನಾಲ್ಕು ಶಾಖೆಗಳಿವೆ. ನಮ್ಮ ಚಟುವಟಿಕೆಗಳ ಪ್ರಮಾಣ ಹೆಚ್ಚಾಗಿರುವುದರಿಂದ, ಈಗ ಒಂದು ಆಡಳಿತ ನಿರ್ವಹಣಾ ಮಂಡಲಿಯನ್ನು (ಗೌರ್ನಿಂಗ್ ಬಾಡಿ ಕಮಿಷನ್ - ಇನ್ನು ಮುಂದೆ ಜಿ.ಬಿ.ಸಿ. ಎಂದು ಕರೆಯಲಾಗುವುದು) ಸ್ಥಾಪಿಸಬೇಕಾಗಿದೆ. ನನಗೆ ವಯಸ್ಸಾಗುತ್ತಿದೆ. ನಾನು ಎಪ್ಪತ್ತೈದರ ವೃದ್ಧ. ಆದ್ದರಿಂದ ಯಾವುದೇ ಸಮಯದಲ್ಲಿ ನಾನು ಇಲ್ಲಿಂದ ಕಣ್ಮರೆಯಾಗಬಹುದು. ಆದ್ದರಿಂದ ಇಡೀ ಸಂಸ್ಥೆಯನ್ನು ಹೇಗೆ ನಿರ್ವಹಿಸಿಕೊಂಡು ಹೋಗಬೇಕೆಂದು ನನ್ನ ಶಿಷ್ಯರಿಗೆ ಸೂಚನೆ ಕೊಡುವುದು ಅಗತ್ಯ ಎಂದು ನಾನು ಭಾವಿಸುತ್ತೇನೆ. ಅವರು ಈಗಾಗಲೇ ಬಿಡಿಬಿಡಿ ಕೇಂದ್ರಗಳನ್ನು ನಿರ್ವಹಿಸುತ್ತಿದ್ದಾರೆ. ಅವುಗಳಲ್ಲಿ ಒಬ್ಬರು ಅಧ್ಯಕ್ಷರು, ಒಬ್ಬರು ಕಾರ್ಯದರ್ಶಿ ಮತ್ತು ಒಬ್ಬರು ಖಜಾಂಜಿ ಹೀಗೆ ಪ್ರಾತಿನಿಧ್ಯವಿದೆ. ನನ್ನ ಅಭಿಪ್ರಾಯದ ಪ್ರಕಾರ ಅವರು ಸೊಗಸಾಗಿಯೇ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ ದೇವಸ್ಥಾನದ ನಿರ್ವಹಣೆ, ಕೃಷ್ಣಪ್ರಜ್ಞೆಯ ಪ್ರಚಾರ, ಪುಸ್ತಕ ಮತ್ತು ಸಾಹಿತ್ಯದ ವಿತರಣೆ, ಹೊಸ ಕೇಂದ್ರಗಳ ಪ್ರಾರಂಭ ಹಾಗೂ ಭಕ್ತರಿಗೆ ಸರಿಯಾದ ಮಟ್ಟದ ಶಿಕ್ಷಣ ಕೊಡುವುದು ಇವುಗಳಲ್ಲಿ ಇನ್ನೂ ಹೆಚ್ಚಿನ ಸುಧಾರಣೆಯನ್ನು ನಾವು ನಿರೀಕ್ಷಿಸುತ್ತೇವೆ.

ಹೀಗೆ ತಮ್ಮ ಆಡಳಿತಾತ್ಮಕ ಕೆಲಸಕಾರ್ಯಗಳನ್ನು ಕಡಿಮೆ ಮಾಡಿಕೊಂಡು ಹೆಚ್ಚಾನುಹೆಚ್ಚು ಸಮಯ ಭಾಷಾಂತರ ಮತ್ತು ಪುಸ್ತಕ ರಚನೆಗಾಗಿಯೆ ಉಪಯೋಗಿಸತೊಡಗಿದರು. ದೇವಸ್ಥಾನಗಳ ನಿರ್ವಹಣೆಯನ್ನು ಧರ್ಮದರ್ಶಿಗಳೇ ನೋಡಿಕೊಳ್ಳಬೇಕೆಂದೂ ಸೂಚಿಸಿದರು.

ನ್ಯೂಯಾರ್ಕ್, ಲಂಡನ್, ಪ್ಯಾರಿಸ್, ಜರ್ಮನಿ, ಸಿಡ್ನಿ, ನೈರೋಬಿ ಹೀಗೆ ಆಗಾಗ ವಿದೇಶ ಪ್ರಯಾಣ ಮಾಡುತ್ತಲೇ ಪ್ರಭುಪಾದರು ತಮ್ಮ ಕೈಂಕರ್ಯ ನೆರವೇರಿಸುತ್ತಿದ್ದರು. ಪ್ಯಾರಿಸ್‌ನಲ್ಲೂ ರಾಧಾಕೃಷ್ಣರ ಮಂದಿರ ನಿರ್ಮಾಣ ಕೈಗೂಡಿತು. ಪಶ್ಚಿಮ ವರ್ಜಿನಿಯಾದಲ್ಲಿ ನೂರಿಪ್ಪತ್ತು ಎಕರೆಯ ವಿಶಾಲ ಹಚ್ಚಹಸಿರು ಬಯಲಿನಲ್ಲಿ ನವವೃಂದಾವನ ನಿರ್ಮಾಣವೂ ನೆರವೇರಿತು. ಒಟ್ಟಿನಲ್ಲಿ ಮುಂದೆ ಅವರು ಟೋಕಿಯೋ, ಮೆಕ್ಸಿಕೊ, ವೆನೆಜುಯೆಲ, ಅಟ್ಲಾಂಟಾ, ಡಲಾಸ್, ಹವಾಯಿ, ಟೆಹರಾನ್ ಮುಂತಾದ ಕಡೆಗಳಲ್ಲೂ ಸಂಚರಿಸಿ ವಿಶ್ವಸುತ್ತಿದ್ದ ವಿಜಯಯಾತ್ರೆಯ ಖ್ಯಾತಿಗೆ ಪಾತ್ರರಾದರು. ಹೋದೆಡೆಯೆಲ್ಲ ಕೃಷ್ಣಕೇಂದ್ರ ಪ್ರಚಾರದೊಂದಿಗೆ ಶ್ರೀಮದ್ಭಾಗವತದ ಮಾರಾಟವೂ ನಡೆದೇ ಇರುತ್ತಿತ್ತು,

**"ಭಗವದ್ ಗೀತಾ ಆಸ್ ಇಟ್ ಈಸ್"** ದಾಖಲೆ ಮಾರಾಟ: ಅನಕ್ಷರಸ್ಥರೇ ಹೆಚ್ಚಾಗಿರುವ ಭಾರತ ದೇಶದಲ್ಲಿ ಪುಸ್ತಕ ಮಾರಾಟ ಮತ್ತು ಕೊಂಡುಕೊಳ್ಳುವಿಕೆ ಒಂದು ವಿಶೇಷ ಸಂಗತಿಯೆ. ಇಂತಹುದರಲ್ಲಿ ಪ್ರಭುಪಾದರು ಇಂಗ್ಲೀಷಿಗೆ ಭಾಷಾಂತರಿಸಿದ ಭಗವದ್ಗೀತೆ ಗ್ರಂಥವು ಪುನಃ ಭಾರತೀಯ ಭಾಷೆಗಳಾದ ಕನ್ನಡ, ಹಿಂದಿ, ಮರಾಠಿ, ಬೆಂಗಾಲಿ, ಮಲೆಯಾಳಿ, ಒರಿಯಾ, ತಮಿಳು, ತೆಲುಗು ಇತ್ಯಾದಿ ಬಹುತೇಕ ಎಲ್ಲ ಭಾಷೆಗಳಲ್ಲೂ ಅನುವಾದಗೊಂಡು ಮಾರಾಟದ ದಾಖಲೆಯನ್ನೆ ಸೃಷ್ಟಿಸಿದೆ. ಒಂದೊಂದು ಭಾಷೆಯಲ್ಲಿ ಲಕ್ಷಾಂತರ ಪ್ರತಿಗಳು ಮಾರಾಟವಾಗಿವೆ. ಮೂವತ್ತರಷ್ಟು ಸಲ ಮರುಮುದ್ರಣಗೊಂಡ ಅಪರೂಪದ ಪುಸ್ತಕವಿದು. ಶ್ರೇಷ್ಠ ಗುಣಮಟ್ಟ, ಉತ್ತಮ ಮುದ್ರಣಗಳಿಂದ ಕಂಗೊಳಿಸುತ್ತಿದ್ದರೂ ಈ ಪುಸ್ತಕದ ಬೆಲೆ ಮಾತ್ರ ಕಡಿಮೆ. ಸ್ವದೇಶದಲ್ಲಂತೆಯೇ ವಿದೇಶದಲ್ಲೂ ಈ ಗ್ರಂಥದ ಮಾರಾಟ ಅದ್ವಿತೀಯವಾಗಿದೆ. 900 ಪುಟಗಳ ಇದನ್ನು ವಿಶ್ವದ 40ಕ್ಕೂ ಹೆಚ್ಚು ಭಾಷೆಗಳಲ್ಲಿ ತರ್ಜುಮೆಗೊಳಿಸಲಾಗಿದೆ. ಪ್ರಾರಂಭದಲ್ಲಿ ಮ್ಯಾಕ್ ಮಿಲನ್‌ರವರ ಪ್ರಕಾಶನದಲ್ಲಿ ಹೊರಬಂದ ಇದನ್ನು 1972ರಲ್ಲಿ ಪ್ರಭುಪಾದರೇ **"ಭಕ್ತಿವೇದಾಂತ ಬುಕ್ ಟ್ರಸ್ಟ್"** ಸ್ಥಾಪಿಸಿ ಆ ಮೂಲಕ ಪ್ರಕಾಶನ ಮಾರಾಟ ಕೈಗೊಂಡಿದ್ದು 2001ರ ವೇಳೆಗೆ ಇದರ 75 ಲಕ್ಷ ಪ್ರತಿಗಳು ಕೇವಲ ಇಂಗ್ಲೀಷ್ ಭಾಷೆಯೊಂದರಲ್ಲಿಯೇ ಮಾರಾಟವಾಗಿ ದಾಖಲೆ ನಿರ್ಮಿಸಿದೆ. ಈ ಗ್ರಂಥದ ಆವೃತ್ತಿಗಳನ್ನು ಮುದ್ರಿಸಲು ಬೇಕಾಗುವ ಕಾಗದವನ್ನು ಎಪ್ಪತ್ತಾರು ರೈಲ್ವೆ ಡಬ್ಬಿಗಳಲ್ಲಿ ಸಾಗಿಸಬೇಕಾಯಿತೆಂದರೆ ಎಂತಹ ಅಗಾಧ ಕೆಲಸವಿದು ಎಂದೆನ್ನಿಸದೇಯಿರಲಾರದು. ಒಟ್ಟಿನಲ್ಲಿ ಈವರೆಗೆ ವಿದೇಶಿ ಭಾಷೆಗಳಲ್ಲೆಲ್ಲ ಒಟ್ಟು ಐದು ಮುಕ್ಕಾಲು ಕೋಟಿ ಪ್ರತಿಗಳಿಗೆ ಸಮೀಪದ ಸಂಖ್ಯೆಯಲ್ಲಿದೆ ಇದರ ಮಾರಾಟದ ವೈಭವ.

ಕೃಷ್ಣಪ್ರಜ್ಞೆಯ ಪ್ರಸಾರಕ್ಕೆ ಕಂಕಣಬದ್ಧರಾಗಿದ್ದ ಪ್ರಭುಪಾದರು ತಮ್ಮ ಶಿಷ್ಯರಿಗೆ, ಕೃಷ್ಣನ ಗಮನ ಸೆಳೆಯುವ ಅತ್ಯಂತ ಶೀಘ್ರ ಮಾರ್ಗವೆಂದರೆ ಇನ್ನೊಬ್ಬ ವ್ಯಕ್ತಿಯನ್ನು ಕೃಷ್ಣಪ್ರಜ್ಞೆಗೆ ಒಳಪಡಿಸುವುದು. ಅದು ಪುಸ್ತಕ ವಿತರಕರು ತಮ್ಮ ಗುರುಗಳೊಡನೆ ಅನ್ಯೋನ್ಯಭಾವದಿಂದಿರಲೂ ಸಹಕಾರಿಯಾಗುತ್ತದೆ ಎಂದು ಹೇಳುತ್ತಿದ್ದರು. ಆಗಾಗ ಪ್ರಭುಪಾದರು ಗ್ರಂಥ ವಿತರಣೆ ಹಾಗೂ ಮಾರಾಟದ ಬಗ್ಗೆ ಈ ರೀತಿ ಉಲ್ಲೇಖಿಸಿದ್ದಾರೆ:

"ಮಾಯೆಯ ಸೇನೆಯ ಅಜ್ಞಾನವನ್ನು ಸೋಲಿಸಲು ನಮ್ಮ ಪುಸ್ತಕಗಳು ಮತ್ತು ನಿಯತಕಾಲಿಕಗಳು ಅತ್ಯಂತ ಮುಖ್ಯವಾದ ಪ್ರಚಾರ ಆಯುಧಗಳು. ಅಂತಹ ಸಾಹಿತ್ಯವನ್ನು ನಾವು ಹೆಚ್ಚು ಹೆಚ್ಚು ಉತ್ಪಾದಿಸಿ ಪ್ರಪಂಚದಾದ್ಯಂತ ಹೇರಳವಾಗಿ ವಿತರಣೆ ಮಾಡಿದಷ್ಟೂ | ಪ್ರಪಂಚವನ್ನು ನಾವು ಆತ್ಮಹತ್ಯಾಪಥದಿಂದ ಪಾರುಮಾಡಿದಂತಾಗುತ್ತದೆ."

"…. ಪುಸ್ತಕ ಮಾರಾಟದ ಬಗ್ಗೆ ನಿಮ್ಮ ವರದಿಯನ್ನು ನೋಡಿ ನನಗೆ ಹುಮ್ಮಸ್ಸುಂಟಾಯಿತು. ಏಕೆಂದರೆ ಹೆಚ್ಚುಹೆಚ್ಚು ಜನರು ನಮ್ಮ ಸಾಹಿತ್ಯವನ್ನು ಓದುವಂತೆ ಮಾಡುವುದು ನಿಮ್ಮಹೊಣೆ ಎಂದು ನೀವು ಪರಿಗಣಿಸಿರುವುದನ್ನು ಇದು ಸಾಧಿಸಿ ತೋರಿಸುತ್ತದೆ. ವಾಸ್ತವವಾಗಿ, ನಮ್ಮ ಬೋಧನಾ ಕಾರ್ಯಕ್ಕೆ ಇದು ಸುದೃಢವಾದ ನೆಲಗಟ್ಟಾಗಿದೆ. ಬೇರೆ ಯಾವ ಆಂದೋಲನದಲ್ಲೂ ಬೋಧಿಸುವುದಕ್ಕೆ ಇಷ್ಟು ಸಮೃದ್ಧವಾದ ಪ್ರಮಾಣ ಗ್ರಂಥಗಳು ಸಿಗುವುದಿಲ್ಲ. ಯಾರೇ ಆಗಲಿ, ನಮ್ಮ ಕೃಷ್ಣಪ್ರಜ್ಞಾ ತತ್ವಗಳನ್ನು ಓದಿದರೆ ಒಪ್ಪಿಕೊಳ್ಳುತ್ತಾರೆ.

ಸಾಧ್ಯವಾದಷ್ಟು ಪುಸ್ತಕಗಳನ್ನು ವಿತರಣೆ ಮಾಡಿ, ಯಾರಾದರೂ ನಮ್ಮಿಂದ ಸ್ವಲ್ಪ ತತ್ವವನ್ನು ಕೇಳಿದರೂ ಅದರಿಂದ ನಮಗೆ ಅನುಕೂಲವಾಗುತ್ತದೆ. ಆದರೆ ಅವರು ಒಂದು ಪುಸ್ತಕವನ್ನು ಕೊಂಡರೆ, ಅದು ಅವರ ಜೀವನವನ್ನೇ ಪರಿವರ್ತಿಸಬಹುದು. ಆದ್ದರಿಂದ ಪುಸ್ತಕಗಳನ್ನು ವಿತರಣೆ ಮಾಡುವುದೇ ಅತ್ಯುತ್ತಮ ಬೋಧನಾ ಕಾರ್ಯ, ಪುಸ್ತಕಗಳನ್ನು ವಿತರಿಸಿ, ಶಾಲೆ, ಕಾಲೇಜುಗಳಂತಹ ಸಾರ್ವಜನಿಕ ಸ್ಥಳಗಳಲ್ಲಿ ಕೀರ್ತನೆಯನ್ನು ನಡೆಸಿ, ಬೋಧನೆ ಮಾಡಿ.

ಪುಸ್ತಕಗಳ ವಿತರಣೆಯೇ ನಮ್ಮ ಅತ್ಯಂತ ಮುಖ್ಯವಾದ ಚಟುವಟಿಕೆ ಎನ್ನುವುದರಲ್ಲಿ ಅನುಮಾನಕ್ಕೆ ಆಸ್ಪದವೇ ಇಲ್ಲ. ದೇವಸ್ಥಾನವು ಕೇವಲ ಊಟ ಮಾಡುವ ಮಲಗುವ ಸ್ಥಳವಲ್ಲ. ಅದು ಒಂದು ಸೇನಾ ನೆಲೆ. ಅಲ್ಲಿಂದ ನಮ್ಮ ಸೈನಿಕರನ್ನು ಮಾಯೆಯ ವಿರುದ್ಧ ಹೋರಾಡಲು ಹೊರಗೆ ಕಳಿಸಿಕೊಡುತ್ತೇವೆ. ಮಾಯೆಯೊಡನೆ ಹೋರಾಡುವುದೆಂದರೆ ಸಾವಿರಾರು, ಲಕ್ಷಾಂತರ ಪುಸ್ತಕಗಳನ್ನು ಬದ್ಧಾತ್ಮರ ಮಡಿಲಿಗೆ ಹಾಕುವುದು, ಯುದ್ಧಕಾಲದಲ್ಲಿ ಆಕಾಶದಿಂದ ಬಾಂಬುಗಳ ಸುರಿಮಳೆಯಾಗುತ್ತದಲ್ಲ ಹಾಗೆ.

ನಿಮ್ಮಲ್ಲಿನ ಅತ್ಯುತ್ತಮ ಭಕ್ತರನ್ನು ಬೇರೆ ಭಕ್ತರಿಗೆ ಬೋಧಿಸಲು ಕಳಿಸುವ ನಿಮ್ಮ ಯೋಜನೆಯೂ ನನಗೆ ಪ್ರಿಯವಾಯಿತು. ಬೇರೆಯವರಿಗೆ ತರಬೇತಿ ಕೊಡುವುದೇ ಕೃಷ್ಣಪ್ರಜ್ಞೆಯ ನಿಜವಾದ ಪ್ರಗತಿ. ಈ ಕಾರ್ಯಕ್ರಮವನ್ನು ಮುಂದುವರಿಸಿ. ಇದರಿಂದ ನಮ್ಮ ಆಂದೋಲನದಲ್ಲಿರುವ ಪ್ರತಿಯೊಬ್ಬ ಭಕ್ತರೂ ಪುಸ್ತಕ ವಿತರಣೆಯ ಕಲೆಯನ್ನು ಅರಿತುಕೊಳ್ಳುತ್ತಾರೆ. ಇದಕ್ಕೆ ನನ್ನ ಅನುಮತಿ ಇದೆ."

ಹೀಗೆ ಪುಸ್ತಕ ಮಾರಾಟದಲ್ಲಿ ವಿಕ್ರಮವನ್ನೆ ಸಾಧಿಸಿದ ಪ್ರಭುಪಾದರ ಈ ಮಹಾನ್ ಗ್ರಂಥ, ಓದುಗರ, ವಿಮರ್ಶಕರ ಮೆಚ್ಚುಗೆಗೆ ಪಾತ್ರವಾಗಿದ್ದು ಸಹಜವೇ. ಕೊಲಂಬಿಯಾ ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರಾದ ಡಾ.ಅಲೆಕ್ಸ್ ವೇಮನ್‌ರವರು ಈ ಗ್ರಂಥದ ಬಗ್ಗೆ ಶ್ರೀ ಎ.ಸಿ. ಭಕ್ತಿವೇದಾಂತ ಸ್ವಾಮಿ ಪ್ರಭುಪಾದರಿಂದ ವಿರಚಿತವಾದ ಶ್ರೀಮದ್ಭಾಗವತದ ಉತ್ಕೃಷ್ಟ ಆವೃತ್ತಿಯನ್ನು ಓದುವ ಪರಮ ಸಂತೋಷ ಇತ್ತೀಚೆಗೆ ನನಗೆ ಪ್ರಾಪ್ತವಾಯಿತು. ಪುಟಪುಟಗಳಲ್ಲಿಯೂ ಸಂಸ್ಕೃತ ಶಬ್ದಗಳು ಹಾಗೂ ಅವುಗಳ ಅಮೂಲ್ಯ ಅರ್ಥದ ಬಗೆಗಿನ ಪರಿಪೂರ್ಣ ಎಚ್ಚರ ಮತ್ತು ಶ್ರದ್ಧೆ ಎದ್ದು ಕಾಣುತ್ತಿತ್ತು, ಈ ಚಿರಸ್ಥಾಯಿಯಾದ ಕೃತಿಯು

ಭಾಗವತದ ಮಹೋನ್ನತ ಸಂದೇಶವನ್ನು ಅಸಂಖ್ಯಾತ ಪಾಶ್ಚಾತ್ಯರಿಗೆ ತಲುಪಿಸುವಲ್ಲಿ ಬಹಳ ದೂರ ಕ್ರಮಿಸುತ್ತದೆ ಎಂಬ ವಿಷಯದಲ್ಲಿ ನನಗೆ ದೃಢ ವಿಶ್ವಾಸವಿದೆ. ಈ ಕೃತಿ ಇಲ್ಲದಿದ್ದರೆ ಅವರಿಗೆ ಇಂತಹ ಅವಕಾಶ ತಪ್ಪಿಹೋಗುತ್ತಿತ್ತು."

ಇದರಂತೆಯೇ ಫ್ರಾಂಕಲಿನ್ ಮತ್ತು ಮಾರ್ಷಲ್ ಕಾಲೇಜಿನ ಧಾರ್ಮಿಕ ಅಧ್ಯಯನಗಳ ವಿಭಾಗದ ಅಧ್ಯಕ್ಷ ಡಾ. ಥಾಮಸ್ ಜೆ. ಹಾಪ್‌ಕಿನ್ಸ್, "ಗೀತೆ ಹಾಗೂ ಭಕ್ತಿಯ ಮೇಲೆ ಲಭ್ಯವಿರುವ ಅತಿಶ್ರೇಷ್ಠ ಗ್ರಂಥಗಳಲ್ಲಿ ಇದು ಮಹತ್ವದ್ದು ಎಂಬುದರಲ್ಲಿ ಅನುಮಾನವೇ ಇಲ್ಲ. ಇದು ನಿಖರತೆ ಹಾಗೂ ಧಾರ್ಮಿಕ ಒಳನೋಟಗಳ ಆದರ್ಶಗಳ ಸಂಗಮ" ಎಂದು ಪ್ರಶಂಸಿಸಿದ್ದಾರೆ. ಹಾಗೆಯೇ ಮಾಜಿ ಕ್ಯಾಥಲಿಕ್ ಧರ್ಮಶಾಸ್ತ್ರಜ್ಞ ಥಾಮಸ್ ಮರ್ಟನ್, ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಡಾ. ಎಲ್ವಿನ್ ಎಚ್ ಪೋವೆಲ್, ಜಾರ್ಜ್ ಟೌನ್ ವಿಶ್ವವಿದ್ಯಾಲಯದ ಡಾ.ಎಸ್.ಶುಕ್ಲ ಸೇರಿದಂತೆ ವಿಶ್ವದ ಅಗಣಿತ ಶ್ರೇಷ್ಠ ವಿದ್ವಾಂಸರು, ಚಿಂತಕರು ಈ ಕೃತಿಯನ್ನು ಮೆಚ್ಚಿ "ಆಧುನಿಕ ಮನುಷ್ಯನ ಬೌದ್ಧಿಕ ಮತ್ತು ನೈತಿಕ ಬದುಕಿನಲ್ಲಿ ಪ್ರಭುಪಾದರ ಕೃತಿ ಮಹತ್ವದ ಸ್ಥಾನ ಪಡೆದಿರುತ್ತದೆ" ಎಂದು ಕೊಂಡಾಡಿದ್ದಾರೆ. ಪ್ರಭುಪಾದರಚಿತ ಶ್ರೀಮದ್ಭಾಗವತದ ಹದಿನೆಂಟು ಸಂಪುಟಗಳ ಬಗ್ಗೆ ಹಾಗೂ ಅವರ ಇನ್ನಿತರ ಅಮೂಲ್ಯ ಕೃತಿಗಳ ಬಗ್ಗೆ ಧಾರಾಕಾರವಾಗಿ ಹರಿದುಬಂದಿರುವ ಪ್ರಶಂಸೆ ವಿಮರ್ಶೆಗಳನ್ನು ಕೂಡಿಹಾಕಿದರೆ ಅದೇ ಒಂದು ಬೃಹತ್ ಗ್ರಂಥವಾಗುತ್ತದೆ.

ಇಂತಹ ಉತ್ತಮ ಪ್ರತಿಕ್ರಿಯೆಗಳಿಂದ ಪ್ರಭುಪಾದರು ಸಂತೋಷಭರಿತರಾಗುತ್ತಿದ್ದರು. ಅಷ್ಟೇ ಅಲ್ಲ ದೇಹಾರೋಗ್ಯ ಕ್ಷೀಣಿಸಿದಾಗಲೂ, "ನನ್ನ ಪುಸ್ತಕಗಳ ಮಾರಾಟದ ವರದಿ ಬಂದಾಗಲೆಲ್ಲ ನನಗೆ ಶಕ್ತಿ ಬಂದಂತಾಗುತ್ತದೆ, ಬಲಹೀನವಾಗಿರುವ ಈಗಿನ ಪರಿಸ್ಥಿತಿಯಲ್ಲೂ ನಿಮ್ಮ ವರದಿಯಿಂದ ನನಗೆ ಚೈತನ್ಯ ಪ್ರಾಪ್ತವಾಯಿತು" ಎಂದು ಪುಸ್ತಕ ಭಂಡಾರದವರಿಗೆ ತಿಳಿಸುತ್ತಿದ್ದರು ಹಾಗೂ ಇದು ದೇವರಿಗೆ ಅತ್ಯಂತ ಪ್ರಿಯವಾದ ಸಂಗತಿ ಎಂದೂ ಹುರಿದುಂಬಿಸುತ್ತಿದ್ದರು.

## ಕೊನೆಯ ದಿನಗಳು

ಪ್ರಭುಪಾದರ ಆರೋಗ್ಯ ಸರಿಯಿಲ್ಲದಂತಾಗಿ ಕೆಲವರ್ಷಗಳೇ ಕಳೆದಿದ್ದವು. ಪದೆಪದೆ ಹದಗೆಡುವ ದೇಹಸ್ಥಿತಿಯೊಂದಿಗೆ ಬದುಕುವುದು ಅವರಿಗೆ ರೂಢಿಯಾಗಿಹೋಗಿತ್ತು. ಎಷ್ಟೇ ವಿಷಮಸ್ಥಿತಿಯಲ್ಲಿದ್ದರೂ ಅವರು ಕೀರ್ತನ, ಅಧ್ಯಯನ, ಪ್ರವಚನ ಹಾಗೂ ಪುಸ್ತಕ ಪ್ರಕಾಶನ ಮಾರಾಟಗಳನ್ನು ನಿಲ್ಲಿಸಿರಲಿಲ್ಲ. ಇವೆಲ್ಲ ಕೃಷ್ಣಪ್ರೀತಿಯ ಕಾರ್ಯಗಳೆಂದು ಅರಿತಿದ್ದ ಅವರು ಅವುಗಳನ್ನು ಅನೂಚಾನವಾಗಿ ಮುಂದುವರೆಸಿಕೊಂಡೇ ಬಂದಿದ್ದರು. 1977ರಲ್ಲಿ ತೀರ ಕಷ್ಟಕರ ಆರೋಗ್ಯವಿದ್ದಾಗ ಅವರಿಗೆ ತಾನಿನ್ನು ಹೆಚ್ಚುಕಾಲ ಬದುಕಲಾರೆನೆಂಬುದು ಖಾತ್ರಿಯಾದಂತೆನಿಸಿರಬೇಕು. ಆದ್ದರಿಂದ ಆಗ ಅವರು ಅವರ ಶಿಷ್ಯರನ್ನುದ್ದೇಶಿಸಿ "ತತ್‌ಕ್ಷಣವೇ ನಾನು ದಿವಂಗತನಾದರೂ ಏನೂ ಬಾಧಕವಿಲ್ಲ. ಪ್ರತಿಯೊಂದಕ್ಕೂ ಆಧಾರವನ್ನು ಒದಗಿಸಿದ್ದೇನೆ. ಇನ್ನು ಮುಂದೆ ಎಲ್ಲವನ್ನೂ ಚೆನ್ನಾಗಿ ನಡೆಸಿಕೊಂಡು, ನಾನು ಪ್ರಾರಂಭಿಸಿದ ಕಾರ್ಯಕ್ರಮವನ್ನು ಅನುಸರಿಸಿಕೊಂಡು ಹೋದರೆ ಸಾಕು, ಆಗ ಎಲ್ಲವೂ ಯಶಸ್ವಿಯಾಗುತ್ತದೆ. ಅಂತಹ ಮಾತುಗಳನ್ನು ಕೇಳಿ ಅವರ ಶಿಷ್ಯರಿಗೆ ತಲ್ಲಣವಾಯಿತು. ಅವರು ಮೂಕರಾಗಿ ಕುಳಿತರು. ಅನಂತರ ಪ್ರಭುಪಾದರು ಇನ್ನೊಂದು ಮಾತು ಸೇರಿಸಿದರು, ಆದರೆ ಇನ್ನೂ ಈ ಶ್ರೀಮದ್ಭಾಗವತವನ್ನು ಮುಗಿಸಲು ಬಯಸುತ್ತೇನೆ" ಹೀಗೆ ಪರೋಕ್ಷವಾಗಿ

ಮರಣದ ಪೂರ್ವಪೀಠಿಕೆ ಹಾಕಿದ್ದರು. ಆರೋಗ್ಯ ಸುಧಾರಣೆಗಾಗಿ ಮಾಡಿದ ಪ್ರಯತ್ನ ಹೃಷಿಕೇಶಯಾತ್ರೆ ಯಾವುದೂ ನೆರವಿಗೆ ಬರಲಿಲ್ಲ. ಅಂತ್ಯಕಾಲ ಸಮೀಪಿಸುವ ಕೆಲ ತಿಂಗಳ ಮೊದಲು ಅವರಿಗೆ ತಮ್ಮ ಹರೇಕೃಷ್ಣ ಆಂದೋಲನದ ಬಗ್ಗೆ ನ್ಯೂಯಾರ್ಕ್‌ನ ಉಚ್ಚ ನ್ಯಾಯಾಲಯ ನೀಡಿದ ತೀರ್ಪನ್ನು ಕೇಳುವ ಸಂತೋಷವೂ ದೊರೆಯಿತು. 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಮುಖಪುಟದಲ್ಲಿ ಬಂದ ಒಂದು ವರದಿಯನ್ನು ಅವರಿಗೆ ಓದಿ ಹೇಳಲಾಯಿತು. ಅದು ಈ ಕೆಳಗಿನಂತಿತ್ತು:

## ಹರೇಕೃಷ್ಣ ಆಂದೋಲನವು ನಿಜವಾದ ಧರ್ಮ

**"ವಾಷಿಂಗ್‌ಟನ್ ಮಾರ್ಚ್ 18**: ನಿನ್ನೆ ನ್ಯೂಯಾರ್ಕ್‌ನ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು "ಹರೇ ಕೃಷ್ಣ ಆಂದೋಲನವನ್ನು ನಿಜವಾದ ಧರ್ಮ" ಎಂದು ಘೋಷಿಸಿದರು. ಈ ಆಂದೋಲನದ ಅಧಿಕಾರಿಗಳ ಮೇಲಿದ್ದ ನ್ಯಾಯಾಬಾಹಿರವಾದ ಬಂಧನ ಮತ್ತು ಸುಲಿಗೆ ಮಾಡುವ ಪ್ರಯತ್ನ ಎಂಬ ಎರಡು ಆರೋಪಗಳನ್ನು ಅವರು ತಳ್ಳಿಹಾಕಿದ್ದಾರೆ. ಕೋಪೋದ್ರಿಕ್ತ ನಾಗರೀಕರೊಬ್ಬರು ತಮ್ಮ ಮಗ ಹಾಗೂ ಇನ್ನೊಬ್ಬ ಶಿಷ್ಯನನ್ನು ಈ ಆಂದೋಲನದವರು ನ್ಯಾಯಬಾಹಿರವಾಗಿ ಹಿಡಿದಿಟ್ಟುಕೊಂಡಿದ್ದಾರೆಂದೂ, ಅವರಿಗೆ ಮಂಕುಬೂದಿ ಎರಚಲಾಗಿದೆಯೆಂದೂ ಆರೋಪಿಸಿ ಮೊಕದ್ದಮೆ ಹೂಡಿದ್ದರು. ನ್ಯಾಯಾಲಯದ ಮುಂದಿರುವ ಸಂಪೂರ್ಣ ವಾದ ಹಾಗೂ ಮೂಲಭೂತವಾದ ಪ್ರಶ್ನೆ ಎಂದರೆ, ಈ ಮೊಕದ್ದಮೆಯಲ್ಲಿ ಸಿಲುಕಿಕೊಂಡಿದ್ದಾರೆಂದು ಹೇಳಲಾದ ಇಬ್ಬರು ವ್ಯಕ್ತಿಗಳು ಹಾಗೂ ಪ್ರತಿವಾದಗಳು ತಮ್ಮ ಆಯ್ಕೆಯ ಧರ್ಮವನ್ನು ಅನುಸರಿಸಬಹುದೇ ಎನ್ನುವುದು. ಅವರು ಖಂಡಿತವಾಗಿಯೂ ಅನುಸರಿಸಬಹುದು ಎಂದು ಘಂಟಾಘೋಷವಾಗಿ ಹೇಳುತ್ತಿದ್ದೇವೆ ಎಂದು ಎರಡು ಆರೋಪಗಳನ್ನೂ ತಿರಸ್ಕರಿಸಿದ ನ್ಯಾಯಾಧೀಶರು ಹೇಳಿದರು. ಮಾನ್ಯ ನ್ಯಾಯಾಧೀಶರಾದ ಶ್ರೀ ಜಾನ್ ಲೀಹ್ ಅವರು ಮುಂದುವರಿದು, ಹರೇ ಕೃಷ್ಣ ಆಂದೋಲನವು ಒಂದು ನಿಜವಾದ ಧರ್ಮ, ಅದರ ಮೂಲ ಬೇರುಗಳು ಭಾರತದಲ್ಲಿವೆ. ಅದು ಸಾವಿರಾರು ವರ್ಷಗಳಷ್ಟು ಪ್ರಾಚೀನವಾದುದು. ಮೆರಿಲ್ ಕ್ರೆಷೋವರ್ ಮತ್ತು ಎಡ್ವರ್ಡ್ ಷಾಪಿರೊ ಅವರು ಈ ಧರ್ಮದ ತತ್ವಗಳನ್ನು ಅನುಸರಿಸುವುದು ಅವಶ್ಯಕವಾಗಿದೆ. ಅದು ಅವರ ಆಜನ್ಮಸಿದ್ಧಹಕ್ಕು. ಅದನ್ನು ತಿರಸ್ಕರಿಸಲಾಗದು. ಧರ್ಮಪೀಠ ಮತ್ತು ಸರ್ಕಾರದ ನಡುವಣ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬರಬೇಕು. ನಾವು ಕಾನೂನುಬದ್ಧ ರಾಷ್ಟ್ರವಾಗಿ ಉಳಿದುಕೊಂಡು ಬರಬೇಕೆ ವಿನಾ ವ್ಯಕ್ತಿನಿಷ್ಠ ರಾಷ್ಟ್ರವಾಗಿ ಅಲ್ಲ. ಗ್ರಾಂಡ್ ಜೂರಿಯವರು ಹಾಜರುಪಡಿಸಿರುವ ಹಾಗೂ ಆಪಾದಿಸಿರುವ ಸಂಗತಿಯು ಪ್ರತಿವಾದಿಗಳ ಸಂವಿಧಾನಬದ್ಧ ಹಕ್ಕುಗಳ ನೇರ ಹಾಗೂ ತೀವ್ರ ಉಲ್ಲಂಘನೆಯಾಗಿದೆ ಎಂದು ಹೇಳಿದರು. ನ್ಯಾಯಾಧೀಶರು ಮುಂದುವರಿದು ಜನರು ತಪ್ಪಾದ ಕ್ಷುದ್ರ ಕಾರಣದ ಮೇಲೆ ಆಧರಿಸಿ ಈ ಮೊಕದ್ದಮೆಯನ್ನು ಹೂಡಿದ್ದಾರೆ ಮತ್ತು ಮಿಥ್ಯಾ ತೀರ್ಮಾನಕ್ಕೆ ಬಂದಿದ್ದಾರೆ ಎಂದು ಈ ನ್ಯಾಯಾಲಯಕ್ಕೆ ತೋರುತ್ತದೆ. ಯಾವುದೇ ಪ್ರತಿವಾದಿಯು ತಪ್ಪು ವರದಿಯ ಅಥವಾ ವಂಚನೆಯ ಯಾವುದೇ ಒಂದು ಕ್ರಿಯೆಯನ್ನು ಮಾಡಿದ್ದಾರೆ ಎನ್ನುವುದಕ್ಕೆ ನಿರ್ದಿಷ್ಟವಾದ ಒಂದು ಆಪಾದನೆಯೂ ದಾಖಲೆಯಲ್ಲಿಲ್ಲ ಎಂದು ನ್ಯಾಯಾಧೀಶರು ಹೇಳಿದ್ದಾರೆ. ಒಂದು ಧರ್ಮವು ನಂಬಿಕೆ ಮತ್ತು

ಆಚರಣೆಗಳಲ್ಲಿ ಅಸಾಂಪ್ರದಾಯಿಕವಾಗಿದೆ ಎಂಬ ಕಾರಣಕ್ಕಾಗಿ ಅಥವಾ ಸಮಾಜದ ಮುಖ್ಯವಾಹಿನಿಯಿಂದ ಅಥವಾ ಹೆಚ್ಚು ಸಾಂಪ್ರದಾಯಕವಾದ ಧರ್ಮಗಳಿಂದ ಅಂಗೀಕೃತವಾಗಿದೆ ಇಲ್ಲವೇ ತಿರಸ್ಕೃತವಾಗಿದೆ ಎಂಬ ಕಾರಣಕ್ಕಾಗಿ ಧರ್ಮಾಚರಣೆಯ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಗದು. ವ್ಯಕ್ತಿಯು ಸ್ವಂತ ಮನಸ್ಸಾಕ್ಷಿಯ ಪ್ರಕಾರ ದೇವರನ್ನು ಸಮೀಪಿಸಲು ಮಾಡುವ ಈ ಅನ್ವೇಷಣೆಗೆ ಅಗತ್ಯವಾದ ಸ್ವಾತಂತ್ರ್ಯ ಮತ್ತು ಅಭಿವೃದ್ಧಿಯ ಅವಕಾಶವಿಲ್ಲದಿದ್ದರೆ, ಸಂವಿಧಾನದಲ್ಲಿ ನೀಡಿದ ಧರ್ಮಾಚರಣೆಯ ಸ್ವಾತಂತ್ರ್ಯ, ಅರ್ಥಶೂನ್ಯವಾದ ಹಕ್ಕಾಗುತ್ತದೆ. ಈ ಪ್ರಯತ್ನವು ನೇರವಾಗಿರಲಿ, ಸದುದ್ದೇಶದಿಂದ ಕೂಡಿರಲಿ ಅಥವಾ ಇಲ್ಲದಿರಲಿ, ಧರ್ಮಾಚರಣೆಯ ಸ್ವಾತಂತ್ರ್ಯವೆಂಬ ನಮ್ಮ ನಾಗರಿಕರ ಅತ್ಯಂತ ಮೂಲಭೂತವಾದ ಹಾಗೂ ಶಾಶ್ವತವಾಗಿ ಇರಬೇಕಾದ ಹಕ್ಕಿಗೆ ಸ್ಪಷ್ಟವಾದ ಹಾಗೂ ಸದ್ಯದ ಅಪಾಯವುಂಟುಮಾಡುತ್ತದೆ. ನಾನಾ ಗುಂಪುಗಳಿಂದ ಹರೇಕೃಷ್ಣ ಆಂದೋಲನದ ಮೇಲೆ ತೀವ್ರವಾದ ಒತ್ತಡವಿತ್ತು. ಈ ತೀರ್ಪು ಕಳೆದ ಕೆಲವು ತಿಂಗಳುಗಳಿಂದ ಈ ಸಂಸ್ಥೆಯು ತುತ್ತಾಗಿದ್ದ ಕಿರುಕುಳಗಳಲ್ಲಿ ಕೆಲವನ್ನು ನಿಲ್ಲಿಸುತ್ತದೆ ಎಂದು ನಿರೀಕ್ಷಿಸಲಾಗಿದೆ."

ಮುಂದೆ 1977ರ ನವೆಂಬರ್ 14ರಂದು ಸಾಯಂಕಾಲ 7.30ಕ್ಕೆ ಪ್ರಭುಪಾದರ ದೇಹಾಂತವಾಯಿತು. ಆದರೆ ಅವರ ಚೈತನ್ಯ ಅವಿನಾಶಿಯಾಗಿ ಉಳಿಯಿತು. ಗುರುವಿನ ಅಗಲುವಿಕೆಯು ಶಿಷ್ಯರಿಗೆ, ಗಂಡಹೆಂಡತಿಯಿಂದ ಅಗಲಿದಾಗ ಆಗುವಷ್ಟು ದುಃಖಕರ ಎಂದು ಅವರೇ ಹೇಳಿದ್ದರು. ಅದರಂತೆಯೇ ಈ ಶಾಶ್ವತ ದೂರಾಗುವಿಕೆಯು ಅವರ ಶಿಷ್ಯರಿಗೆ ತೀವ್ರ ಆಘಾತವನ್ನುಂಟುಮಾಡಿತ್ತು. ಚಿರಶಾಂತಿಯ ಕೇವಲ ಕೆಲ ಗಂಟೆಗಳ ಮೊದಲು ಪ್ರಭುಪಾದರು, "ಶಿಷ್ಯರಿಗೂ ಗುರುಗಳಿಗೂ, ವಿಯೋಗವೆಂಬುದೇ ಇಲ್ಲ. ಏಕೆಂದರೆ ಶಿಷ್ಯರು ತಮ್ಮ ಗುರುಗಳ ಉದ್ದೇಶಗಳನ್ನು ಅನುಸರಿಸುತ್ತಿರುವವರೆಗೂ, ಗುರುಗಳು ಶಿಷ್ಯರ ಸಾಮೀಪ್ಯದಲ್ಲೇ ಇರುತ್ತಾರೆ. ಇದನ್ನು ವಾಣಿ ಸಾನ್ನಿಧ್ಯ ಎಂದು ಹೇಳುತ್ತಾರೆ. ದೈಹಿಕ ಅಸ್ತಿತ್ವವಿದ್ದಾಗ ಅದು ವಪು ಸಾನ್ನಿಧ್ಯ. ಗುರುಗಳು ದೈಹಿಕವಾಗಿ ಅಸ್ತಿತ್ವದಲ್ಲಿರುವವರೆಗೂ ಶಿಷ್ಯರು ಗುರುಗಳ ಆ ಭೌತಿಕ ದೇಹಕ್ಕೆ ಸೇವೆಸಲ್ಲಿಸಬೇಕು. ಗುರುಗಳು ದೈಹಿಕವಾಗಿ ಅಸ್ತಿತ್ವದಲ್ಲಿ ಇಲ್ಲದಿದ್ದಾಗ ಶಿಷ್ಯರು ಗುರುಗಳ ಉಪದೇಶಗಳನ್ನು ಅನುಸರಿಸುವ ಮೂಲಕ ಸೇವೆ ಸಲ್ಲಿಸಬೇಕು" ಎಂದು ಉಪದೇಶಿಸಿದ್ದರು. ಅಂತೆಯೇ ಇಂದಿಗೂ ವಿಶ್ವದೆಲ್ಲೆಡೆ ಅವರ ಶಿಷ್ಯರ ಮೂಲಕ, ಇಸ್ಕಾನ್ ದೇವಸ್ಥಾನ ಹಾಗೂ ಸಂಸ್ಥೆಗಳ ಮೂಲಕ ಅವರ ಕೃಷ್ಣಪ್ರಜ್ಞಾ ಆಂದೋಲನದ ಮೂಲಕ ಹಾಗೂ ಅವರ ಮೂಲಮಂತ್ರ "ಹರೇಕೃಷ್ಣ ಹರೇಕೃಷ್ಣ, ಕೃಷ್ಣಕೃಷ್ಣ ಹರೇಹರೇ ಹರೇರಾಮ ಹರೇರಾಮ, ರಾಮರಾಮ ಹರೇಹರೇ" ಮೂಲಕ ಪ್ರಭುಪಾದರು ಜೀವಂತವಾಗಿಯೇ ಇದ್ದಾರೆ. ಈ ವಿಶ್ವ ಇರುವವರೆಗೂ, ಆನಂತರವೂ ಅವರು ಅನಂತ ಹಾಗೂ ಅನಶ್ವರ. ಅವರ ಆಧ್ಯಾತ್ಮಿಕ ಧಾರೆ ನಿರಂತರ.

# ಯಾವುದೂ ಕ್ಷುಲ್ಲಕವಲ್ಲ

ಗಾಂಧೀಜಿಯವರು ಹೇಳುತ್ತಿದ್ದರು ಯಾವನಿಂದ ಅತಿ ಸಣ್ಣ ಕೆಲಸವನ್ನು ಮಾಡಲು ಸಾಧ್ಯವಿಲ್ಲವೊ ಅವನಿಂದ ದೊಡ್ಡ ಕೆಲಸವೂ ಸಾಧ್ಯವಿಲ್ಲ. ಇದನ್ನು ಅವರು ಸ್ವಾವಲಂಬನೆ ಬಗ್ಗೆ ವಿವರಿಸುವಾಗ ಹೇಳಿದ್ದರೂ ಅದನ್ನು ಬೇರೆ ಇತರ ವಿಷಯಗಳಿಗೂ ನಾವು ತೆಗೆದುಕೊಳ್ಳಬಹುದಾಗಿದೆ.

ಟೆಲಿವಿಷನ್, ಟೇಪ್ ರೆಕಾರ್ಡ್‌ರ್‌ಗಳು ಬಂದ ಮೇಲೆ ರೇಡಿಯೋ ಕೇಳುವುದನ್ನೇ ಕಡಿಮೆ ಮಾಡಿದ ನಾನು, ರೇಡಿಯೋವನ್ನು ಕೇಳಿದರೂ ಕೇವಲ ಸುದ್ದಿ ಸಮಾಚಾರಕ್ಕಾಗಿ ಮಾತ್ರ. ಅಲ್ಲಿಯ ಇನ್ನುಳಿದ ಕಾರ್ಯಕ್ರಮಗಳಿಗೆ ಉದಾಸೀನ. ಆದರೆ, ಮೊನ್ನೆ ಒಮ್ಮೆ ಯಾಕೊ ಕೇಳೋಣ ಅಂತ ಅನಿಸಿದ್ದರಿಂದ ರೇಡಿಯೋ ಹಚ್ಚಿದರೆ, ಬಹುದಿನಗಳಿಂದ ನನ್ನ ತಲೆಯಲ್ಲಿ ಹೊಳೆಯುತ್ತಿದ್ದ ವಿಚಾರಕ್ಕೆ ಒಂದು ಮೂರ್ತಸ್ವರೂಪ ಬಂತಷ್ಟೇ ಅಲ್ಲ, ನನ್ನ ಅಚ್ಚಾಗುತ್ತಿರುವ ಪುಸ್ತಕದಲ್ಲಿಯ ಕವನಗಳ ಕ್ಯಾಸೆಟ್ ಮಾಡಿಸಿದಾಗ ಅದಕ್ಕೆ ಏನು ಹೆಸರಿಡಬೇಕೆಂಬುದೇ ನಿರ್ಧಾರವಾಗಿಬಿಟ್ಟಿತು.

ಇನ್ನು ಅತೀ ನಿಕೃಷ್ಟವೆಂದು ತಿಳಿದಿರುವ ಪ್ರಾಣಿ ಹಂದಿಯ ವಿಷಯಕ್ಕೆ ಬರೋಣ - ನಮ್ಮ ಕೆಲ ಊರಲ್ಲಿ ಮಂದಿಗಳ ಸಂಖ್ಯೆಯಷ್ಟೆ ಸರಿಸುಮಾರು ಹಂದಿಗಳೂ ಇವೆ. ಇಲ್ಲಿ ಸಂಡಾಸಗಳಿಗೆ (ಪಾಯಖಾನೆಗಳಿಗೆ ಫ್ಲಷ್‌ಔಟ್ ಪದ್ಧತಿ ಇಲ್ಲವಾದ್ದರಿಂದ, ಈ ಹಂದಿಗಳೇ ಆ ಕೆಲಸ ಮಾಡಿ ಪುರಂದರದಾಸರ ಪದದಂತೆ ಕೇರಿಯನ್ನೆಲ್ಲ ಸ್ವಚ್ಛಗೊಳಿಸುತ್ತವೆ. ಮಹಾತ್ಮಾ ಗಾಂಧೀಯವರೂ ಒಂದು ಕಡೆ- “ಮಗು ತನ್ನ ತೊಡೆಯ ಮೇಲೆ ಹೇಸಿಗೆ ಮಾಡಿದಾಗ ಏನೂ ಅನಿಸಿಕೊಳ್ಳದೇ ಅದನ್ನು ಸ್ವಚ್ಛಮಾಡುವ ತಾಯಿಯು ಹೇಗೆ ಪ್ರಾಥಃಸ್ಮರಣೀಯಳೊ ಹಾಗೆಯೇ ಮಲವನ್ನು ಹೊತ್ತೊಯ್ಯುವ ಭಂಗಿಯೂ ಪ್ರಾಥಸ್ಮರಣೀಯನು” ಎಂದು ಹೇಳಿದ್ದು ನೆನಪಾಗಿ, ಈ ಹಂದಿಯೂ ಪ್ರಾತಃಸ್ಮರಣೀಯವೇ ಅಲ್ಲವೇ ಎಂದು ಅನಿಸಿ ಆದುದರಿಂದಲೇ ಒಮ್ಮೆ ವಿಷ್ಣುವೂ ಕೂಡ ವರಾಹ ರೂಪ ತಾಳಿದ್ದಿರಬೇಕು ಅಂದುಕೊಳ್ಳುತ್ತೇನೆ. ಮತ್ತೆ ಮೆದುಳು ಜ್ವರ ಹೋಗಲಾಡಿಸಲು ಹಂದಿಗಳನ್ನು ಗುಂಡಿಕ್ಕಿ ಕೊಲ್ಲುವ ವಿಷಯ ಕೇಳಿ ಇನ್ನು ಮೇಲೆ, ಈ ಹಂದಿಗಳ ಮೇಲೆಯೇ ತನ್ನ ಸ್ವಚ್ಛತೆಯನ್ನು ಅವಲಂಬಿಸಿಕೊಂಡ ಪಟ್ಟಣಗಳ ಪ್ರಜೆಗಳ ಗತಿಯೇನು ಎಂದು ಚಿಂತಿಸಬೇಕಾಗುತ್ತದೆ. ಮತ್ತಷ್ಟು ಆಳವಾಗಿ ವಿಚಾರಿಸಿದಾಗ “ನಿಸರ್ಗ ಚಕ್ರ”ವೆಂಬುದು ನೆನಪಾಗುತ್ತದೆ ಹಾಗೂ ಸೃಷ್ಟಿ, ಸ್ಥಿತಿ, ಲಯವೆಂಬ, ವಾದದ ಅರಿವೂ ಆಗುತ್ತದೆ. ಅಂದರೆ ಒಂದು ವಸ್ತು ಹುಟ್ಟುತ್ತದೆ, ಇರುತ್ತದೆ, ಲಯವಾಗಿ ಬೇರೆ ರೂಪಾಂತರಗೊಳ್ಳುತ್ತದೆ ಎಂಬ ತತ್ವ. ಈಗ ಹಂದಿ ಹೇಸಿಗೆ ತಿನ್ನುವುದನ್ನು ನೋಡಿ: ಮನುಷ್ಯ ಆಹಾರಧಾನ್ಯಗಳನ್ನು ತಿನ್ನುತ್ತಾನೆ, ಮಲವಿಸರ್ಜಿಸುತ್ತಾನೆ. ಆ ಮಲವನ್ನು ಹಂದಿ ತಿನ್ನುತ್ತದೆ, ಅದೂ ಮಲ ವಿಸರ್ಜಿಸುತ್ತದೆ. ಅದರ ಮಲವನ್ನು ಅತ್ಯಂತ ಪೌಷ್ಟಿಕಗೊಬ್ಬರವೆಂದು ನಾವು ಬೆಳೆಗಳಿಗೆ ಹಾಕುತ್ತೇವೆ. ಬೆಳೆಗಳು ಈ ಹಂದಿಗೊಬ್ಬರ ತಿಂದು ನಮಗೆ ಆಹಾರಧಾನ್ಯ ಕೊಡುತ್ತವೆ, ಆಯಿತಲ್ಲ ನಿಸರ್ಗ ಚಕ್ರಪೂರ್ತಿ? ಆದ್ದರಿಂದ ಯಾವುದೋ ಕ್ಷುಲ್ಲಕವಲ್ಲ ಅಂತೆಯೇ ಯಾವುದನ್ನೂ ನಿರ್ಲಕ್ಷಿಸುವಂತಿಲ್ಲ. ಇದನ್ನೇ ರವೀಂದ್ರನಾಥ ಠಾಕೂರವರ ಒಂದು ಚುಟುಕು ಹೀಗೆ ವಿವರಿಸುತ್ತದೆ.

**ಅಶಕ್ತರೂ ಘನಘೋರವೆಂದೆನಿಸಬಲ್ಲರು**

**ಯಾಕೆಂದರೆ**

**ಸಶಕ್ತರಾಗಿ ತೋರಲು**

**ಅವರು ಸರ್ವಪ್ರಯತ್ನ ಮಾಡುತ್ತಾರೆ.**

ಇದನ್ನು ನಾವು ಹಲವಾರು ಪ್ರಬಲ ತಂಡಗಳು, ತಮ್ಮ ಎದುರಾಳಿಯನ್ನು ಅತಿ ಸಣ್ಣ ಅಥವಾ ಅಶಕ್ತ ಎಂದು ಪರಿಗಣಿಸಿ ಉದಾಸೀನ ಭಾವನೆಯಿಟ್ಟುಕೊಂಡು ಆಟವಾಡಿ ಸೋತುಹೋಗುವುದನ್ನು ಕಂಡಿದ್ದೇವೆ. 1983ರಲ್ಲಿ ವಿಶ್ವಕಪ್ ಗೆದ್ದುಕೊಂಡ ಭಾರತ ಕ್ರಿಕೆಟ್

ತಂಡದ ಆಟಗಾರರು ಆಗ ಅತಿ ಅಬಲರೆಂದು ಪರಿಗಣಿಸಲ್ಪಟ್ಟ ಜಿಂಬಾಬ್ವೆಯವರ ವಿರುದ್ಧ ಉಪೇಕ್ಷಾ ಮನೋಭಾವದಿಂದ ಆಡಿದ ಫಲವಾಗಿ ಪಟಪಟನೆ ವಿಕೆಟ್‌ಗಳು ಉರುಳಿ ಭಾರತ ಸೋಲಿನ ಅಂಚಿನಲ್ಲಿತ್ತು; ಆದರೆ ನಾಯಕ ಕಪಿಲ್‌ದೇವನ ಸಮಯೋಚಿತ ಹೋರಾಟದಿಂದಾಗಿ ಗೆಲವು ಸಾಧ್ಯವಾಗಿದ್ದನ್ನು ನಮ್ಮ ದೇಶದ ಇತಿಹಾಸ ಹೆಮ್ಮೆಯಿಂದ ಹೇಳುತ್ತಿದೆ.

ಮನೆ ನಿರ್ಮಾಣದಲ್ಲಿ ದೊಡ್ಡ ದೊಡ್ಡ ಕಲ್ಲು ಹಾಗೂ ಇಟ್ಟಿಗೆಗಳಂತೆಯೇ ಅತಿ ಚಿಕ್ಕಪುಟ್ಟ ವಸ್ತುಗಳೂ ಅವಶ್ಯವಾಗುವಂತೆ ಸಣ್ಣ ಸಣ್ಣ ಕೆಲಸ ಕಾರ್ಯಗಳೂ ಜೀವನಾಭಿವೃದ್ಧಿಗೆ ಅವಶ್ಯವೆಂದೇ ಹೇಳಬಹುದು. ಸಮಸ್ಯೆ, ರೋಗ, ಕೆಲಸ ಇತ್ಯಾದಿಗಳು ಚಿಕ್ಕದಾಗಿವೆಯೆಂದು ನಿರ್ಲಕ್ಷಿಸುತ್ತ ಹೋದಂತೆ ಅವೇ ಕಸದ ಗುಂಪೆಯಂತೆ ದೊಡ್ಡದಾಗಿ ಎಲ್ಲ ಅಸ್ತವ್ಯಸ್ತತೆಗೆ ಕಾರಣವಾಗಿಬಿಡುತ್ತವೆ; ರೋಗ ಉಲ್ಬಣಿಸಿ ಮಾರಕಹಂತ ತಲುಪುತ್ತದೆ. ಡಯಾಬಿಟೀಸ್ ರೋಗಿಯೊಬ್ಬ ತನ್ನ ಪಾದದ ಮೇಲಾದ ಚಿಕ್ಕಗಾಯವೊಂದನ್ನು ಅದೇನು ಮಹಾಬಿಡು ಎಂದು ನಿರ್ಲಕ್ಷಿಸಿದಾಗ, ಮುಂದೆ ಕೆಲವೇ ದಿನಗಳಲ್ಲಿ ಅದು ಉಲ್ಬಣಿಸಿ ಆ ಕಾಲನ್ನೆ ಬಲಿ ತೆಗೆದುಕೊಂಡ ಹಾಗೂ ಕೆಲಸಾರೆ ಜೀವವನ್ನೆ ತೆಗೆದುಕೊಂಡ ಹಲವಾರು ಉದಾಹರಣೆಗಳು ನಮ್ಮೆದುರು ಇವೆ. ಇದರಂತೆಯೇ ಚಿಕ್ಕಪುಟ್ಟ ನಿಯಮಿತತನದ ಉಳಿತಾಯ, ನಮ್ಮ ಆಪತ್ಕಾಲದಲ್ಲಿ ಪ್ರಾಣಸ್ನೇಹಿತನಾಗಿ ಸಹಾಯಕ್ಕೆ ಬರುತ್ತದೆ. ಇದನ್ನೆ "ಹನಿಗೆ ಹನಿ ಕೂಡಿದರೆ ಹಳ್ಳ, ತೆನೆಗೆ ತೆನೆ ಕೂಡಿದರೆ ಬಳ್ಳ" ಎಂಬ ನಾಣ್ನುಡಿ ಸಾಬೀತುಪಡಿಸುತ್ತದೆ. ಇಲ್ಲಿ 'ಮರಳಿ ಯತ್ನವ ಮಾಡು" ಎಂಬ ಮಾತನ್ನು ಜೇಡನನ್ನು ನೋಡಿ ಕಲಿತ ರಾಜನೊಬ್ಬನ ಕಥೆಯನ್ನು ವಿವರಿಸಬಹುದು. ವೈರಿಗಳಿಂದ ಹಿಮ್ಮೆಟ್ಟಿಸಲ್ಪಟ್ಟ ರಾಜನೊಬ್ಬ ಓಡಿ ಹೋಗಿ ಗವಿಯೊಂದರಲ್ಲಿ ಅಡಗಿ ಕೂತ. ತೀರ ನಿರಾಶೆ ಹೊಂದಿದ ಆತ ಹತಾಶ ಭಾವನೆ ತಾಳತೊಡಗಿದ್ದ. ಆಗ ಗವಿಯ ಬಾಗಿಲಲ್ಲಿ ಜೇಡವೊಂದು ತನ್ನ ಬಲೆ ನೇಯ್ದುಕೊಳ್ಳಲು ಪ್ರಯತ್ನಿಸುತ್ತ ಆಗಾಗ ಕೆಳಗೆ ಬೀಳುತ್ತಿತ್ತು. ಅನೇಕ ಸಾರೆ ವಿಫಲವಾದರೂ ಜೇಡ ಪುನಃ ಪುನಃ ಪ್ರಯತ್ನ ಮುಂದುವರೆಸಿ ಕೊನೆಗೆ ಪೂರ್ಣ ಬಲೆ ನೇಯುವುದರಲ್ಲಿ ಯಶಸ್ಸು ಕಂಡಿತು. ಇದನ್ನು ನೋಡಿದ ಆ ರಾಜನೂ ಮರಳಿ ಯತ್ನವ ಮಾಡಿ ಶ್ರಮಪಟ್ಟು ಸೈನ್ಯ ಸಂಘಟಿಸಿ, ಮುಂದಿನ ಯುದ್ಧದಲ್ಲಿ ಜಯಶಾಲಿಯಾದ. ಆಕಸ್ಮಾತ್ ಆ ರಾಜ ಇದೇನು ಬಿಡು ಕೇವಲ ಒಂದು ಜೇಡ ಕ್ರಿಮಿ ಎಂದು ಉದಾಸೀನ ಮಾಡಿದ್ದರೆ ಪ್ರಾಯಶಃ ಆತ ಅಪಜಯಿ ಆಗಿಯೇ ಇರಬೇಕಾಗುತ್ತಿತ್ತು.

ಸ್ಪರ್ಧೆ, ಪರೀಕ್ಷೆಗಳಿಗೆ ತಯಾರಿ ಮಾಡುವವರಂತೂ ಯಾವ ಪ್ರಮೇಯವನ್ನೂ ಅಲಕ್ಷಿಸುವಂತಿಲ್ಲ. ಇದೇನು ಬಿಡು ಎಂದು ನಾವು ನಿರ್ಲಕ್ಷ್ಯದಿಂದ ನೋಡಿದ ಸಮಸ್ಯೆಯೇ ನಮಗೆ ಬೇಕೆಂದಾಗ ಸರಿಯಾಗಿ ನೆನಪಾಗುವುದಿಲ್ಲ. ಇಂದು ಇಡೀ ವಿಶ್ವವೇ ಒಂದು ವಿಶಿಷ್ಟ ರೀತಿಯ ಸ್ಪರ್ಧೆ ಅಥವಾ ಮೇಲಾಟದಲ್ಲಿದೆ, ಅಂತೆಯೇ ಇದು ತೀರ ಸ್ಪರ್ಧಾ ಜಗತ್ತು ಎನಿಸಿದೆ. ಇಲ್ಲಿಯ ಗುರಿ ತಲುಪುವಲ್ಲಿ ಈ ಹಿಂದಿನಂತೆ ಸೆಕೆಂಡುಗಳಲ್ಲಿ ಲೆಕ್ಕಹಾಕುತ್ತಿಲ್ಲ, ಬದಲಾಗಿ ಸೆಕೆಂಡಿನಲ್ಲಿ ನೂರು, ಸಾವಿರ ಭಾಗಗಳನ್ನು ಮಾಡಿ ಪರೀಕ್ಷೆ ಮಾಡಲಾಗುತ್ತದೆ ! ಅಂದರೆ ಯಾವುದನ್ನೂ ನಾವು ಕಡೆಗಣಿಸುವಂತಿಲ್ಲ ಅಲಕ್ಷಿಸುವಂತಿಲ್ಲ. ಯಾಕೆಂದರೆ ಯಾವುದೂ ಕ್ಷುಲ್ಲಕವಲ್ಲ, ಜೀವನದಲ್ಲಿ ಯಶ ಪಡೆಯಬೇಕಾದರೆ.

ಡಾ. ಗಿರಡ್ಡಿ ಗೋವಿಂದರಾಜರವರು ಕನ್ನಡ ಸಾಹಿತ್ಯದಲ್ಲಿ ವಿಮರ್ಶಕರೆಂದು ಹಾಗೂ ಕಥೆಗಾರರೆಂದು ಸಾಕಷ್ಟು ಹೆಸರು ಮಾಡಿದವರು. ವಿಮರ್ಶಾ ಲೇಖನಗಳು ಬೃಹತ್ ಗ್ರಂಥಗಳಾಗುವಷ್ಟು ವಿಪುಲವಾಗಿದ್ದರೂ ಅವರ ಕಥೆಗಳು ಮಾತ್ರ ಹದಿನೈದಕ್ಕಿಂತ ಹೆಚ್ಚಿಲ್ಲ. ಬರೆದದ್ದು ಬಹಳಷ್ಟೇ ಇರಲಿ, ಕಡಿಮೆಯೇ ಇರಲಿ ಸತ್ವ ಮತ್ತು ವಿಶ್ಲೇಷಣಾ ದೃಷ್ಟಿಯ ನೆಲೆಯಿಂದ ನೋಡಿದಾಗ ಅವರೊಬ್ಬ ಅಪರೂಪದ ಲೇಖಕರಾಗಿ ನಮ್ಮೆದುರು ನಿಲ್ಲುತ್ತಾರೆ. ಇದರಂತೆಯೇ ಡಾ. ಗಿರಡ್ಡಿಯವರ ಲಲಿತ ಪ್ರಬಂಧಗಳ ಬಗೆಗಿನ ಅಭಿಪ್ರಾಯ ಕೂಡಾ. ತಮ್ಮ ಸಾಹಿತ್ಯ ಜೀವನದ ನಲ್ವತ್ತು ವರ್ಷಗಳಲ್ಲಿ ಅವರು ಬರೆದ ಲಲಿತ ಪ್ರಬಂಧಗಳು ಕೇವಲ ಕೆಲವೇ ಕೆಲವು. ಆರೆಂಟು ಮಾತ್ರ. ಆದರೆ ಅವರ ತೀಕ್ಷ್ಣ ವಿವೇಚನಾ ಶಕ್ತಿ, ವೈಚಾರಿಕ ಹಿನ್ನೆಲೆಯಿಂದಾಗಿ ಅವು ಮತ್ತೆ ಮತ್ತೆ ಓದಬೇಕೆನಿಸುವಂತವೆನಿಸುತ್ತವೆ.

ಡಾ. ಗಿರಡ್ಡಿ ಸರಳ ನಡೆಯ ನೇರ ನುಡಿಯ ಸಜ್ಜನ ಮನುಷ್ಯ. ಈ ಸರಳತೆ ಅವರ ಲಲಿತ ಪ್ರಬಂಧಗಳಲ್ಲಿ ಎದ್ದು ಕಾಣುತ್ತದೆ. ಹೇಳುವುದನ್ನು ನೇರವಾಗಿ ಮನಮುಟ್ಟುವಂತೆ ಹೇಳುವುದೇ ಅವರ ವೈಶಿಷ್ಟ್ಯ. ನಿರಾಡಂಬರದ ಅವರ ವ್ಯಕ್ತಿತ್ವದ ಛಾಪನ್ನು ಹೊತ್ತುಕೊಂಡೇ ಲಲಿತ ಪ್ರಬಂಧಗಳೆಲ್ಲ ಹೊರಹೊಮ್ಮುತ್ತವೆ. ಗೋಜಲು ಗೋಜಲತೆಯಾಗಲಿ, ವಿಚಾರಾಭಾಸವಾಗಲಿ ತಪ್ಪಿಯೂ ಕೂಡಾ ಎಲ್ಲಿಯೂ ಇಣುಕಿ ಹಾಕುವುದಿಲ್ಲ. ಸೈದ್ಧಾಂತಿಕ ಚೌಕಟ್ಟೊಂದಕ್ಕೆ ಅನಾವಶ್ಯಕವಾಗಿ ಕಟ್ಟುಬಿದ್ದು ನಳನಳಿಸುವುದಿಲ್ಲ. ಸ್ಪಷ್ಟತೆ, ಸರಳತೆ, ಸುಂದರ ನಿರೂಪಣಾ ಶೈಲಿ ಓದುಗರನ್ನು ತಂತಾನೆ ಮುನ್ನಡೆಸಿಕೊಂಡು ಹೋಗುತ್ತದೆ. ಕೋಣೆಯಲ್ಲಿ ಕುಳಿತು ಗಹನ ವಿಚಾರವೊಂದನ್ನು ಕುರಿತು ನೇರವಾಗಿ ಹಾಗೂ ಅಷ್ಟೇ ಗಂಭೀರವಾಗಿ ನಮ್ಮೊಡನೆ ಮಾತನಾಡುತ್ತಿದ್ದಾರೇನೋ ಈ ಲೇಖಕರು ಎಂಬಷ್ಟು ಆತ್ಮೀಯತೆ ಅವುಗಳಲ್ಲಿ ತುಂಬಿ ತುಳುಕುತ್ತದೆ. ಲೇಖನಗಳಲ್ಲಿ ಗಿರಡ್ಡಿಯವರ ಪರಿಸ್ಥಿತಿಯೇ ನಮ್ಮ ಪರಿಸ್ಥಿತಿಯೇನೊ, ಅವರು ನಮ್ಮ ಬಾಯಿಮಾತನ್ನೇ ನಮಗಿಂತ ಮೊದಲೇ ಹೇಳುತ್ತಿದ್ದಾರೇನೋ ಎನ್ನುವಷ್ಟು ಅನ್ಯೋನ್ಯತೆ ಓದುಗನಲ್ಲಿ ತಂತಾನೆ ಬೆಳೆಯುತ್ತ ಹೋಗುತ್ತದೆ.

ಪ್ರಾಧ್ಯಾಪಕರಾಗಿ, ಸಾಹಿತಿಯಾಗಿ, ಮೇಲಾಗಿ ಒಬ್ಬ ಮನುಷ್ಯನಾಗಿ ಗಿರಡ್ಡಿ ತಾವು ಕಂಡುಂಡ ಘಟನೆಗಳನ್ನು, ತಮಗಾದ ವಿಚಿತ್ರ ಅನುಭವಗಳನ್ನು ಅಭ್ಯಾಸ ಮಾಡುವಾಗ ತೋರಿದ ಅಥವಾ ಹೊಳೆದ ವಿಚಾರಗಳನ್ನು ಹದಮಾಡಿ ಬಳಸಿಕೊಂಡು ಒಂದು ಸುಂದರ ಪ್ರಬಂಧ ರಚಿಸುವಲ್ಲಿ ಸಫಲರಾಗುತ್ತಾರೆ. ಪ್ರತಿ ಹೆಜ್ಜೆಯಲ್ಲೂ ಅವರ ಸ್ವಂತಿಕೆ ಎದ್ದು ಕಾಣುತ್ತದೆ. ಕೇವಲ ಅವರು ಹೀಗೆ ಹೇಳಿದರು. ಇವರು ಹೀಗೆ ಎಂದು ಉಲ್ಲೇಖಿಸುತ್ತ ಹನುಮನ ಬಾಲದಂತೆ ಅಪ್ರಸ್ತುತವಾದದ್ದನ್ನು ಬರೆಯುತ್ತಾ ಬೆಳೆಸುತ್ತಾ ಹೋಗುವ ನವ್ಯ ಪ್ರಬಂಧಕಾರರು ಗಿರಡ್ಡಿಯವರು ತೋರುವ ಸಂಯಮ ಶಿಸ್ತುಗಳನ್ನು ನೋಡಿ ಬೆರಗಾಗಬಹುದು. ಎಲ್ಲಿಯೂ ವಿಷಯಾಂತರವಾಗದಂತೆ ಮುನ್ನಡೆಯುವ ಗಿರಡ್ಡಿ ಶೈಲಿ ಅನುಪಮವಾದದ್ದು.

1959ರಷ್ಟು ಹಿಂದೆ ಬರೆದು ಇತ್ತಿತ್ತಲಾಗಿ ಪರಿಷ್ಕರಿಸಿದ "ಮಕ್ಕಳು" ಎಂಬ ಪ್ರಬಂಧ ಕೂಡ ಹುಟ್ಟಿದಂದಿನಿಂದ ಬೆಳೆದ ಬಾಲಕ ಪ್ರವೃತ್ತಿ ಬಿಟ್ಟು ಪ್ರಬುದ್ಧತೆಯನ್ನು ಪಡೆಯುವವರೆಗಿನ ಅವಧಿಯ ವಿವಿಧ ಸ್ತರಗಳ ನಿರೂಪಣೆಯಾಗಿದೆ. ಈ ಬಾಲ್ಯಾವಸ್ಥೆ ಹಾಗೂ ಯೌವನಪೂರ್ವ ಅವಸ್ಥೆಗಳ ವಿವರಣೆಯಲ್ಲಿ ಗಿರಡ್ಡಿ ತಮ್ಮ ಬಾಲ್ಯದ ಆಟೋಟಗಳ ನೆನಪನ್ನು ತೆರೆದು ತೋರಿಸುವಾಗ ಓದುಗರೂ ಕೂಡಾ ತಮ್ಮ ಆ ದಿನಗಳನ್ನು ಸ್ಮರಿಸಿಕೊಂಡು

ಪುಲಕಗೊಳ್ಳುವಂತೆ ಮಾಡುತ್ತಾರೆ. ಮಕ್ಕಳ ಮನಸ್ಸಿನ ಸೂಕ್ಷ್ಮತೆಯನ್ನು ತಮ್ಮ ಒಳನೋಟದಿಂದ ಸೆರೆಹಿಡಿಯುತ್ತಾರೆ. ಇಲ್ಲಿ ಗಿರಡ್ಡಿಯವರ ಇನ್ನೊಂದು ಹೆಚ್ಚುಗಾರಿಕೆಯನ್ನೂ ಕಾಣಬಹುದಾಗಿದೆ. ಈ ಲೇಖನದ ಕೊನೆಯಲ್ಲಿ ಅವರು ಮಂಡಿಸಿದ ವಿಚಾರ ನೋಡಿ:

"ಮಕ್ಕಳು ಈಗ ನಮ್ಮನ್ನು ಮೀರಿ ಹೋಗಿ ನಮಗೆ ದುಃಖ ಕೊಟ್ಟಿರಬಹುದು. ಆದರೆ ಒಂದು ಕಾಲಕ್ಕೆ ಚಿಕ್ಕವರಿದ್ದಾಗ, ನಮ್ಮ ಪ್ರೀತಿಯನ್ನು ಕೊಡುವುದಕ್ಕೆ ಆ ಅದಮ್ಯ ಆಶೆಯ ಅಭಿವ್ಯಕ್ತಿಗೆ ಅವಕಾಶ ಕೊಟ್ಟರಲ್ಲ. ನಮ್ಮ ಬದುಕಿನ ಒಂದು ಕಾಲಾವಧಿಯನ್ನು ಸಂತೋಷದಿಂದ ಬೆಳಗಿದರಲ್ಲ, ಜೀವನ ಸಾರ್ಥಕವಾಯಿತು ಎಂಬ ಅನಿಸಿಕೆ ಹುಟ್ಟಿಸಿದರಲ್ಲ. ನಾವು ಅವರಿಗಾಗಿ ಮಾಡಿದ ಯಾವ ತ್ಯಾಗವೂ ದೊಡ್ಡದಲ್ಲ ಎಂಬ ಭಾವನೆಯನ್ನು ಮೂಡಿಸಿದರಲ್ಲ. ಈ ಒಂದೊಂದು ಅನುಭವವೂ ಬದುಕಿನಲ್ಲಿ ಅಮೂಲ್ಯವಾದದ್ದು. ಮಕ್ಕಳಿಲ್ಲದಿದ್ದರೆ ನಾವು ಈ ಅನುಭವಗಳಿಂದ ವಂಚಿತರಾಗುತ್ತಿದ್ದೆವು. ಅದಕ್ಕಾಗಿಯಾದರೂ ನಾವು ನಮ್ಮ ಮಕ್ಕಳಿಗೆ ಕೃತಜ್ಞರಾಗಿರಬೇಕು."

ಬಹುಶಃ ಗಿರಡ್ಡಿಯವರ ವೈಯಕ್ತಿಕ ಬದುಕಿನ ಉತ್ಕೃಷ್ಟತೆಯ ಸಂಕೇತವೇ ಈ ಸಂದೇಶದಂತೆ ಬಂದಿದೆಯೇನೊ ಅನ್ನಿಸುತ್ತದೆ. ಮಕ್ಕಳಿಗೆ ನಾವು ಏನೇನು ತ್ಯಾಗ ಮಾಡಿದೆವು. ಎಂತೆಂಥ ತ್ರಾಸ ತೆಗೆದುಕೊಂಡೆವು ಎಂದು ಸದಾ ತಮ್ಮ ಬಗ್ಗೆಯೇ ಕೊಚ್ಚಿಕೊಳ್ಳುತ್ತ - "ಮಾತೃದೇವೋ ಭವ ಪಿತೃದೇವೋ ಭವ' ಎಂಬುದನ್ನೇ ಪಠಿಸುತ್ತ ಮಕ್ಕಳಿಂದ ಅತಿಯಾಗಿ "ಋಣ" ಬಯಸುವ ಕೆಲವರಾದರೂ ಇಲ್ಲಿ ಕಣ್ತೆರೆದು ನೋಡಬೇಕಾದದ್ದು ಬಹಳವಿದೆ ಎನಿಸುತ್ತದೆ. ಇಂತಹ ಒಂದು ಹೊಸ ವಿಚಾರ ನೀಡಿದ್ದಕ್ಕೆ ಈ ಲೇಖನ ತನ್ನ ಸಾರ್ವಕಾಲಿಕತೆಯನ್ನು ಪಡೆದುಕೊಂಡಿದೆ ಎಂದರೆ ಹೆಚ್ಚೇನನ್ನೂ ಹೇಳಿದಂತಾಗುವುದಿಲ್ಲ.

"ನಮ್ಮ ಕಾರವಾರ" ಎಂಬ ಲೇಖನವೂ ಸರಿಸುಮಾರು ಮೇಲೆ ಹೇಳಿದ ಲೇಖನದ ಸಮಯದಲ್ಲಿಯೇ ಬರೆದುದಾಗಿದೆ. ಲೇಖಕರು ಕಾರವಾರಕ್ಕೆ ಹೋಗಿ ಒಂದೆರಡು ದಿನವಿದ್ದು ಬಂದ ಅನುಭವವನ್ನು ಸೇರಿಸಿ ಒಂದು ಸುಂದರ ಕಿರುಪ್ರವಾಸ ಕಥನವನ್ನು ಇಲ್ಲಿ ಹೆಣೆದಿದ್ದಾರೆ. ಕಾರವಾರದ ಸೃಷ್ಟಿ ಸೌಂದರ್ಯ, ಸಮುದ್ರದ ಶಾಂತತೆಯ ಅನನ್ಯ ವರ್ಣನೆ ಮನಸೆಳೆಯುತ್ತದೆ. ಅಲ್ಲಿಯ ಬ್ರಿಟಿಷರ ಕಾಲದ ಬಳುವಳಿಯಾಗಿ ಉಳಿದುಕೊಂಡಿರುವ ಕಲೆಕ್ಟರ್, ಬಂಗ್ಲೆ, ಮರಾಠರ ಕಾಲದ ಸದಾಶಿವಗಡ ಕೋಟೆ, ಇತ್ಯಾದಿ ಕಟ್ಟಡಗಳ ವರ್ಣನೆಯೂ ಲೇಖನದಲ್ಲಿ ಮೈದಳೆದಿದೆ. ಕಾರವಾರದ ನೈಸರ್ಗಿಕ ಸೌಂದರ್ಯವನ್ನು ಕವಿವರ್ಯರಾದ ಬೇಂದ್ರೆ, ಆಚಾರ್ಯ ಶ್ರೀಯವರು ಹೇಗೆ ಹಾಡಿ ಹೊಗಳಿದರೆಂದು ಅವರ ಒಂದೆರಡು ಸುಂದರ ಪದ್ಯಗಳ ತುಕಡಿಗಳನ್ನು ಹಾಕಿದ್ದು ಲೇಖನಕ್ಕೆ ಆಭರಣ ತೊಡಸಿದಂತಾಗಿದೆ.

ನೋಡಿ:

**ದಿನದಿನ ಕಡಲಿಗೆ ಹೋಗುವೆನೊ**

**ತೆರೆಗಳ ಲೀಲೆಯ ನೋಡುವೆನೊ... (ಬೇಂದ್ರೆ)**

**ಏನು ಚೆಲುವಿನ ನಾಡು: ಚೆಲುವು ಚೆಲ್ಲುವ ನಾಡು:**

**ಕನ್ನಡದ ನಾಡು:**

## ಏನು ಚಿನ್ನದ ನಾಡು: ನಮ್ಮೊಲುಮೆಯಾ ನಾಡು

## ನಮ್ಮಿನಿಯ ನಾಡು (ಬಿ.ಎಂ.ಶ್ರೀ)

ಸೌಂದರ್ಯದ ಸವಿಯನ್ನು ಉಣಬಡಿಸುತ್ತಲೇ ಕಾರವಾರದ ಪರಿಸರದಲ್ಲಿ ತಮಗಾದ ನೋವಿನ ಅನುಭವವನ್ನು ಉಪ್ಪಿನಕಾಯಿಯಂತೆ ನಮಗೆ ಅಲ್ಲಲ್ಲಿ ನಂಚಿಕೊಳ್ಳುವಂತೆ ಮಾಡಿದ್ದು ಗಿರಡ್ಡಿಯವರ ವಿಶೇಷತೆ ಆಗಿದೆ. ಇದರಿಂದಾಗಿ ಅವರು ಲಲಿತ ಪ್ರಬಂಧಕಾರರಾಗಿಯೂ ನಮಗೆ ಅಚ್ಚುಮೆಚ್ಚಾಗುತ್ತಾರೆ. ಈ ಲೇಖನದಲ್ಲಿಯ ಒಂದೆರಡು ತುಣುಕಗಳನ್ನು ನೋಡಿ:

"ಭತ್ತದ ಗದ್ದೆಗಳಲ್ಲಿ ನಾಲ್ಕಾರು ಪುಟ್ಟ ಗುಡಿಸಲು. ಅಷ್ಟಷ್ಟೇ ಒಂದೊಂದು ಊರು. ಲಂಗೋಟಿ ಹಾಕಿ ಬರಿ ಮೈಯಿಂದ ಹೊಲಗಳಲ್ಲಿ ಓಡಾಡುತ್ತಿದ್ದರು ಇಲ್ಲಿಯ ನಿವಾಸಿಗಳು. ಈ ಜನರ ಬದುಕು ನಿಜವಾಗಿ ಎಂತಹ ಸೌಭಾಗ್ಯಶಾಲಿ; ದಿನನಿತ್ಯ ವಿರಾಟ್ ಪ್ರಕೃತಿ, ತನ್ನ ಮಂದಹಾಸದಿಂದ ಈ ಜನರನ್ನು ಲಾಲಿ ಹಾಡಿ, ತನ್ನ ಉಡಿಯ ತೊಟ್ಟಿಲಲ್ಲಿ ಚುಕ್ಕು ತಟ್ಟಿ ಮಲಗಿಸುತ್ತಾಳೆ. ಆದರೆ.... ಯಾರಿಗೆ ಗೊತ್ತು? ಮಲೆನಾಡಿನ ಈ ನಿರ್ಜನ ವನದಲ್ಲಿ ಬಡ ಗುಡಿಸಿಲುಗಳಲ್ಲಿ ಆಧುನಿಕ ಸೌಕರ್ಯಗಳಿಲ್ಲದೆ ಕಳೆಯಬೇಕಾಗಿರುವ ಅವರ ಬದುಕಿನಲ್ಲಿ ಏನೇನು ಕಷ್ಟ-ನಿಷ್ಠುರಗಳಿವೆಯೊ, ದೂರದ ಮಾತು ಯಾವಾಗಲೂ ಚೆಂದ. ಅನುಭವಿಸಿ ನೋಡಿದಾಗಲೇ ನಿಜಸ್ಥಿತಿಯ ಅರಿವಾಗುವುದು." ಇಲ್ಲಿ ಗಿರಡ್ಡಿಯವರಲ್ಲಿ ಸದಾ ಜಾಗೃತವಾಗಿರುವ ಸುಪ್ತ ಮಾನವೀಯ ಪ್ರಜ್ಞೆ ಎದ್ದುಕಾಣುವುದನ್ನು ನೋಡಬಹುದು.

ಸರಿಸುಮಾರು ನಾಲ್ಕು ದಶಕಗಳಷ್ಟು ಹಿಂದೆ ಗಿರಡ್ಡಿಯವರು ತೋರಿದ ಈ ನೋವುಭರಿತ ನಾಡಪ್ರಜ್ಞೆಯ ಪ್ರತಿಫಲವೇನೋ ಎನ್ನುವಂತೆ ಇಂದು ಕಾರವಾರವು ರಾಷ್ಟ್ರದ ಒಂದು ಪ್ರಮುಖ ಬಂದರು ಹಾಗೂ ನೌಕಾನೆಲೆಯಾಗಿದೆ. ಕಾರವಾರದಿಂದ ಪಶ್ಚಿಮ ಘಟ್ಟದುದ್ದಕ್ಕೂ ಹಾಯ್ದು ಗೋವಾ ಮುಂಬಯಿಗಳಿಗೆ ಹೋಗಿ ತಲುಪುವ ಕೊಂಕಣ ರೈಲುಮಾರ್ಗವೂ ಮೈದೆಳೆದು ನಿಂತಿದೆ. ಆದರೆ ಹುಬ್ಬಳ್ಳಿ-ಕಾರವಾರ ರೈಲು ಮಾರ್ಗ ಇನ್ನೂ ಆಗಬೇಕಾಗಿದೆ. ಲೇಖಕರ ಈ ಕನಸೂ ಪೂರ್ತಿಯಾಗಲೆಂದು ಓದುಗರೆಲ್ಲ ಅವರ ಜೊತೆಗೇನೆ ಧ್ವನಿಗೂಡಿಸುವಂತೆ ಮಾಡುವುದೇ ಈ ಲೇಖನದ ಶಕ್ತಿ ಎನಿಸುತ್ತದೆ.

ಪುಸ್ತಕ ಪ್ರೀತಿಯ ನೈಜತೆ ಹಾಗೂ ಹುಸಿ ಡಾಂಭಿಕತೆಯನ್ನು ರಸವತ್ತಾಗಿ ನಿರೂಪಿಸಿದ್ದೇ "ಪುಸ್ತಕಗಳು" ಎಂಬ ಕಿರು ಲೇಖನದಲ್ಲಿ, ಪುಸ್ತಕಗಳ ಆಗಾಧ ಉಪಯುಕ್ತತೆಯನ್ನೂ ಅವುಗಳನ್ನು ತೋರಿಕೆಗಾಗಿಯೇ ಇಡುವ, ಕೊಳ್ಳುವ ಪರಿಯನ್ನೂ ಏಕಕಾಲಕ್ಕೆ ವಿವರಿಸುತ್ತ ವಿಡಂಬಿಸುತ್ತ ಹೋಗುವ ಲೇಖಕರ ಶೈಲಿ, ತಮಾಶೆ ಮಾಡುತ್ತಲೇ ಎಚ್ಚರಿಸುವ ಮಾದರಿ ಯಾರಿಗಾದರೂ ಮನಮುಟ್ಟುತ್ತದೆ, ಚುರುಕು ಮುಟ್ಟಿಸಿ ಜಾಗೃತಗೊಳಿಸುತ್ತದೆ.

"ಕಿಸೆಗಳ್ಳತನ"ದಂತಹ ವಿಚಿತ್ರ ವಿಷಯವೂ ಹೇಗೆ ಒಂದು ಪ್ರಬಂಧಕ್ಕೆ ವಸ್ತುವಾಗಲ್ಲದೆಂಬುದನ್ನು ಗಿರಡ್ಡಿಯವರು ತಮಗೆ ಬೆಂಗಳೂರು, ಬಾಂಬೆ, ಧಾರವಾಡ, ಶಿವಮೊಗ್ಗ, ಹರಿಹರ ಇತ್ಯಾದಿಗಳಲ್ಲಿ ಆದ ಕಹಿ ಅನುಭವಗಳೊಂದಿಗೆ ಹಾಸ್ಯಮಯವಾಗಿ ಮನಮುಟ್ಟುವಂತೆ ವಿವರಿಸಿದ್ದಾರೆ. ಅವರ ವಿವರಣಾ ಕೌಶಲ್ಯದಲ್ಲಿ ಓದುಗನೂ ಒಂದಾಗುತ್ತ ಹೋಗಿ ಮಜಾ ಹಾಗೂ ತಮಾಷೆ ಅನುಭವಿಸುತ್ತಾನೆ.

ಅಧ್ಯಾಪಕರಾಗಿದ್ದ ಗಿರಡ್ಡಿಯವರು ಕೆಲವರ್ಷ ಇಂಗ್ಲೆಂಡ್‌ನಲ್ಲಿ ವ್ಯಾಸಂಗಕ್ಕಾಗಿ ಹೋಗಿ ಇದ್ದ ತಮ್ಮ ಅನುಭವವನ್ನು "ಇಂಗ್ಲೆಂಡಿನಲ್ಲಿ ಭಾರತೀಯರು" ಹಾಗೂ "ಇಂಗ್ಲೆಂಡಿನಲ್ಲೊಬ್ಬ ಅಧ್ಯಾಪಕ ವಿದ್ಯಾರ್ಥಿ" ಎಂಬ ಎರಡು ಸುದೀರ್ಘ ಪ್ರಬಂಧಗಳಲ್ಲಿ ಉತ್ತಮವಾಗಿ ವಿವರಿಸಿದ್ದಾರೆ. ಅಲ್ಲಿಯ ಲ್ಯಾಂಕಾಸ್ಟರ್ ವಿಶ್ವವಿದ್ಯಾಲಯದ ಒಂದೆರಡು ಸುಂದರ ಫೋಟೋಗಳನ್ನೂ ಸಂದರ್ಭೋಚಿತವಾಗಿ ಮುದ್ರಿಸಿದ್ದಾರೆ. ಇದರಿಂದಾಗಿ ಲೇಖನದ ಆಕರ್ಷಣೆ ಇನ್ನೂ ಹೆಚ್ಚಿದೆ. ಇಂಗ್ಲೆಂಡಿನಲ್ಲಿ ಹೇಗೆ ಸ್ವಚ್ಛತೆ, ಪ್ರಾಮಾಣಿಕತೆ ಹಾಗೂ ಶ್ರಮಸಂಸ್ಕೃತಿಗಳು ಪ್ರಾಮುಖ್ಯತೆ ಪಡೆದಿವೆ ಎನ್ನುವುದನ್ನು ಸಾದೋಹರಣವಾಗಿ ಹೇಳುತ್ತಾ ಹೋಗುತ್ತಾರೆ. ಇಂಗ್ಲೆಂಡಿನಲ್ಲಿ ಹೇಗೆ ಎಪ್ಪತ್ತರ ದಶಕದಲ್ಲೂ ವರ್ಣಭೇದ ನೀತಿಯನ್ನು ಕೆಲವರಾದರೂ ಪ್ರಚೋದಿಸುತ್ತಿದ್ದರು ಎಂಬುದನ್ನು ಹಾಗೂ ಅದೇ ಸಮಯದಲ್ಲಿ ಹೇಗೆ ಬಹಳಷ್ಟು ಜನ ಇಂತಹ ಪದ್ಧತಿಯನ್ನು ವಿರೋಧಿಸುತ್ತಿದ್ದರು ಎನ್ನುವುದನ್ನೂ ಒತ್ತಿ ಹೇಳಲಾಗಿದೆ. ಅಲ್ಲಿ ತೀರಾ ಮುಕ್ತವಾತಾವರಣ, ಚಕ್ಕಂದ, ಇತ್ಯಾದಿ ಇವೆ ಎಂದು ಯಾರಾದರೂ ಮಿತಿಮೀರಿ ವರ್ತಿಸಿದರೆ ಹೇಗೆ ಭ್ರಮನಿರಸನಗೊಳ್ಳುತ್ತಾರೆ ಎಂಬುದನ್ನಂತೂ ಬಲು ಮಾರ್ಮಿಕವಾಗಿ ವಿವರಿಸಿದ್ದಾರೆ. ಅಧ್ಯಾಪಕ ವಿದ್ಯಾರ್ಥಿಗಳಾಗಿ ಸೇರಿದ ತಮ್ಮಂಥವರ ದುಗುಡ, ಆತಂಕಗಳನ್ನೂ ಬಿಚ್ಚಿಡುತ್ತ ಸಾಗುವ "ಇಂಗ್ಲೆಂಡಿನಲ್ಲೊಬ್ಬ ಅಧ್ಯಾಪಕ ವಿದ್ಯಾರ್ಥಿ" ಅಲ್ಲಿಯ ವಿದ್ಯಾರ್ಥಿ ಜೀವನದ ವಿವಿಧ ಮಜಲುಗಳನ್ನು, ಶಿಕ್ಷಕರ ಮುಂದಿರುವ ಸವಾಲುಗಳನ್ನು, ಶೈಕ್ಷಣಿಕ ವ್ಯವಸ್ಥೆಯ ರೂಪುರೇಷೆಗಳನ್ನು ತೋರಿಸುತ್ತ ಹೋಗುತ್ತದೆ. ನೋಡಿ:

"ನಮ್ಮಲ್ಲಿ ವಿಶ್ವವಿದ್ಯಾಲಯಗಳಿಗೆ ಒಳ್ಳೆಯ ಅಥವಾ ಕೆಟ್ಟ ಹೆಸರು ಬರುವುದು ಹೆಚ್ಚಾಗಿ ಉಪಕುಲಪತಿ, ಕುಲಸಚಿವ, ಪರೀಕ್ಷಾ ನಿಯಂತ್ರಣಾಧಿಕಾರಿ ಮುಂತಾದ ಆಡಳಿತಕ್ಕೆ ಸಂಬಂಧಿಸಿದ ಜನರಿಂದ, ಇಂಗ್ಲೆಂಡಿನ ವಿಶ್ವವಿದ್ಯಾಲಯಗಳಲ್ಲಿ ಈ ಹುದ್ದೆಗಳಲ್ಲಿರುವವರ ಹೆಸರೇ ಅನೇಕರಿಗೆ ಗೊತ್ತಿರುವುದಿಲ್ಲ. ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡುವ ಪ್ರಾಧ್ಯಾಪಕರು ಹಾಗೂ ಅವರು ಸ್ವತಃ ತಯಾರಿಸಿಕೊಳ್ಳುವ ವಿಷಯ ಪಟ್ಟಿ ಇವುಗಳಿಂದಾಗಿಯೇ ವಿಶ್ವವಿದ್ಯಾಲಯಕ್ಕೆ ಹೆಸರು ಬರುತ್ತದೆ. ವಿದ್ಯಾರ್ಥಿಗಳು ತಮ್ಮ ಮೆಚ್ಚಿನ ವಿಷಯದ ಅಭ್ಯಾಸ ಕ್ರಮ ಹಾಗೂ ಅದನ್ನು ಕಲಿಸುವ ಪ್ರಾಧ್ಯಾಪಕರನ್ನು ನೋಡಿ ವಿಶ್ವವಿದ್ಯಾಲಯಗಳನ್ನು ಆರಿಸಿಕೊಳ್ಳುತ್ತಾರೆ. ಹೀಗಾಗಿ ಇತ್ತೀಚೆಗೆ, ಇಂತಿಂಥ ವಿಷಯಗಳಿಗೆ ಇಂತಿಂಥ ವಿಶ್ವವಿದ್ಯಾಲಯ ಚೆನ್ನಾಗಿದೆ ಎನ್ನುವ ಪರಿಪಾಠ ಆರಂಭವಾಗಿದೆ..."

ಹಾಗೂ ವಿದ್ಯಾರ್ಥಿಗಳು ಸಹ ಇಲ್ಲಿಯ ಉಪಕುಲಪತಿ ಚಾರ್ಲ್ಸ್ ಕಾರ್ಟರ್ ಅವರ ಬಗ್ಗೆ ಸಲಿಗೆಯಿಂದ ಚಾರ್ಲಿ ಎಂಬ ಹೆಸರಿನಲ್ಲೇ ಮಾತಾಡುತ್ತಿದ್ದರು ಬಯ್ಯುತ್ತಿದ್ದರು, ಟೀಕಿಸಿ ಬರೆಯುತ್ತಿದ್ದರು..."

ಅಲ್ಲಿಯ ವಿಶ್ವವಿದ್ಯಾಲಯಗಳ ಆಡಳಿತ ವ್ಯವಸ್ಥೆ, ಶೈಕ್ಷಣಿಕ ಹಾಗೂ ಬೋಧನಾ ಪದ್ಧತಿ, ಪಠ್ಯಕ್ರಮ, ಅಧ್ಯಾಪಕ ವಿದ್ಯಾರ್ಥಿ ಸಂಬಂಧಗಳನ್ನು ನಮ್ಮ ಭಾರತೀಯದಕ್ಕೆ ಹೋಲಿಸುತ್ತ ಬರುವ ಲೇಖನ ಬಹಳ ಆತ್ಮೀಯವೆನಿಸುತ್ತದೆ.

ಹೀಗೆ ತಾವು ಬರೆದ ಕೆಲವೇ ಕೆಲವು ಲಲಿತ ಪ್ರಬಂಧಗಳಲ್ಲಿ ಗಿರಡ್ಡಿಯವರು ಉತ್ಕೃಷ್ಟತೆಯನ್ನು ಮೆರೆದಿದ್ದು, ನೋಡಿದರೆ ಇಂತಹ ಇನ್ನೂ ಅನೇಕವನ್ನು ಅವರು ಬರೆಯಬೇಕಿತ್ತೇನೋ ಎಂದೆನಿಸುತ್ತದೆ. ತಾವು ಬರವಣಿಗೆಯಲ್ಲಿ ಸೋಮಾರಿ ಎಂದು ತಮ್ಮ

ಬಗ್ಗೆ ಸ್ವತಃ ಅವರೇ ಒಂದೆಡೆ ಹೇಳಿಕೊಂಡಿದ್ದರೂ ಸ್ವಚ್ಛ ಮನದಾಳದಲ್ಲಿ ಸದಾ ತುಯ್ಯುತ್ತಿರುವ ಅವರ ಅಂತರಂಗದ ವಿಚಾರಧಾರೆ ಈ ಸೋಮಾರಿತನದ ಅಡ್ಡಗೋಡೆಯ ಆಣೆಕಟ್ಟೆಯಲ್ಲಿ ಹಿನ್ನೀರಿನಂತೆ ಸಂಗ್ರಹವಾಗಿ ಅವರ ಸೃಜನಶೀಲತೆ ಆಗಾಗ ಇಂತಹ ಲಲಿತ ಪ್ರಬಂಧಗಳ ಮೂಲಕ ಗೇಟ್ ಎತ್ತಿಸಿಕೊಂಡು ಭೋರ್ಗರೆದು ಹೊರಹೊಮ್ಮಲಿ ಎಂಬುದೇ ನನ್ನ ಒತ್ತಾಸೆ.

# ಭಾರಿ ಬೆಳಕಿನ ಬೆಟ್ಟ - ಕೊಹಿನೂರ್ ವಜ್ರ

ಕನ್ನಡ ನಾಡನ್ನು ಹಾಗೆಯೇ ಭರತ ಭೂಮಿಯನ್ನು ವಜ್ರ ವೈಡೂರ್ಯಗಳ ನಾಡೆಂದು ಅನಾದಿ ಕಾಲದಿಂದಲೂ ವಿಶ್ವದೆಡೆಯಲ್ಲಿ ಗುರುತಿಸುತ್ತ ಬರಲಾಗಿದೆ. ಇಲ್ಲಿಯ ಬಂಗಾರದ ಗಣಿಗಳ, ವಜ್ರದ ಆಗರಗಳ ಆಕರ್ಷಣೆ ವಿದೇಶಿಯರನ್ನು ಉದ್ರೇಕಿಸಿ, ಹಲವಾರು ಬಾರಿ ಪರಕೀಯರ ಆಕ್ರಮಣಕ್ಕೂ ಒಳಗಾಗಿದೆ ನಮ್ಮ ದೇಶ. "ಚಿನ್ನದ ನಾಡಿದು ಕನ್ನಡ" ಎಂದಂತೆಯೇ".... "ಮುತ್ತು ರತ್ನಗಳನ್ನು ಬಳ್ಳದಿಂದ ಅಳೆದು ಮಾರಿದ" ಎಂಬುದು ಭೂಗರ್ಭದ ಸಂಪದ್ಭರಿತತೆಯನ್ನು ಸೂಚಿಸುತ್ತವೆ. ತಮ್ಮ "ಭಾರತ ಸಿಂಧು ರಶ್ಮಿ"ಯಲ್ಲಂತೂ ಗೋಕಾಕರು ಭಾರತ ನೆಲದ ಒಡಲಿನ ಅಗಾಧ ಸಂಪತ್ತಿನ ವರ್ಣನೆಯನ್ನು ವಿಶಿಷ್ಟವಾಗಿ ಮಾಡಿದ್ದಾರೆ. ಕಾಲಾನುಕಾಲಕ್ಕೆ ಕವಿಗಳು, ಸಾಹಿತಿಗಳು ಭಾರತದ ಐಶ್ವರ್ಯದ ಬಗ್ಗೆ ತಮ್ಮ ಲೇಖನಗಳಿಂದ ಕೊಂಡಾಡಿದ್ದಾರೆ. ಈ ಎಲ್ಲ ವರ್ಣನೆ ಬಣ್ಣನೆಗಳ ಕಿರೀಟದಲ್ಲಿ ಸಿಂಹಪಾಲಿನ ಕೀರ್ತಿ ಕೊಹಿನೂರ್ ವಜ್ರದ್ದಾಗಿದೆ.

ಒಂದು ಉಲ್ಲೇಖದ ಪ್ರಕಾರ, ಹೈದ್ರಾಬಾದಿನ ಗೋಲ್ಕೊಂಡ ವಜ್ರಗಣಿಗಳಲ್ಲಿಂದ ಹೊರತೆಗೆಯಲ್ಪಟ್ಟ ಕ್ರಿ.ಶ.1304ರ ಈ ಕೋಹಿನೂರ್ ವಜ್ರವು ಪ್ರಥಮದಲ್ಲಿ ಮಾಳ್ವದೇಶದ ರಾಜನಾದ ಮಹ್ಲಕದೇವನ ಒಡೆತನಕ್ಕೆ ಸೇರಿದ್ದಾಗಿತ್ತೆಂದಿದೆ; ಹಾಗೆಯೇ ಮತ್ತೊಂದೆಡೆ ಮಾಳ್ವ ಪ್ರಾಂತ್ಯವನ್ನು ಗೆದ್ದ ದೆಹಲಿಯ ಸುಲ್ತಾನ ಅಲ್ಲಾಉದ್ದೀನ್ ಖಿಲ್ಜಿಯ ಅಧಿಪತ್ಯಕ್ಕೆ ಒಳಪಟ್ಟಿತ್ತೆಂದೂ ಹೇಳಲಾಗುತ್ತದೆ. ಕಾಲಾನುಕ್ರಮದಲ್ಲಿ ಮೊಘಲ್ ಚಕ್ರವರ್ತಿ ಬಾಬರನು ಈ ಅಮೂಲ್ಯ ರತ್ನವನ್ನು ತನ್ನದಾಗಿಸಿಕೊಂಡಿದ್ದಕ್ಕಾಗಿ ಇದಕ್ಕೆ 'ಬಾಬರನ ವಜ್ರ'ವೆಂದೂ ಕರೆಯಲಾಗುತ್ತದೆ. ಕಾಲಕಾಲಕ್ಕೆ ರಾಜ್ಯ ಸಾಮ್ರಾಜ್ಯಗಳನ್ನು ಗೆದ್ದುಕೊಂಡ ಅರಸರೆಲ್ಲರೂ ಈ ಮೇರು ರತ್ನವನ್ನು ತಮ್ಮದಾಗಿಸಿಕೊಂಡ ಹೆಮ್ಮೆಯಿಂದ ಬೀಗುತ್ತಿದ್ದರು. ಇಡೀ ಪ್ರಾಂತ್ಯವೊಂದನ್ನು ಗೆದ್ದ ಸಂತಸ, ಹೆಮ್ಮೆ ಒಂದೆಡೆಯಾದರೆ, ಈ ಕೊಹಿನೂರ್ ವಜ್ರವನ್ನು ಹೊಂದಿದ ಅಗಾಧ ಆನಂದ, ಅತೀವ ಅಭಿಮಾನ ಮತ್ತೊಂದೆಡೆಯಾಗಿರುತ್ತಿತ್ತು. ರಾಣಿ ಮಹಾರಾಣಿಯವರಿಗಂತೂ "ಕೋಹಿನೂರು ಕನ್ಯೆ" ಕನಸಿನಲ್ಲೂ ನೆನೆಸುವಂತೆ ಮಾಡಿದ್ದಳು. ಅಂತೆಯೇ ಇದನ್ನು "ಸ್ತ್ರೀಯರ ಸೌಭಾಗ್ಯ, ಪುರುಷರ ದೌರ್ಭಾಗ್ಯ" ಎಂದೂ ಕರೆಯಲಾಗುತ್ತದೆ. "ನಾಸಿಕದ ಮಾಟದಿಂ ಕ್ಲಿಯೋಪಾತ್ರಳಿಗ್ ದಾಸರಾದರು ಶೂರ ಸೀಸರ್ ಅಂಟನಿಗಳ್" ಎಂದು ಡಿ.ವಿ.ಜಿ. ಕ್ಲಿಯೋಪಾತ್ರಳ ಮೂಗಿನ ಸೌಂದರ್ಯವನ್ನು ಹೊಗಳುತ್ತ ಅದರಿಂದಾಗಿ ಮಹಾಯುದ್ಧಗಳೇ ಆದವೆಂಬುದನ್ನು ವರ್ಣಿಸಿದರೆ, ಈ ಕೊಹಿನೂರ್ ವಜ್ರದ ಅಪರಿಮಿತ ಥಳುಕು, ಬೆಳಕು, ರೂಪರಚನೆಗಳೂ ಅನೇಕ ರಾಜ ರಾಣಿಯರನ್ನು ಮರುಳುಗೊಳಿಸಿದ ಕೀರ್ತಿಗೆ ಅದರಷ್ಟೇ ರಾಜ್ಯ ಸಾಮ್ರಾಜ್ಯಗಳನ್ನು ಮುಳುಗೇಳಿಸಿದ ಅಪಕೀರ್ತಿಗೆ ಪಾತ್ರವಾಗುತ್ತದೆ.

ಜಗತ್ತಿನ ಅತ್ಯಂತ ಸುಂದರ ವಜ್ರವೆಂದು ಪರಿಗಣಿಸಲ್ಪಟ್ಟಿರುವ ಈ "ಕೊಹಿನೂರ್" ಶಬ್ದದ ಅರ್ಥವೆಂದರೆ 'ಬೆಳಕಿನ ಬೆಟ್ಟ' ಅಥವಾ 'ಪ್ರಕಾಶ ಪರ್ವತ'ವೆಂದಂತೆ. ಇಷ್ಟೊಂದು ಗಾತ್ರದ ಹಾಗೂ ಕಿಮ್ಮತ್ತಿನ ವಜ್ರ ಈ ಭೂಮಂಡಲದಲ್ಲಿ ಮತ್ತೊಂದಿಲ್ಲ. ಈ ಕಾರಣದಿಂದಾಗಿಯೇ ಇದರ ಒಡೆತನಕ್ಕಾಗಿ ನಡೆದ ರಾಜಕೀಯದಾಳ, ಹಾಗೂ, ವ್ಯೂಹಗಳು ತೀವ್ರ ಲಾಲಸೆಯ ನೆಲೆಯುಳ್ಳವುಗಳು. ಅಂತೆಯೇ ಈ ವಜ್ರವನ್ನು ವಶಪಡಿಸಿಕೊಳ್ಳಬೇಕೆಂಬ ಹಂಬಲ ಇಂತಹ ಹಲವಾರು ಹೋರಾಟಗಳಿಗೆ ಎಡೆಮಾಡಿಕೊಟ್ಟಿದೆ.

ವರ್ಣನಾತೀತವಾದ ಈ ವಜ್ರದ ಬಗೆಗೆ ಹಲವಾರು ಕಟ್ಟುಕತೆಗಳೂ ಹುಟ್ಟಿಕೊಂಡಿರುವುದು ಸಹಜವೇ. ಹಿಂದೂ ಐತಿಹ್ಯವೊಂದರ ಪ್ರಕಾರ ಇದನ್ನು ಕೃಷ್ಣ ಪರಮಾತ್ಮನು ಧರಿಸುತ್ತಿದ್ದನೆಂದೂ ಶಮಂತಕಮಣಿಯೆಂಬುದೇ ಈ ಕೋಹಿನೂರ್ ಎಂದೂ ಹೇಳಲಾಗುತ್ತದೆ. ಆದರೆ ಇದಕ್ಕೆ ತಕ್ಕ ಐತಿಹಾಸಿಕ ದಾಖಲೆ ಪುರಾವೆ ಏನೂ ಇಲ್ಲದ್ದರಿಂದ ಇದನ್ನು ಕೇವಲ - ದಂತ ಕಥೆಯೆನ್ನಬಹುದು; ಅಂತೆಯೇ ಮಹಾಭಾರತದ ಕರ್ಣನ ಆಭರಣಗಳಲ್ಲೊಂದಾಗಿತ್ತಿದು ಎಂಬುದೂ ಕೂಡ. ಇದರ ನಿಜ ಇತಿಹಾಸ ಸುರುವಾಗುವುದೇ ಬಾಬರನು ಕ್ರಿ.ಶ.1526ರಲ್ಲಿ ಮಾಳ್ವ ರಾಜ್ಯವನ್ನು ಗೆದ್ದುಕೊಂಡಾಗ ಇದನ್ನು ವಶಪಡಿಸಿಕೊಂಡನೆಂಬುದರಿಂದ. ಸುಲ್ತಾನ್ ಬಾಬರನು ಇದರ ಹೊಳಪು, ಸೌಂದರ್ಯ, ಗಾತ್ರ ಇತ್ಯಾದಿಗಳನ್ನು ನೋಡಿ (ಆಗ 800 ಕ್ಯಾರೆಟ್‌ಗಳು) ಇದರ ಬೆಲೆಯನ್ನು ಹೀಗೆ ನಿಷ್ಕರ್ಷಿಸಿದ: ಇಡೀ ಜಗತ್ತಿನ ಒಂದು ದಿನದ ಖರ್ಚುವೆಚ್ಚಗಳನ್ನು ಒಟ್ಟಾಕಿದರೆ ಇದರ ಸರಿಯಾದ ಕಿಮ್ಮತ್ತು ಆಗಬಹುದೆಂದ. ಈ ಬಗ್ಗೆ ಬಾಬರ್ ನಾಮಾದಲ್ಲಿಯೆ ವಿವರಿಸಲಾಗಿದೆ. ಬಾಬರ್‌ನಿಂದ ಮುಂದೆ ಬೇರೆ ಬೇರೆ ಮೊಘಲ್ ದೊರೆಗಳ ವಶಕ್ಕೊಳಪಟ್ಟ ಈ ಅನರ್ಘ್ಯ ವಜ್ರ 1739ರಲ್ಲಿ ಪರ್ಸಿಯಾದ ದೊರೆ ನಾದಿರ್ ಶಾ ಮೊಘಲ್ ಸಾಮ್ರಾಜ್ಯವನ್ನು ಗೆದ್ದುಕೊಂಡಾಗ ಅವನ ಪಾಲಾಯತು. ಇದಕ್ಕೂ ಒಂದು ಸಣ್ಣಕತೆಯೇ ಇದೆ. ಸಾಮ್ರಾಜ್ಯವನ್ನು ಗೆದ್ದಿದ್ದರೂ ನಾದಿರ್ ಶಾಗೆ ತಕ್ಷಣಕ್ಕೆ ಕೊಹಿನೂರ್ ದೊರಕಿರಲಿಲ್ಲ. ರಾಣಿವಾಸದ ದಾಸಿಯೊಬ್ಬಳು ಈ ವಜ್ರವನ್ನು ಹಿಂದಿನ ದೊರೆ ಮೊಹಮ್ಮದ್ ಶಾನು ಸದಾ ತನ್ನ ಪೇಟದಲ್ಲಿ ಮುಕುಟ ಮಣಿಯನ್ನಾಗಿಸಿಕೊಂಡಿದ್ದನೆಂಬ ಸಂಗತಿಯನ್ನು ಹೊರಗೆಡವಿದಳು. ಆಗ ನಾದಿರ್ ಶಾನು ಮೊಹಮ್ಮದ್ ಶಾನನ್ನು ಔತಣಕೂಟವೊಂದಕ್ಕೆ ಆಹ್ವಾನಿಸಿ ಭರ್ಜರಿ ಊಟದ ನಂತರ ಪ್ರೀತಿ ಸ್ನೇಹದ ಸಂಕೇತವಾಗಿ ತಾವು ಪರಸ್ಪರ ತಮ್ಮಪೇಟಗಳನ್ನು ವಿನಿಮಯ ಮಾಡಿಕೊಳ್ಳಲು ಸೂಚಿಸಿದಾಗ ಆತನ ದೂರ ಹಾಗೂ ದುರಾಲೋಚನೆಗೆ ಮಹಮ್ಮದ್ ಶಾ ಬಲಿಬಿದ್ದ. ಹೀಗೆ ತನ್ನ ವಶವಾದ ಈ ಕಣ್ಣುಕುಕ್ಕುವ ವಜ್ರವನ್ನು ನೋಡಿದ ಕ್ಷಣವೇ ನಾದಿರ್ ಶಾ "ಓಹ್ ಏ ಕೊಹ್ ಇ ನೂರ್ ಹೈ !" (ಮೇಲೆ ಹೇಳಿದಂತೆ 'ಬೆಳಕಿನ ಬೆಟ್ಟ') ಎಂದು ಉದ್ಗಾರವೆತ್ತಿದ. ಅಂದಿನಿಂದ ಈ ವಜ್ರಕ್ಕೆ ಅದೇ ಹೆಸರು ಖಾಯಂ ಆಗಿಬಿಟ್ಟಿತು.

ನಾದಿರ್ ಶಾನ್ ನಂತರ ಆತನ ವಂಶದ ಯಾರೂ ಅಷ್ಟೊಂದು ಪ್ರಬಲರಾಗಿ ಮುಂದೊರೆಯಲಿಲ್ಲ. ಕ್ರಿ.ಶ.1813ರಲ್ಲಿ ಈ ವಂಶಸ್ಥರು ಕಾಲಕಾಲಕ್ಕೆ ನಡೆದ ಕಾಳಗಗಳಲ್ಲಿ ಸೋತು, ಪಂಜಾಬ್ ದೊರೆ ಮಹಾರಾಜಾ ರಣಜಿತ್ ಸಿಂಗ್‌ರವರ ಆಶ್ರಯ ಬಯಸಿಬಂದಾಗ ಅನಾಯಾಸವಾಗೇ ಕೊಹಿನೂರ್ ಕೂಡ ಅವನ ಪಾಲಿಗೆ ಬಂತು. ಅತ್ಯಂತ ಸಂಭ್ರಮದಲ್ಲಿದ್ದ ದೊರೆ ರಣಜಿತ್‌ಸಿಂಗ್ ಈ ಅಪರೂಪದ ವಜ್ರದ ಬೆಲೆ ಎಷ್ಟಾಗಬಹುದೆಂದು ಶಾ ಶೂಜನನ್ನು ಕೇಳಲು ಶೂಜ "ಐದು ಜನ ಬಲಶಾಲಿಗಳನ್ನು ತೆಗೆದುಕೊಳ್ಳಿ. ಮೊದಲನೆಯವ ಒಂದು ಕಲ್ಲನ್ನು ಉತ್ತರಕ್ಕೆಸೆಯಲಿ, ಎರಡನೆಯ ಪಶ್ಚಿಮಕ್ಕೆ, ಮೂರನೆಯವ ದಕ್ಷಿಣಕ್ಕೆ, ನಾಲ್ಕನೆಯವ ಪೂರ್ವಕ್ಕೆ ಹಾಗೂ ಐದನೆಯವನು ಮೇಲೆ ಆಕಾಶದೆಡೆಗೆ ಎಸೆಯಲಿ. ಹೀಗೆ ಈ ಐವರೂ

ಎಸೆದ ಕಲ್ಲುಗಳ ಐದು ಮೇರೆಗಳನ್ನು ಬಂಗಾರದಿಂದ ತುಂಬಲಿ. ಆದಾಗ್ಯೂ ಕೂಡ ಈ ಒಟ್ಟಾರೆ ಬಂಗಾರ, ಬೆಳಕಿನ ಬೆಟ್ಟ ಕೊಹಿನೂರ್ ವಜ್ರದ ಬೆಲೆಗೆ ಸರಿಸಾಟಿಯಾಗದು" ಎಂದುತ್ತರಿಸಿದ್ದು ಈ ವಜ್ರವನ್ನು ಬೆಲೆಕಟ್ಟಲಾಗದ ಮಟ್ಟಕ್ಕೆ ಒಯ್ದಿದ್ದು ಸಹಜವೇ. ಮುಂದೆ ಈ ಪಂಜಾಬ್ ಮಹಾರಾಜನ ಕಾಲಾನಂತರ ದುಲೀಪ್ ಸಿಂಗ್‌ನೆಂಬ ಅಲ್ಪವಯಿ ರಾಜಕುಮಾರನು ಪಟ್ಟಕ್ಕೆ ಬಂದಾಗ, ಆಗಿನ ಬ್ರಿಟೀಷ್ ಭಾರತದ ಗವರ್ನರ್ ಜನರಲ್ ಲಾರ್ಡ್ ಡಾಲ್‌ಹೌಸಿಯು ಒತ್ತಾಯಪೂರ್ವಕವಾಗಿ ಈ ವಜ್ರವನ್ನು ಇಸಿದುಕೊಂಡು ಬ್ರಿಟನ್ ರಾಣಿ ವಿಕ್ಟೋರಿಯಾಳಿಗೆ ಕಾಣಿಕೆಯಾಗಿ ಅರ್ಪಿಸಿದನು. ಹೀಗೆ ಅದನ್ನು ಇಟ್ಟುಕೊಂಡ ಅರಸರೆಲ್ಲರಿಗೂ ಒಂದಿಲ್ಲ ಒಂದು ಥರದ ತೊಂದರೆಗಳು ಎದುರಾಗಿದ್ದರಿಂದ, ಈ ಬಗ್ಗೆ ಅರಿತಿದ್ದ ರಾಣಿ ವಿಕ್ಟೋರಿಯಾಳು ತನ್ನ ಮೃತ್ಯು ಪತ್ರದಲ್ಲಿ ಕೊಹಿನೂರ್ ಅನ್ನು ಕೇವಲ ರಾಣಿಯರು ಮಾತ್ರ ತಮ್ಮ ಕಿರೀಟದಲ್ಲಿ ಧರಿಸತಕ್ಕದ್ದೆಂದು ನಮೂದಿಸಿ ಸ್ಪಷ್ಟಪಡಿಸಿದಳು. ಈ ಕಾರಣಕ್ಕಾಗಿಯೇ ಇವತ್ತಿನವರೆಗೂ ವಿವಿಧ ರಾಣಿಯರಾದ ರಾಣಿ ಅಲೆಗ್ಸಾಂಡ್ರಿಯ, ರಾಣಿ ಮೇರಿ ಹಾಗೂ 1936-37ರಿಂದ ರಾಜಮಾತೆ ಎಲಿಜಾಬೆತ್‌ರವರ ಮುಕುಟಮಣಿಯಾಗಿ ಕೊಹಿನೂರ್ ಶೋಭಿಸುತ್ತಾ ಬಂದಿದೆ.

ಪ್ರಸ್ತುತ 105.60 ಕ್ಯಾರಟ್‌ಗಳ ಅಂಡಾಕಾರದ ಈ ಶುಭ್ರ ವಜ್ರವನ್ನು ತನಗೆ ಮರಳಿಸಬೇಕೆಂದು ಭಾರತ ಸರಕಾರ 1947ರಲ್ಲಿ ಹಾಗೂ 1953ರಲ್ಲಿ ಎರಡು ಸಾರೆ ಬ್ರಿಟೀಷ್ ಸರಕಾರವನ್ನು ವಿನಂತಿಸಿದ್ದರೂ ಇದಕ್ಕೆ ಯಾವುದೇ ಪ್ರತಿಫಲ ಸಿಕ್ಕಿಲ್ಲ. ಸದ್ಯ ಇದನ್ನು ರಾಷ್ಟ್ರೀಯ ಪರಂಪರೆಯ ಕುರುಹಾಗಿ ಇಂಗ್ಲೆಂಡ್ ತನ್ನ ಲಂಡನ್‌ನ ಬಕಿಂಗ್ ಹ್ಯಾಂ ಪ್ಯಾಲೇಸ್‌ನ ಜುವೆಲ್ ಹೌಸ್‌ನಲ್ಲಿ ಕಾಯ್ದಿಟ್ಟುಕೊಂಡಿದೆ. ಅಲ್ಲಿ ಸಾರ್ವಜನಿಕರಿಗಾಗಿ ಇದನ್ನು ಪ್ರದರ್ಶಿಸಲಾಗುತ್ತದೆ. ಒಟ್ಟಾರೆ ಎಲ್ಲಿಯೇ ಇರಲಿ ಹೇಗೆಯೇ ಇರಲಿ ಜಗತ್ತಿನ ಸರ್ವಶ್ರೇಷ್ಠವೆಂಬ ಹೆಗ್ಗಳಿಕೆಗೆ ಪಾತ್ರವಾದ, ಗರಿಷ್ಠ ಬೆಲೆಯ, ಬಹುಚರ್ಚಿತವಾದ ಈ ಅಮೂಲ್ಯ ವಜ್ರ ಭಾರತೀಯ ಮೂಲದ್ದೆಂಬುದು ನಮಗೆಲ್ಲ ನೋವು ಮಿಶ್ರಿತ ಹೆಮ್ಮೆಯ ವಿಷಯ.

# 'ಹಿಂದ್ ಕೇಸರಿ' ಚಂಬಾ ಮುತ್ನಾಳ

ಭಾರತೀಯ ಕ್ರೀಡೆಗಳಲ್ಲಿ 'ರಾಜ'ನೆನಿಸಿಕೊಂಡ ಕುಸ್ತಿ ಇಂದು ಬಹುತೇಕ ಯುವ ಪೀಳಿಗೆಗೆ ಒಂದು ಅಪರಿಚಿತ ಕ್ರೀಡೆ. ಇದು ನಿಜವಾಗಿಯೂ ಒಂದು ಖೇದಕರ ಸಂಗತಿಯಾಗಿದೆ. ಬ್ಯಾಟು, ಚೆಂಡು, ಗ್ಲೌಜುಗಳಲ್ಲಿ ತಮ್ಮ ಇಡೀ ಆಟದ ಸಮಯವನ್ನೇ (ಅಯುಷ್ಯವನ್ನೇ ?) ಕಳೆಯುವ ನಮ್ಮ ಯುವಕರು (ಕ್ಷಮಿಸಿ ಇತರೆಲ್ಲರೂ ?) ನಮ್ಮ ದೇಶೀಯ ಪದ್ಧತಿಯ ಆಟಗಳಾದ ಕುಸ್ತಿ, ಖೋ ಖೋ, ಕಬಡ್ಡಿ, ಅಟ್ಯಾಪಟ್ಯಾ (ಸರಮನಿ) ಮುಂತಾದವುಗಳ ಬಗ್ಗೆ ತೀರಾ ನಿರುತ್ಸಾಹ- ತೋರಿಸುತ್ತಿರುವದು ಒಂದು ದುರಂತವೆಂದೇ ಹೇಳಬೇಕು. ಇದು, ಈ ಆಟ ಶ್ರೇಷ್ಠ ಆ ಆಟ ಕಳಪೆ ಎಂದು ಆಟ-ಆಟಗಳ ನಡುವೆ ತಾರತಮ್ಯ ಮಾಡಲಿಕ್ಕಾಗಿ ಹೇಳಿದ ಮಾತು ಖಂಡಿತವಲ್ಲ: ಅದಾಗ್ಯೂ ನಮ್ಮ ದೇಶದಲ್ಲೇ ನಮ್ಮ ಕ್ರೀಡೆಗಳಿಗೆ ಈ ರೀತಿ ಅಮಾನ್ಯ ಮಾಡಿದರೆ ಅವುಗಳಿಗೆ ಇನ್ನೆಲ್ಲಿ ಸ್ಥಾನಮಾನ ದೊರಕಲು ಸಾಧ್ಯ ? ಇದೂ ಅಲ್ಲದೇ ನಮ್ಮ ದೇಶೀಯ ಕುಸ್ತಿಪಟುಗಳಿಗೆ ಹಾಗೂ ಇನ್ನಿತರ ಆಟಗಾರರಿಗೆ ಬಂದೊದಗಿರುವ ದುರ್ದೆಶೆಗೂ, ಕ್ರಿಕೆಟ್, ಟೆನ್ನಿಸ್ ಇತ್ಯಾದಿ ಆಟಗಳಿಗೆ ಹಾಗೂ ಆಟಗಾರರಿಗೆ ಸಿಗುತ್ತಿರುವ ಪ್ರೋತ್ಸಾಹಕ್ಕೂ ಹೋಲಿಸಿ ನೋಡಿದರೆ, ಎಂದೂ ನಾವು ಭಾರತೀಯ ಆಟಗಳನ್ನು ಅಡುವದಿರಲಿ ಆ ಬಗ್ಗೆ ಹೇಳುವದು, ಕೇಳುವುದು ಹಾಗೂ ನೋಡುವದು ಈ ಮೂರನ್ನೂ ಬಿಟ್ಟು

ಬಿಡಬೇಕೆನ್ನಿಸುತ್ತದೆ. ಈ ಹಿನ್ನೆಲೆಯಲ್ಲಿ ಭಾರತದ ಎಪ್ಪತ್ತರ ದಶಕದ ಮಹಾನ್ ಕುಸ್ತಿಪಟು ಕರ್ನಾಟಕ ಕೇಸರಿ, ಡಬಲ್ ಮಹಾರಾಷ್ಟ್ರ ಕೇಸರಿ, ಹಿಂದ್ ಕೇಸರಿ ಚಂಬಾ ಮುತ್ನಾಳ ಈಗೇನು ಮಾಡುತ್ತಿದ್ದಾರೆ ಎಂಬುದನ್ನು ಅವರ ಜೀವನೇತಿಹಾಸದಿಂದಲೇ ತಿಳಿದುಕೊಳ್ಳೋಣ.

ಬೆಳಗಾವಿಯಿಂದ 22.ಕಿ.ಮೀ. ಅಂತರದಲ್ಲಿ ಧಾರವಾಡದ ಕಡೆಗೆ ರಾಷ್ಟ್ರೀಯ ಹೆದ್ದಾರಿ ನಾಲ್ಕರ ಮೇಲೆ ಇರುವ ಪುಟ್ಟ ಹಳ್ಳಿ ಮುತ್ನಾಳ. ಈಗಿನ ಇದರ ಜನಸಂಖ್ಯೆ ಅಂದಾಜು ಕೇವಲ 3500. ವೀರಶೈವ ಪಂಚಪೀಠಾಧೀಶರಲ್ಲೊಬ್ಬರಾಗಿ ಹೋದ ಕೇದಾರ ಜಗದ್ಗುರುಗಳವರ ಶಾಖಾಮಠ ಇರುವ ಹಾಗೂ ಖ್ಯಾತ ಜಾನಪದ ತಜ್ಞ ಡಾ:ಎಂ.ಎಸ್.ಲಠ್ಠೆ ಅವರ ಊರು ಇಲ್ಲಿ ಸನ್ 1938ರಲ್ಲಿ ಈ ಹಿಂದ್ ಕೇಸರಿ ಚಂಬಾ ಮುತ್ನಾಳರ ಜನನ. ಪೂರ್ಣ ಹೆಸರು ಚಂಬಣ್ಣ ರಾಮನಗೌಡ ಹುಬ್ಬಳ್ಳಿ, ತಂದೆ ರಾಮನಗೌಡ ಆ ಭಾಗದಲ್ಲೆಲ್ಲ ಪ್ರಸಿದ್ಧ ಪೈಲ್ವಾನರು. ತಮ್ಮ ಮಗನೂ ಶ್ರೇಷ್ಠ ಕುಸ್ತಿಪಟು ಆಗಬೇಕೆಂಬ ಹಂಬಲದವರು. ಚಿಕ್ಕವನಿದ್ದಾಗಲೇ ಚಂಬಣ್ಣನಿಗೆ ಕುಸ್ತಿಯಲ್ಲಿ ಎಲ್ಲಿಲ್ಲದ ಆಸಕ್ತಿ. ಇದರಿಂದಾಗಿ ಶಾಲೆಗೆ ಹೆಚ್ಚು ಹೋಗಲೇಯಿಲ್ಲ. ಅರವತ್ತು ದಾಟಿದ್ದರೂ ಇಂದಿಗೂ ಒಂದು ಮುಗ್ದತೆಯ ಛಾಯೆ ಅವರ ಮುಖದ ಮೇಲೆ ಆಡುತ್ತಿರುವದಕ್ಕೆ ಇದೂ ಒಂದು ಕಾರಣವಿರಬಹುದೆನ್ನಿಸುತ್ತದೆ. ಹದಿನೆಂಟನೆ ವಯಸ್ಸಿನವರೆಗೆ ಊರ ಸುತ್ತಮುತ್ತಲ ಹಳ್ಳಿಗಳ ಬಯಲು, ಕಣ, ಕೆಲ ಥೇಟರ್‌ಗಳಲ್ಲಿ ಆಡಿದ ಕುಸ್ತಿಗಳಲ್ಲಿ ಪರಸೀ ಪೈಕಿ ಹಿಡಿದು "ಖಡೆ" (ಬಹುಮಾನ) ಗಿಟ್ಟಿಸಿದ್ದರಿಂದ ಅವರ ತಂದೆಗೆ, ಮಗನಿಗೆ ಇನ್ನು ಮುತ್ನಾಳ ಗರಡಿಮನೆಯ ತಾಲೀಮು ಸಾಕಾಗುವುದಿಲ್ಲ - ಎಂಬ ಮನವರಿಕೆ. ಅಂದು ಉತ್ತರ ಕರ್ನಾಟಕದಲ್ಲೆಲ್ಲ ಕೊಲ್ಲಾಪುರ, ಸಾಂಗ್ಲಿ, ಕರ್ಹಾಡಗಳಿಗೆ ಪ್ರಸಿದ್ಧ ಪೈಲ್ವಾನರನ್ನಾಗಿ ರೂಪಿಸಲು ತಮ್ಮ ಮಕ್ಕಳನ್ನು ತಾಲೀಮಿಗೆ ಕಳಿಸುವುದು ಸಾಹಿಸಿಗ ತಂದೆಯರ ಹವ್ಯಾಸ. ಅದೇ ರೀತಿ ರಾಮನಗೌಡರವರಿಗೆ ಮಗ ಚಂಬಣ್ಣನೂ ಪ್ರಖ್ಯಾತ ಪೈಲ್ವಾನನಾಗಬೇಕೆಂಬ ಹಿರಿದಾಶೆ. ಆದ್ದರಿಂದಲೇ ಕೊಲ್ಲಾಪುರದ ಮೋತಿಬಾಗ್ ತಾಲೀಮ್ (ಗರಡೀಮನೆ)ಗೆ ಚಂಬಾನನ್ನು ದಾಖಲಿಸಿ ಬಂದರು. ಈ ವ್ಯಾಯಮ ಶಾಲೆಯನ್ನು ಕೊಲ್ಲಾಪುರದ ಶಾಹು ಮಹಾರಾಜರು ಕಟ್ಟಿಸಿದ್ದು, ಅನೇಕ ಸುಪ್ರಸಿದ್ಧ ಪೈಲ್ವಾನರುಗಳನ್ನು ನೀಡಿದ ಖ್ಯಾತಿ ಇದರದಾಗಿದೆ. ಇಲ್ಲಿಂದ ಹಲವಾರು 'ಹಿಂದ್ ಕೇಸರಿ' (ದೇಶಕ್ಕೆನೆ ಪ್ರಥಮಸ್ಥಾನ ಪಡೆವ ಕುಸ್ತಿಪಟುಗೆ ನೀಡುವ ಬಿರುದು), ರಾಜ್ಯಗಳ ಕೇಸರಿಗಳೂ ಆಗಿ (ಆಡಿ) ಹೋಗಿದ್ದಾರೆ. ಇಲ್ಲಿ ಚಂಬಾಗೂ ಉಸ್ತಾದ್ (ಗುರು) ಆಗಿ ದೊರೆತವರು ಮಹಾರಾಷ್ಟ್ರದಲ್ಲೆಲ್ಲ ಖ್ಯಾತವೆತ್ತ ಪೈಲ್ವಾನ್ ಬಾಬು ಬೀರೆ ಅವರು. ಜೊತೆಯಲ್ಲಿ ಆಡಲು ಆ ಹೊತ್ತಿಗೆ ಆಗಲೇ ಹಿಂದ್ ಕೇಸರಿ ಆಗಿದ್ದ ಗಣಪತ್ ಪೈಲ್ವಾನ್ ಅಂದಾಳಕರ್ ಅವರು.

ಈ ಗರಡೀ ಮನೆಯ ತಾಲೀಮನಲ್ಲಿ ಬೆಳಿಗ್ಗೆ 4.30ಕ್ಕೆ ಎದ್ದು ಪ್ರಾಥರ್ವಿಧಿ ಮುಗಿಸಿ ಐದು ಗಂಟೆಗೆ ತಾಲೀಮು ಪ್ರಾರಂಭಿಸಿದರೆ ಅದು ಮುಗಿಯುವದು 8.30ಕ್ಕೇನೆ. ಕಾಲಿಗೆ ಒಂದು ಸಾವಿರ ಸಾಮು (ಉಠಾಬಸಿ) ಕೈಗೆ ಎಂಟುನೂರು ಸಾಮು ಮಾಡಿ ನಂತರ 3-4 ಇತರ ಜೋಡಿ ಪೈಲ್ವಾನರೊಡನೆ ಸೆಣಸಾಟ. ಮೊದಲು ಸಮಬಲದವರೊಡನೆ ಹಾಗೆಯೇ ಕೈಕಾಲು ಸೋಲುತ್ತ ಬಂದಂತೆ ತುಸು ಕಡಿಮೆ ಬಲದ ಜೋಡಿ ಜೊತೆ. ಇದಕ್ಕೂ ಮೊದಲು ಮೂರುಮೈಲು ಓಟ ಮಾಡುವುದು, ಲೋಡು ತಿರುಗಿಸುವುದು, ಗರಡೀ ಮನೆಯ ನೆಲ ಕೊಚ್ಚುವುದು ಇತ್ಯಾದಿ ಅಂದರೆ ದಣಿವು ಆಗದಿರಲಿ ಎಂದು ಹಾಗೂ ಕೈಕಾಲು ಹೆಚ್ಚೆಚ್ಚು ಗಟ್ಟಿಯಾಗಲಿ ಎಂದು. ವ್ಯಾಯಾಮ ಮುಗಿಸಿಕೊಂಡು ಬಂದೊಡನೆ ಥಂಡಾಯಿ (ಗಸಗಸೆ ಹಾಗೂ ಬಾದಾಮಿಗಳನ್ನು ನೆನೆಹಾಕಿ ಸಕ್ಕರೆಯೊಂದಿಗೆ ಬೆರೆಸಿ ಹಾಲಿನೊಂದಿಗೆ ತಿರುವಿದ ಒಂದು ರಸ ಕುಡಿದು ನಂತರ ಸ್ನಾನ ಮುಗಿಸಿ ಹತ್ತು ಗಂಟೆಗೆ ಊಟ. ಊಟದಲ್ಲಿ ಚಂಬಾ

ಶಾಖಾಹಾರಿ. ಕೊನೆಯ ಒಂದೆರಡು ವರ್ಷಗಳನ್ನು ಬಿಟ್ಟರೆ ಆತ ಎಂದೂ ಮಾಂಸಹಾರ ಮುಟ್ಟಿದ್ದಿಲ್ಲ., ಚಪಾತಿ, ಕಾಯಿಪಲ್ಲೆ, ಹಾಲು, ಹಣ್ಣು, ಬೆಣ್ಣೆ ತುಪ್ಪ, ಸಜ್ಜಕ ಪ್ರಮುಖ ಅಂಗಗಳು.

ಈ ಕುಸ್ತಿ ಪರಂಪರೆಯ ಆಗಿನ ಮಹತ್ವದ ಅಂಶವೆಂದರೆ ಇವರಿಗೆಲ್ಲ ತರಬೇತಿ ನೀಡುತ್ತಿದ್ದ ಯಾವ ಉಸ್ತಾದರೂ ಎಂದೂ ಯಾವದೇ ಫೀ ಶುಲ್ಕ ವಗ್ಯೆರೆ ಚಾರ್ಜ್ ಮಾಡಿದ್ದಿಲ್ಲ. ಇದು ನಮ್ಮ ಭಾರತೀಯ ಕ್ರೀಡಾ ಸಂಸ್ಕೃತಿಯ ಹೆಮ್ಮೆಯ ಹಾಗೂ ಹರ್ಷದ ಒಂದು ಝಲಕ್ ಅಲ್ಲವೆ ? ಈ ಮೋತಿಬಾಗ ತಾಲೀಮಿನಲ್ಲಿ ಇಪ್ಪತ್ತು ವರ್ಷ ಸಾಧನೆ ಮಾಡಿದ ಚಂಬಾ 1975ರಲ್ಲಿ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಕುಸ್ತಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು 'ಹಿಂದ್ ಕೇಸರಿ' ಆದರು.

ಅಖಾಡದಲ್ಲಿ ಸೆಣಸಾಡಿದ ಪ್ರಸಿದ್ಧ ಜೋಡಿದಾರರು: ದೆಹಲಿಯ ಕರ್ತಾರಸಿಂಗ್, ಆನಂದರಾಮ್, ಸತ್ಪಾಲ ದೀನನಾಥ, ಮಹಾರಾಷ್ಟ್ರದ ಪರಶುರಾಮ ಸಾಂವಗಾಂವ, ದೆಹಲಿಯ ಚಾಂದಗಿರಾಮ್, ಬೆಂಗಳೂರಿನ ಗೋಗಾ, ಮಹಾರಾಷ್ಟ್ರದ ಹರಿಶ್ಚಂದ್ರ ಬಿರಾಜದಾರ, ರಸೂಲ್ ಹನಿಫ್, ಸಂಭಾಜಿ ಪವಾರ ದಾವಣಗೇರಿಯ ನಾಗಪ್ಪ. ಇದರಲ್ಲಿ ಕರ್ತಾರಸಿಂಗ್ ಹಾಗೂ ಚಾಂದಗೀರಾಮ್‌ರವರು ಅಂತರಾಷ್ಟ್ರೀಯ ಮಟ್ಟದಲ್ಲೂ ಸ್ಥಾನಗಳನ್ನು ದೊರಕಿಸಿಕೊಂಡವರು. ಚಂಬಾಪೈಲ್ವಾನನೂ ಬ್ಯಾಂಕಾಕ್‌ನಲ್ಲಿ ನಡೆದ ಅಂತರಾಷ್ಟ್ರೀಯ ಕುಸ್ತಿ ಸ್ಪರ್ಧೆಯಲ್ಲಿ ಸೆಮಿಫೈನಲ್‌ವರೆಗೆ ಬಂದು ಗಾದಿಯ ಮೇಲಿನ ಕುಸ್ತಿ ರೂಢಿ ಇಲ್ಲದ್ದರಿಂದ (ಇವರು ಮಣ್ಣಿನ ಕಣದಲ್ಲಿ ಆಡುತ್ತಿದ್ದವರು) ಜಪಾನಿನ ಪೈಲ್ವಾನನ ಕೈಯಲ್ಲಿ ಸೋಲು ಕಾಣಬೇಕಾಯಿತು. ಭಾರತದ ಎಲ್ಲ ಪ್ರಸಿದ್ಧ ಆಖಾಡಗಳಲ್ಲಿ ಕುಸ್ತಿ ಸೆಣಸಿದ ಕೀರ್ತಿ ಇವರದಾಗಿದೆ. ದೆಹಲಿ, ಮುಂಬೈ, ಲಖನೌ, ಪುಣೆ, ಸತಾರಾ, ಜಳಗಾಂವ, ಸಾಂಗ್ಲಿ, ಬೆಳಗಾವಿ, ಬಿಜಾಪೂರ, ಬೆಂಗಳೂರು, ಮೈಸೂರ, ಹುಬ್ಬಳ್ಳಿ, ಲಕ್ಷ್ಮೇಶ್ವರ, ಎಲ್ಲೆಡೆ ಜಯಭೇರಿ ಬಾರಿಸಿದ ಅಪ್ರತಿಮ ಕುಸ್ತಿ ಪಟು ಇವರು.

1975ರಲ್ಲಿ 'ಹಿಂದ್ ಕೇಸರಿ' ಆದಾಗ ಆಗಿನ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ್ ಅರಸುರವರ ಕೃಪೆಯಿಂದ ಮಲಪ್ರಭಾ ನದಿ ದಂಡೆಯಲ್ಲಿ 18 ಎಕರೆ ಜಮೀನು ಸಿಕ್ಕಿದ್ದರಿಂದ ಇಂದು ಇಳಿವಯಸ್ಸಿನಲ್ಲೂ ಈ ಪೈಲ್ವಾನನಿಗೆ ಅಷ್ಟೊಂದು ಆರ್ಥಿಕ ತೊಂದರೆ ಇಲ್ಲವಾದರೂ ಹೇಳಿಕೊಳ್ಳುವಂತಹ ಸ್ಥಿತಿವಂತಿಕೆಯಿಲ್ಲ. ಮಹಾರಾಷ್ಟ್ರದಲ್ಲಿ ಈಗಲೂ 'ಹಿಂದ್ ಕೇಸರಿ' ಬಿರುದು ಪಡೆದವರಿಗೆಲ್ಲ ಮಾಸಿಕ ಎರಡು ಸಾವಿರ ರೂಪಾಯಿಗಳ ಪಿಂಚಣಿ ಇದೆ. ಇದು ಕರ್ನಾಟಕದಲ್ಲಿಲ್ಲ. ಚಂಬಾ ಅವರಿಗೆ ಒಂದು ಗಂಡು, ಮೂವರು ಹೆಣ್ಣುಮಕ್ಕಳ ಸಂಸಾರವಿದೆ. ಪಿತ್ರಾರ್ಜಿತ ಅಸ್ತಿ ಕೇವಲ ನಾಲ್ಕು ಎಕರೆ. ಕಳೆದೊಂದು ವರ್ಷದಿಂದ ಕಾಲಿಗೆ ಗಾಯವಾಗಿ ಈಗಲೂ ನೋವನ್ನನುಭವಿಸುತ್ತಿರುವ, ದಿನಾಲೂ ಹೊಲಗೆಲಸ ನೋಡಿಕೊಳ್ಳಬೇಕಾಗಿರುವ ಪರಿಸ್ಥಿತಿಯಿದೆ, ಈ ಮಹಾನ್ ಕ್ರೀಡಾಪಟುವಿಗೆ. (ಅನೇಕರು ತಿಳಿದಿರುವಂತೆ ಕುಸ್ತಿಯಿಂದಾಗಿ ಕೀಲು, ಸಂದು ನೋವಾಗಲಿ, ಎದೆನೋವಾಗಲಿ ಎಳ್ಳಷ್ಟು ಇಲ್ಲ) ಇಡೀ ಕರ್ನಾಟಕದಲ್ಲಿ ಈಗಿರುವ 'ಹಿಂದ್ ಕೇಸರಿ' ಇವರೊಬ್ಬರೆ. ಕಾರಣ ಇವರಿಗೆ ಮಾಸಿಕ ಗೌರವಧನ ನೀಡಿ ಹಾಗೂ ಮುತ್ನಾಳದಲ್ಲಿ ದುಸ್ಥಿತಿಯಲ್ಲಿರುವ ಗರಡೀಮನೆ ಜೀರ್ಣೋದ್ಧಾರಮಾಡಿ ಇವರ ಹೆಸರಿಟ್ಟು ಅಥವಾ ಬೆಳಗಾವಿಯಲ್ಲಿ ಒಂದು ಹೊಸ ವ್ಯಾಯಾಮ ಶಾಲೆ ಕಟ್ಟಿಸಿ ಅದಕ್ಕೆ 'ಚಂಬಾ ತಾಲೀಮ್' ಎಂದು ಹೆಸರಿಸಿ ಸ್ಮಾರಕಮಾಡಿ, ಕುಸ್ತಿಕ್ರೀಡೆ ಬೆಳೆಯುವಲ್ಲಿ ಪ್ರೋತ್ಸಾಹಿಸುವುದು ಉಚಿತವಲ್ಲವೆ ?

(ಈ ಲೇಖನ ಪ್ರಜಾವಾಣಿ ಸಾಪ್ತಾಹಿಕ ಪುರವಣಿಯಲ್ಲಿ ಪ್ರಕಟವಾದ ಒಂದೂವರೆ ವರ್ಷದ ನಂತರ 2001ರಲ್ಲಿ ಪೈಲ್ವಾನ್ ಚಂಬಾಮುತ್ನಾಳ ನಿಧನರಾದರು)

**(ಮಹಾರಾಷ್ಟ್ರದ ಇಂದಿನ ಮುಖ್ಯಮಂತ್ರಿ ಶ್ರೀ. ಸುಶೀಲ್‌ಕುಮಾರ್ ಶಿಂಧೆ, ಅಂದು ಕ್ರೀಡಾ ಹಾಗೂ ಯುವಜಸೇವಾ**

**ರಾಜ್ಯ ಮಂತ್ರಿಯಾಗಿದ್ದಾಗ ಶ್ರೀ. ಚಂಬಾ ಮುತ್ನಾಳರವರನ್ನು ಅಭಿನಂದಿಸಿ ಬರೆದ ಪತ್ರ)**

MINISTER of State for

Sporta and Youth Welfare

Government of Maharashtra

Sachvalaya,, Bombay-100 032.

Dated: **24th March 1975.**

The Government of Maharashtra note with Eroat pleasure that you have gained the title of Hind Kesari in 14th All-India Wrestling competition (Indian Style ) and heartily congratulate you on securing this unique honour. It is hoped that Indlan Style of wrestling will secure a prominent place in the international wreatling field by offorta of great sons of this soll like you.

I once again congratulate you and the All India Wreatlors Association on this occasion.

(Sushilkumar Shinde)

Shri Chamba Mutnal,
Hind. Kesari,
C/o Chief Secretary to the
Karnatak Government,
Bangalore.

# ವಿಶ್ವದ ಐದು ಶ್ರೇಷ್ಠ ವನ್ಯಜೀವಿ ವಿಹಾರಧಾಮಗಳಲ್ಲೊಂದಾದ ಕಬಿನಿ ನದಿ ಅರಣ್ಯಧಾಮ

ಬ್ರಿಟಿಷ್ ಪತ್ರಿಕೆ "ಟ್ಯಾಟ್ಲರ್ ಟ್ರಾವಲರ್ ಗೈಡ್"ನಿಂದ ಜಗತ್ತಿನ ಐದು ಶ್ರೇಷ್ಠ ವನ್ಯಜೀವಿ ವಿಹಾರಧಾಮಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟ, 1997-98ರಲ್ಲಿ ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ ಪರಿಸರ ಪ್ರಜ್ಞೆಯ ಉತ್ಕೃಷ್ಟತಾ ಪ್ರಶಸ್ತಿ ಪಡೆದ, ಏಸಿಯಾದಲ್ಲಿಯೇ ಅತಿಹೆಚ್ಚು ಆನೆಗಳ ಹಿಂಡನ್ನು ಹೊಂದಿದ ಒಂದು ಅಪರೂಪದ ವಿಹಾರಧಾಮ ಕಬಿನಿ ಜಂಗಲ್ ಲಾಡ್ಜಸ್ ಹಾಗೂ ರಿಸಾರ್ಟ್ಸ್.

"ನಾಗರಹೊಳೆ ರಾಷ್ಟ್ರೀಯ ಉದ್ಯಾನ"ವೆಂಬ ಹೆಸರನ್ನು ಹೊತ್ತ ಈ ಕಬಿನಿ ನದಿ ವಿಹಾರಧಾಮ ಇರುವ ಜಾಗೆಗೆ "ರಾಜೀವ ಗಾಂಧೀ ರಾಷ್ಟ್ರೀಯ ಉದ್ಯಾನ"ವೆಂದು ನಾಮಕರಣ ಮಾಡಲಾಗಿದೆ. ಮೈಸೂರಿನಿಂದ ಕೇರಳದ ಮಾನಂದವಾಡಿಗೆ ಹೋಗುವ ರಾಜ್ಯ ಹೆದ್ದಾರಿಯ ತುಸು ಒಳಗಡೆ ಒಟ್ಟು ಎಂಭತ್ತು ಕಿ.ಮೀ. ಅಂತರ ದೂರದಲ್ಲಿರುವ ಈ ಕಬಿನಿ ನದಿ 'ವಿಹಾರಕೇಂದ್ರ' ಹೆಸರೇ ಸೂಚಿಸುವಂತೆ ಕಬಿನಿ ನದಿಯ ದಂಡೆಯ ಮೇಲಿದೆ. ಹೆಗ್ಗಡದೇವನಕೋಟೆ ತಾಲೂಕಿನ ಕಾರಾಪುರ ಗ್ರಾಮದಲ್ಲಿರುವ ಈ ವಿಹಾರಧಾಮಕ್ಕೆ ಅಂಚೆ ಕಛೇರಿ ನಿಸ್ಸಾನಾ ಬೆಳ್ಳೂರು.

**ಇಂಪಾದ ಕಾವ್ಯ**: ಕಬಿನಿ = ಕಬ್ಬ +ಇನಿ. ಕಬಿನಿ ನದಿಗೆ ಕಟ್ಟಲಾದ ಜಲಾಶಯದ ಹಿನ್ನೀರಿನ ದಂಡೆಯ ಮೇಲಿನ ಈ ಪ್ರವಾಸಿ ಕೇಂದ್ರಕ್ಕೆ ಒಮ್ಮೆ ನೀವು ಭೇಟಿ ನೀಡಿದರೆ ಸಾಕು ಅಲ್ಲಿ ಚಿಲಿಪಿಲಿಗುಟ್ಟುವ ಅಸಂಖ್ಯಾತ ಪಕ್ಷಿ ಸಂಕುಲದ ನಿನಾದ ನಿಮ್ಮನ್ನು ಅಪೂರ್ವ ಸಂಗೀತಲೋಕವೊಂದಕ್ಕೆ ಕರೆದೊಯ್ದು ಒಂದು ಅನನ್ಯ ಅನುಭವವನ್ನು ನೀಡುತ್ತದೆ. ಒಂದು ಇಂಪಾದ ಕಾವ್ಯಲೋಕ ತಂತಾನೆ ತೆರೆದುಕೊಳ್ಳುತ್ತದೆ.

**ಪ್ರವಾಸಿ ಸೌಲಭ್ಯಗಳು:** ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಡುವ ಜಂಗಲ್ ಲಾಡ್ಜಸ್ ಹಾಗೂ ರಿಸಾರ್ಟ್ಸ್ ಲಿಮಿಟೆಡ್‌ನ ಅಧೀನಕ್ಕೊಳಪಡುವ ಕಬಿನಿ ನದಿ ವಿಹಾರ ಕೇಂದ್ರದ ಮೇಲುಸ್ತುವಾರಿಗಾಗಿ ಮುಖ್ಯ ಕಛೇರಿ ಬೆಂಗಳೂರಿನ ಮಹಾತ್ಮಾಗಾಂಧಿ ರಸ್ತೆಯಲ್ಲಿರುವ ಶೃಂಗಾರ ಶಾಪಿಂಗ್ ಕಾಂಪ್ಲೆಕ್ಸನ ಎರಡನೇ ಮಹಡಿಯಲ್ಲಿದೆ: ಮುಂಗಡ ಕಾಯ್ದಿರಿಸುವಿಕೆಗಾಗಿ ಅಲ್ಲಿಂದಲೇ ಮೀಸಲಾತಿ ಚೀಟಿ ತರಬೇಕಾಗುತ್ತದೆ. ಅಲ್ಲಿಯ ಫೋನ್ ನಂ.25597021 ರಿಂದ 25 ಫ್ಯಾಕ್ಸ್ : 91-80-5586163. ಇಂಟರ್‌ನೆಟ್ ಹಾಗೂ ಇಮೇಲ್ ಸೌಲಭ್ಯ ಕೂಡ ಇಲ್ಲಿದೆ. ಇದೂ ಅಲ್ಲದೆ ಬೆಂಗಳೂರಿನ ಪ್ರಮುಖ ಹತ್ತು ಟ್ರಾವಲ್ ಎಂಜೆಂಟರ್‌ಗಳಲ್ಲಿ ಮುಂಗಡ ಮೀಸಲಾತಿ ಮಾಡಲು ಅನುಕೂಲ ಕಲ್ಪಿಸಲಾಗಿದೆ. ವರ್ಷವಿಡೀ ನೋಡಬಹುದಾದ ಪ್ರೇಕ್ಷಣೀಯ ಸ್ಥಳ ಇದಾಗಿದೆಯಾದ್ದರಿಂದ ನೀವು ಯಾವಾಗಬೇಕಾದರೂ ಮುಂಗಡ ಬುಕಿಂಗ್ ಮಾಡಬಹುದಾಗಿದೆ. ಈಗ ಅಂದಾಜು 644 ಚದುರ ಕಿಮೀ ವ್ಯಾಪ್ತಿಯಲ್ಲಿರುವ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ಪ್ರಾರಂಭದಲ್ಲಿ ಅಂದರೆ 1955ರಲ್ಲಿ ಕೇವಲ 285ಕಿಮೀ ಇತ್ತು. ಈಗ 1983ರಿಂದ ರಾಷ್ಟ್ರೀಯ ಉದ್ಯಾನವನ

(ನ್ಯಾಶನಲ್ ಪಾರ್ಕ್) ಸ್ಥಾನಮಾನಕ್ಕೇರಿದೆ. ಇಲ್ಲಿ ಕಬಿನಿ ನದಿದಂಡೆ ಮೇಲಿರುವ ಜಂಗಲ್ ಲಾಡ್ಸ್ ಹಾಗೂ ರಿಸಾರ್ಟ್‌ನ ಕ್ಷೇತ್ರವ್ಯಾಪ್ತಿ ಮಾತ್ರ ಎಂದರೆ 55 ಎಕರೆಗಳು. ಮೈಸೂರು ಬೆಂಗಳೂರಿನಿಂದ ಇಲ್ಲಿಗೆ ಕೆ.ಎಸ್.ಆರ್.ಟಿ.ಸಿ.ಯ ಸುವಿಹಾರಿ ಬಸ್‌ಗಳ ಸಂಪರ್ಕವೂ ಇದೆ.

ವಿಹಾರಕ್ಕಾಗಿ ಬರುವ ಪ್ರವಾಸಿಗರಿಗಾಗಿ ಕೊಠಡಿಗಳು, ಕಾಟೇಜ್‌ಗಳು, ಟೆಂಟ್ ರೂಂಗಳು ಲಭ್ಯವಿವೆ. ಈ ಎಲ್ಲವಕ್ಕೂ ಹಿಂದೆ ಅಥವಾ ಎದುರು ನದಿ ನೀರಿನ ಹಾಗೂ ರಂಗುರಂಗಿನ ಗಿಡಮರ ಹೂಬಳ್ಳಿಗಳ ಹಸಿರು ಹುಲ್ಲುಹಾಸಿನ ಸುಂದರ ಪರಿಸರದ ಸೌಲಭ್ಯವಿದೆ. ಹಿಂದಿನ ಮೈಸೂರು ಮಹಾರಾಜರ ಸಿಕಾರಿ ಸ್ಥಳವಾಗಿದ್ದುದನ್ನು ನೆನಪಿಸುವ ಅಂದವಾದ "ಮಹಾರಾಜ ಬಂಗ್ಲೆ"ಯಲ್ಲಿ ಸದ್ಯ ಈ ವಿಹಾರ ಕೇಂದ್ರದ ಸ್ಥಳೀಯ ಕಚೇರಿ ಇದೆ. ಅದರ ಬಲಕ್ಕೆ 'ವೈಸ್‌ರಾಯ್ ಬಂಗ್ಲೆ, ಇಲ್ಲಿಯೇ ಬಾರ್ ಹಾಗೂ ಸಿನಿಮಾಹಾಲ್‌ಗಳೂ ಇವೆ. ಎದುರಿಗೆ ಹಾಗೂ ಅಕ್ಕಪಕ್ಕದಲ್ಲಿ ಕೊಠಡಿಗಳು, ಟೆಂಟ್‌ಗಳು ಹಾಗೂ ಕಾಟೇಜ್‌ಗಳು, ಬಲಕ್ಕೆ ತುಸು ದೂರದಲ್ಲಿ ನದಿ ದಂಡೆ ಮೇಲೆಯೇ ಗೋಲಾಕಾರದ ಊಟದ ಮನೆ 'ಗೋಲ್ ಘರ್' ಇದೆ.

**ವೇಳಾಪಟ್ಟಿ:** ನೀವು ನಿಮ್ಮ ವಾಸ್ತವ್ಯದ ವಿವರಗಳನ್ನು ಸ್ವಾಗತಕಾರನ ರಿಜಿಸ್ಟರ್‌ನಲ್ಲಿ ದಾಖಲಿಸುತ್ತಲೇ ನಿಮ್ಮ ಕೈಯಲ್ಲೊಂದು ಕಿರುಪುಸ್ತಕ ನೀಡಲಾಗುತ್ತದೆ. ಹಾಗೆಯೇ ಕಣ್ಣಾಡಿಸಿದರೆ ಕುತೂಹಲದ ವೇಳಾಪತ್ರಿಕೆ ನಿಮ್ಮ ಗಮನ ಸೆಳೆಯುತ್ತದೆ.

ಮಧ್ಯಾಹ್ನ 12ಕ್ಕೆ ನೀವು ಬಂದಿರೆಂದರೆ

1.30ರಿಂದಾ 3.00 ಊಟ

4.00ಟೆಂಟ್‌ಗೆ - ಟೀ, ಕಾಫಿ ಬಿಸ್ಕತ್

4.30ರಿಂದ ಸಂಜೆ 7.30ರವರೆಗೆ -ಜೀಪ್ - ಬೋಟ್ ಸಫಾರಿ.

ರಾತ್ರಿ 8.00ರಿಂದ 8.50- ವನ್ಯ ಜೀವಿಗಳಿಗೆ ಸಂಬಂಧಿಸಿದ ಸಿನೆಮಾ.

9.00ಕ್ಕೆ ರಾತ್ರಿ ಊಟ.

ಮರುದಿನ ಬೆಳಿಗ್ಗೆ 6.30ಕ್ಕೆ ಕೊಠಡಿಗೆ ಟೀ, ಕಾಫಿ ಸೇವೆ.

7.00ಕ್ಕೆ ಜೀಪ್ - ನಾವೆ, ಆನೆ ಮೇಲೆ ಸಫಾರಿ.

9.45ಕ್ಕೆ ಬೆಳಗಿನ ತಿಂಡಿ.

ಇದರ ಜೊತೆಗೇನೆ ನೀವು ಮಾಡಬೇಕಾದ ಹಾಗೂ ಮಾಡಬಾರದ ಕೆಲ ವಿವರಗಳನ್ನೂ ನೀಡಲಾಗುತ್ತದೆ. ಸಫಾರಿಗೆ ಹೊರಟ ಜೀಪ್, ಬೋಟ್, ನಾವೆ ಅಥವಾ ಆನೆಯ ಮೇಲಿಂದ ಯಾರೂ ಹೊರಗಿಳಿಯಕೂಡದು, ಜೋರಾಗಿ ಮಾತನಾಡಕೂಡದು, ಪಶುಪಕ್ಷಿಗಳಿಗೆ ಆಹಾರ ಇತ್ಯಾದಿ ಏನನ್ನೂ ಕೊಡಕೂಡದು, ಹಿಂಸೆಯಂತೂ ನಿಷೇಧ-ಇವು ಪ್ರಮುಖ ಅಂಶಗಳು. ನೀಡಿದ ವೇಳಾಪಟ್ಟಿಗೆ ಬದ್ಧರಾಗಿರಬೇಕಾದುದು ಎಲ್ಲ ಪ್ರವಾಸಿಗರ ಕರ್ತವ್ಯ.

**ಆಕರ್ಷಕ ಸಫಾರಿಗಳು:** ಕಬಿನಿ ಜಂಗಲ್ ಲಾಡ್ಜ್‌ಸ್ ಹಾಗೂ ರಿಸಾರ್ಟ್‌ನ ಪ್ರಮುಖ ಆಕರ್ಷಣೆಯೇ ವಿವಿಧ ರೀತಿಯ ಸಫಾರಿಗಳು. ಬೆಳಗಿನ 7ರ ಜೀಪ್ ಸಫಾರಿ ನಿಮ್ಮನ್ನು ತೆರೆದ

ಜೀಪಿನಲ್ಲಿ ದಟ್ಟಕಾಡಿನ ಮಧ್ಯದೊಳಗೆ ತಿರುಗಾಡಿಸಿಕೊಂಡು ಬರುತ್ತದೆ. ಅಂದಾಜು 30-40 ಚದರ ಕಿ.ಮೀ. ಪ್ರವಾಸದ ಈ ಸಫಾರಿಯಲ್ಲಿ ನಿಮಗೆ ನೂರಾರು ಆನೆಗಳು (ಹಿಂಡಿನಲ್ಲಿ, ಒಂಟಿಯಾಗಿ) ಭೆಟ್ಟಿಯಾಗುತ್ತವೆ. ಕೇವಲ 20-30 ಮೀಟರ್ ಅಂತರದಲ್ಲಿ ನಿಮ್ಮನ್ನೇ ನಿಟ್ಟಿಸುವ, ಕೆಲಸಾರೆ ಭುಸುಗುಡುತ್ತ ತಲೆಹಾಕುವ ಸಲಗಗಳನ್ನು ನೋಡಿದಾಗ ಮೊದಮೊದಲು ನಿಮ್ಮ ಎದೆ ಹೆದರಿಕೆಯಿಂದ ಢವಢವಿಸುವುದು. ನಿಮ್ಮ ಜೊತೆಗಿರುವ ಜೀಪ್ ಚಾಲಕ, ನ್ಯಾಚುರಾಲಿಸ್ಟಗಳು ನಿಮ್ಮನ್ನು ಸಮಾಧಾನಿಸುತ್ತಲೇ ಇರುತ್ತಾರೆ. ಹಾಗೆಯೇ ಸಮಯ ಕಳೆದಂತೆ ನಿಮಗೂ ಈ ಕಾಡು ಪ್ರಾಣಿಗಳು ಎಷ್ಟೊಂದು ಸಭ್ಯ ಎಂಬ ವಿಷಯ ಮನಗಂಡುಬಿಡುತ್ತದೆ. ನೀವು ಕಾಡು ಪ್ರಾಣಿಗಳ ಸಭ್ಯತೆಗೆ ಮಾರು ಹೋಗುತ್ತೀರಿ. ಹಾಗೆಯೇ ಆ ಕಾಡಿನ ವಾತಾವವಣಕ್ಕೆ ಹೊಂದಿಕೊಂಡೂ ಬಿಡುತ್ತೀರಿ. ಅಂದಾಜು ಮೂರು ಗಂಟೆಗಳ ಈ ಸಫಾರಿಯಲ್ಲಿ ಗೌರ್ ಎಂಬ ಕಾಡುಕೋಣಗಳು, ಜಿಂಕೆಗಳು, ಕಡವೆಗಳು, ಸಾರಂಗಗಳು, ಕಾಡು ಹಂದಿಗಳು, ಕಾಡುಕೋಳಿಗಳು, ನೃತ್ಯ ಮಾಡುತ್ತ ಗರಿಬಿಚ್ಚುವ ನವಿಲುಗಳು, ಉದ್ದನೆಯ ಬಾಲದ ವಿವಿಧ ಬಣ್ಣದ ಪಕ್ಷಿಗಳು, ನೀಲಕಂಠ ಪಕ್ಷಿ (ಹೀಗೆ ಒಟ್ಟು 225 ಜಾತಿ ಪಕ್ಷಿಗಳು) ಕಂದುಬಣ್ಣದ ಮಲಬಾರ್ ಅಳಿಲು, ಬಣ್ಣಬಣ್ಣದ ಊಸರವಳ್ಳಿ ಹೀಗೆಯೇ ಹತ್ತು ಹಲವು ವನ್ಯಪ್ರಾಣಿ, ಪಕ್ಷಿಗಳು ನಿಮಗೆ ಎದುರಾಗಿ ಹಾಗೆಯೇ ಬೀಳ್ಕೊಡುತ್ತವೆ. ನಮ್ಮ ಗೊಡವೆಗೆ ಬರಬೇಡಿ ಎಂದು ಸೂಕ್ಷ್ಮವಾಗಿ ನಿಟ್ಟಿಸುವವರಿಗೆ ಸೂಚ್ಯವಾಗಿ ತಿಳಿಹೇಳುವಂತೆ ತೀಕ್ಷ್ಣವಾಗಿ ನೋಡುತ್ತವೆ, ಬೆದರಿ ಸೆಟೆದು ನಿಲ್ಲುತ್ತವೆ, ಸಿಟ್ಟಿನಿಂದ ಬುಸುಗುಡುತ್ತ ಹಿಂದೆ ಸರಿಯುತ್ತವೆ, ಕೆಲಸಾರೆ ಓಡಿ ಕಣ್ಮರೆಯಾಗುತ್ತವೆ. ಹುಲಿ, ಚಿರತೆ, ಕರಡಿ, ಕಾಡು ನಾಯಿಗಳು ಇದ್ದರೂ ಕೂಡಾ ಅವು ಕಣ್ಣಿಗೆ ಬೀಳುವುದು ತೀರಾ ಅಪರೂಪ. ಹಾಗೇನಾದರೂ ಸಿಕ್ಕರೂ ತಕ್ಷಣವೇ ಕಣ್ಮರೆಯಾಗಿ ಹೋಗುವುದು ಅವುಗಳ ರೂಢಿ. ಹಾಗೆಯೇ ಕಾಡು ರಸ್ತೆಯುದ್ದಕ್ಕೂ ಅತ್ಯಂತ ಬೆಲೆಬಾಳುವ ಶ್ರೀಗಂಧ, ಸಾಗವಾನಿ, ರೋಜ್‌ಉಡ್, ಹೊನ್ನಿ, ಮತ್ತಿ, ನಂದಿ, ಗೊಡಂಬಿಯ ಮರಗಳು, ಹಲವಾರು ಬಣ್ಣಬಣ್ಣದ ಹೂವಿನ ಗಿಡಗಳು ದಟ್ಟ ಬಿದಿರ ಮೆಳೆಗಳೂ ಎದುರಾಗುತ್ತಲೇ ಇರುತ್ತವೆ.

**ಜಲಕ್ರೀಡೆ, ವಿಹಾರ:** ಮೋಟಾರ್ ಬೋಟ್ ಹಾಗೂ ತೆಪ್ಪದಲ್ಲಿಯ ಸಫಾರಿಗಳೂ ಒಂದು ವೈಶಿಷ್ಟ್ಯವೇ. ಕಬಿನಿ ಆಣೆಯ ಜಲಾಶಯದ ಹಿನ್ನೀರಿನಲ್ಲಿ ಹೊರಡುವ ಈ ಸಾರಿಗೆ ಅತ್ಯಂತ ಅಪರೂಪದ ಜಲಪಕ್ಷಿಗಳ ದರ್ಶನ ಮಾಡಿಸುತ್ತದೆ. ವಿವಿಧ ರೂಪಗಳ, ಕೊಕ್ಕೆಗಳ, ಬಣ್ಣಗಳ, ರಾಗಗಳ, ಕೊಕ್ಕರೆ, ಕಿಂಗ್‌ಫಿಶರ್, ಬಕಪಕ್ಷಿಗಳು, ಮೊಸಳೆಗಳು, ಮನಸೆಳೆಯುತ್ತವೆ. ಹಾಗೆಯೇ ದಂಡೆಯಲ್ಲಿ ಮೇಯುತ್ತಿರುವ ಆನೆಗಳ ಹಿಂಡು, ಒಂಟಿ ಸಲಗಗಳು, ಕಡವೆ ಜಿಂಕೆಗಳು, ಗೌರ್ ಕಾಡುಕೋಣಗಳು ಪುನಃ ಪುನಃ ಸಿಗುತ್ತಲೇ ಇರುತ್ತವೆ. ಈ ತಿರುಗಾಟ ಮುಗಿಸಿ ತಿರುಗಿ ಬಂದು ರಾತ್ರಿ ಊಟ ಮಾಡಿ ಮಲಗಿಕೊಂಡರೆ ಸೊಂಪಾಗಿ ನಿದ್ರೆ ಬರುವಂತೆ ಕೊಠಡಿಗಳಲ್ಲಿ ಒಪ್ಪಾದ ವ್ಯವಸ್ಥೆ ಇದೆ.

**ಸಂಸ್ಥಾಪಕ, ರೂವಾರಿ**: 1974ರಲ್ಲಿ ಪ್ರಾರಂಭವಾದ ಕಬಿನಿ ಜಲಾಶಯದ ಯೋಜನೆಗೆ ವಿಹಾರಧಾಮದ ಹೊಸ ರೂಪ-ವಿನ್ಯಾಸ ನೀಡಿದವರೆಂದರೆ ಕರ್ನಲ್‌ಜಾನ್ ವೇಕ್ ಫೀಲ್ಡ್ ಅವರು. ನೇಪಾಳದ ಟೈಗರ್ ಟಾಪ್ಸ್ ಇಂಡಿಯಾ ಪ್ರೈ.ಲಿ., ಅವರ ಸಹಯೋಗದಲ್ಲಿ 1980ರಲ್ಲಿ ಕರ್ನಾಟಕದ ಅಂದಿನ ಪ್ರವಾಸೋದ್ಯಮ ಮಂತ್ರಿಗಳಾಗಿದ್ದ ಶ್ರೀ ಆರ್.ಗುಂಡೂರಾಯರ ಪ್ರಯತ್ನದ ಫಲವಾಗಿ ಕಬಿನಿ ನದಿ ವಿಹಾರ ಕೇಂದ್ರವನ್ನು ಸ್ಥಾಪಿಸಿದ ಶ್ರೇಯಸ್ಸು ಈ ಪರಿಸರ ಪ್ರೇಮಿ ಪ್ರವಾಸೋದ್ಯಮಿಯದು. 1987ರಿಂದ ಸಂಪೂರ್ಣವಾಗಿ ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಈ ಜಂಗಲ್ ಲಾಡ್ಜಸ್ ವಿಹಾರಧಾಮ ದೇಶದಲ್ಲೇ ಇಂತಹವುಗಳಲ್ಲಿ

ಸರ್ವಶ್ರೇಷ್ಠವಾದದ್ದೆಂದು ಹೆಮ್ಮೆಯಿಂದ, ಧನ್ಯತಾ ಭಾವದಿಂದ ಹೇಳುತ್ತಾರೆ. ಎರಡು ದಿನವಿದ್ದು ಒರಗೆ ಹಚ್ಚಿ ನೋಡಿದಾಗ ಈ ಮಾತು ನೂರಕ್ಕೆ ನೂರರಷ್ಟು ಸತ್ಯವೆನಿಸುತ್ತದೆ. ತಮ್ಮ ಪ್ರಯತ್ನಕ್ಕೆ ಹಿಂದೆಂದಿಗಿಂತಲೂ ಹೆಚ್ಚು ಪ್ರೋತ್ಸಾಹ ನೀಡುತ್ತಿರುವ ಆಗಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಆರ್.ಎಂ.ರೇ ಅವರನ್ನೂ ನೆನೆಯುತ್ತಾರೆ. ಹಿರಿಯ ಭಾರತೀಯ ಅರಣ್ಯ ಸೇವೆ (ಐ.ಎಫ್.ಎಸ್) ಅಧಿಕಾರಿಗಳಾದ ಶ್ರೀ ರೇ ಹಾಗೂ ಶ್ರೀ ವಿನಯ್ ಲುತ್ರಾ ಅವರ ಕಳಕಳಿ ಕಾಳಜಿಯನ್ನು ಹಾಗೂ ಸಹಕಾರವನ್ನು ವೇಕ್ ಫೀಲ್ಡ್ ಮನಸಾರೆ ಪ್ರಶಂಸಿಸುತ್ತಾರೆ.

ಒಬ್ಬರಿಗೆ ದಿನವೊಂದಕ್ಕೆ ಒಟ್ಟು ರೂ.2000ರಷ್ಟು ಖರ್ಚಾಗುವ (ಊಟ, ತಿಂಡಿ, ವಸತಿ, ಸಫಾರಿ ವೆಚ್ಚಗಳು ಸೇರಿ ಖರ್ಚಾಗುವ) ಕಬಿನಿ ಜಂಗಲ್ ಲಾಡ್ಜಸ್ ಮತ್ತು ರಿಸಾರ್ಟ್ಸ್ ತುಸು ದುಬಾರಿ ಎನಿಸಿದರೂ ನೀಟಾದ ಕೊಠಡಿಗಳು, ಪರಿಶುದ್ಧ ಸುಂದರ ಪರಿಸರ, ಸ್ವಾದಿಷ್ಟ ಭೋಜನ ತಿಂಡಿ, ಘಮಘಮಿಸುವ ಕಾಫಿ ಟೀ, ಅದ್ಭುತ ಸಫಾರಿಗಳ ವಿಶಿಷ್ಟಾನುಭವ, ನಗೆಮುಖದ ಸೌಜನ್ಯಪರ ಸಿಬ್ಬಂದಿಸೇವೆ ಎಲ್ಲ ಮನದಲ್ಲಿ ಅಚ್ಚಳಿಯದೇ ಉಳಿದು -ಮಧುರ ಗೀತೆಯಂತೆ, ಇನಿಗಾವ್ಯದಂತೆ ಸದಾ ಮನದಲ್ಲಿ ಗುನುಗುನಿಸಿದಂತೆ ಇರುತ್ತಾಳೆ ಕಬಿನಿ, ದಯವಿಟ್ಟು ಒಮ್ಮೆ ಹೋಗಿ ನೋಡಿಬನ್ನಿ.

## ಪರಿಸರ ಪ್ರಜ್ಞೆಯ ಜಂಗಲ್ ಲಾಡ್ಜಸ್‌ನ ಹಾಗೂ ಸಫಾರಿಗಳ ವೈಶಿಷ್ಟ್ಯಗಳು

1. ನೈಸರ್ಗಿಕ ಪರಿಸರದ ಪರಿಪೂರ್ಣ ರಕ್ಷಣೆಗಾಗಿ ಎಲ್ಲ ಕ್ರಮಗಳನ್ನೂ ಅಳವಡಿಸಲಾಗಿದೆ. ತತ್ಪರಿಣಾಮವಾಗಿ ಸಹಜ ಸುಂದರವಾದ ವಾತಾವರಣ ಎಲ್ಲೆಡೆ ಎದ್ದು ಕಾಣುತ್ತದೆ.
2. ಕೊಠಡಿಗಳಲ್ಲಿ ಹಾಗೂ ಸಫಾರಿ ಸಮಯದಲ್ಲಿ ಆಧುನಿಕ ಉಪಕರಣಗಳಾದ, ಮೊಬೈಲ್, ಟೆಲಿಫೋನ್, ಟಿವಿ, ಇಯರ್ ಫೋನ್, ರೇಡಿಯೋಗಳ ಹಾವಳಿ ಇಲ್ಲ. ಶಬ್ದಮಾಲಿನ್ಯ ಕೂಡದು. ಪಶುಪಕ್ಷಿ ಹಾಗೂ ವನ್ಯಪ್ರಾಣಿಗಳಿಗೆ ನಿಶಬ್ದ ವಾತಾವರಣ ತುಂಬ ಪ್ರಿಯ ಹಾಗೂ ಅವಶ್ಯಕ ಕೂಡಾ.
3. ಸಫಾರಿಗಳಲ್ಲಿ ಸಿಗರೇಟು, ಬೀಡಿ ಧೂಮಪಾನ ನಿಷಿದ್ಧ. ಸಂಜೆ ನಂತರ ಫ್ಲಾಷ್ ಹಾಕಿ ಕೆಮರಾ ಉಪಯೋಗಿಸಕೂಡದು. ಹೊಗೆ ಹಾಗೂ ಬೆಂಕಿ, ಪ್ರಾಣಿ ಹಾಗೂ ಕಾಡಿಗೆ ದೊಡ್ಡ ಅಪಾಯ.
4. ಬೇಸಿಗೆಯಾದರೆ ನದಿ ದಂಡೆಯಲ್ಲಿ ಹಾಗೂ ಉಳಿದ ದಿನಗಳಲ್ಲಿ ದಟ್ಟ ಹಸಿರು ಕಾಡಿನಲ್ಲಿ ಪ್ರಾಣಿಗಳ ಸಾಂದ್ರತೆ ಹೆಚ್ಚು.
5. ಕಾಡಿನಲ್ಲಿ ಅಲ್ಲಲ್ಲಿ 'ಸಾಲ್ಟ್ ಪಿಟ್ಸ್' -ಉಸುಕಿನ ಕಣಗಳನ್ನು ನಿರ್ಮಿಸಿ, ಸಸ್ಯಾಹಾರಿ ಪ್ರಾಣಿಗಳಿಗಾಗಿ ತಿನ್ನುವ ಉಪ್ಪನ್ನು ಮಣ್ಣಿನ ಮೇಲೆ ಬೆರೆಸಿ ಇಡಲಾಗುತ್ತದೆ. ರುಚಿಗಾಗಿ ನಮ್ಮ ಉಪ್ಪಿನಕಾಯಿಯಂತೆ ಈ ಮಿಶ್ರಣವನ್ನು ಪ್ರಾಣಿಗಳು ನಂಜಿಕೊಳ್ಳುತ್ತವೆ. ಅವಶ್ಯವೆನಿಸಿದಾಗ ಈ 'ಕಣ'ಗಳಲ್ಲಿ ಔಷಧಿಗಳನ್ನೂ ಮಿಶ್ರಣ ಮಾಡಿ ಪ್ರಾಣಿಗಳಿಗೆ ತಿನ್ನಿಸಲಾಗುತ್ತದೆ. ಆಗ ಈ ಕಣಗಳು ಪ್ರಾಣಿಗಳ ಕ್ಲಿನಿಕ್ ಅಥವಾ ಔಷಧಾಲಯಗಳಂತೆ ಕೆಲಸ ಮಾಡುತ್ತವೆ. ಮಾಂಸಾಹಾರಿ ಪ್ರಾಣಿಗಳಿಗೆ ಈ ಉಪ್ಪು ಅನಾವಶ್ಯಕ ಯಾಕೆಂದರೆ

ಅವು ಉಪ್ಪನ್ನು ತಿಂದ ಪ್ರಾಣಿಗಳನ್ನೇ ತಿನ್ನುವುದರಿಂದ ಅವಕ್ಕೆ ಉಪ್ಪಿನಾಂಶದ ಪೂರೈಕೆ ಆ ಮೂಲಕ ಆಗಿರುತ್ತದೆ.

6. ಕಬಿನಿ ಜಂಗಲ್ ಲಾಡ್ಜಸ್‌ಗೆ ಬರುವ ಪ್ರವಾಸಿಗರಲ್ಲಿ ಮುಕ್ಕಾಲು ಭಾಗ ನಮ್ಮ ದೇಶದವರಾದರೆ ಕಾಲುಭಾಗ ವಿದೇಶೀಯರು.
7. ಈವರೆಗೂ ಈ ಸಫಾರಿಗಳಲ್ಲಿ ಯಾವುದೇ ವನ್ಯಪ್ರಾಣಿ ತಾನಾಗಿಯೇ ಯಾವ ಪ್ರವಾಸಿಗನ ಮೇಲೂ ದಾಳಿ ಮಾಡಿದ ಉದಾಹರಣೆ ಇಲ್ಲ. ತನಗೆ ಅಪಾಯ ಬಂದೊದಗಿದೆ ಎಂದು ತಿಳಿದಾಗ ಮಾತ್ರ ವನ್ಯಜೀವಿಗಳು ಹಲ್ಲೆ ಮಾಡುತ್ತವೆಂಬುದನ್ನು ಪ್ರವಾಸಿಗರು ಮನಗಾಣಬೇಕು.
8. ಇತ್ತೀಚಿನ ಗಣತಿ ಪ್ರಕಾರ ಈ ರಾಷ್ಟ್ರೀಯ ಉದ್ಯಾನದಲ್ಲಿ ಅಂದಾಜು 3400 ಆನೆಗಳು, 63 ಹುಲಿಗಳು, 250 ಜಾತಿಯ ಪಕ್ಷಿಗಳು, ಹಲವಾರು ನಮೂನೆಯ ಸಸ್ತನಿ ಪ್ರಾಣಿಗಳು ಇವೆ. ಇಲ್ಲಿ ಇವುಗಳ ಸಂಖ್ಯೆ ಹೆಚ್ಚುತ್ತಾ ಬರುತ್ತಿರುವುದು ಒಂದು ಹೆಮ್ಮೆಯ ಹಾಗೂ ಹರ್ಷದ ಸಂಗತಿ.

## ಅರಣ್ಯಧಾಮದ ಐತಿಹಾಸಿಕ ಮಹತ್ವ

ಮೈಸೂರು ಅರಸರು ಪ್ರಾರಂಭದಿಂದಲೇ ಈ ಕಾರಾಪೂರ ಅರಣ್ಯದಲ್ಲಿ ಬೇಟೆಯಾಡುತ್ತಿದ್ದರು. ಈ ಬಗ್ಗೆ ಹಲವಾರು ಮಹತ್ವದ ಫೋಟೋಗಳನ್ನು ಕೊಠಡಿಗಳಲ್ಲಿ, ಬಂಗ್ಲೆಗಳ ವರಾಂಡಗಳಲ್ಲಿ ತೂಗು ಹಾಕಲಾಗಿದೆ. ಅದರಲ್ಲಿ ಕೆಲವನ್ನು ಇಲ್ಲಿ ನೋಡಿ.

1. 1891ರಲ್ಲಿ ರಷ್ಯದ ಗ್ರಾಂಡ್ ಡ್ಯೂಕ್ ಹಾಗೂ ಅವನ ಸಂಗಡಿಗರು ಕಾರಾಪುರ - ಅರಣ್ಯಕ್ಕೆ ಬೇಟೆಗಾಗಿ ಬಂದು ಮುಂಜಾನೆ ಉಪಹಾರ ಕೂಟದಲ್ಲಿ ಭಾಗಿಯಾದದ್ದು.
2. 1913ರಲ್ಲಿ ನಡೆದ ಖೆಡ್ಡಾ ಕಾರ್ಯಾಚರಣೆ ಚಿತ್ರ.
3. 1922 ಜನವರಿಯಲ್ಲಿ ಮೈಸೂರು ಮಹಾರಾಜ ಕೃಷ್ಣರಾಜ ಒಡೆಯರ್‌ರೊಡನೆ ವೇಲ್ಸದ ರಾಜಕುಮಾರ ಕಾರಾಪುರ ಕ್ಯಾಂಪ್‌ಗೆ ಭೇಟಿ ನೀಡಿದ್ದು.
4. 1922ರ ಆಗಸ್ಟದಲ್ಲಿ ಕಮಾಂಡರ್-ಇನ್-ಚೀಫ್ ಲಾರ್ಡ್ ರಾವ್ಲಿಸನ್ ಭೇಟಿ ನೀಡಿದ್ದು.
5. 1922ರ ಕ್ರಿಸ್‌ಮಸ್‌ನಲ್ಲಿ ಮೈಸೂರು ಮಹಾರಾಜರ ಜೊತೆಗೂಡಿ ಲಾರ್ಡ್ ಹಾಗೂ ಲೇಡಿ ವಿಲಿಂಗ್ಡನ್ ಕಬಿನಿ (ಕಾರಾಪೂರ) ಅರಣ್ಯ ಪ್ರದೇಶವನ್ನು ಸಂದರ್ಶಿಸಿದ್ದು.

# ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿಚುಕ್ಕಿ
# ಕಿತ್ತೂರು ರಾಣಿ ಚೆನ್ನಮ್ಮ

ವಿಶ್ವದ ಇತಿಹಾಸದಲ್ಲಿ ತಾಯ್ನಾಡಿನ ರಕ್ಷಣೆಗಾಗಿ ಸ್ವತಃ ರಣರಂಗಕ್ಕಿಳಿದು ಯುದ್ಧ ಮಾಡಿದ ಮಹಿಳಾ ಮಣಿಗಳು ಅತ್ಯಂತ ವಿರಳ. ಫ್ರಾನ್ಸಿನ ಜೋನ್ ಆಫ್ ಆರ್ಕ್ ಒಬ್ಬಳನ್ನು ಬಿಟ್ಟರೆ, ಭಾರತವನ್ನು ಹೊರತುಪಡಿಸಿ, ಜಗತ್ತಿನ ಇತಿಹಾಸ ಪುಟಗಳಲ್ಲಿ ಬೇರಾವ ವನಿತೆಯೂ ಟೊಂಕಕಟ್ಟಿ ಯುದ್ಧ ಮಾಡಿದ್ದಿಲ್ಲ. ಆದರೆ ನಮ್ಮ ದೇಶದಲ್ಲಿ ಇಂತಹ ಶೂರ ಸ್ತ್ರೀ ರತ್ನಗಳ ಖಣಿಯೇ ಇದೆ ಎಂಬುದನ್ನು ನೆನೆದಾಗ ನಮಗೆ ಅತೀವ ಹೆಮ್ಮೆ ಹಾಗೂ ಹರ್ಷವಾಗುತ್ತದೆ. ವೀರರಾಣಿ ಕಿತ್ತೂರು ಚನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿ, ಲಖನೌದ ಬೇಗಂ ಹಜರತ್ ಮಹಲ್, ರಾಣಿ ಅಬ್ಬಕ್ಕ, ಬೆಳವಡಿ ಮಲ್ಲಮ್ಮ, ಕೆಳದಿ ಚನ್ನಮ್ಮ, ಒಣಕೆ ಓಬವ್ವ, ಹೀಗೆಯೇ ಮುಂತಾದವರನ್ನು ಅಭಿಮಾನದಿಂದ ಹೆಸರಿಸಬಹುದಾಗಿದೆ. ಇದೇ ಅಕ್ಟೋಬರ್ 23ಕ್ಕೆ ಸರಿಯಾಗಿ 177 ವರ್ಷಗಳ ಹಿಂದೆ, ಅಂದರೆ 1824ರಲ್ಲಿ ರಾಣಿ ಚೆನ್ನಮ್ಮ ತನ್ನ ಸಾಮ್ರಾಜ್ಯದ ಸ್ವಾತಂತ್ರ್ಯ ರಕ್ಷಣೆಗಾಗಿ ಪ್ರಬಲ ಬ್ರಿಟಿಷರ ವಿರುದ್ಧ ಯುದ್ಧ ಮಾಡಿದ್ದಷ್ಟೇ ಅಲ್ಲ ಜಯವನ್ನೂ ಸಾಧಿಸಿದ್ದು ನಮಗೆ ರೋಮಾಂಚನ ಉಂಟುಮಾಡುವ ಸಂಗತಿಯಾಗಿದೆ. ಈ ಹೊತ್ತಿನಲ್ಲಿ ಚನ್ನಮ್ಮನ ಮಾತೃಭೂಮಿ ರಕ್ಷಣೆಯ ಹೋರಾಟದ ಕೆಲಕ್ಷಣಗಳನ್ನು ಸ್ಮರಿಸಿಕೊಳ್ಳೋಣ.

ಕಿತ್ತೂರು ಇಂದಿನ ಪುಣೆ ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ನಂಬರ್ 4ರ ಮೇಲೆ ಬೆಳಗಾವಿಯಿಂದ 45ಕಿ.ಮಿ. ದಕ್ಷಿಣಕ್ಕೂ ಧಾರವಾಡದಿಂದ 30 ಕಿ.ಮಿ. ಉತ್ತರಕ್ಕೂ ಇರುವ ಒಂದು ಗ್ರಾಮ ಪಂಚಾಯಿತಿ ಕೇಂದ್ರವಾಗಿದೆ. ಇದೇ ಹೆದ್ದಾರಿ ಮೇಲಿರುವ ಮುಂಬಯಿ ಬಳಿಯ ಸೋಪಾರ, ಕೊಲ್ಲಾಪುರ, ಮುಗುಟಖಾನ ಹುಬ್ಬಳ್ಳಿ ಇಂದಿನ ಬೆಳಗಾವಿಯ ಮಾಧವಪುರ ಹಾಗೂ ವಡಗಾಂವ್, ಸ್ವಲ್ಪ ದಕ್ಷಿಣದ ಬದಿಗಿರುವ ಬನವಾಸಿ, ಹಾನಗಲ್, ಚಿತ್ರದುರ್ಗದ ಚಂದ್ರವಳ್ಳಿ ಮುಂತಾದ ಪಟ್ಟಣಗಳು ಕ್ರಿಸ್ತಪೂರ್ವದಲ್ಲಿಯೇ ರೋಂ ವರ್ತಕರೊಡನೆ ಸಂಪರ್ಕವನ್ನಿಟ್ಟುಕೊಂಡದ್ದನ್ನು ಅಲ್ಲಲ್ಲಿ ನಡೆದ ಉತ್ಖನನಗಳ ಶಿಲಾ ಲೇಖನಗಳು ತೋರಿಸಿಕೊಡುತ್ತವೆ. ಅಂತೆಯೇ ಈ ಪ್ರಾಚೀನ ಮುಖ್ಯ ರಸ್ತೆಯಲ್ಲಿರುವ ಕಿತ್ತೂರಿನ ಬಗೆಗೂ ಇಂತಹ ಇನ್ನೂ ಹೆಚ್ಚಿನ ಸಂಶೋಧನೆ ಅಗತ್ಯವೆಂದು ಇತಿಹಾಸತಜ್ಞರು ಅಭಿಪ್ರಾಯಪಡುತ್ತಾರೆ. ಯಾಕೆಂದರೆ 16ರಿಂದ 19ನೆಯ ಶತಮಾನದ ನಡುವೆ ಒಂದು ಸಾಮ್ರಾಜ್ಯ ಕೇಂದ್ರವಾಗಿ ಮೆರೆದ ಕಿತ್ತೂರು ಅದಕ್ಕೂ ಪೂರ್ವದಲ್ಲಿಯೂ ಒಂದು ಮಹತ್ವದ ಸ್ಥಳವಾಗಿರಬಹುದೆಂದು ಊಹಿಸಲಾಗಿದೆ.

ಪ್ರಾರಂಭದಲ್ಲಿ ಮುಗುಟಖಾನ ಹುಬ್ಬಳ್ಳಿ ಹಾಗೂ ಸಂಪಗಾಂವಗಳು ಕಿತ್ತೂರು ಸಂಸ್ಥಾನದ ಆಡಳಿತ ಕೇಂದ್ರಗಳಾಗಿದ್ದು 1682ರ ಸುಮಾರಿನಲ್ಲಿ ಈ ನಾಡನ್ನು ಆಳಿದ ಐದನೆಯ ಅರಸು ಅಲ್ಲಪ್ಪಗೌಡ ಸರ್ ದೇಸಾಯಿಯು ಕಿತ್ತೂರನ್ನು ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡನು. ಇವನ ಕಾಲದಲ್ಲಿಯೇ ಅಂದರೆ 1660ರಿಂದ 1691ರಲ್ಲಿ ಈಗ ಪಾಳು ಬಿದ್ದಿರುವ ಕಿತ್ತೂರಿನ ಕೋಟೆ ನಿರ್ಮಾಣವಾಯಿತು. ಇದು ಎಷ್ಟೊಂದು ಪ್ರಬಲವಾಗಿತ್ತು ಎಂಬುದನ್ನು 1824ರ ಡಿಸಂಬರ್ 5ರಂದು ಕಿತ್ತೂರ ಮೇಲೆ 2ನೆ ಬಾರಿ ದಂಡೇರಿ ಬಂದ ಆಂಗ್ಲ ಸೈನ್ಯದ ನೇತಾರ ಚಾಪ್ಲಿನ್ "Strong forts of Kittur, defended they were by a garrision of an unusually determined character and spirit and energy are far above my praise" ಎಂದು ಮುಕ್ತವಾಗಿ ಹೊಗಳಿದ್ದಾನೆ.

ಕಿತ್ತೂರನ್ನು ಆಳಿದ ಹಲವಾರು ಅರಸರಲ್ಲಿ ಏಳನೆಯವನಾದ ರುದ್ರಗೌಡ ಅಲಿಯಾಸ ಫಕೀರ ರುದ್ರಗೌಡ ಸರ್ಜನ ಜೀವನ ಶೈಲಿ ವಿಶೇಷವಾಗಿದೆ. ತನ್ನ ನಿಷ್ಠಾವಂತ ರಾಣಿಯನ್ನಲ್ಲದೇ ಈತ ರಂಜನಾ ಎಂಬ ಬಲು ಸುಂದರಿಯಾದ ಪ್ರೇಯಸಿಯೊಬ್ಬಳನ್ನು ಹೊಂದಿದ್ದನು. ಈಕೆ ಮೂಲತಃ ಮುಸಲ್ಮಾನ ಧರ್ಮದವಳು. ಈ ಅರಸನು ಈಕೆಯನ್ನು ವೀರಶೈವ ಧರ್ಮಕ್ಕೆ, ಸ್ವಾಮೀಜಿಯೊಬ್ಬರಿಂದ ಲಿಂಗದೀಕ್ಷೆ ಮಾಡಿಸಿ ಮತಾಂತರಿಸಿ 'ನಿರಂಜನಿ' ಎಂಬ ಹೆಸರನ್ನು ಕೊಟ್ಟನು. ಇವಳಿಗೋಸ್ಕರವೇ ದೇಶನೂರಿನಲ್ಲಿ ಒಂದು ಅಂದವಾದ ಚಿಕ್ಕ ಅರಮನೆಯನ್ನು ಕಟ್ಟಿಸಿದನು. ಈಗಲೂ ದೇಶನೂರಿನಲ್ಲಿ ಈ ನಿರಂಜನಿ ಮಹಲ್ ಅನ್ನು ನಾವು ನೋಡಬಹುದಾಗಿದೆ. ಸಮೀಪದ ಗುಡ್ಡದ ಮೇಲೆ ಈತ ಕಟ್ಟಿಸಿದ ಕೋಟೆಯನ್ನು ರುದ್ರಗಡವೆಂದೇ ಕರೆಯಲಾಗುತ್ತದೆ. ಇವನ ನಂತರ ಪಟ್ಟಕ್ಕೆ ಬಂದ ದೊರೆ ಮಲ್ಲಸರ್ಜನೇ ರಾಣಿ ಚನ್ನಮ್ಮನ ಪತಿ. ಈತ ಶೂರನೂ ಪರಾಕ್ರಮಿಯೂ ಆಗಿದ್ದನು. ಇದಕ್ಕೆ ಮೆಚ್ಚಿ ಅವರೊಡನೆ ಒಪ್ಪಂದ ಮಾಡಿಕೊಂಡಿದ್ದ ಪೇಶ್ವೆಯವರು, ಈತನಿಗೆ 'ಪ್ರತಾಪ್ ರಾವ್' ಎಂಬ ಬಿರುದನ್ನು ಕೊಟ್ಟಿದ್ದರು. ಈ ನೆನಪಿಗಾಗಿ ಮಲ್ಲಸರ್ಜನು ನಂದಗಡದಲ್ಲಿ ಕೋಟೆಯೊಂದನ್ನು ಕಟ್ಟಿದನು. ಈಗಲೂ ಇದಕ್ಕೆ ಪ್ರತಾಪ್‌ಗಡ ಎಂದೇ ಕರೆಯಲಾಗುತ್ತದೆ.

ಮಲ್ಲಸರ್ಜನ ನಂತರ ಅವನ ಮಗ (ಹಿರಿಯ ರಾಣಿ ರುದ್ರಮ್ಮನ ಮಗ) ಶಿವಲಿಂಗ ರುದ್ರಸರ್ಜನು ಪಟ್ಟಕ್ಕೆ ಬಂದನು. 1816ರಿಂದ ಆಡಳಿತ ಪ್ರಾರಂಭಿಸಿದ ಈತ 1824ರಲ್ಲಿ ತೀರಿಕೊಂಡನು. ಈತನಿಗೆ ಮಕ್ಕಳಿರಲಿಲ್ಲ. ಆದ್ದರಿಂದ ಈತ ಮಾಡಿಕೊಂಡ ದತ್ತಕವನ್ನು ಮಾನ್ಯ ಮಾಡದೇ ಬ್ರಿಟೀಷರು ಕಿತ್ತೂರನ್ನು ಕಬಳಿಸಲು ಹವಣಿಸಿದರು. ಆದರೆ ಈತನ ಮಲತಾಯಿ ಚನ್ನಮ್ಮರಾಣಿಯ ಮಧ್ಯ ಪ್ರವೇಶದಿಂದ ಅದು ಒಮ್ಮೆಲೆ ಸಾಧಿಸದಾಯಿತು.

ಹೀಗೆ ಪ್ರಬಲ ಬ್ರಿಟಿಷರಿಗೆ ಸವಾಲೊಡ್ಡಿದ ಎದೆಗಾರ್ತಿ ಚನ್ನಮ್ಮ ಹುಟ್ಟಿದ್ದು ಬೆಳಗಾವಿ ಸಮೀಪ ಉತ್ತರಕ್ಕಿರುವ ಕಾಕತಿಯ ದೇಸಾಯಿಯವರ ಮನೆತನದಲ್ಲಿ. ರಾಜವಂಶಜರಿಗೆ ತಕ್ಕಂತ ಶಿಕ್ಷಣ ತರಬೇತಿ ಚಿಕ್ಕಂದಿನಲ್ಲಿ ಚನ್ನಮ್ಮನಿಗೆ ಆಯಿತು. ಅದನ್ನು ವಿವರಿಸುವ ಒಂದು ಜಾನಪದ:

ಕಾಡಿಗೆ ತಂದಿ ಜತೆಗೂಡಿ | ಕುದುರಿ ಸವಾರಿ ಮಾಡಿ

**ಹೋಗುತ್ತಿದ್ದ ಜೋಡಿ | ಹುಲಿ ಚಿರ್ಚ ಹೊಡಿಯೋಳು ಗುರಿ ಮಾಡಿ ||**

**.... ತುಂಬಿದ ಹೋಳಿ ದಾಟೂಳ ಈಸಾಡಿ.... ಹೀಗೆ ವರ್ಣಿಸಿದೆ.**

**ಇನ್ನು ಚನ್ನಮ್ಮನ ರೂಪ ಹಾಗೂ ಸೌಂದರ್ಯ ಸಿರಿ ಬಗ್ಗೆ**

**ಮಲ್ಲಸರ್ಜನ ನಾರಿ ಮೂಲೋಕ ಸುಂದರಿ**

**ಮಾಲೊಳಗೆ ರತ್ನದಾ ಹರಳ | ಕೋ | ಚೆನ್ನಮ್ಮ**

**ಆರೂತಿ ಬೆಳಕ ನಗಿಯಾರೆ ||ಕೋ||**

**ಕಾಕತಿ ದೊರೆಗಳ ತಾಕತು ಸಿರಿಮಗಳು**

**ಬೇಕಾದ ಮಡದಿ ಮಲ್ಲಸಜ್ಜಗ || ಕೋ ||ಚೆನ್ನಮ್ಮ**

**ನಾಕು ದಿಕ್ಕಿಗೆ ಮನ್ನಣೆ|| ಕೊ|| ಎಂದಿದೆ**

ಮತ್ತು ಶ್ರೀಧರ್ ತೇಲ್ಕರ್ ಎಂಬ ವಿದ್ವಾಂಸರ ಒಂದು ಲೇಖನದ ಪ್ರಕಾರ ಚನ್ನಮ್ಮ ರಾಣಿಗೆ ಚಿಕ್ಕಂದಿನಲ್ಲಿಯೇ ಕನ್ನಡದೊಡನೆಯೇ ಉರ್ದು, ಮರಾಠಿ ಭಾಷೆಗಳನ್ನೂ ಕಲಿಸಲಾಯಿತು. ಬಸವಪುರಾಣ, ರಾಮಾಯಣ, ಮಹಾಭಾರತಗಳಲ್ಲಿ ಹಾಗೂ ಇತಿಹಾಸ ಕಲಿಯುವಿಕೆಯಲ್ಲಿ ಅವಳಿಗೆ ವಿಶೇಷ ಆಸಕ್ತಿಯಿತ್ತು. ಇತ್ತೀಚಿನ ಸಂಶೋಧನೆಗಳ ಪ್ರಕಾರ ಚನ್ನಮ್ಮನಿಗೆ ಇಂಗ್ಲೀಷಿನ ವ್ಯವಹಾರಿಕ ಜ್ಞಾನವೂ ಇತ್ತೆಂದು ತಿಳಿದುಬರುತ್ತದೆ. ಹೀಗೆ ಪಟ್ಟದರಸಿಯ ಎಲ್ಲ ಗುಣಧರ್ಮ ಹೊಂದಿದ್ದ ಚೆನ್ನಮ್ಮ ತನ್ನ ಭಾವಿ ಪತಿರಾಜನನ್ನು ಪ್ರಥಮದಲ್ಲಿ ಸಂದಿಸಿದ್ದೂ ಕಾಡಿಗೆ ಹುಲಿ ಬೇಟೆಗಾಗಿ ಹೋದಾಗಲೇ. ಮೊದಲ ಪತ್ನಿಗೆ ಮಕ್ಕಳಾಗದಿದ್ದಾಗ ಮಲ್ಲಸರ್ಜ ದೊರೆ ಚನ್ನಮ್ಮನನ್ನು ಎರಡನೆಯ ಪತ್ನಿಯಾಗಿ ಸ್ವೀಕರಿಸಿದನು. ಕಾಕತಿಯ ಕನ್ಯೆ ಕಿತ್ತೂರಿನ ರಾಣಿಯಾಗಿ ಅರಮನೆ ಪ್ರವೇಶಿಸಿದಳು. (1790-91). ಅಲ್ಲಿಯೂ ತನ್ನ ವಿಶಾಲ ಮನೋಭಾವ, ಚಾಣಾಕ್ಷ ಬುದ್ಧಿಯಿಂದ ಎಲ್ಲರ ಮನವನ್ನೂ ಗೆದ್ದು ಪ್ರಶಂಸೆಗೆ ಪಾತ್ರಳಾದಳು. ಕಿತ್ತೂರರಸರ ಪ್ರಜಾವಾತ್ಸಲ್ಯಕ್ಕೆ ಸಾಕ್ಷಿಯಾಗಿ ಅನೇಕ ಜನಪರ ಕಾರ್ಯಗಳನ್ನು ಕೈಗೊಂಡಳು. ಇದನ್ನೆ, ಒತ್ತೆಯಾಳಾಗಿ ಕೆಲದಿನ ಕಿತ್ತೂರಿನಲ್ಲಿದ್ದು ಹೋದ ಈಲಿಯಟ್ ಎಂಬ ಬ್ರಿಟಿಷ್ ಅಧಿಕಾರಿ "The Desais cf Kittur had always been regarded with affection by the poorer classes in their country...." ಎಂದು ಹೊಗಳಿದ್ದಾನೆ.

ಚನ್ನಮ್ಮನ ಪತಿ ದೊರೆ ಮಲ್ಲಸರ್ಜನು 1816ರಲ್ಲಿ ತೀರಿಕೊಂಡಾಗ ಶಿವಲಿಂಗ ಸರ್ಜನಿಗೆ ಪಟ್ಟಕಟ್ಟಲಾಯಿತು. ತಂದೆಯಂತೆಯೇ ಈತನೂ ಉತ್ತಮ ಆಡಳಿತಗಾರನಾಗಿದ್ದನು. 1824ರಲ್ಲಿ ಈತ ತೀರಿಕೊಳ್ಳುವ ತುಸುಮೋದಲು ದತ್ತಕ ಮಗನನ್ನೊಬ್ಬನ್ನು ಮಾಡಿಕೊಂಡಿದ್ದ. ಇದು ಶಿವಲಿಂಗರುದ್ರಸರ್ಜನ ಸಮ್ಮತಿ ಇಲ್ಲದೇ ಆದ ದತ್ತಕವೆಂದು ನೆನಪೊಡ್ಡಿ ಕಿತ್ತೂರನ್ನು ಕಬಳಿಸಲು ಬ್ರಿಟೀಷರು ಹೊಂಚುಹಾಕಿದರು. ಚನ್ನಮ್ಮ ರಾಣಿ ಏನೇ ಆದರೂ ಪರಕೀಯರು ಕಿತ್ತೂರನ್ನು ವಶಪಡಿಸಿಕೊಳ್ಳುವುದು ಸಾಧ್ಯವಿಲ್ಲವೆಂದು ಘಂಟಾಘೋಷವಾಗಿ ಸಾರಿ ಮಾತೃಭೂಮಿ ರಕ್ಷಣೆಗೆ ಎಲ್ಲ ತ್ಯಾಗಕ್ಕೂ ಸಿದ್ಧರಿರಬೇಕೆಂದು ಪ್ರಜೆಗಳನ್ನು ಹುರಿದುಂಬಿಸತೊಡಗಿದಳು. ಧಾರವಾಡದ ಕಲೆಕ್ಟರ್ ಆಗಿದ್ದ ಥಾಕರೆಯ ನೇತೃತ್ವದಲ್ಲಿ ಆಂಗ್ಲರ ಸೈನ್ಯ ಕಿತ್ತೂರನ್ನು ಅಕ್ಟೋಬರ್ 23ರಂದು ಮುತ್ತಿಗೆ ಹಾಕಿತು. ಕಿತ್ತೂರ ಜನ ಚನ್ನಮ್ಮನ ಬೆಂಗಾವಲಿಗೆ ನಿಂತರು. ಜಾನಪದ ಚಕಳಿಯೊಂದು ಹೇಗೆ ಸಾರಿದೆ ನೋಡಿ ಈ ಜನರ ಮನೋಭೂಮಿಕೆಯನ್ನು:

**ಕಡಿಗೆ ನಿನ್ನ ಅನ್ನವನು ಉಂಡು ಇಂದಿಗೆ |**

**ಬಿಡಬಲ್ಲೆವೆ ನಾವು ಸುಮ್ಮನೆ ಮಾ |**

**ತೊಡೆಯ ಚಪ್ಪರಿಸಿ, ಮೀಸಿಯ ತಿದ್ದಿ ಮುಂಗೈ |**

**ಕಡಿಯುತ ಮಾತಾಡುತಿರಲಾಗಿ ಮತ್ತೆ ||**

**ನಾಳಿನ ಮರಣವು ಬರಲಿ ನಮಗೆ ಇಂದು**

**ಏಳುಸಾವಿರ ದಂಡುಪುರದಲ್ಲಿ ಮಾ|**

**ವೇಳ್ಯೆ ವೇಳ್ಯೆಗೆ ಫೇರಿ ತಿರಗುತಲಿದೆ ಮತ್ತೆ**

**ಕೇಳಿರಿ ಮುಂದಾದ ಮಾತನು ನೀವು ||**

**ಗೆದ್ದ ಕಿತ್ತೂರ ತಂದು ಉದ್ದಬೀಳುವೆ ತಾಯಿ**

**ಕದ್ದ ಮಾತಲ್ಲ ನಿಮ್ಮಾಣೆ**

**ಕದ್ದ ಮಾತಲ್ಲ ನಿಮ್ಮಾಣೆ ! ಇರದಿರಕ**

**ಬಿದ್ದ ಹೋಗುವೆ ರಣದಾಗೊ |**

**ಪ್ರಜೆಗಳದ್ದು ಹೀಗಿದ್ದರೆ ಚನ್ನಮ್ಮನ ಬಗೆಗಿನ ಒಂದು ಪದ್ಯ ನೋಡಿ:**

**ಕಿತ್ತೂರ ಚನ್ನಮ್ಮ ಸುತ್ತೂರ ಒಡತ್ಯಾಗಿ**

**ಕತ್ತಿ ಕವಚಗಳ ಉಡುಪುಟ್ಟೋ**

**ಕತ್ತಿ ಕವಚಗಳ ಉಡುಪುಟ್ಟೊ.... ಅಬ್ಬರದಿ**

**ಬತ್ತಲಗುದರೀಯ ಜಿಗಿದೇರೋ !**

**ಹೀಗೆ ಸ್ವತಃ ಕತ್ತಿ ಕವಚಗಳ ತೊಟ್ಟು ರಣರಂಗಕ್ಕೆ ಧುಮಿಕಿದ ಚನ್ನಮ್ಮ...**

**ಚಂಡಿಯೋ ಚೌಡಿಯೋ ಮಾಯೆಯೊ ಮಸಣಿಯೋ|**

**ಖಂಡಿತ ಮಾನವಳಿವಳಲ್ಲ|**

**ಗಂಡುಗಲಿಗಳ ಮೀರಿ ರುಂಡವ ತುರಿವಳು**

**ಮಹಾಮಾಯಿಯಲ್ಲದೆ ಬ್ಯಾರೆಲ್ಲ|**

**ಚನ್ನವ್ವ ತಾಳಿ ಶಕ್ತಿ ಅವತಾರ**

**ಉಗ್ರಕೋಪ ತಾಳ್ಯಾರು ಬಹುಭಾರ**

**ತೋಫ ಇತ್ತಐನೂರ**

**ಸರಬತ್ತಿ ಮಾಡಲೆಂಣಾ ಭರಭರ |**

ಇದರಂತೆಯೇ ಆಯಿತು. ಯುದ್ಧದಲ್ಲಿ ಥ್ಯಾಕರೆ ಕೊಲ್ಲಲ್ಪಟ್ಟು ಆಂಗ್ಲರಿಗೆ ಭಾರಿ ಮುಖಭಂಗವಾಗುವಂತಹ ಸೋಲಾಯಿತು. ಕಿತ್ತೂರ ಕಲಿಗಳ ಮಾತೃಭೂಮಿ ರಕ್ಷಣೆಯ ಹೋರಾಟಕ್ಕೆ ದೇಶದ ಪ್ರಥಮ ಸ್ವಾತಂತ್ರ್ಯ ಸಮರಕ್ಕೆ ಅಪೂರ್ವ ಜಯವಾಯಿತು. ರಾಣಿ ಚನ್ನಮ್ಮ ಭಾರತ ಸ್ವಾತಂತ್ರ್ಯದ ಬೆಳ್ಳಿಚುಕ್ಕಿಯೆನಿಸಿದಳು. ಮುಂದಿನ ಹೋರಾಟಗಳಿಗೆ ದಾರಿದೀಪವಾಗಿ ಧೃವತಾರೆಯಂತೆ ಮಿನುಗತೊಡಗಿದಳು. ಅಂತೆಯೇ ಆಂಗ್ಲರು ಇವಳನ್ನು ತಮ್ಮ ಗುಪ್ತ ಪತ್ರಗಳಲ್ಲಿ .... "a Woman of Violent and intermeddling disposition...ಎಂದೂ ಹಾಗೂ ಕಿತ್ತೂರ ಸೈನಿಕರನ್ನು ಸ್ಟಿವನ್ಸನ್ ಎಂಬುವವನು... and they have now gone so far that they are determined to fight till the last, if attacked" ಎಂದು ಬಣ್ಣಿಸಿದ್ದಾನೆ. ಹೀಗೆ ವೈರಿಗಳಿಂದಲೇ ಶೂರರೂ-ಧೀರರೂ ಎಂದು ಬಣ್ಣಿಸಿಕೊಂಡ ಹೆಮ್ಮೆ ಕಿತ್ತೂರ ನಾಡವರದು ಹಾಗೂ ಅವರ ಕಣ್ಮಣಿ ರಾಣಿ ಚನ್ನಮ್ಮನದು. ರಾಣಿ ಚನ್ನಮ್ಮ

ಪರಾಕ್ರಮಿಯಾಗಿದ್ದಂತೆಯೇ ಅಪಾರ ಮಾತೃವಾತ್ಸಲ್ಯದವಳೂ ಆಗಿದ್ದಳು. ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟ ಆಂಗ್ಲ ಸ್ತ್ರೀಯರು ಹಾಗೂ ಮಕ್ಕಳನ್ನು ವೈರಿಯಂತೆ ಕಾಣದೇ ಬಹಳ ಪ್ರೀತ್ಯಾದರ ತೋರಿದಳು. ವೈರಿಯ ಮಕ್ಕಳು ವೈರಿಗಳಲ್ಲ ಎಂಬ ಅವಳ ನಿಲುವು ಇಂದಿಗೂ ದೇಶದೇಶಗಳ ಸಂಬಂಧ ಹೇಗಿರಬೇಕು ಎಂಬುದಕ್ಕೆ ಮಾದರಿಯಾಗಿದೆ.

ಏನೇ ಆದರೂ ಕಿತ್ತೂರ ವಿಜಯೋತ್ಸವದ ಆ ಕ್ಷಣಗಳು ಬಹಳ ದಿನ ಮುಂದೊರೆಯಲಿಲ್ಲ. ಕೊಡಲಿ ಕಾವು ಕುಲಕ್ಕೆ ಮೃತ್ಯು ಎಂಬಂತೆ ಅಲ್ಲಿಯ ಕೆಲ ಸಮಯ ಸಾಧಕ ಸ್ವಾರ್ಥಿಗಳ ಪಿತೂರಿಯಿಂದಾಗಿ ಚನ್ನಮ್ಮನ ಯುದ್ಧ ರಹಸ್ಯಗಳನ್ನೆಲ್ಲ ಬ್ರಿಟೀಷರು ಪಡೆದುಕೊಂಡರು. ಮುಂದೆರಡು ತಿಂಗಳಲ್ಲಿ ಬೆಳಗಾವಿಯಿಂದ ಚಾಪ್ಲಿನ್ ನೇತೃತ್ವದಲ್ಲಿ ಭಾರಿ ಸೈನ್ಯವೊಂದು ಕಿತ್ತೂರಿಗೆ ನಾಲ್ಕೂ ದಿಕ್ಕಿನಿಂದ ಮುತ್ತಿಗೆ ಹಾಕಿತು. ಸೊಲ್ಲಾಪುರ, ಬಳ್ಳಾರಿ, ಗುತ್ತಿ, ವೆಂಗುರ್ಲ, ಮೈಸೂರುಗಳಲ್ಲಿಯೂ ಆಂಗ್ಲ ಸೈನ್ಯವನ್ನು ಸಿದ್ಧವಾಗಿಡಲಾಗಿತ್ತು. ಕಿತ್ತೂರಿನ ತೋಪುಗಳು ತಿಸಮದ್ದುಗಳಾಗಿ ವಿಫಲವಾದವು? ಬ್ರಿಟೀಷರ ಆಧುನಿಕ ಶಸ್ತ್ರ ಹಾಗೂ ಫಿರಂಗಿಗಳ ಮುಂದೆ ದೇಶೀಯ ಆಯುಧಗಳು ತಡೆಯದಾದವು.

**ರಕ್ತದ ಕಾಲ್ವೆ ಹರಿದು ಸತ್ತಹೆಣ ತೇಲಿ ಹೋಗಿ**

**ಸಂಸ್ಥಾನ ಪತನವಾಯಿತು ಒಂದು ದಿವಸಕ್ಕೆ ||**

**ನಾಲವತ್ತಾರ ವಯಸ್ಸಿನ ಚನ್ನಮ್ಮ ರಾಣಿಯವರನ್ನ |**

**ಸ್ಥಾನಬದ್ಧ ಮಾಡಿ ಇಟ್ರು ಬೈಲಹಂಗಲಕ ||**

ಮಲ್ಲಪ್ಪಶೆಟ್ಟಿ ಮುಂತಾದ ದೇಶದ್ರೋಹಿಗಳ ಕರಾಮತ್ತಿಗೆ ಕಿತ್ತೂರು ಆಹುತಿಯಾಯಿತು.

**ಎಂಥದು ಕಿತ್ತೂರು ಅಂಥಲ್ಲಿ ಹಾಳಾತು**

**ಕೆಂಪುಮೋತಿಯವರು ಬಲಿಹೂಡಿ। ಚನ್ನವನ**

**ಚಿತ್ರದ ಮೂಲ ಅಳಬಾರವ್ವ!**

ಎಂಬಂತೆ ಚನ್ನಮ್ಮ ಹಾಗೂ ಇನ್ನಿತರ 40 ಸರದಾರರನ್ನು ಬಂಧಿಸಲಾಯಿತು. ಮುಂದೆ ಸಂಗೊಳ್ಳಿ ರಾಯಣ್ಣ ಮುಂತಾದ ಶೂರರು ಎಷ್ಟೇ ಹೋರಾಡಿದರೂ ನಾಡಿಗೆ ಸ್ವಾತಂತ್ರ್ಯ ಬರದಾಯಿತು. ಇದೇ ಚಿಂತೆಯಲ್ಲಿ ಚನ್ನಮ್ಮ 1829ರ ಫೆಬ್ರುವರಿ 2 ರಂದು ಬೈಲಹೊಂಗಲದ ಜೈಲಿನಲ್ಲಿಯೇ ವೀರಮರಣವನ್ನಪ್ಪಿದಳು. ಆದರೆ ಭಾರತದ ಸ್ವಾತಂತ್ರ್ಯಾಂದೋಲನಕ್ಕೆ ಚಿರಸ್ಫೂರ್ತಿಯಾಗಿ ಇತಿಹಾಸದಲ್ಲಿ ಉಳಿದುಕೊಂಡಳು. ಕಿತ್ತೂರಿಗೆ ಭೆಟ್ಟಿ ನೀಡಿದ್ದ ದಿವಂಗತ ಪ್ರಧಾನಿ ಇಂದಿರಾಗಾಂಧಿಯವರು "High among the names of those who fought the establishment of British Rule in India, is that of the brave Karnataka queen Rani Chennamma of Kittur" ಎಂದು ಬರೆದು ರಾಣಿ ಚನ್ನಮ್ಮ ಭಾರತೀಯರ ಚಿರಸ್ಮರಣೆಯಲ್ಲುಳಿದು ನಮ್ಮ ಯುವ ಜನಾಂಗಕ್ಕೆ ಯಾವತ್ತೂ ಸ್ಫೂರ್ತಿ ನೀಡುತ್ತಿರುತ್ತಾಳೆಂದು ಬಣ್ಣಿಸಿದ್ದಾರೆ.

ಈಗ ಕಿತ್ತೂರಿನ ಕೋಟೆ ಕ್ಷೀಣಿಸಿದರೂ ಚನ್ನಮ್ಮನ ಹೆಸರಿನಲ್ಲಿ ಬಾಲಕಿಯರಿಗಾಗಿ ಸೈನಿಕ ಶಾಲೆಯ ಮಾದರಿಯಲ್ಲಿ ಒಂದು ಸುಸಜ್ಜಿತ ಭವ್ಯ ವಸತಿ ಶಾಲೆ ನಡೆಯುತ್ತಿದೆ.

ಬೆಳಗಾವಿಯ ಸ್ನಾತಕೋತ್ತರ ಕೇಂದ್ರಕ್ಕೆ ಚನ್ನಮ್ಮ ರಾಣಿಯ ಹೆಸರಿಡಲಾಗಿದೆ. ಚನ್ನಮ್ಮನ ವಿಜಯೋತ್ಸವದ ದಿನವಾದ ಅಕ್ಟೋಬರ್ 23ನ್ನು ಮಹಿಳಾ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಇಷ್ಟಾಗಿದ್ದರೂ ರಾಣಿ ಚನ್ನಮ್ಮನ ಪುತ್ಥಳಿಯೊಂದನ್ನು ದೇಶದ ರಾಜಧಾನಿ ದೆಹಲಿಯಲ್ಲಿ ಇನ್ನೂ ಪ್ರತಿಷ್ಠಾಪನಗೊಳಿಸಬೇಕಾಗಿದೆ. ಅಲ್ಲಿಯ ಪ್ರಮುಖ ರಸ್ತೆ, ವೃತ್ತಗಳಿಗೆ ಅವಳ ಹೆಸರಿಡುವುದು ಇನ್ನೂ ಬಾಕಿ ಇದೆ. ಕರ್ನಾಟಕದ ಕೀರ್ತಿ ಪತಾಕೆ ರಾಜ್ಯದ ಹೊರಗೂ ಹಾರಬೇಕಿದೆ. ಅದಷ್ಟು ತೀವ್ರ ಇದು ಕೂಡಿ ಬರಲಿ. ರಾಣಿ ಚನ್ನಮ್ಮನೇ ಸ್ವಾತಂತ್ರ್ಯ ಸಂಗ್ರಾಮದ ಪ್ರಥಮ ಕಿಡಿಹಾರಿಸಿದ್ದು ಎಂಬುದು ಕರ್ನಾಟಕದ ಹೊರಗಿನವರಿಗೂ ಮನವರಿಕೆಯಾಗಲಿ.

## ಸೆಪ್ಟೆಂಬರ್ 11

ವಿಶ್ವದ ಅತಿ ಬಲಿಷ್ಠ ರಾಷ್ಟ್ರವೆಂದೆನಿಸಿದ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಹಲವಾರು ಬಾರಿ ಹಿರಿಯಣ್ಣನ ಪಾತ್ರ ವಹಿಸುವ ಅಮೇರಿಕದ ಪ್ರತಿಷ್ಠಿತ ವಿಶ್ವ ವಾಣಿಜ್ಯ ಕೇಂದ್ರದ ಹೆಮ್ಮೆಯ ಜೋಡಿ ಕಟ್ಟಡಗಳು ಕುಸಿದು ಕಣ್ಮರೆಯಾಗಿ ವರ್ಷವೊಂದು ಕಳೆಯುತ್ತಿದೆ. ಹನ್ನೊಂದರ (11) ಸಂಖ್ಯೆಯೇ ಪ್ರತಿಬಿಂಬಿಸುವಂತೆ ಅಕ್ಕಪಕ್ಕದಲ್ಲಿ ರಾಮಾಯಣದ ರಾಮಲಕ್ಷ್ಮಣರಂತೆ ಕಂಗೊಳಿಸುತ್ತಿದ್ದ ಈ ಬೃಹತ್ ಕಟ್ಟಡಗಳು ಒಟ್ಟು 110 ಅಂತಸ್ತುಗಳನ್ನು ಹೊಂದಿದ್ದವು.

ಜಗತ್ತಿನಲ್ಲಿ ಯಾವುದೇ ಕ್ಷೇತ್ರದಲ್ಲಿ ತಾನೇ ಮುಂದು- ಶಿಕ್ಷಣ, ಸಂಶೋಧನೆ, ವಿಜ್ಞಾನ-ತಂತ್ರಜ್ಞಾನ, ವಾಣಿಜ್ಯ -ವ್ಯಾಪಾರ ಕೃಷಿ- ಹೀಗೆ ಎಲ್ಲದರಲ್ಲೂ ವಿಕ್ರಮವನ್ನೆ ಸಾಧಿಸಿಕೊಂಡು ಬಂದಿರುವ ಯು.ಎಸ್.ಎ (ಅಮೇರಿಕ ಸಂಯುಕ್ತ ಸಂಸ್ಥಾನಗಳು) ತನ್ನೆಲ್ಲ ಪ್ರಗತಿ ಪ್ರಾಬಲ್ಯಗಳ ಹೊರತಾಗಿಯೂ ಒಸಾಮಾ ಬಿನ್ ಲಾಡೆನ್ ಎಂಬ ಒಬ್ಬ ವ್ಯಕ್ತಿಯ ಪಾಶವೀ ಶಕ್ತಿಯ ಮುಂದೆ ತತ್ತರಿಸಿ ಹೋದದ್ದು, ಕುಯುಕ್ತಿಯೆದುರು ಕಂಗಾಲಾದದ್ದು ಈಗ ಇತಿಹಾಸ. ಅಸುರ ಶಕ್ತಿಗಳಿಗೆ ಜಯ ಕ್ಷಣಿಕವಾದದ್ದಾದರೂ ಈವರೆಗೂ ಆ ನರಹಂತಕನ ಹುಡುಕಾಟ ನಡದೇ ಇದ್ದದ್ದು ಅತ್ಯಂತ ವಿಪರ್ಯಾಸ. ಸಾವಿರಾರು ಜನ ಸತ್ತದ್ದು, ಸಾವಿರಾರು ಕೋಟಿಗಳ ಆಸ್ತಿ ನಾಶವಾದದ್ದು ಕಬ್ಬಿಣದ ಕರಳುಗಳನ್ನೂ ಸಹ ಕರಗಿಸುವಂತಹುದು.

ಐದು ವರ್ಷಗಳ ಹಿಂದೆ ನಾನು ಡೆಟ್ರಾಯ್ಟ್ ಹಾಗೂ ಕ್ಯಾಲಿಫೋರ್ನಿಯಾಗಳಿಗೆ ಭಾಷಣ ನೀಡಲು ಹೋದಾಗ ನನ್ನ ಪತ್ನಿಯ ಜೊತೆ ಪ್ರಪ್ರಥಮವಾಗಿ ಕಾಲಿಟ್ಟದ್ದು ಅಮೇರಿಕಾದ ನ್ಯೂಯಾರ್ಕ್ ಮಹಾನಗರದಲ್ಲಿ. ಅಲ್ಲಿ ಸಂಯುಕ್ತ ರಾಷ್ಟ್ರಸಂಘ (ಯು.ಎನ್.ಒ), ಎಂಪಾಯರ್‌ಸ್ಟೇಟ್ಸ್ ಬಿಲ್ಡಿಂಗ್ ಮುಂತಾದ ಜಗತ್ಪ್ರಸಿದ್ಧ ಕಟ್ಟಡಗಳಲ್ಲಿ ಎದ್ದು ಕಾಣುವಂತಹವು ಈ ಡಬ್ಲ್ಯು.ಟಿ.ಸಿ.ಯ (ವಿಶ್ವ ವಾಣಿಜ್ಯ ಕೇಂದ್ರದ) ಅವಳಿ ಕಟ್ಟಡಗಳು ಇವುಗಳಲ್ಲಿ ಅರ್ಧದಿನ ಸುತ್ತಾಡಿದ್ದು ಅಲ್ಲಿಯ ಲಿಫ್ಟ್, ಎಸ್ಕಲೇಟರ್‌ಗಳಲ್ಲಿ ತೇಲಾಡಿದ್ದು, ಎದುರಿಗೆ ನಿಂತು ಫೋಟೋ ತೆಗೆಯಿಸಿಕೊಂಡಿದ್ದು ಈಗ ಬರೀ ನೆನಪು.

ವಿಶ್ವದ ಅತಿ ದೊಡ್ಡ ಉದ್ದಿಮೆ, ವ್ಯಾಪಾರಿ ಸಂಸ್ಥೆಗಳ ಕೇಂದ್ರ ಕಚೇರಿಗಳು ದಿನನಿತ್ಯ ಸಾವಿರ ಸಾವಿರ ಕೋಟಿ ಡಾಲರ್‌ಗಳ ವಹಿವಾಟು ಮಾಡುತ್ತಿದ್ದ ಈ ಸ್ಥಳ ಇಂದು 'ಗ್ರೌಂಡ್ ಝೀರೋ' (ಶೂನ್ಯ ನೆಲ) ಎಂದು ಕರೆಯಲ್ಪಡುತ್ತಿದೆ. ಲಕ್ಷಾಂತರ ಜನ ನಿಬಿಡ ಸ್ಥಾನವಾಗಿದ್ದ ಇದು ಇಂದು ಬಟಾಬಯಲಾಗಿ ಹುತಾತ್ಮರ, ದೇಶಭಕ್ತರ ಸ್ಮಾರಕ ಸ್ಥಾನವಾಗಿ ಬಿಟ್ಟಿದ್ದು ಹೃದಯವಿದ್ರಾವಕ ಸಂಗತಿ.

ಹೋದ ವರ್ಷ ಸೆಪ್ಟೆಂಬರ್ 11ರಂದು ಉರಿಯುತ್ತ ನೆಲಕ್ಕುರುಳಿದ ಈ ಬೃಹತ್ ಅವಳಿ-ಜವಳಿ ಕಟ್ಟಡಗಳು, ಜಗತ್ತಿನಲ್ಲಿ ಜೀವನ ಮೌಲ್ಯಗಳು ಹೇಗೆ ಅಧಃಪತನಗೊಳ್ಳುತ್ತಿವೆ ಎಂಬುದಕ್ಕೆ ಚಾರಿತ್ರಿಕ ಸಾಕ್ಷಿ. ಈ ಸಂದರ್ಭದಲ್ಲಿ ಅಮೇರಿಕದ ಸುಪ್ರಸಿದ್ಧ ಚಿಂತಕ, ಇತಿಹಾಸಕಾರ ವಿಲ್‌ಡುರಾಂಟ್‌ರವರು ಭಾರತೀಯ ಗ್ರಂಥಗಳ ಆಳ ಅಧ್ಯಯನದ ನಂತರ ಆಡಿದ ಮಾತುಗಳು... Mother India mother of all of us in many ways...ಇದು ಅಂದಿಗಿಂತ ಇಂದು ಹೆಚ್ಚು ಪ್ರಸ್ತುತ ಎನಿಸುತ್ತಿವೆ. ಪಂಪನ "ಮನುಷ್ಯ ಜಾತಿ ತಾನೊಂದೆ ವಲಂ" ಎಂಬ ಸಾವಿರ ವರ್ಷದ ಹಳೆಯ ಮಾತು, ಅದಕ್ಕೂ ಬಹು ಹಿಂದಿನ 'ಸರ್ವೇಜನಃ ಸುಖಿನೋಭವಂತು' ಎಂಬ ವೇದವಾಕ್ಯ, ಬುದ್ಧಮಹಾವೀರರ ಶಾಂತಿ ಸಂದೇಶ, ಶರಣರ ಸಮಾಜ ಸಮಾನತೆಯ ವಚನ ಸಾಹಿತ್ಯ, ದಾಸರ ಪದಗಳು, ಗಾಂಧೀಜಿಯ ಇಂಟರ್‌ನ್ಯಾಶನಲ್ ಬ್ರದರ್ ಹುಡ್ (ಅಂತರಾಷ್ಟ್ರೀಯ ಸಹೋದರತ್ವ ಸಿದ್ಧಾಂತ) ಇಂದು ಜಗತ್ತು ಪುನಃ ಪುನಃ ತಿರುವಿಹಾಕಿ ಮನನ ಮಾಡಿಕೊಳ್ಳಬೇಕಾದ ಪುಟಗಳು, ಅನುಷ್ಠಾನಗೊಳಿಸಬೇಕಾದ ಅಂಶಗಳು.

ಪುರಾಣ ಕತೆಗಳಲ್ಲಿ ತಾನೇ ಹುಟ್ಟಿಸುವ ಅಸುರ ಶಕ್ತಿಗಳು ತನ್ನನ್ನು, ತನ್ನ ಕುಟುಂಬ ಹಾಗೂ ನೆರೆಹೊರೆಯವರನ್ನು ಪೀಡಿಸಿದಾಗ ಕಣ್ತೆರೆಯುವ ದೇವಾನುದೇವತೆಗಳಂತೆ ಇಂದು ಕೂಡಾ ಯಾವುದೇ ಒಂದು ವಿಪರೀತ ಉದ್ದೇಶ ಸಾಧನೆಗಾಗಿ, ದುಷ್ಟಶಕ್ತಿಗಳಿಗೆ, ಭಯೋತ್ಪಾದಕರಿಗೆ ಬೆಂಬಲ ನೀಡಿ ಆ ರಾಕ್ಷಸ ತಿರುಗಿಬಿದ್ದಾಗ ಒದ್ದಾಡುವ ಈ ಬೃಹತ್ ರಾಷ್ಟ್ರಗಳು ಈಗಲಾದರೂ ತಿಳಿದುಕೊಳ್ಳಬೇಕಾಗಿದೆ: ಹಿಂಸೆಯಿಂದ ಹಿಂಸೆ ಕಡಿಮೆಯಾಗದು, ಕುಹಕತನಕ್ಕೆ ಕುಮ್ಮಕ್ಕು ನೀಡುವುದರಿಂದ ಆಗುವ ಲಾಭಕ್ಕಿಂತ ಹಾನಿಯೇ ಹೆಚ್ಚು. ಬೇರೆ ರಾಷ್ಟ್ರಗಳಿಗೆ ಪರಸ್ಪರ ಭಿನ್ನಾಭಿಪ್ರಾಯವಿದ್ದಾಗ ಅದರಿಂದ ತಮ್ಮ ಶಸ್ತ್ರಾಸ್ತ್ರ ವ್ಯಾಪಾರ ಕುದುರಿಸಿಕೊಳ್ಳುವುದು ಮುಂದೆ ಒಮ್ಮೆ ತಮಗೇ ಕುತ್ತು ತರಬಹುದು ಎಂಬುದನ್ನು.

ಜಿಮೂತವಾಹನನು 'ಕ್ಷಣಿಕ ಸುಖಕ್ಕಾಗಿ ಮಾನವರು ಪಾಪ ಮಾಡುವರಲ್ಲ' ಎಂದು ಹೇಳುತ್ತ ತನ್ನ ದೇಹವನ್ನೆ ತ್ಯಾಗ ಮಾಡಲು ಸಿದ್ಧನಾದದ್ದು, ದಯವೇ ಧರ್ಮದ ಮೂಲ, ಇವನ್ಯಾರವ ಇವನ್ಯಾರವ ಎಂದೆನಿಸದೆ ಇವ ನಮ್ಮವ ಎಂಬುದು, ಎಲ್ಲಕ್ಕೂ ಹೆಚ್ಚಾಗಿ ಅಹಿಂಸಾ ಪರಮೋ ಧರ್ಮ ಎಂಬ ಆದರ್ಶಗಳು ಪುನಃ ನಮ್ಮ ಮಾರ್ಗದರ್ಶಿಗಳಾಗಲಿ, ಜಗತ್ತೇ ನನ್ನ ಮನೆ, ಮಾನವ ಕುಲವೇ ನನ್ನ ಕುಟುಂಬ ಎಂಬುದು ಚಿರಸ್ಥಾಯಿಯಾಗಲಿ ಎಂದು ಹಾರೈಸೋಣ.

# ಕಂಠಿಯವರು-ನಿಜಲಿಂಗಪ್ಪನವರು:

# ಒಂದು ಅನ್ಯೋನ್ಯ ಸಂಬಂಧ

ರಾಜಕಾರಣದಲ್ಲಿ ಶಾಶ್ವತ ಶತ್ರುಗಳಾಗಲಿ ಅಥವಾ ಶಾಶ್ವತ ಮಿತ್ರರಾಗಲಿ ಇರುವುದು ಅಸಾಧ್ಯವೆಂಬ ಮಾತು ಬಹುತೇಕ ನಿರ್ವಿವಾದ. ರಾಜಕಾರಣದ ಶಕ್ತಿ ಸ್ವರೂಪವೇ ಅಂತಹುದು. ರಾಜಕೀಯ ದಾಳಗಳನ್ನು ಪ್ರಪ್ರಥಮವಾಗಿ ಚಾಕಚಕ್ಯತೆಯಿಂದ ಯಶಸ್ವಿಯಾಗಿ ಪ್ರಯೋಗಿಸಿದವನು ಸಾಕ್ಷಾತ್ ಶ್ರೀಕೃಷ್ಣ ಪರಮಾತ್ಮನೆಂದೇ ಹೇಳಬಹುದು. ಆದ್ದರಿಂದಲೇ ವ್ಯೂಹ ರಚನೆಗೆ ಕೃಷ್ಣಗಾರುಡಿ ಎಂದು ಹೆಸರು. ಎದುರಾಳಿಯನ್ನು ಬಗ್ಗುಬಡಿಯಲು ಬೇಕಾದ ಬುದ್ಧಿಮತ್ತೆ, ಚಾಣಕ್ಷ ನೀತಿ ನಿರೂಪಣೆ, ದೂರದರ್ಶಿತ್ವ ರಾಜಕಾರಣಕ್ಕೆ ಬೇಕಾಗುವ ಅವಶ್ಯಕ ಪರಿಕರಗಳು. ಪರಸ್ಪರ ಮೇಲಾಟದಲ್ಲಿ ಒಮ್ಮೆ ಮಿತ್ರನಾದವನು ಮತ್ತೊಮ್ಮೆ ಶತ್ರು ಮಗದೊಮ್ಮೆ ಭ್ರಾತೃ, ಆಗಾಗ ಶತ್ರುವಿನ ಶತ್ರು ಮಿತ್ರ, ಮಿತ್ರನ ಶತ್ರು ಶತ್ರು ಹೀಗೆಯೇ ಸಂಬಂಧಗಳು ಸರಾಗವಾಗಿ ಅಥವಾ ಅಷ್ಟೇ ಏರುಪೇರಾಗಿ ಹೆಚ್ಚು ಕಡಿಮೆಯಾಗುತ್ತ ನಡೆದೇ ಇರುತ್ತವೆ. ಧರ್ಮ ನಮ್ಮ ಸಮೂಹದ ಅಫೀಮು ಎಂದು ಕಾರ್ಲ್‌ಮಾರ್ಕ್ಸ್ ಹೇಳಿದ ಮಾತು ಇಂದಿನ ರಾಜಕೀಯ ವಲಯಕ್ಕೂ ಅನ್ವಯಿಸುತ್ತದೆ. ಹಳ್ಳಿಯಿಂದ ದಿಲ್ಲಿಯವರೆಗೂ ಎಂಬ ನಾಣ್ಣುಡಿಯೊಂದಿಗೆ ಅಬ್ ದಿಲ್ಲಿ ದೂರ್ ನಹಿ ಎಂಬ ಇಂದಿರಾ ಗಾಂಧೀಯವರ ಉಕ್ತಿ ಜನಸಾಮಾನ್ಯನೂ ರಾಜಕೀಯದಲ್ಲಿ ಎಷ್ಟೊಂದು ಸಕ್ರಿಯ ಎಂಬುದನ್ನು ಸಾಬೀತುಪಡಿಸುತ್ತವೆ. ಈ ಒಂದು ಹಿನ್ನೆಲೆಯಲ್ಲಿ ಈ ಕ್ಷೇತ್ರದಲ್ಲಿ ವ್ಯಕ್ತಿ-ವ್ಯಕ್ತಿಗಳ ಸಂಬಂಧ ಎಷ್ಟೊಂದು ಶಿಥಿಲ ಎನ್ನುವುದನ್ನು ಕಾಣಬಹುದಾಗಿದೆ. ಇಷ್ಟೆಲ್ಲ ಇದ್ದಾಗ ಅಪವಾದವೆಂಬಂತೆ ಅಲ್ಲೊಂದು-ಇಲ್ಲೊಂದು ಗಾಢ ಮಾನವೀಯ ನೆಲೆಯ ಸಂಬಂಧಗಳು ರಾಜಕಾರಣದಲ್ಲೂ ಮಿನುಗುತ್ತಿರುತ್ತವೆ. ಇಂತಹ ಒಂದು ಅಪರೂಪದ ಮಾದರಿ ಎಸ್.ಆರ್.ಕಂಠಿ ಹಾಗೂ ಎಸ್.ನಿಜಲಿಂಗಪ್ಪನವರ ಸಂಬಂಧ.

ವಯಸ್ಸಿನ ದೃಷ್ಟಿಯಿಂದ ನಿಜಲಿಂಗಪ್ಪನವರು ಶಿವಲಿಂಗಪ್ಪ (ಕಂಠಿ)ಅವರಿಗೆ ಆರು ವರ್ಷ ಹಿರಿಯರು. ಒಬ್ಬರು 1902ರಲ್ಲಿ ಹುಟ್ಟಿದ್ದರೆ ಇನ್ನೊಬ್ಬರು 1908ರಲ್ಲಿ. ಒಂದೆಡೆ ನಿಜಲಿಂಗಪ್ಪನವರೇ ಹೇಳುವಂತೆ ತಮಗೆ ಕಂಠಿಯವರು 1945ರಷ್ಟು ಹಿಂದಿನಿಂದಲೇ ಪರಿಚಿತರು. ಅಂದರೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಿಂದಲೂ ಒಬ್ಬರನ್ನೊಬ್ಬರು ಬಲ್ಲವರು. ಗುರಿಯೊಂದೆ (ಸ್ವಾತಂತ್ರ್ಯ), ಗುರು ಒಂದೇ (ಗಾಂಧೀ), ಆಗಿದ್ದುದರಿಂದ ಈ ಸಂಬಂಧ ಸಹಜವಾಗಿಯೇ ಅನ್ಯೋನ್ಯವಾಗುತ್ತ ನಡೆಯಿತು. ಈ ಈರ್ವರೂ ಮಹನೀಯರು ಒಬ್ಬರಿಗೊಬ್ಬರು ತೀರ ಸಮೀಪ ಬಂದದ್ದು ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಏಕೀಕರಣ ಪೂರ್ವದ ಕರ್ನಾಟಕ ಐದು ಭಾಗಗಳಲ್ಲಿ ಹರಿದು ಹಂಚಿ ಹೋಗಿತ್ತು. ಬ್ರಿಟೀಷರು ಭಾರತವನ್ನು ಮಿಲಿಟರಿ, ಆಡಳಿತ ಮತ್ತು ರಾಜಕೀಯ ದೃಷ್ಟಿಯಿಂದ ಮಾತ್ರವೇ ಪ್ರಾವಿನ್ಸ್‌ಗಳಾಗಿ ವಿಭಾಗಿಸಿದ್ದರು. ಜನರ ಭಾಷೆ, ಪ್ರಾದೇಶಿಕತೆ, ಅನುಕೂಲತೆಗಳನ್ನು ನೋಡಿಯೇ ಇರಲಿಲ್ಲ. ಇದರಿಂದಾಗಿ ಒಂದು ಭಾಷೆಯನ್ನಾಡುವ ಜನ ಒಂದು ರಾಜ್ಯವಾಗಿ ಉಳಿದಿರಲಿಲ್ಲ. ಹೀಗಾಗಿ ಭಾಷಾವಾರು ಪ್ರಾಂತದ ರಚನೆಯ ಬೇಡಿಕೆ ದೇಶದಾದ್ಯಂತ ಇಡೀ ಸಮೂಹದ ಹಾಗೂ ನಾಯಕರ ಒಕ್ಕೊರಲಿನ ಕೂಗಾಗಿತ್ತು. ದೇಶದ ಇತರಡೆಯಂತೆಯೇ ಕನ್ನಡಿಗರೂ ತಮಗೊಂದು ಪ್ರತ್ಯೇಕ ರಾಜ್ಯಬೇಕೆಂದು ಒತ್ತಾಯಿಸುತ್ತಿದ್ದರು. ಕಾಂಗ್ರೆಸ್ ಕೂಡ ತನ್ನ ಪ್ರಣಾಳಿಕೆಯಲ್ಲಿಯೇ ಭಾಷಾವಾರು ಪ್ರಾಂತರಚನೆಯ ಅಂಶವನ್ನು

ಅಳವಡಿಸಿಕೊಂಡಿತ್ತು. ಕಟ್ಟಾ ಕಾಂಗ್ರೆಸ್ ಹಾಗೂ ಹುಟ್ಟು ಕನ್ನಡಿಗರಾದ ನಿಜಲಿಂಗಪ್ಪ ಹಾಗೂ ಕಂಠಿಯವರು ಕರ್ನಾಟಕ ಏಕೀಕರಣದ ಕನಸನ್ನು ಕಂಡು ಅದನ್ನು ನನಸು ಮಾಡಿಕೊಳ್ಳುವಲ್ಲಿ ಅಹರ್ನಿಸಿ ದುಡಿದ ಅಗ್ರಗಣ್ಯರು.

1950ರ ದಶಕದ ಪ್ರಾರಂಭದ ಭಾಗದಲ್ಲಂತೂ ಕನ್ನಡಿಗರ ತಾಳ್ಮೆಯ ಕಟ್ಟೆ ಒಡೆದುಹೋಯಿತು. ನೋಡಿದೆಡೆಯಲ್ಲ ಚಳುವಳಿ, ಹರತಾಳ, ಪ್ರತಿಭಟನೆಗಳು ನಡೆಯತೊಡಗಿದವು. ದೇಶದ ಇನ್ನಿತರ ಕಡೆಗಳಿಂದಲೂ ರಾಜ್ಯಗಳ ಪುನರ್ ವಿಂಗಡನೆಗಾಗಿ ಬೇಡಿಕೆಗಳು ಬರತೊಡಗಿದವು. ಅಂದಿನ ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿ ಎಸ್. ನಿಜಲಿಂಗಪ್ಪನವರ ನೇತೃತ್ವದಲ್ಲಿ 1953ರ ಏಪ್ರಿಲ್‌ನಲ್ಲಿ ಸಭೆಯೊಂದನ್ನು ನಡೆಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಎಲ್ಲ ಪದಾಧಿಕಾರಿಗಳು ಮತ್ತು ಎಲ್ಲ ವಿಧಾನಸಭೆ, ಪರಿಷತ್ತು ಮತ್ತು ಸಂಸತ್ತಿನ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕೆಂದು ಠರಾವೊಂದನ್ನು ಪಾಸು ಮಾಡಿತು.

ಇಷ್ಟಾದರೂ ದೆಹಲಿಯ ಕಾಂಗ್ರೆಸ್ ಮುಖಂಡರು ಏಕೀಕರಣದ ಪರವಾಗಿ ಒಲವು ತೋರಿಸಲಿಲ್ಲ. ಆದರೆ ನಿಜಲಿಂಗಪ್ಪನವರ ನೇತೃತ್ವದ ನಿಯೋಗ, ಪ್ರಧಾನಿ ಜವಾಹರಲಾಲ್ ನೆಹರುರವರನ್ನು ಭೇಟಿ ಮಾಡಿ ತೀರಾ ಒತ್ತಾಯ ಮಾಡಿದ ಮೇಲೆ **'ಫಜಲ್ ಅಲಿ ಆಯೋಗ**'ದ ರಚನೆಗೆ ಒಪ್ಪಿಕೊಂಡರು ಕನ್ನಡಿಗರ ಒತ್ತಾಯ ಎಷ್ಟೊಂದು ಶಕ್ತಿಶಾಲಿಯಾಗಿತ್ತೆಂದರೆ ಈ ಆಯೋಗ ಕರ್ನಾಟಕಕ್ಕೆ ಭೇಟಿ ನೀಡಲೇಬೇಕಾಯಿತು. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಮನವಿ ಪತ್ರ ಸಮಿತಿಯನ್ನೂ ರಚಿಸಲಾಗಿತ್ತು. ಅಖಂಡ ಕರ್ನಾಟಕದ ವತಿಯಿಂದ 'ಕರ್ನಾಟಕ ರಾಜ್ಯ ಮನವಿ ಪತ್ರ ಸಮಿತಿ'ಯ ಪರವಾಗಿ ಕಾರ್ಯದರ್ಶಿಯಾಗಿದ್ದ ಕಂಠಿಯವರೇ ಮನವಿ ಸಲ್ಲಿಸಿದರು. ಹೀಗೆ ಈ ಏಕೀಕರಣ ಸಮಿತಿಯ ಅಧ್ಯಕ್ಷ ಹಾಗೂ ಕಾರ್ಯದರ್ಶಿಯ ಎರಡು ಮಹತ್ವದ ಸ್ಥಾನಗಳನ್ನಲಂಕರಿಸಿದ ಈ ಮಹನೀಯರಿರ್ವರು ಅತ್ಯಂತ ಆತ್ಮೀಯವಾಗಿ ಬೆಳೆದು ಬಂದರು. ನವಮೈಸೂರು ರಾಜ್ಯದ ರಚನೆಯಾದಾಗ (1956ರ ನವೆಂಬರ್ 1ರಂದು) ಹಲವಾರು ಕಾರಣಗಳಿಂದಾಗಿ ಈ ಸಂಬಂಧ ಗಾಢವಾಗುತ್ತಲೇ ನಡೆಯಿತು.

ನಿಜಲಿಂಗಪ್ಪ ಹಾಗೂ ಕಂಠಿಯವರಿಬ್ಬರೂ ಗಾಂಧೀವಾದಿಗಳು, ಕಾಂಗ್ರೆಸ್ಸಿಗರು, ಸರಳಜೀವಿಗಳು, ಸಾತ್ವಿಕರು, ಶುದ್ಧಹಸ್ತರು, ಸಂಪೂರ್ಣ ಖಾದಿಧಾರಿಗಳು, ಅಪ್ಪಟ ದೇಶಭಕ್ತರು, ಕನ್ನಾಡಾಭಿಮಾನಿಗಳು ಅಂತೆಯೇ ಸಮಾನ ಮನಸ್ಕರು. ಈ ಈರ್ವರೂ ರಾಜ್ಯದ ಮುಖ್ಯಮಂತ್ರಿಗಳಾಗಿದ್ದವರು. ಇಪ್ಪತ್ತನೇ ಶತಮಾನದ ಮಧ್ಯಭಾಗ (1945-69) ಕಂಡ ಕರ್ನಾಟಕದ ರಾಜಕೀಯ ಬಾನಿನ ಜೋಡಿ ಧೃವನಕ್ಷತ್ರಗಳಿವು. ಈ ರಾಷ್ಟ್ರ ರಾಜಕಾರಣದಲ್ಲಿ ನಿಜಲಿಂಗಪ್ಪ ಉತ್ತುಂಗ ಶಿಖರಕ್ಕೇರಿದವರು, ಅವರ ಹಿಂದೆ ಹಿಂದೆ ಇದ್ದವರು ಕಂಠಿಯವರು.

ನವಮೈಸೂರು ರಾಜ್ಯದ ಮುಖ್ಯಮಂತ್ರಿಗಳಾಗಿ ನಿಜಲಿಂಗಪ್ಪನವರು ಆಯ್ಕೆಯಾದರೆ ನಂತರದ ಮಹತ್ವದ ಸ್ಥಾನವಾದ ವಿಧಾನಸಭಾಧ್ಯಕ್ಷ ಹುದ್ದೆಗೆ ಕಂಠಿಯವರನ್ನು ಆರಿಸಲಾಯಿತು. ಆಗ ನಿಜಲಿಂಗಪ್ಪನವರು ಕಂಠಿಯವರನ್ನು ಅಭಿನಂದಿಸುತ್ತ, "ಸ್ವಾಮಿ, ನಾನು ಈ ಸಭೆಯ ನಾಯಕನಾಗಿ ಈ ಸಭೆಯ ಪರವಾಗಿ ತಮ್ಮನ್ನು ಅತ್ಯಾದರದಿಂದ ಸ್ವಾಗತಿಸುತ್ತೇನೆ. ತಮ್ಮ ಪರಿಚಯ ಇಲ್ಲಿ ಅನೇಕರಿಗೆ ಇಲ್ಲದೆ ಹೋದರೂ ಬಹಳ ಜನರಿಗೆ ತಾವು ಪರಿಚಿತರಾಗಿದ್ದೀರಿ, ನಾನು ತಮ್ಮನ್ನು ಈಗ ಸುಮಾರು ಹನ್ನೊಂದು ವರ್ಷಗಳಿಂದ

ಬಲ್ಲೆ. ಮತ್ತು ಅನೇಕ ಸಂದರ್ಭಗಳಲ್ಲಿ ತಮ್ಮ ಸಹವಾಸದ ಫಲ ನನಗೆ ದೊರೆಯಿತು. ತಾವು ಈ ಜೀವನಕ್ಕೆ ಹೊಸಬರಲ್ಲ. 1946ನೇ ಇಸವಿಯಿಂದ ಬೊಂಬಾಯಿನ ವಿಧಾನಸಭೆಯ ಸದಸ್ಯರಾಗಿ ಅತ್ಯಂತ ದಕ್ಷತೆಯಿಂದ ಕೆಲಸ ಮಾಡಿದ್ದೀರಿ. ತಮ್ಮ ದಕ್ಷತೆ ಮತ್ತು ಹಿಂದೆ ದೇಶಕ್ಕೆ ತಾವು ಸಲ್ಲಿಸಿರತಕ್ಕ ಸೇವೆಯನ್ನು ಮನಗಂಡು ಬೊಂಬಾಯಿ ಸರ್ಕಾರದಲ್ಲಿ ತಾವು ಪಾರ್ಲಿಮೆಂಟರಿ ಕಾರ್ಯದರ್ಶಿಯಾಗಿ ನೇಮಿತರಾಗಿ ಪರಿಣಾಮಕಾರಿಯಾದ ಕೆಲಸಗಳನ್ನು ನಡೆಸಿಕೊಂಡು ಬಂದಿರಿ. ಹೋದ ಚುನಾವಣೆಗಳಲ್ಲಿ ತಾವು ಅದೇ ಬೊಂಬಾಯಿನ ವಿಧಾನಸಭೆಯ ಸದಸ್ಯರಾಗಿ ಚುನಾಯಿಸಲ್ಪಟ್ಟು ಆ ಸಭೆಯು ತಮ್ಮನ್ನು ಒಮ್ಮತದಿಂದ ಆ ಸಭೆಯ ಉಪಸಭಾಪತಿಯನ್ನಾಗಿ ಚುನಾಯಿಸಿಕೊಂಡಿತು. ಅಂದಿನಿಂದ ಇಲ್ಲಿಯವರೆಗೂ ತಾವು ಎಲ್ಲರ ಮೆಚ್ಚಿಗೆಗೂ ಪಾತ್ರರಾಗಿ ಕೆಲಸ ನಿರ್ವಹಿಸಿಕೊಂಡು ಬಂದಿರಿ. ತಮ್ಮಸಹನೆ, ದಕ್ಷತೆ, ಅನುಭವ, ತಾರತಮ್ಯ ಭಾವನೆ ಮತ್ತು ನಿಷ್ಪಕ್ಷಪಾತ ದೃಷ್ಟಿ ಅಲ್ಲಿ ಸ್ಪಷ್ಟಪಟ್ಟಿತು. ಅದರ ಕಾರಣವಾಗಿ ಇಲ್ಲಿ ತಮ್ಮನ್ನು ನಾವು ಒಮ್ಮತದಿಂದ ಚುನಾಯಿಸಿದ್ದೇವೆ. ಇದು ಹೆಮ್ಮೆಯ ಮಾತು...

ಹೀಗೆ ತಮ್ಮ ಬಗ್ಗೆ ಅಪಾರ ಪ್ರೀತಿ ವಿಶ್ವಾಸ ಇಟ್ಟುಕೊಂಡ ನಾಯಕ ನಿಜಲಿಂಗಪ್ಪನವರ ಬಗ್ಗೆ ಕಂಠಿಯವರಿಗೆ ಎಲ್ಲಿಲ್ಲದ ಗೌರವ, ಆದರ ಅಭಿಮಾನ. ಇದೇ ಅವರನ್ನು ನಿಜಲಿಂಗಪ್ಪನವರ ಕಟ್ಟಾ ಅನುಯಾಯಿಯನ್ನಾಗಿ ಮಾಡಿತ್ತು. ಅವರ ಧೀಮಂತ ವ್ಯಕ್ತಿತ್ವ, ಋಜುಮಾರ್ಗ, ಬಲಿಷ್ಠ ನಾಯಕತ್ವ, ತತ್ವನಿಷ್ಠ ರಾಜಕಾರಣಕ್ಕೆ ಕಂಠಿಯವರು ಮಾರು ಹೋಗಿದ್ದರು. ಸಕ್ರಿಯ ರಾಜಕಾರಣದಲ್ಲಿರುವಷ್ಟು ಕಾಲವೂ ನಿಜಲಿಂಗಪ್ಪನವರ ಪ್ರಭಾವಳಿಯೇ ಕಂಠಿಯವರ ಕಾರ್ಯಕ್ಷೇತ್ರವಾಗಿತ್ತು. ರಾಜ್ಯ ರಾಷ್ಟ್ರಮಟ್ಟದಲ್ಲಿದ್ದ ಅವರ ವರ್ಚಸ್ಸು ಅನೇಕರಂತೆ ಕಂಠಿಯವರನ್ನೂ ಆಕರ್ಷಿಸಿದ್ದು ಸಹಜವೇ ಆದರೆ ಆ ಅನೇಕರಲ್ಲಿ ನಿಜಲಿಂಗಪ್ಪನವರನ್ನು ಸೆಳೆದದ್ದೂ ಕಂಠಿಯವರ ವೈಶಿಷ್ಟ್ಯಪೂರ್ಣ ವ್ಯಕ್ತಿತ್ವವೇ.

1962ರ ಸಾರ್ವತ್ರಿಕ ಚುನಾವಣೆಯು ವಿಚಿತ್ರ ರೀತಿಯ ಪರಿಣಾಮಗಳನ್ನು ನೀಡಿತು. ವಿಶಾಲ ಮೈಸೂರು ರಾಜ್ಯದ ಕಾಂಗ್ರೆಸ್ ವಲಯದಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪ ಹಾಗೂ ಅಂದಿನ ಮುಖ್ಯಮಂತ್ರಿ ಶ್ರೀ ಬಿ.ಡಿ. ಜತ್ತಿಯವರ ಗುಂಪುಗಳ ನಡುವೆ ಭಿನ್ನಮತ ಹಾಗೂ ಒಳಘರ್ಷಣೆಗಳೂ ತಲೆದೋರಿ ಪಕ್ಷದ ಚುನಾವಣಾ ಪರಿಣಾಮಗಳ ಮೇಲೆ ದುಷ್ಪರಿಣಾಮ ಬೀರಿದವು. ಇದರಿಂದಾಗಿ ಹೊಸದುರ್ಗ ಮತಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್ ರಾಜ್ಯಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಸೋಲು ಕಾಣುವಂತಾಯಿತು. ಎರಡೂ ಬಣಗಳ ಹಲವಾರು ಮಂತ್ರಿಗಳು, ಗಣ್ಯರೂ ಮರಳಿ ಆರಿಸಿ ಬರದಾದರು. ಆದರೆ ಬಿಜಾಪೂರ ಜಿಲ್ಲೆಯ ಹುನಗುಂದದಿಂದ ಕಂಠಿಯವರೂ, ಜಮಖಂಡಿಯಿಂದ ಜತ್ತಿಯವರೂ ಜಯಶಾಲಿಗಳಾಗಿದ್ದರು. ಒಟ್ಟಾರೆ ಕಾಂಗ್ರೆಸ್ ಶಾಸಕರುಗಳಲ್ಲಿ ನಿಜಲಿಂಗಪ್ಪನವರ ಗುಂಪಿನವರೇ ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿಬಂದಿದ್ದರು. ಸಹಜವಾಗಿ ಅವರೆಲ್ಲರಿಗೂ ನಿಜಲಿಂಗಪ್ಪನವರೇ ಮತ್ತೊಮ್ಮೆ ಮುಖ್ಯಮಂತ್ರಿಗಳಾಗಬೇಕೆಂಬ ಬಯಕೆಯಿದ್ದಿತು. ಶಾಸಕಾಂಗ ಪಕ್ಷದ ನಾಯಕನನ್ನು (ಮುಖ್ಯಮಂತ್ರಿ) ಆರಿಸುವ ಪ್ರಕ್ರಿಯೆ ಪ್ರಾರಂಭವಾಗುವ ಮೊದಲೇ ಅಂತಹದ್ದೊಂದು ವಾತಾವರಣವೂ ನಿರ್ಮಾಣವಾಗಿತ್ತು. ಆದರೆ ಇದಕ್ಕೆ ಕಾಂಗ್ರೆಸ್ ವರಿಷ್ಠಮಂಡಳಿ ತನ್ನ ಒಪ್ಪಿಗೆ ನೀಡಲಿಲ್ಲ. ಹೀಗಾಗಿ ಕಾಂಗ್ರೆಸ್‌ನಲ್ಲಿ ಒಂದು ರೀತಿಯ ಗೊಂದಲಮಯ ಸನ್ನಿವೇಶ ಸೃಷ್ಟಿಯಾಯಿತು. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನನ್ನು ಆರಿಸುವ ಗುರುತರವಾದ ಜವಾಬ್ದಾರಿಯನ್ನು ಹೈಕಮಾಂಡ್ ಆಗಿನ ಗೃಹಮಂತ್ರಿ ಲಾಲ್ ಬಹಾದೂರ್ ಶಾಸ್ತ್ರಿಯವರಿಗೆ ವಹಿಸಿತು. ಶಾಸ್ತ್ರೀಜಿ ನಿಜಲಿಂಗಪ್ಪನವರು ಮುಖ್ಯಮಂತ್ರಿ

ಪದವಿಗೆ ಸ್ಪರ್ಧಿಸಬಾರದೆಂದು ಹಾಗೂ ನಾಯಕನ ಆಯ್ಕೆ ಪಕ್ಷದ ಆಂತರಿಕ ಚುನಾವಣೆಯಿಂದಾಗಬೇಕೆಂದೂ ಎಲ್ಲರ ಮನ ಒಲಿಸಿದರು. ಈಗ ನಿಜಲಿಂಗಪ್ಪನವರ ಕಡೆಯವರಿಗೆ ಏನು ಮಾಡುವುದೆಂಬ ಸಂದಿಗ್ಧ ಸುರುವಾಯಿತು. ಅವರು ಪುನಃ ಆರಿಸಿ ಬರುವವರೆಗೆ ಮುಖ್ಯಮಂತ್ರಿ ಪದವಿಯನ್ನು ಸಂಭಾಳಿಸಬಲ್ಲ ಆದರೆ ನಿಜಲಿಂಗಪ್ಪನವರು ಮರಳಿ ಬಂದ ನಂತರ ಆ ಹುದ್ದೆಯಿಂದ ನಿರ್ಗಮಿಸಲು ತಯಾರಿರುವ ಸಜ್ಜನ ಸಂಭಾವಿತನಿಗಾಗಿ ಹುಡುಕಾಟ ಪ್ರಾರಂಭವಾಯಿತು. ಇಂತಹ ನಂಬಿಗಸ್ಥನನ್ನು ಅವರೆಲ್ಲ ಕಂಠಿಯವರಲ್ಲೇ ಗುರುತಿಸಿದ್ದು ಸಹಜವೇ ಆಗಿತ್ತು. ಯಾಕೆಂದರೆ ಅಷ್ಟೊತ್ತಿಗಾಗಲೇ ಇವರು ತಮ್ಮ ಅಪಾರ ಅನುಭವ, ದಕ್ಷತೆ, ಪ್ರಾಮಾಣಿಕತೆಗಳಿಗೆ ಹೆಸರು ಪಡೆದ ಪ್ರಭಾವಿ ನಾಯಕರಾಗಿದ್ದರು. ಕಂಠಿಯವರಲ್ಲಿ ನಿಜಲಿಂಗಪ್ಪನವರು ತಮ್ಮ ನಂಬಲರ್ಹ ತಾತ್ಪೂರ್ತಿಕ ಉತ್ತರಾಧಿಕಾರಿಯನ್ನು ಕಂಡುಕೊಂಡರು.

ಪಕ್ಷದಲ್ಲಿಯ ಒಳಜಗಳ ತಪ್ಪಿಸಲು ಶಾಸ್ತ್ರಿಯವರು ಸೂಚಿಸಿದ, ಚುನಾವಣೆಯಲ್ಲಿ ನಿಜಲಿಂಗಪ್ಪ ತನ್ನ ಬೆಂಬಲಿಗರಿಗೆಲ್ಲ ಕಂಠಿಯವರಿಗೇ ಮತ ನೀಡಬೇಕೆಂದು ತಿಳಿಸಿದ್ದರಿಂದ ಕಂಠಿ ಅವರೇ ಶಾಸಕಾಂಗಪಕ್ಷದ ನಾಯಕನಾಗಿ ಭಾರೀ ಬಹುಮತಗಳಿಂದ ಆರಿಸಲ್ಪಟ್ಟರು. ಅಹಿತಕರ ಪೈಪೋಟಿ ತಪ್ಪಿಸಲು ಹಾಗೂ ಸರ್ವಸಮ್ಮತ ಅಭ್ಯರ್ಥಿ ಕಂಠಿಯೆಂದು, ಹೊರಗೆ ಸಾರಲು ಶಾಸ್ತ್ರೀಜಿಯವರು ಸೋತ ಜತ್ತಿಯವರೇ ಕಂಠಿಯವರ ಹೆಸರನ್ನು ಸೂಚಿಸಬೇಕೆಂದೂ ಹಾಗೂ ದೇವವಾಜ ಆರಸುರವರು ಅನುಮೋದಿಸಬೇಕೆಂತಲೂ ತಿಳಿಸಿದರು. ಹಾಗೆಯೇ ಆಯಿತು. ಒಮ್ಮತದ ಅಭ್ಯರ್ಥಿಯಾಗಿ ಕಂಠಿಯವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನಾಗಿ ಆರಿಸಲ್ಪಟ್ಟರು.

ಮೇಲ್ನೋಟಕ್ಕೆ ಸರ್ವಸಮ್ಮತ ಅಭ್ಯರ್ಥಿಯೆಂದು ಆಯ್ಕೆಯಾಗಿದ್ದರೂ ಕಾಂಗ್ರೆಸ್‌ನ ಒಳಜಗಳ ಬೂದಿಮುಚ್ಚಿದ ಕೆಂಡದಂತೆ ಒಳಗೊಳಗೇ ನಿಗಿನಿಗಿಸುತ್ತಿತ್ತು. ಕಂಠಿಯವರು ತಕ್ಷಣ ತಮ್ಮ ಸಚಿವಸಂಪುಟ ವಿಸ್ತರಿಸದಾದರು. ಪ್ರಬಲ ನಿಜಲಿಂಗಪ್ಪನವರ ಗುಂಪಿಗೆ ಜತ್ತಿಯವರ ಕಡೆಯವರಾರನ್ನೂ ಮಂತ್ರಿ ಮಾಡಿಸಬಾರದೆಂದು ಹಠ. ಆದರೆ ಪಕ್ಷದ ಏಕತೆಯ ದೃಷ್ಟಿಯಿಂದ ಎರಡೂ ಕಡೆಯವರನ್ನೂ ಸೇರಿಸಿಕೊಳ್ಳಬೇಕೆಂಬ ಹಂಬಲ ಕಂಠಿಯವರದು. ಕೊನೆಗೂ ವರಿಷ್ಠ ಮಂಡಳಿಯ ಅನುಮತಿ ಪಡೆಯಲು ಹೊಸ ಮುಖ್ಯಮಂತ್ರಿ ದೆಹಲಿಗೆ ಹೋಗಲೇಬೇಕಾಯಿತು. ಆದರೆ ಅಲ್ಲಿಯೂ ಸಾಕಷ್ಟು ಪ್ರಭಾವ ಹೊಂದಿದ್ದ ನಿಜಲಿಂಗಪ್ಪ ಕೇವಲ ತನ್ನ ಕಡೆಯ ಏಳುಜನ ಸಚಿವರನ್ನು ಸಂಪುಟಕ್ಕೆ ಸೇರಿಸುವಲ್ಲಿ ಸಫಲರಾದರು.

ತನ್ನ ಸಂಪುಟದಲ್ಲಿ 14 ಜನ ಸಂಪುಟದರ್ಜೆಯ ಸಚಿವರು ಹಾಗೂ 10 ಜನ ಉಪಮಂತ್ರಿಗಳು ಇರುತ್ತಾರೆಂದು ಘೋಷಿಸಿದ ಕಂಠಿಯವರಿಗೆ ಕೊನೆಯವರೆಗೂ ಹಾಗೆ ಮಾಡುವುದು ಸಾಧ್ಯವಾಗದಾಯಿತು.

ತಾನು ತಾತ್ಪೂರ್ತಿಕ ಮುಖ್ಯಮಂತ್ರಿ ಎಂದೂ, ರಾಮರಾಜ್ಯದ ಭರತನೆಂದೂ ಸ್ವತಃ ಕಂಠಿಯವರೆ ಹೇಳಿಕೊಂಡರು. ಇದು ಸಹಜವೇ ಆಗಿತ್ತು. ಆಯಾಚಿತ ಪದಗ್ರಹಣ ವಿನಮ್ರ ಕಂಠಿಯವರನ್ನು ಇನ್ನೂ ವಿನೀತರನ್ನಾಗಿ ಮಾಡಿತ್ತು. ನಿಜಲಿಂಗಪ್ಪನವರ ಬಗ್ಗೆ ಇದ್ದ ಆದರಾಭಿಮಾನಗಳು ಭಕ್ತಿಯ ಸ್ವರೂಪವನ್ನು ಪಡೆದದ್ದು ಎದ್ದುಕಾಣುತ್ತಿತ್ತು. ತನ್ನ ಹಿರಯಣ್ಣನಂತೆ ಅವರನ್ನು ಕಂಡು, ಅವರೆಲ್ಲ ಸೂಚನೆ ಸಲಹೆಗಳನ್ನು ಪಾಲಿಸಬೇಕೆಂಬ

ಮನೋವೃತ್ತಿ ತಂತಾನೆ ರೂಪುಗೊಂಡಿತ್ತು. ನಿಜಲಿಂಗಪ್ಪನವರ ಆ ಮೇರು ವ್ಯಕ್ತಿತ್ವಕ್ಕೆ ಕಂಠಿ ಶರಣಾಗಿ ಹೋಗಿದ್ದರು.

ಮುಖ್ಯಮಂತ್ರಿಗಳಾಗಿ ಕಂಠಿಯವರು ಇದ್ದದ್ದು ಕೇವಲ ಮೂರೂವರೆ ತಿಂಗಳಿಗಿಂತಲೂ ತುಸು ಕಡಿಮೆ ಅವಧಿಯೇ. ಮುಂದೆ 1962ರ ಜೂನ್ ತಿಂಗಳಲ್ಲಿ ನಡೆದ ಉಪಚುನಾವಣೆಯಲ್ಲಿ ನಿಜಲಿಂಗಪ್ಪನವರು ಬಾಗಲಕೋಟೆಯಿಂದ ಅವಿರೋಧವಾಗಿ ಆರಿಸಿ ಬಂದರು. ಇದು ಅವರ ಜನಪ್ರಿಯತೆ ಹಾಗೂ ರಾಜ್ಯ ನಾಯಕತ್ವದ ಮೇಲಿನ ಹಿಡಿತಕ್ಕೆ ಸಾಕ್ಷಿಯಾಗಿತ್ತು. ಅಣ್ಣನ ಬರುವಿಗಾಗಿ ಕಾದಿದ್ದ ಕಂಠಿ ನಿಜವಾದ ಭರತನೇ ಆದರು. ಶಾಂತಚಿತ್ತದಿಂದಲೇ ಮುಖ್ಯಮಂತ್ರಿ ಪದವಿಯಿಂದ ನಿರ್ಗಮಿಸಿ ರಾಮ ನಿಜಲಿಂಗಪ್ಪನವರಿಗಾಗಿ ಗಾದಿಯನ್ನು ತೆರವುಗೊಳಿಸಿದರು.

ಈ ಸಂದರ್ಭದಲ್ಲಿ ಒಂದೆರಡು ಊಹೆಗಳನ್ನು ಸಹಜವಾಗಿಯೇ ಎತ್ತಬಹುದಾಗಿದೆ. ಆಕಸ್ಮಾತ್ ಕಂಠಿಯವರು ಕೇವಲ ನಿಜಲಿಂಗಪ್ಪನವರ ಬೆಂಬಲಿಗರನ್ನಷ್ಟೇ ಸಂಪುಟಕ್ಕೆ ಸೇರಿಸಿಕೊಳ್ಳದೇ ಜತ್ತಿಯವರ ಕಡೆಯವರನ್ನೂ ಸೇರಿಸಿಕೊಂಡಿದ್ದರೆ... ಮುಖ್ಯಮಂತ್ರಿಯ ಪದವಿಯಲ್ಲಿದ್ದಾಗ ಶಾಸಕರುಗಳನ್ನು ಓಲೈಸಿ ಕುದುರೆ ಜೂಜು (Horse trading) ಮಾಡಿದ್ದರೆ.... ಅಂತೆಯೇ ಪಕ್ಷದ ಹೈಕಮಾಂಡನ್ನು ಒಲಿಸಿಕೊಂಡಿದ್ದರೆ.... ನಿಜಲಿಂಗಪ್ಪನವರು ಆರಿಸಿ ಬಂದ ಮೇಲೆ ರಾಜೀನಾಮೆ ಕೊಡಲು ಒಪ್ಪದಿದ್ದಿದ್ದರೆ.... ಹೌದು ಅವರು ಮುಖ್ಯಮಂತ್ರಿ ಅಧಿಕಾರದಲ್ಲಿ ಮುಂದುವರೆಯಬಹುದಾಗಿತ್ತೇನೋ. ಆದರೆ ಸಾತ್ವಿಕ ಕಂಠಿಯವರ ಮನದಲ್ಲಿ ತಪ್ಪಿ ಕೂಡ ಇಂತಹ ವಿಚಾರ ಸುಳಿಯಲಿಲ್ಲ. ಅವರ ದೃಷ್ಟಿಯಲ್ಲಿ ನಿಜಲಿಂಗಪ್ಪನವರು ಯಾವ ಎತ್ತರಕ್ಕೆ ಇದ್ದರು ಎಂಬುದು ಇಲ್ಲಿಯೇ ಸಾಬೀತಾಗುವುದು. ಸ್ವತಃ ತಾವೂ ಒಬ್ಬ ದಕ್ಷ ಪ್ರಾಮಾಣಿಕ ಆಡಳಿತಗಾರರಾಗಿದ್ದರೂ ಕಂಠಿಯವರಿಗೆ ನಿಜಲಿಂಗಪ್ಪನವರ ಉಜ್ವಲ ವ್ಯಕ್ತಿತ್ವದ ಅರಿವಿತ್ತು. ಅವರ ಶುದ್ಧ ಚಾರಿತ್ರ್ಯದ ನಡೆ ಬಗ್ಗೆ ಅಪಾರ ಗೌರವವಿತ್ತು. ನುಡಿದಂತೆ ನಡೆವ, ಮೌಲ್ಯಾಧಾರಿತ ಮಾರ್ಗದ ಈ ನಾಯಕರುಗಳಿಗೆ ಇಂತಹ ಅನನ್ಯ ಹೊಂದಾಣಿಕೆ ಇತ್ತು.

ಇಷ್ಟೆಲ್ಲ ಆಗಿಯೂ ಮುಂದಿನ ನಿಜಲಿಂಗಪ್ಪನವರ ಸಂಪುಟದಲ್ಲಿ ಕಂಠಿಯವರಿಗೆ ಆಗ ಅಷ್ಟೇನೂ ಮಹತ್ವದಲ್ಲದ ಖಾತೆಯಾಗಿದ್ದ ವಿದ್ಯಾ ಇಲಾಖೆಯನ್ನು ನೀಡಲಾಗಿತ್ತು. ಮುಖ್ಯಮಂತ್ರಿಯಾಗಿ ಕೆಲಸ ಮಾಡಿದವರಿಗೆ ಇದೊಂದು ಸಹಿಸಲಾರದ ಸಂಗತಿ ಎನಿಸಬಹುದಾಗಿತ್ತು. ಆದರೆ ಕಂಠಿಯವರು ನಿಜಲಿಂಗಪ್ಪನವರನ್ನು ಶ್ರೀರಾಮನ ರೂಪದಲ್ಲಿ ಕಂಡು, ಆ ಇಲಾಖೆಯಲ್ಲಿಯೇ ಮಹತ್ವದ ಕೆಲಸಗಳನ್ನು ಮಾಡಿ ತೋರಿಸಿದರು.

ಕಂಠಿಯವರಿಗೆ ನಿಜಲಿಂಗಪ್ಪನವರ ಬಗೆಗಿದ್ದ ಗೌರವ ಇಷ್ಟೇ ಆಗಿರಲಿಲ್ಲ. ಅದು ಎಂತಹ ಕ್ಲಿಷ್ಟಕರ ಹಾಗೂ ದೀನ ಪರಿಸ್ಥಿತಿಯಲ್ಲೂ ಮುಂದೊರೆದಿದ್ದು ಒಂದು ಸೋಜಿಗವೇ ಎನ್ನಲಡ್ಡಿಯಿಲ್ಲ. ಶಿಕ್ಷಣ ಇಲಾಖೆಯಲ್ಲಿ ವ್ಯಾಪಕ ಮತ್ತು ಅದ್ಭುತ ಕೆಲಸಗಳನ್ನು ಮಾಡಿ ತೋರಿಸಿದ ಮೇಲೂ 1967ರ ಚುನಾವಣೆಯಲ್ಲಿ ಕಾಂಗ್ರೆಸ್ ಪುನಃ ಅಧಿಕಾರಕ್ಕೆ ಬಂದು ನಿಜಲಿಂಗಪ್ಪನವರೇ ಮತ್ತೆ ಮುಖ್ಯಮಂತ್ರಿಯಾದಾಗ ಕಂಠಿಯವರ ಪಾಲಿಗೆ, ಇನ್ನೂ ಕಡಿಮೆ ಅಧಿಕಾರದ ಆದರೆ ಕ್ಲಿಷ್ಟಕರವಾದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ಬಂದಿತು. ಮತ್ತದೇ ಸಮಚಿತ್ತ ಹಾಗೂ ಕಾರ್ಯತತ್ಪರತೆ ತನ್ನ ಅಣ್ಣನಂತೆ ಕಂಡಿದ್ದ ನಾಯಕ ನಿಜಲಿಂಗಪ್ಪನವರ ಬಗ್ಗೆ ಅದೇ ಗೌರವ ಭಾವನೆ ಕಂಠಿಯವರಲ್ಲಿ ಮುಂದೊರೆಯಿತು.

1968ರ ಕೊನೆಯಲ್ಲಿ ಒಂದು ವಿಶೇಷ ಘಟನೆ ನಡೆಯಿತು. ನಿಜಲಿಂಗಪ್ಪನವರ ಖ್ಯಾತಿ ರಾಷ್ಟ್ರವ್ಯಾಪಿಯಾಗಿ ಹಬ್ಬಿ, ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಪದವಿ ಅವರನ್ನರಸಿ ಬಂದಿತು. ಈಗ ಅವರ ಕಾರ್ಯದ ಕೇಂದ್ರಸ್ಥಾನ ದೆಹಲಿಗೆ ಸ್ಥಳಾಂತರವಾಗಬೇಕಾಯಿತು. ಮುಖ್ಯಮಂತ್ರಿಯ ಹುದ್ದೆಗೆ ಸೂಕ್ತ ವ್ಯಕ್ತಿಯ ಹುಡುಕಾಟ ಪುನಃ ಪ್ರಾರಂಭವಾಯಿತು. ಹಾಗೆ ನೋಡಿದರೆ ಅದೇನೂ ಕಷ್ಟದ ಕೆಲಸವಾಗಿರಲಿಲ್ಲ. ಅನುಭವಿಗಳಾದ ಕಂಠಿ, ಜತ್ತಿ ಇಬ್ಬರೂ ಇದ್ದರು. ಇದರಲ್ಲಿ ಜತ್ತಿಯವರದು ವಿರೋಧಿ ಬಣ. ಆದರೆ ಕಂಠಿಯವರು ಕಟ್ಟಾ ಎಸ್.ಎನ್.ಬೆಂಬಲಿಗರು, ಎಲ್ಲರೂ ಊಹಿಸಿದ್ದರು - ಮುಖ್ಯಮಂತ್ರಿ ಗದ್ದುಗೆ ಕಂಠಿಯವರ ಪಾಲಿಗೇ ಎಂದು. ಆದರೆ ದೈವದಾಟ ಬೇರೆಯೇ ಇತ್ತು. ಎಸ್.ಎನ್. ತಮ್ಮ ಉತ್ತರಾಧಿಕಾರಿಯಾಗಿ ಯುವಕ ವೀರೇಂದ್ರ ಪಾಟೀಲರನ್ನು ನೇಮಿಸಿದರು. ಇಷ್ಟೇ ಅಲ್ಲ, ವೀರೇಂದ್ರ ಸಚಿವಸಂಪುಟದ ಯಾದಿಯಲ್ಲಿ ಕಂಠಿಯವರ ಹೆಸರು ಕಾಣದಾಯಿತು. ಇಷ್ಟೆಲ್ಲ ನಡೆದರೂ ಕಂಠಿಯವರು ಸ್ಥಿಮಿತ ಕಳೆದುಕೊಳ್ಳಲಿಲ್ಲ. ಎಲ್ಲಿಯೂ ಎಂದೂ ಅತೃಪ್ತಿ, ಭಿನ್ನಮತ ವ್ಯಕ್ತಪಡಿಸಲಿಲ್ಲ. ಬಣಗಳನ್ನು ಬದಲಿಸಲಿಲ್ಲ. ತನ್ನ ನಾಯಕನ ಬಗೆಗಿನ ಅವರ ಭಾವನೆ ಬದಲಾಗಲಿಲ್ಲ. ಅದೇ ನಿಷ್ಠೆ, ಅದೇ ಗೌರವ ಹಾಗೆಯೇ ಕೊನೆಯವರೆಗೂ ಮುಂದೊರೆದವು. ಇದು ಕಾರಣ ನಿಜಲಿಂಗಪ್ಪನವರ ಪ್ರಖರ ವ್ಯಕ್ತಿತ್ವದ ಪ್ರಭಾವವೇ ಹಾಗಿತ್ತೆನಿಸುತ್ತದೆ.

# ವಾಹ್ ಬೆಂಗಳೂರು

ಮೂವ್ವತ್ತೂರು ವರ್ಷಗಳ ಹಿಂದೆ ಪ್ರೇಕ್ಷಣೀಯ ಸ್ಥಳಗಳ ಪ್ರವಾಸಕ್ಕೆಂದು ಉತ್ತರಕರ್ನಾಟಕದ ಹಳ್ಳಿ ಶಿಗ್ಲಿಯಿಂದ, ಬೇಲೂರು, ಹಳೇಬೀಡು, ಶ್ರವಣಬೆಳಗೊಳ, ಮೈಸೂರು ನೋಡಿಕೊಂಡು ಬೆಂಗಳೂರಿಗೆ ಪ್ರಥಮ ಬಾರಿ ಬಂದಿಳಿದಾಗ ನಾನೊಬ್ಬ ಹೈಸ್ಕೂಲು ವಿದ್ಯಾರ್ಥಿಯಾಗಿದ್ದೆ. ಧರ್ಮಪ್ರವರ್ತ ಗುಬ್ಬಿ ತೋಟದಪ್ಪನವರ ಛತ್ರದಲ್ಲಿ ಎರಡು ದಿನ ಬಿಡಾರ ಬಿಟ್ಟ ಅಂದಾಜು ಮೂವತ್ತು ವಿದ್ಯಾರ್ಥಿಗಳಲ್ಲಿ ನಾನೂ ಒಬ್ಬನಾಗಿದ್ದೆ. ಎಂಟತ್ತು ದಿನಗಳ ಪ್ರವಾಸಕ್ಕಾಗಿ ಅವ್ವ ಕಟ್ಟಿಕೊಟ್ಟ ಹಚ್ಚಿದ ಅವಲಕ್ಕಿ ರವೆ ಉಂಡಿಗಳನ್ನು ಮೆಲಕುತ್ತ ಹೊಟೇಲ್‌ನಲ್ಲಿ ಊಟ ಮಾಡುತ್ತ ಬೆಂಗಳೂರಿನಲ್ಲಿ ತಿರುಗಾಡಿದ ಸಂಭ್ರಮ ಮನದಲ್ಲಿ ಸದಾ ಹಚ್ಚಹಸಿರು.

ಆಗ ಹತ್ತು ಅಂತಸ್ತಿನ ಮೈಸೂರು ಬ್ಯಾಂಕ್ ಎಲ್ಲಕ್ಕೂ ಅತ್ಯಂತ ಎತ್ತರದ ಕಟ್ಟಡ. ವಿಧಾನಸೌಧ, ಹೈಕೋರ್ಟ್, ಕಬ್ಬನ್‌ಪಾರ್ಕ್, ಲಾಲ್‌ಬಾಗ್, ವಿಶ್ವೇಶ್ವರಯ್ಯ ಮೂಜಿಯಂ, ವೆಂಕಟಪ್ಪ ಚಿತ್ರಶಾಲೆ, ಹೆಚ್‌ಎಂಟಿ ನೋಡಿದ ನೆನಪು. ದಿನಕ್ಕೆ ಎರಡು ಮೂರು ಮಾತ್ರ ಖಾಸಗಿ ಸರ್ವಿಸ್‌ಗಳು, ಕೇವಲ ಎರಡು ಸರಕಾರಿ ಬಸ್‌ಗಳ ಓಡಾಟ ಕಂಡಿದ್ದ ನಮಗೆ ಆಗ ಅತ್ಯಂತ ಶಾಂತವಾಗಿತ್ತು ಎಂದು ಈಗಿನ ಬೆಂಗಳೂರಿಗರು ಹೇಳುವ ಐತಿಹಾಸಿಕ ಬೆಂಗಳೂರಿನ ರಸ್ತೆಗಳ ಮೇಲಿನ ನೂರಾರು ವಾಹನಗಳು ಅಚ್ಚರಿ ಮೂಡಿಸಿದ್ದವು! ಮಾರುದ್ದದ ನಮ್ಮ ಹಳ್ಳಿಯ ಬೀದಿಗಳ ಮುಂದೆ ಇಲ್ಲಿಯ ಮಿರಿಮಿರಿ ಮಿಂಚುವ ಡಾಂಬರ್ ರಸ್ತೆಗಳು ಅದ್ಭುತ ಎನಿಸಿದ್ದವು.

ಮೂರು ದಶಕಗಳ ನಂತರ ಈಗ ಬೆಂಗಳೂರು, ನಗರದಿಂದ ಮಹಾನಗರವಾಗಿ, ಮಾಯಾನಗರಿಯಾಗಿ ಮತ್ತೊಂದು ಮುಂಬಯಿಯಾಗಿಬಿಟ್ಟಿದೆ. ಗಗನ ಚುಂಬಿ ಕಟ್ಟಡಗಳು ಮೋಡಿದಲ್ಲೆಲ್ಲ ತಲೆಯೆತ್ತಿ ನಿಂತಿವೆ. ಕಲ್ಲಿನ ವಿಧಾನಸೌಧದ ಪೈಪೋಟಿಗಾಗಿ ಫೈಬರ್, ಗ್ಲಾಸ್, ಮೆಟಲ್ ಇತ್ಯಾದಿಗಳ ಹೊರಹೊದಿಕೆ ಹೊತ್ತ ಖಾಸಗಿ ಕಟ್ಟಡಗಳು ಥಳಥಳಿಸುತ್ತಿವೆ. ಒಮ್ಮೆ ವಾಹನಗಳು ವಿಪರೀತವೆನಿಸಿದರೆ ಮತ್ತೊಮ್ಮೆ ಜನಸಂದಣಿ ಅಸಹನೀಯವೆನ್ನಿಸುವಷ್ಟು ಗಜಿಬಿಜಿ. ಬಿಳಿ ಅಂಗಿ ಹಾಕಿಕೊಂಡು ಫುಟ್‌ಪಾತ್‌ಗಳ ಮೇಲೆ ಅರ್ಧಗಂಟೆ ತಿರುಗಾಡಿದರೂ ಸಾಕು, ನಿರಿಗೆ ನಿರಿಗೆಗಳಲ್ಲಿ ಕರಿಧೂಳು ತುಂಬಿಕೊಳ್ಳುತ್ತದೆ. ಹೋಗಿ ಮುಖ ಒರೆಸಿಕೊಂಡರೆ ಒಂದು ಶ್ವೇತ ಕರವಸ್ತ್ರ ಕಪ್ಪಾಗಿಬಿಡುತ್ತದೆ. ಗಹನವಾಗಿ ವಿಚಾರಿಸಿದರೆ ದಿನವಿಡೀ ಇಲ್ಲೇ ಜೀವನ ಮಾಡಬೇಕಾದ ನಮ್ಮ ಪುಪ್ಪುಸ, ವಾಯುನಾಳ, ಕಣ್ಣು, ಗಂಟಲುಗಳ ಆರೋಗ್ಯದ ಬಗ್ಗೆ ಅವ್ಯಕ್ತ ಭಯವೊಂದು ಆವರಿಸುತ್ತದೆ.

ಅಂದು ಎಚ್‌ಎಂಟಿ, ಬಿಇಎಲ್, ಹೆಚ್‌ಎಎಲ್‌ಗಳಂತಹ ಸಾರ್ವಜನಿಕ ಸಹಭಾಗಿತ್ವದ ಸರಕಾರಿ ಉದ್ಯಮಗಳಿಗೆ ಹೆಸರಾದ ಬೆಂಗಳೂರು, ಇಂದು ಅಂತರರಾಷ್ಟ್ರೀಯ ಟೆಕ್ನಾಲಾಜಿಕಲ್ ಪಾರ್ಕ್ (ಐಟಿಪಿ), ಟೆಕ್ಸಸ್ ಇನ್‌ಸ್ಟ್ರೂಮೆಂಟ್, ಇನ್‌ಫೋಸಿಸ್, ವಿಪ್ರೊ, ಹನಿವೆಲ್ ಐಬಿಎಂ ಸಿಸ್ಕೊ, ಜಿ.ಇ., ಇನ್‌ಟೆಲ್ ಬಯೋಕಾನ್, ಮುಂತಾದ ಖಾಸಗಿ ಕಂಪನಿಗಳಿಂದಾಗಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ವಿಶ್ವದಲ್ಲೇ ವಿಶಿಷ್ಟ ಸ್ಥಾನಗಳಿಸಿ ಎಲ್ಲರ ಗಮನ ಸೆಳೆದಿದೆ. ಇದರಿಂದಾಗಿ ಜನರ ವಿಚಾರಶೈಲಿ ಭಿನ್ನರೀತಿಯಲ್ಲಿ ರೂಪುಗೊಂಡಿದೆ. ಮುಕ್ತ ಮಾರುಕಟ್ಟೆಯಿಂದಾಗಿ ಅಂದು ಕ್ವಚಿತ್ತಾಗಿ ದೊರಕುತ್ತಿದ್ದ ಹಾಗೂ ವಿಪರೀತ ಬೆಲೆ ಗಿಟ್ಟಿಸಿಕೊಳ್ಳುತ್ತಿದ್ದ ವಿದೇಶಿ ವಸ್ತುಗಳು ಇಂದು ಹೇರಳವಾಗಿ ಹಾಗೂ ಅಷ್ಟೇನೂ (ಹಿಂದಿನದಕ್ಕೆ ಅನುಪಾತ) ಹೆಚ್ಚಲ್ಲದ ಬೆಲೆಗಳಲ್ಲಿ ಸಿಗುತ್ತಿವೆ. ವಿಶ್ವವೇ ಒಂದು ಗ್ರಾಮವಾಗಿ ಪರಿವರ್ತಿತಗೊಂಡಿರುವುದು ಎಲ್ಲೆಡೆ ಗೋಚರಿಸುತ್ತದೆ. ಇದು ಜನಜೀವನ ಕ್ರಮವನ್ನೂ ಬಿಟ್ಟಿಲ್ಲದಿರುವುದು ಎದ್ದು ಕಾಣುತ್ತದೆ. ಅಂತೆಯೇ ಅಂದು ಕನ್ನಡ ಶಾಲೆಗಳಿಗಾಗಿ ಒತ್ತಾಯ ಮಾಡುತ್ತಿದ್ದರೆ ಇಂದು ಇಂಗ್ಲೀಷ್‌ಗೆ ಅಧಿಕೃತ ಮನ್ನಣೆ ನೀಡುವ ಪ್ರಯತ್ನಗಳು ಚಿಗುರೊಡೆಯುತ್ತಿವೆ.

ಕಮರ್ಷಿಯಲ್ ಸ್ಟ್ರೀಟ್, ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆಗಳು ಝುಗಮಗಿಸುತ್ತ ಅಮೇರಿಕಾದ ಫಿಫ್ತ್ ಅವೆನ್ಯೂದೊಡನೆ ಪೈಪೋಟಿ ನಡೆಸಿವೆ. ಈ ಛಾಯೆ ನಗರದ ಇನ್ನಿತರ ಬಡಾವಣೆಗಳಾದ ಸದಾಶಿವನಗರ, ಇಂದಿರಾನಗರ, ಜಯನಗರ, ತಕ್ಕಮಟ್ಟಿಗೆ ಮೆಜೆಸ್ಟಿಕ್ ಮುಂತಾದವುಗಳ ಮೇಲೂಬಿದ್ದು ವ್ಯಾಪಾರ ತೀವ್ರಗತಿಯನ್ನು ಪಡೆದುಕೊಂಡಿದೆ. ಎಂ.ಟಿ.ಆರ್., ಕೃಷ್ಣಭವನ, ಕಾಮತ್, ಇಂಪಿರಿಯಲ್ ತಿಂಡಿ ಊಟಗಳ ಖ್ಯಾತಿಯನ್ನು ಕಾಫಿ ಡೇ, ಪಿಜ್ಜಾ ಹಟ್, ಫಾಸ್ಟ್ ಫುಡ್ ಕಾರ್ನರ್‌ಗಳು ಬಾರ್‌ಪಬ್‌ಗಳು ಬಾಚಿಕೊಂಡಿವೆ. ಇದ್ದುದರಲ್ಲೇ ದರ್ಶನಿಗಳ ಸಂಖ್ಯೆ ಹೆಚ್ಚಾಗಿ ಭಾರತೀಯ ತಿನಿಸುಗಳನ್ನು ಕೈಗೆಟುಕುವ ಬೆಲೆಗಳಲ್ಲಿ ವಿತರಿಸುತ್ತ ಅವು ಮಧ್ಯಮ ವರ್ಗದವರನ್ನು ತಣಿಸುತ್ತಿರುವುದು ಸಮಾಧಾನದ ಸಂಗತಿ.

ಅಂದು ರವೀಂದ್ರ ಕಲಾಕ್ಷೇತ್ರ, ಪುಟ್ಟಣ್ಣ ಚೆಟ್ಟಿ ಟೌನ್‌ಹಾಲ್‌ಗಳಲ್ಲಿ ನಡೆಯುತ್ತಿದ್ದ ನಾಟಕೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮಗಳು ಇಂದು ಸಿನಿಮಾ, ಟಿ.ವಿ. ಕಾರ್ಯಕ್ರಮಗಳಷ್ಟು ಬೆಳೆಯದೇ ಇರುವುದು ನಿರಾಶಾದಾಯಕ. ಅಂತೆಯೇ ಕನ್ನಡ ಪುಸ್ತಕಗಳ ಮಾರಾಟವೂ ಕೂಡ. ಈ ಜಾಗೆಯನ್ನು ಕ್ಯಾಸೆಟ್, ಸಿ.ಡಿ., ಇಂಟರ್‌ನೆಟ್, ವೆಬ್‌ಗಳು

ಆವರಿಸಿಕೊಂಡಿವೆ. ಅಂತೂ ಇಂತೂ ತರಹೇವಾರಿ ಬೆಳವಣಿಗೆ ಎಲ್ಲ ಕ್ಷೇತ್ರಗಳಲ್ಲೂ ಕಣ್ಣು ಕುಕ್ಕಿಸುತ್ತಿವೆ. ದೇಶೀಯತೆಯೊಂದಿಗೆನೆ ವಿದೇಶಿಯತೆ ತಳುಕುಹಾಕಿಕೊಂಡು ಬೆಳೆಯುತ್ತಿದೆ. ಭವಿಷ್ಯದಲ್ಲಿಯ ಪರಿಣಾಮ ಸಮಾಧಾನಕರವೊ ಭೀಕರವೊ ಕಾದು ನೋಡಬೇಕಿದೆ.

ಒಟ್ಟಿನಲ್ಲಿ ಉದ್ಯಾನನಗರಿ ಎಂದು ಕರೆಯಲ್ಪಡುತ್ತಿದ್ದ, ನಾಡಪ್ರಭು ಕೆಂಪೇಗೌಡನ ಬೆಂದಕಾಳೂರು ಆ ನಾಲ್ಕು ದಿಕ್ಕಿನ ನಾಲ್ಕು ನಿರೀಕ್ಷಣಾ ಗೋಪುರಗಳನ್ನು ಮೀರಿ ದಶದಿಕ್ಕುಗಳಿಗೂ ಬೆಳೆಯುತ್ತಿರುವ ಬೆಂಗಳೂರು ಈಗ ಸಿಲಿಕಾನ್ ವ್ಯಾಲಿ ಎಂದು ಗುರುತಿಸಲ್ಪಟ್ಟು ಮಾಸ್ತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಮಹಾನಗರವಾಗಿ ತನ್ನ ಆಕರ್ಷಣ ಶಕ್ತಿಯನ್ನು ಹಾಗೆಯೇ ಉಳಿಸಿಕೊಂಡದ್ದು ಹರ್ಷದ ಹಾಗೂ ಹೆಮ್ಮೆಯ ವಿಷಯ.

# ಅನ್ನಬ್ರಹ್ಮ

**ಕೂಸುಗಳಿಗೆ ಹಾಲು ಇಲ್ಲ, ಪಶುಬಲಿಯೇ ನಡೆದಿದೆ. ಕಾಳು ಇದೆ ಕೂಳು ಇಲ್ಲ, ಹಣದ ಹುಚ್ಚು ಹಿಡಿದಿದೆ. ಕತ್ತಲಲ್ಲಿ ಬೆಳಕೆ ಇಲ್ಲ. ಜಗಕೆ ಬೆಂಕಿ ಹತ್ತಿದೆ. ಎಲ್ಲ ಇದೆ ಎಲ್ಲೆ ಇಲ್ಲ, ಇಲ್ಲೆ ಸುತ್ತುಮುತ್ತಿದೆ. ಸಾಕು ಎಂಬುವಂತೆ ನೀಡು ಬೇಕು ಎಂಬ ಹೊತ್ತಿಗೆ. ಬೆಣ್ಣೆ ಎಣ್ಣೆ ಎರೆಯಬನ್ನಿ ಹಸಿದಹೊಟ್ಟೆ ನೆತ್ತಿಗೆ**

- **ಅಂಬಿಕಾತನಯದತ್ತ (ಅನ್ನಯಜ್ಞ)**

ಮೊನ್ನೆ ನಾನೊಂದು ಸಮಾರಂಭಕ್ಕೆ ಹೋಗಿದ್ದೆ. ಎಲ್ಲ ಕಾರ್ಯಕ್ರಮಗಳು ಮುಗಿದ ಮೇಲೆ ಸಾಮೂಹಿಕ ಭೋಜನ ವ್ಯವಸ್ಥೆಯಿತ್ತು. ಈ ತರಹದ ಸಾಮೂಹಿಕ ಭೋಜನಕೂಟಗಳಿಗೆ ನಾವು ದಾಸೋಹ, ಪ್ರಸ್ಥ, ಪ್ರಸಾದ, ಇತ್ಯಾದಿ ವಿಶಿಷ್ಟ ಹೆಸರುಗಳನ್ನು ಇಟ್ಟಿದ್ದೇವೆ. ಎಲ್ಲರೂ ಕೂಡಿ ಸಹಭೋಜನ ಮಾಡುವ ಈ ಹಬ್ಬದ ವಾತಾವರಣ, ನಮ್ಮ ಭಾರತೀಯ ಸಂಸ್ಕೃತಿಯ ಉತ್ತಮ ಕೊಡುಗೆಯಾಗಿದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಇವು ಸಿಗಲಾರವು. ಬಡವ ಬಲ್ಲಿದನೆಂಬ ಹಾಗೂ ಜಾತಿಮತಗಳ ಭೇದವಿಲ್ಲದೇ ನಡೆಯುವ ಈ ಕೂಟಗಳಲ್ಲಿ ನಾವೂ ಎಲ್ಲರೂ ಒಂದು ಎಂಬ ಭಾವನೆ ಸಹಜವಾಗಿಯೇ ಬೆಳೆದುಬರುತ್ತದೆ. ಆದರೆ ಇಲ್ಲಿ ಕಂಡ ಒಂದು ದೃಶ್ಯ ನನ್ನನ್ನು ಬಹಳ ನೋಯಿಸಿತು. ಎಲ್ಲರೂ ಊಟ ಮಾಡಿ ಎದ್ದ ಮೇಲೆ ತಾಟುಗಳನ್ನು ನೋಡಿದರೆ ಅರ್ಧಕ್ಕಿಂತ ಹೆಚ್ಚು ಜನ ಕನಿಷ್ಠ 25ರಿಂದ 50ಗ್ರಾಂ (ಒಂದು ಹಿಡಿ) ಅನ್ನ, ಕಾಳುಪಲ್ಯೆ, ಇತ್ಯಾದಿಗಳನ್ನು ಬಿಟ್ಟುಹೋಗಿದ್ದರು. ಇಂತಹ ದೃಶ್ಯವನ್ನು ನಾವು ಸಾಮಾನ್ಯವಾಗಿ ಎಲ್ಲಾ ಸಮಾರಂಭಗಳಲ್ಲಿಯೂ ನೋಡಬಹುದಾಗಿದೆ.

ಈಗ ನಾವು ಇಂತಹ ಸಭೆ ಸಮಾರಂಭಗಳಲ್ಲಿ ಎಷ್ಟೊಂದು ಕಾಳುಕಡಿ ಹಾಳು ಮಾಡುತ್ತೇವೆಂದು ಸ್ವಲ್ಪ ಲೆಕ್ಕ ಹಾಕೋಣ. ಒಂದು ನೂರು ಜನರು ಇರುವ ಒಂದು ದಾಸೋಹದಲ್ಲಿ 50 ಜನ ಮಾತ್ರ ಪ್ರತಿಯೊಬ್ಬರಿಗೆ 30 ಗ್ರಾಂ ಅಂದರೆ ಒಂದೆರಡು ತುತ್ತಿನಂತೆ ಅನ್ನ ಅಥವಾ ಆಹಾರಧಾನ್ಯ ತಾಟಿನಲ್ಲಿ ಬಿಟ್ಟು ಎದ್ದು ಕೆಡಿಸುತ್ತಾರೆ ಎಂದು ಇಟ್ಟುಕೊಳ್ಳೋಣ. ಆಗ 50X30 ಅಂದರೆ 1500 ಗ್ರಾಂಗಳಷ್ಟು ಅಂದರೆ ಒಂದೂವರೆ ಕಿಲೋದಷ್ಟು ಅಕ್ಕಿ ಹಾಳಾದಂತೆನಿಸಿತು. ಇದೇ ಪ್ರಮಾಣದಲ್ಲಿ ನಮ್ಮ ದೇಶದ (96ಕೋಟಿ)

ಜನಸಂಖ್ಯೆಯಲ್ಲಿ ಕೇವಲ ಅರ್ಧದಷ್ಟು ಜನ(48ಕೋಟಿ) ಪ್ರತಿ ದಿನಕ್ಕೆ 10ಗ್ರಾಂನಂತೆ ಮಾತ್ರ (ಎರಡೂ ಊಟಕ್ಕೆ ಸೇರಿ) ಹಾಳು ಮಾಡಿದರೆ... ಲೆಕ್ಕ ಹಾಕಿ:

48 ಕೋಟಿ ಜನ X 10ಗ್ರಾಂ ಇದು 480 ಕೋಟಿ ಗ್ರಾಂ ಅಂದರೆ 48000 ಕ್ವಿಂಟಾಲ್‌ಗಳು= 4800 ಟನ್ನುಗಳಷ್ಟು ಅಕ್ಕಿಯನ್ನು ಪ್ರತಿದಿನ ಹಾಳು ಮಾಡಿದಂತಾಗುತ್ತದೆ. ಇದೇ ರೀತಿ ವರ್ಷದ 365 ದಿನಗಳಲ್ಲೂ ನಾವು ತಾಟಿನಲ್ಲಿ ಊಟ ಬಿಟ್ಟು ಅನ್ನವನ್ನು ಕೆಡಿಸಿದರೆ... ಲೆಕ್ಕ ಮಾಡಿ 4800ಟನ್ನುಗಳು X365ದಿನಗಳು ಹದಿನೇಳೂವರೆ ಲಕ್ಷ(1752000) ಟನ್ನುಗಳಷ್ಟು ಅಂದರೆ ಒಂದು ಲಕ್ಷ ಎಪ್ಪತ್ತೈದು ಸಾವಿರದ ಎರಡುನೂರು ಟ್ರಕ್ ಲೋಡುಗಳಷ್ಟು ಅಕ್ಕಿ ಪ್ರತಿ ವರ್ಷ ಹಾಳಾಗಿ ಹೋದಂತೆ ! ಇದು ಬಹುದೊಡ್ಡ ಪ್ರಮಾದವೇ ಅಲ್ಲವೆ ? ಆದ್ದರಿಂದ ನಾವು ಪ್ರತಿದಿನ ಕೆಡಿಸುವ ತುಸು ಅನ್ನವೂ ನಮಗೆ ಹಾಗೂ ನಮ್ಮ ದೇಶದ ಅಭಿವೃದ್ಧಿಗೆ ಬಹುದೊಡ್ಡ ಹಾನಿಯನ್ನು ಮಾಡಬಲ್ಲದು. ಇದನ್ನರಿತು ನಮ್ಮ ಹಿರಿಯರು “ಅನ್ನಬ್ರಹ್ಮ” “ಅನ್ನ ದೇವರ ಮುಂದೆ ಇನ್ನು ದೇವರಿಲ್ಲ” ಎಂದು ಅನ್ನಕ್ಕೆ ದೇವತಾ ಸ್ವರೂಪ ನೀಡಿ, ಅನ್ನ ಕೆಡಿಸುವವನಿಗೆ ನರಕ ತಪ್ಪದೆಂದು ಎಚ್ಚರಿಕೆ ನೀಡಿದ್ದರೆ, ಸರ್ವಜ್ಞನಂತೂ ಅನ್ನವನ್ನು ಕೆಡಿಸುವುದರ ಬದಲು ಅದನ್ನು ದಾನ ಮಾಡಿ ಪುಣ್ಯಕಟ್ಟಿಕೊಳ್ಳಬಹುದೆಂಬುದನ್ನು ಈ ಮುಂದೆ ಹೇಳುವ ವಚನದಲ್ಲಿ ಮಾರ್ಮಿಕವಾಗಿ ವಿವರಿಸಿದ್ದಾನೆ- “ಅನ್ನವನು ಇಕ್ಕುವುದು, ನನ್ನಿಯನು ನುಡಿಯುವದು, ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು” ಎಂದಿದ್ದಾನೆ. ಆದ್ದರಿಂದ ನಾವೆಲ್ಲ ಇನ್ನು ಮುಂದೆ ನಮ್ಮ ಊಟದ ತಾಟಿನಲ್ಲಿ ಒಂದಗಳೂ ಅನ್ನ, ರೊಟ್ಟಿ, ಇತ್ಯಾದಿ ಕೆಡಿಸುವುದಿಲ್ಲವೆಂದು ಪಣತೊಡಬೇಕಾಗಿದೆ. ಒಲ್ಲೆ ಒಲ್ಲೆನೆಂದರೂ ಒತ್ತಾಯ ಮಾಡಿ ನೀಡುವುದನ್ನು ನಿಲ್ಲಿಸಬೇಕಾಗಿದೆ. ನಮಗೆಷ್ಟು ಬೇಕೋ ಅಷ್ಟನ್ನೇ ತಾಟಿಗೆ ನೀಡಿಕೊಂಡು, ಬೇರೆಯವರಿಗೂ ಎಷ್ಟು ಬೇಕೋ ಅಷ್ಟನ್ನೇ ಬಡಿಸಬೇಕು. ಅನ್ನದ, ದವಸ ಧಾನ್ಯಗಳ ಮಹತ್ವ ತಿಳಿದುಕೊಂಡು ಅವುಗಳನ್ನು ರಕ್ಷಿಸಬೇಕು, ಗೌರವಿಸಬೇಕು. ಆ ಮೂಲಕ ದೇಶದ ಪ್ರಗತಿಗೆ, ಅಭಿವೃದ್ಧಿಗೆ ಅನುಕೂಲ ಮಾಡಿಕೊಡಬೇಕು. ಹೊಲದಲ್ಲಿ ಪೈರುಗಳು ಬೆಳೆದು ನಿಂತಾಗ ಹೂ ತೆನೆ ಹಾಕಿದಾಗ ಎಲ್ಲೆಲ್ಲಿಂದಲೋ ಹಾರಿ ಬಂದು ತಮ್ಮ ಹೊಟ್ಟೆ ಹಸಿವನ್ನು ಹಿಂಗಿಸಿಕೊಳ್ಳುವ ಕೀಟ, ಪಕ್ಷಿಗಳನ್ನು ಹಾಗೂ ಇಲಿ ಹೆಗ್ಗಣಗಳಿಗೆ ವಿಷ ಹಾಕಿ ಕೊಲ್ಲುವಂತೆ, ತಿಂದುಂಡು ತೇಗಿ ಆಹಾರ ಧಾನ್ಯದ ಮಹತ್ವದ ಬಗ್ಗೆ ತಲೆಕೆಡಿಸಿಕೊಳ್ಳದೇ, ಮುಷ್ಟಿ ಮುಷ್ಟಿ ಎಂಜಲು ಬಿಟ್ಟು ಏಳೂವವರನ್ನೂ.... ಘನಘೋರವಲ್ಲವೇ ?

ನಮ್ಮ ದೇಶದ ಲಕ್ಷಾಂತರ ಬಡವರು, ನಿರ್ಗತಿಕರು, ಚಿಕ್ಕ ಮಕ್ಕಳು ದಿನನಿತ್ಯದ ಎರಡು ಊಟಗಳಿಗೂ, ಗತಿಯಿಲ್ಲದವರಾಗಿ ಹಸಿವಿನಿಂದ ತತ್ತರಿಸಿ ಹೋಗುತ್ತಿರುವಾಗ ನಾವೆಲ್ಲ ಸ್ವೇಚ್ಛೆಯಾಗಿ ‘ಅನ್ನ'ವನ್ನು ಹಾಳು ಮಾಡುವದೆಂದರೆ ಅತ್ಯಂತ ಹೀನ ಕೆಲಸವೇ ಸರಿ. ಬಂಗಾಲದ ಗಲ್ಲಿಗಳಲ್ಲಿ ಇಂತಹ ಹಸಿದು ಕಂಗಾಲಾದ ಜನರನ್ನು ನೋಡಿ ಆ ಬಗ್ಗೆ ಡಾ.ಅಮರ್ತ್ಯ ಸೇನ್ ವಿಶೇಷ ಅಧ್ಯಯನವನ್ನೂ ಕೈಗೊಂಡಿದ್ದು ಒಂದು ಇತಿಹಾಸದ ವೈಶಿಷ್ಟ್ಯವೇ. ಜನ ಅವರನ್ನು ‘ಹಸಿವಿನ ಪ್ರಾಧ್ಯಾಪಕ' ಎಂದೂ ಕರೆಯುತ್ತಿದ್ದರು. ಬಡವರ ಈ ಕರುಣಾಜನಕ ಬವಣೆ ಅವರ ಮೇಲೆ ತೀವ್ರ ಪರಿಣಾಮ ಬೀರಿ ಡಾ.ಸೇನ್ ಯಾವುದೇ ದೇಶದ ಅಭಿವೃದ್ಧಿಗೆ ಹಸಿವು ಮತ್ತು ಬಡತನಗಳ ನಿವಾರಣೆ ಅಗತ್ಯವೆಂದು ವಾದಿಸಿ ಅರ್ಥಶಾಸ್ತ್ರದಲ್ಲಿ ಒಂದು ಹೊಸ ಆಯಾಮವನ್ನೇ ಹುಟ್ಟುಹಾಕಿದರು. ನವೀನ ಮಾದರಿಯ “ಅಭಿವೃದ್ಧಿ ಅರ್ಥಶಾಸ್ತ್ರ” ಎಂಬ ಅಪೂರ್ವಜ್ಞಾನ ವಿಭಾಗವನ್ನು ಕಂಡುಹಿಡಿದರು. ಇದಕ್ಕಾಗಿ ನೋಬೆಲ್ ಪುರಸ್ಕಾರ ಪಡೆದ (ಅರ್ಥಶಾಸ್ತ್ರದಲ್ಲಿ) ಪ್ರಥಮ ಏಶಿಯನ್ ಎನಿಸಿದರು. ಇದನ್ನು

ತೀವ್ರತರವಾಗಿ ನಾವು ಗಮನಿಸಿ ಆಹಾರ ಧಾನ್ಯ 'ಉಳಿಸಿ' ದೇಶದ ಸಂಪತ್ತನ್ನು ಬೆಳೆಸುವಲ್ಲಿ ಇನಿತಾದರೂ ಭಾಗಿಗಳಾಗಬೇಕಿದೆ.

# ಬೆಂಗಳೂರಿಗೆ ಬರಲಿರುವ 'ಮೆಟ್ರೋಬಸ್'

ವಿಶ್ವದಲ್ಲಿಯೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಮಹಾನಗರಗಳಲ್ಲಿ ಒಂದಾಗಿರುವ ಬೆಂಗಳೂರು ಇಡೀ ಭಾರತದಲ್ಲಿ ಐದನೇ ದೊಡ್ಡ ನಗರವೆನಿಸಿದೆ. 'ಉದ್ಯಾನ ನಗರಿ' ಎಂಬ ಹೆಗ್ಗಳಿಕೆ ನಮ್ಮ ಹೆಮ್ಮೆಯ ಬೆಂಗಳೂರಿಗಿದೆ. ಹದಿನೈದು ವರ್ಷಗಳಿಗೊಮ್ಮೆ ತನ್ನ ಜನಸಂಖ್ಯೆಯನ್ನು ಇಮ್ಮಡಿಗೆ ಸಮೀಪಗೊಳಿಸುತ್ತಾ ಬಂದಿರುವ ಈ ಮಹಾನಗರ ಇಂದು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಇಡೀ ವಿಶ್ವದ ಗಮನವನ್ನು ತನ್ನೆಡೆಗೆ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಅಂತೆಯೇ ಇದು ಇಂಡಿಯಾದ ಸಿಲಿಕಾನ್ ವ್ಯಾಲಿ ಎನಿಸಿದೆ. ಹೀಗೆ ಹಲವಾರು ಹೆಮ್ಮೆಯ ಗರಿಪುಚ್ಚಗಳನ್ನು ತನ್ನ ಕಿರೀಟಕ್ಕೆ ಏರಿಸಿಕೊಳ್ಳುತ್ತಲೇ ನಡೆದಿರುವ ಈ ನಮ್ಮ ಬೆಂಗಳೂರು, ಕಲುಷಿತ ವಾತಾವರಣ, ವಾಯುಮಾಲಿನ್ಯ, ಕೊಳಚೆ ಪ್ರದೇಶ ನಿರ್ಮಾಣ, ಇತ್ಯಾದಿಗಳಲ್ಲೂ ದಾಪುಗಾಲು ಹಾಕುತ್ತಿರುವುದು ನಮ್ಮೆಲ್ಲರಿಗೆ ಆತಂಕ ಹುಟ್ಟಿಸುವ ವಿಷಯವಾಗಿದೆ. ಬೆಳೆಯುತ್ತಿರುವ ಜನಸಂಖ್ಯೆ, ಔದ್ಯೋಗೀಕರಣ ಇವುಗಳಿಂದಾಗಿ ಈ ಸುಂದರ ನಗರ ತನ್ನ ಮೂಲಭೂತ ನಾಗರಿಕ ಸೌಲಭ್ಯಗಳ ಕೊರತೆ ಅನುಭವಿಸಬೇಕಾಗಿದೆ. ಸಾರ್ವಜನಿಕರಿಗೆ ಸಾರಿಗೆ ಸಂಚಾರ ದೃಷ್ಟಿಯಿಂದಲಂತೂ ಈ ಕೊರತೆ ಹಾಗೂ ಬಾಧೆ ವಿಪರೀತವೆನಿಸುತ್ತದೆ. ವಾಹನಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದ್ದು, ಇದ್ದ ರಸ್ತೆಗಳಲ್ಲಿಯೇ ಸಂಚಾರ ಬರಬರುತ್ತಾ ದುರ್ಗಮವಾಗುತ್ತಿದೆ. ದಟ್ಟಣೆ ಹೆಚ್ಚಾದಂತೆ, ಟ್ರಾಫಿಕ್ ಜಾಮ್‌ಗಳೊಂದಿಗೆ ರಸ್ತೆ ಅಪಘಾತಗಳೂ ಏರುತ್ತಿವೆ; ಪರಿಸರ ಪ್ರದೂಷಣೆ ಅಪಾಯಕರ ಮಟ್ಟ ತಲುಪುತ್ತಿದೆ.

**ಸಮೀಕ್ಷೆ:**

ಬೆಂಗಳೂರಿನ ಮಹಾಜನರಿಗೆ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಉತ್ತಮಗೊಳಿಸುವ ಹಾಗೂ ವಾತಾವರಣ ನೈರ್ಮಲ್ಯ ಕಾಪಾಡುವ ದೃಷ್ಟಿಯಿಂದ ಮಹಾನಗರ ಸಾರಿಗೆ ನಿಗಮದವರು ಇಲ್ಲಿಯ ಸಂಚಾರ ವ್ಯವಸ್ಥೆಯ ಬಗ್ಗೆ ಒಂದು ವಿಶೇಷ ಸಮೀಕ್ಷೆಯನ್ನು 1997ರಲ್ಲಿ ಸ್ವೀಡನ್ ದೇಶದ ಸಹಯೋಗದೊಂದಿಗೆ ನಡೆಸಿದ್ದಾರೆ. ಇವರ ಪ್ರಕಾರ ಬೆಂಗಳೂರು ಮಹಾನಗರದಲ್ಲಿ ಬೆಳಗಿನ 08-00 ರಿಂದ 11-00ರವರೆಗಿನ ಸಮಯದಲ್ಲಿ ಒಟ್ಟು 1,27,300 ದ್ವಿಚಕ್ರ 50,200 ತ್ರಿಚಕ್ರವಾಹನಗಳು, 44,700 ಕಾರುಗಳು, 10,500 ಬಸ್‌ಗಳು ಓಡಾಡುತ್ತವೆ ಹಾಗೂ ಇವು ಪ್ರಯಾಣಿಕರಿಗೆ ಕ್ರಮವಾಗಿ 22%, 10%, 12%ಹಾಗೂ 56% ಸಾರಿಗೆ ಸೌಲಭ್ಯ ಒದಗಿಸುತ್ತವೆ. ಅಂದರೆ ಸಂಖ್ಯೆಯಲ್ಲಿ ಒಟ್ಟು ವಾಹನಗಳ ಕೇವಲ 5% ಇರುವ ಬಸ್‌ಗಳು ಪ್ರಯಾಣಿಕರಿಗೆ 56% ಸೌಕರ್ಯ ಒದಗಿಸುತ್ತವೆ ಎಂದಾಯಿತು. ಇದೂ ಅಲ್ಲದೆ ಈ ಬಸ್‌ಗಳು ಬೆಂಗಳೂರಿನ ರಸ್ತೆಗಳ ಮೇಲೆ ಇರುವ ಸಮಯ ಹಾಗೂ ಆವರಿಸಿಕೊಳ್ಳುವ

ಸ್ಥಳಾವಕಾಶವೂ ಅತ್ಯಲ್ಪ ಎಂಬುದೂ ಗಮನಾರ್ಹವಾಗಿದೆ. ಇದರಿಂದಾಗಿ ಬೆಂಗಳೂರು ಮಹಾನಗರಕ್ಕೆ ಮೆಟ್ರೋ ರೈಲಿಗಿಂತ 'ಮೆಟ್ರೋಬಸ್'ಗಳನ್ನು ಓಡಿಸುವುದೇ ಹೆಚ್ಚು ಸೂಕ್ತವೆಂದು ಅಂಕಿ ಅಂಶಗಳ ಮೇಲಿಂದ ನಿರ್ಣಯಕ್ಕೆ ಬರಲಾಗಿದೆ. ಜಗತ್ತಿನಲ್ಲಿ ಬೆಂಗಳೂರಿನ ಸಂಚಾರ ವ್ಯವಸ್ಥೆಯನ್ನು ಹೋಲುವ ಸಿಂಗಾಪುರ, ಬ್ರೆಜಿಲ್‌ನ ಕುರಿಟಿಬಾ ಮುಂತಾದ ಮಹಾನಗರಗಳಲ್ಲಿ ಯಶಸ್ವಿಯಾಗಿರುವ ಈ 'ಮೆಟ್ರೋಬಸ್' ವ್ಯವಸ್ಥೆಯು ಇಲ್ಲಿಯೂ ಸೂಕ್ತವೆಂದು ಅಭಿಪ್ರಾಯಪಡಲಾಗಿದೆ. ಎತ್ತರಮಟ್ಟದ ಲಘು ರೈಲು ವ್ಯವಸ್ಥೆಗೆ ಹೋಲಿಸಿದಾಗ ಇದಕ್ಕೆ ಖರ್ಚಾಗುವ ಹಣ ಅತೀ ಕಡಿಮೆ. ಭೂ ಸ್ವಾಧೀನಪಡಿಸಿಕೊಂಡು ಅದಕ್ಕಾಗಿ ಅಪಾರ ಪರಿಹಾರಧನ ಕೊಡುವ ಪ್ರಮೇಯವೂ ಇಲ್ಲಿಲ್ಲ. ಈಗಿರುವ ರಸ್ತೆಗಳಲ್ಲಿಯೇ ಹೆಚ್ಚು ಖರ್ಚು ವೆಚ್ಚವಿಲ್ಲದೇ ಈ "ಬೃಹತ್ ಬಸ್"ಗಳ ಸಾರಿಗೆ ಸಂಚಾರವನ್ನು ಬರಮಾಡಿಕೊಳ್ಳಲಾಗುತ್ತಿದೆ. ಇದರಿಂದಾಗಿ ಬೆಂಗಳೂರಿಗೆ ಇಡೀ ದಕ್ಷಿಣ ಏಷಿಯಾದಲ್ಲಿಯೇ ಒಂದು ವಿಶೇಷ ಸ್ಥಾನ ಲಭಿಸಲಿದೆ. ಬೆಂಗಳೂರು ಮಹಾನಗರ ಸಾರಿಗೆ ನಿಗಮ (B.M.T.C.) ವ್ಯವಸ್ಥಾಪಕ ನಿರ್ದೇಶಕ ಶ್ರೀ ಪ್ರದೀಪ್ ಸಿಂಗ್ ಖರೋಲಾರವರ ವಿಶೇಷ ಆಸಕ್ತಿ ಹಾಗೂ ಶ್ರಮದಿಂದಾಗಿ ಈ ಯೋಜನೆ ಇನ್ನೊಂದು ವರ್ಷದಲ್ಲಿ ಅನುಷ್ಠಾನಗೊಂಡು ಬೆಂಗಳೂರಿನ ಬೀದಿಗಳಲ್ಲಿ 'ಬೃಹತ್ ಬಸ್'ಗಳು ಓಡಾಡಲಿವೆ.

**ರಸ್ತೆ ಮಧ್ಯದ ಭಾಗ ಮೀಸಲು:**

'ಮೆಟ್ರೋಬಸ್'ಗಳಿಗಾಗಿ ವಿಶೇಷ ರಸ್ತೆಗಳೇನೂ ಬೇಕಾಗಿಲ್ಲವಾದರೂ ಈಗಿರುವ ರಸ್ತೆಗಳಲ್ಲಿಯೇ ವಿಶೇಷ ಜಾಗೆ (ಸ್ಥಾನಮಾನ ?) ಬೇಕಾಗುತ್ತದೆ. ರಸ್ತೆಗಳ ಮಧ್ಯಭಾಗದಲ್ಲಿಯ ಅಂದಾಜು ಏಳು ಮೀಟರ್ ಜಾಗೆಯ ಲೇನ್ ಅನ್ನು ಈ ಬೃಹತ್ ಬಸ್‌ಗಳಿಗಾಗಿಯೇ ಮೀಸಲಿಡಲಾಗುತ್ತದೆ. ಇದನ್ನು ಇನ್ನಿತರ ವಾಹನಗಳು ಆಕ್ರಮಿಸದಂತೆ ಅಂದಾಜು ಆರು ಇಂಚು ಎತ್ತರದ ಕಲ್ಲುಗಳ ಕಿರುಗೋಡೆಯ ವಿಭಾಜಕಗಳನ್ನು ನಿರ್ಮಿಸಲಾಗುತ್ತದೆ. ಈ ಮೀಸಲು ಲೇನ್‌ಗಳಲ್ಲಿಯೇ ಒಂದು ಹೋಗಲು ಹಾಗೂ ಇನ್ನೊಂದು ಬರಲು ಹೀಗೆ ಎರಡು ಮೆಟ್ರೋಗಳು ಓಡಾಡುವಂತೆ ಮಾಡಲಾಗುತ್ತದೆ. ರಸ್ತೆ ಮಧ್ಯದಲ್ಲಿ ಈಗಿರುವ ಹುಲ್ಲುಹಾಸಿನ ಅಥವಾ ಇನ್ನಿತರ ವಿಭಾಜಕಗಳನ್ನು ಮೆಟ್ರೋಗಳ ಲೇನ್‌ಗಾಗಿ ಅಥವಾ ಬಸ್ ನಿಲುಗಡೆ (Stop)ಗಳಿಗಾಗಿ ಉಪಯೋಗಿಸಲಾಗುವುದು. ಕೆಲವೆಡೆ ಫುಟ್‌ಪಾಥ್‌ಗಳನ್ನು ಕಿರುದಾಗಿಸುವ ಅಥವಾ ತೆಗೆದುಹಾಕುವ ಪ್ರಸಂಗವೂ ಬರಬಹುದಾಗಿದೆ.

**ಮೀಸಲು ಅಥವಾ ವಿಶೇಷ ಸಮಯ:**

ರಸ್ತೆಗಳು ದೊಡ್ಡವಿದ್ದ ಕಡೆಗೆಲ್ಲಾ ಮಧ್ಯಭಾಗದ ಲೇನ್‌ಗಳಲ್ಲಿ ಮೆಟ್ರೋಬಸ್‌ಗಳೂ, ಇನ್ನಿತರ ಲೇನ್‌ಗಳಲ್ಲಿ ಬೇರೆ ವಾಹನಗಳೂ ಏಕಕಾಲದಲ್ಲಿಯೇ ಸಂಚರಿಸುತ್ತವೆ. ಇಡೀ ರಸ್ತೆಯೇ ಕಿರಿದಾಗಿದ್ದಾಗ ಮೆಟ್ರೋಗಳಿಗಾಗಿ ವಿಶೇಷ ಸಮಯವನ್ನು ನೀಡಲಾಗುತ್ತದೆ. ಉದಾ: ಅಗಲ ರಸ್ತೆಯಿಂದ ಕಿರಿದಾದ ರಸ್ತೆಗಳಿಗೆ ಬರುವಾಗ ಮೆಟ್ರೋ ಬಸ್‌ಗಳಿಗಾಗಿ ಮೀಸಲು ಲೇನ್ ಇರುವುದಿಲ್ಲ. ಆದ್ದರಿಂದ ಅಲ್ಲಿ ವಿಶೇಷ ಸಿಗ್ನಲ್ ದೀಪಗಳನ್ನು ಹಾಕಿ ಅಥವಾ ಈಗಿರುವವನ್ನೇ ಉಪಯೋಗಿಸಿ, ಐದು ಆರು ಸೆಕೆಂಡ್‌ಗಳಷ್ಟು ಮೊದಲೇ ಮೆಟ್ರೋಬಸ್‌ಗಳಿಗೆ ಮಾತ್ರ ಇನ್ನಿತರ ವಾಹನಗಳಿಗಿಂತ ಮುಂಚೆ ಗ್ರೀನ್ ಸಿಗ್ನಲ್ (ಹಸಿರು ಲೈಟ್) ಕೊಟ್ಟು, ನಂತರ ಉಳಿದವುಗಳನ್ನು ಬಿಡಲಾಗುತ್ತದೆ. ಇದರಿಂದ ಸಾರಿಗೆಯಲ್ಲಿ ಯಾವುದೇ ಗೊಂದಲ ಏರ್ಪಡುವುದಿಲ್ಲ.

**‘ಮೆಟ್ರೋಬಸ್'ನ ವೈಶಿಷ್ಟ್ಯ:**

ಮೆಟ್ರೋಗಳಲ್ಲಿ ಮುಖ್ಯವಾಗಿ ಎರಡು ವಿಧದ ಬಸ್‌ಗಳಿವೆ. ಒಂದು ಏಕವಿನ್ಯಾಸದ ‘ಜೋಡಿಬಸ್' (ಸಿಂಗಲ್ ಆರ್ಟಿಕ್ಯುಲೇಟೆಡ್ ಬಸ್). ಇದರಲ್ಲಿ ಒಟ್ಟು 215 ಪ್ರಯಾಣಿಕರು ಕುಳಿತುಕೊಳ್ಳಬಹುದಾಗಿದೆ. ಇನ್ನೊಂದು ನಾಲ್ಕು ಅಚ್ಚಿನ ಎಂಟುಗಾಲಿ ಬಸ್ (ಬೈ ಆರ್ಟಿಕ್ಯುಲೇಟಡ್) ಇದರಲ್ಲಿ ಈಗಿನ ನಮ್ಮ ಬಸ್ಸಿನಂತಹ ಮೂರು ಬಸ್ಗಳ ಜೋಡಣೆ ಇದ್ದಂತಿದ್ದು ಒಟ್ಟು 320 ಜನರು ಕುಳಿತುಕೊಳ್ಳಬಹುದಾಗಿದೆ. ಇವುಗಳ ವೇಗ ಹೆಚ್ಚಿದ್ದು ಕ್ಷಿಪ್ರವಾಗಿ ವೇಗದ ಮಟ್ಟವನ್ನು ಹೆಚ್ಚಿಸಿಕೊಳ್ಳುವಂತಹವೂ ಆಗಿವೆ. ಇದರಿಂದ ಪ್ರವಾಸದ ಅವಧಿ ಕಡಿಮೆಯಾಗುತ್ತದೆ ಮೀಸಲಿಟ್ಟ ಲೇನ್‌ಗಳಿರುವುದರಿಂದ ಪ್ರತಿ ಎರಡು ನಿಮಿಷಕ್ಕೊಂದು ಮೆಟ್ರೋ ಓಡುತ್ತಲಿರುತ್ತದೆ. ಇದಕ್ಕೆ ಪೂರಕವಾಗಿ ನಗರ ಸಾರಿಗೆಯ ಇನ್ನಿತರ ಬಸ್ಸುಗಳೂ ಓಡಾಡುತ್ತಿರುತ್ತವೆ. ಮೆಟ್ರೋಗಳನ್ನು ಮುಖ್ಯನದಿ ಎಂದಿಟ್ಟುಕೊಂಡರೆ ಇನ್ನಿತರ ಬಸ್ಸುಗಳು ಇದರ ಉಪನದಿಗಳಂತೆ ಪ್ರಯಾಣಿಕರನ್ನು ತಂದು ಜೋಡಿಸುತ್ತವೆ. ಅವುಗಳು ಓಡಾಡುವ ಲೇನ್ ಹಾಗು ಮಾರ್ಗಗಳನ್ನು ನದಿಗೆ ನೀರು ತರುವ ಅಚ್ಚುಕಟ್ಟು ಪ್ರದೇಶವೆನ್ನಬಹುದು. ಈ ಉಪಸಾರಿಗೆ ಬಸ್‌ಗಳನ್ನು ಐದು ನಿಮಿಷಕ್ಕೊಂದರಂತೆ ಓಡಾಡಿಸಲಾಗುತ್ತದೆ. ಡಬಲ್ ಡೆಕ್ಕರ್‌ಗಳಿಂದಾಗಿ ಆಗುವ, ಹತ್ತಿ ಇಳಿಯುವ ಪ್ರಯಾಸ, ಗಿಡಗಳ ಕಟಾವು, ನಿಧಾನ ಓಡಾಟ, ಇವುಗಳನ್ನೆಲ್ಲ ಮೆಟ್ರೋಬಸ್ ವ್ಯವಸ್ಥೆಯಲ್ಲಿ ಇಲ್ಲವಾಗಿಸಲಾಗಿದೆ. ಮಾರ್ಗಮಧ್ಯದಲ್ಲಿ ವಿಶೇಷವಾಗಿ ನಿರ್ಮಿಸಲಾಗುವ ಬಸ್ ಸ್ಟಾಪ್‌ಗಳಿಂದ ಪ್ರಯಾಣಿಕರು ಸರಳವಾಗಿ ಬಸ್ಸಿನೊಳಗೆ ಹೋಗಿ ಹೊರಬರಲು ಭೂ ಮಟ್ಟದ ಪ್ರದೇಶ ಹಾಗೂ ನಿರ್ಗಮನ ಬಾಗಿಲುಗಳು ಪ್ರತ್ಯೇಕವಾಗಿರುತ್ತವೆ.

ಮೊದಲ ಹಂತದ ಪ್ರಾಯೋಗಿಕ ಯೋಜನೆಯಿಂದಾಗಿ ಜಯನಗರದಿಂದ ವಿಜಯಾ ಕಾಲೇಜ್, ಆರ್ಮುಗಂ ವೃತ್ತ, ಬಸವನಗುಡಿ ಪೋಲೀಸ್ ಠಾಣೆ, ಹೈಸ್ಕೂಲ್, ಬೆಂಗಳೂರು ಮೆಡಿಕಲ್ ಕಾಲೇಜ್, ವಿಕ್ಟೋರಿಯ ಆಸ್ಪತ್ರೆ, ಮಸೀದಿ, ಟೌನ್‌ಹಾಲ್, ಮಹಾನಗರ ಪಾಲಿಕೆ, ಜಿಲ್ಲಾ ಕಚೇರಿರಸ್ತೆ, ಬೆಂಗಳೂರು ವಿ.ವಿ.ಕಟ್ಟಡ, ಕೆ.ಆರ್.ವೃತ್ತ, ವಿಧಾನಸೌಧ (ಡಾ: ಅಂಬೇಡ್ಕರ್ ರಸ್ತೆ, ಇಂಡಿಯನ್ ಎಕ್ಸ್‌ಪ್ರೆಸ್ ಕಚೇರಿ ವೃತ್ತ, ಶಿವಾಜಿನಗರದವರೆಗೆ ಮೆಟ್ರೋಬಸ್‌ಗಳ ಓಡಾಟ ಮುಂದಿನ ವರ್ಷದಲ್ಲಿ ಪ್ರಾರಂಭವಾಗಲಿದೆ ಎಂದು ಹಾಗೂ ಇದಕ್ಕಾಗಿ ಸ್ವೀಡನ್‌ನ ಸಿಡಾ ಕಂಪೆನಿ ಜೊತೆ ಮಾತುಕತೆ ನಡೆದಿರುವುದಾಗಿ ಹೇಳುವ ಆತ್ಮವಿಶ್ವಾಸದಿಂದ ಕಾರ್ಯನಿರತರಾಗಿದ್ದಾರೆ; ಆದ್ದರಿಂದ ಆಗಲಾದರೂ ನಮ್ಮ ಕಷ್ಟದ ಸಾರಿಗೆ ದಿನಗಳು ದೂರಾಗಿ ಸುಖಪ್ರಯಾಣದ ನಗರ ಸುತ್ತಾಟದ ಕನಸು ನನಸಾಗಲೆಂದು ಹಾರೈಸೋಣ.

- ‘ಮೆಟ್ರೋಬಸ್' ಯೋಜನೆಗೆ ಕರ್ನಾಟಕ ಸರ್ಕಾರದ ಮಂಜೂರಾತಿ ದೊರಕಿದ್ದು ಈಗ ಜಾಗತಿಕ ಟೆಂಡರ್ ಬಗ್ಗೆ, ಹಣಕಾಸಿನ ಬಗ್ಗೆ ಸಿದ್ಧತೆಗಳು ನಡೆದಿವೆ.
- ಸ್ವೀಡನ್ ದೇಶದ ಸಿಡಾ ಕಂಪೆನಿಯ ಬಸ್‌ಗಳನ್ನೇ ಖರೀದಿಸುವುದಾದರೆ: 215 ಆಸನಗಳ (ಸಿಂಗಲ್ ಆರ್ಟಿಕ್ಯುಲೇಟೆಡ್) ಜೋಡಿಬಸ್ ಒಂದಕ್ಕೆ 65 ರಿಂದ 70 ಲಕ್ಷ ರೂಪಾಯಿಗಳು ಹಾಗೂ 320 ಆಸನಗಳುಳ್ಳ ಅಷ್ಟಚಕ್ರಗಳ ತ್ರಿವೇಣಿ ಬಸ್ ಒಂದಕ್ಕೆ ಅಂದಾಜು 1 ಕೋಟಿ ರೂಪಾಯಿ ಆಗಬಹುದಾಗಿದೆ.
- ಮೊದಲ ಹಂತದಲ್ಲಿ ಪ್ರಾಯೋಗಿಕವಾಗಿ ಇಪ್ಪತ್ತೈದು ಸಿಂಗಲ್ ಆರ್ಟಿಕ್ಯುಲೇಟೆಡ್ ಬಸ್‌ಗಳನ್ನು ಓಡಿಸಲಾಗುವುದು

- ಮೆಟ್ರೋ ಬಸ್‌ಗಳಲ್ಲಿ ಕಂಡಕ್ಟರ್ ಇರುವುದಿಲ್ಲ. ಆದರೆ ಬಸ್ ಸ್ಟಾಪ್‌ಗಳಲ್ಲಿಯೇ ಟಿಕೆಟ್ ಕೊಡುವ ವ್ಯವಸ್ಥೆ ಇರುತ್ತದೆ.
- ಸೀಜನ್ ಟಿಕೆಟ್‌ಗಳಂತೆಯೇ ವಲಯ (ಜೋನ್) ಟಿಕೆಟ್‌ಗಳ ಸೌಕರ್ಯವನ್ನೂ ಕಲ್ಪಿಸಲಾಗುವುದು. ಒಳ, ಮಧ್ಯ ಹಾಗೂ ಹೊರ ಸಾರಿಗೆ ವಲಯಗಳೆಂದು ವಿಭಾಗಿಸಿ ಕ್ರಮವಾಗಿ ರೂ.2.50, ರೂ.3.50 ಹಾಗೂ ರೂ.4.50ಗಳಂತೆ ಟಿಕೆಟ್ ದರಗಳನ್ನು ನಿಗದಿಪಡಿಸಲಾಗುವುದು.

---

ಈ ಲೇಖನ ಪ್ರಕಟವಾದ ಒಂದು ವರ್ಷದಲ್ಲಿ (2001) ಬೆಂಗಳೂರಲ್ಲಿ ಅಲ್ಪ ಪ್ರಮಾಣದಲ್ಲಿ ಈ ಬಸ್‌ಗಳ ಸಂಚಾರ ಆರಂಭವಾಯಿತು.

# ಕಚಗುಳಿ ಇಡುತಿದೆ ಚಳಿಗಾಲ

ಪ್ರತಿ ಡಿಸೆಂಬರ್ ತಿಂಗಳ ಅವಧಿಯಲ್ಲಿ ನಾವು ಎರಡು ಬಹುಮುಖ್ಯ ಘಟನೆಗಳಿಗೆ ಸಾಕ್ಷಿಯಾಗುತ್ತೇವೆ. ಒಂದು ವರ್ಷದ ಮುಕ್ತಾಯ ಹಾಗೂ ಮತ್ತೊಂದು ಹೊಸ ವರ್ಷದ ಪ್ರಾರಂಭ. ಅತಿ ಮಹತ್ವದ ಈ ಅಂತ್ಯ ಹಾಗೂ ಉದಯ ಎರಡನ್ನೂ ಗರ್ಭೀಕರಿಸಿಕೊಂಡ ಕಾಲವೇ ಈಗ ನಮಗೆಲ್ಲ ಕಚಗುಳಿ ಇಡುತ್ತಿರುವ ಚಳಿಗಾಲ. ಕ್ಯಾಲಂಡರಿನಲ್ಲಿಯ ಕೊನೆ ಮತ್ತು ಮೊದಲು ಎರಡನ್ನೂ ಕಾಣುವುದೂ ಈ ಹೊತ್ತಿನಲ್ಲಿಯೆ.

ಭೂಮಿಯ ಮೇಲೆ ಸಂಭವಿಸುವ ಋತುಮಾನಗಳೆಲ್ಲ ಒಂದು ನಿರ್ದಿಷ್ಟ ಕಾಲಚಕ್ರಕ್ಕೆ ಅಧೀನವಾಗಿವೆ. ಈ ಕಾಲಚಕ್ರದ ಕೇಂದ್ರಬಿಂದು ಸೂರ್ಯ. ಅಂತೆಯೇ ಎಲ್ಲ ಚರಾಚರಗಳ ಆದಿ ಎನಿಸುವ ಈತ ಆದಿತ್ಯ, ಭೂಮಂಡಲವನ್ನು ಅಭ್ಯಸಿಸುವುದು ಭೂಗೋಲಶಾಸ್ತ್ರವೆನಿಸಿದರೆ, ಇಡೀ ಬ್ರಹ್ಮಾಂಡವನ್ನಭ್ಯಸಿಸುವುದು ಖಗೋಲಶಾಸ್ತ್ರ, ಅಂತೆಯೇ ಸೂರ್ಯ ಈ ಭೂ ಖಗೋಲಶಾಸ್ತ್ರಗಳಲ್ಲಿ ಅತ್ಯಂತ ಪ್ರಮುಖ. ವಿವಿಧ ಕಾಲ, ಋತು, ದಿನ, ರಾತ್ರಿಗಳೆಲ್ಲ ಸೂರ್ಯ ಹಾಗೂ ಆತನ ಕಿರಣಗಳ ಕೈಚಳಕ, ಪ್ರಭಾವ. ಹೀಗೆಯೇ ಆತನ ಅತ್ಯಂತ ಮಹತ್ವದ ಕೊಡುಗೆಗಳಲ್ಲಿ ಚಳಿಗಾಲವೂ ಒಂದು. ಈ ಸಮಯದಲ್ಲೇ ನಿಸರ್ಗ ತನ್ನ ಚೇತೋಹಾರಿ ಚೈತ್ರನನ್ನು ಸ್ವಾಗತಿಸಲು ಸಜ್ಜಾಗುತ್ತಿರುತ್ತದೆ. ಅದು ತನ್ನ ಮೈ ಕೊಡವುತ್ತಿದೆಯೇನೋ ಎಂದೆನ್ನುವಂತೆ ಹಲವಾರು ಗಿಡಮರಗಳು ಹಣ್ಣೆಲೆಗಳನ್ನೆಲ್ಲ ಉದುರಿಸುತ್ತವೆ.

ಹೀಗೆ ತನ್ನ ಎಲೆಗಳನ್ನೆಲ್ಲ ಉದುರಿಸಿ ಬೋಳುಬೋಳಾದ ಮರದ ಟೊಂಗೆಯಲ್ಲಿ ಉಳಿದ ಎಲೆಯೊಂದನ್ನು, ಮುಂಬರುವ ಚೈತ್ರನ ಒಂದು ಚುಂಬನವೆಂದು ರವೀಂದ್ರನಾಥ ಠಾಕೂರರವರು ಭಾವಿಸುತ್ತಾರೆ ಹಾಗೂ ಚಳಿಗಾಲದ ಬಾಗಿಲಲ್ಲಿ ಕಾಯುತ್ತಿರುವ ಆ ಚೈತ್ರವನ್ನು ಬರಮಾಡಿಕೊಳ್ಳಲು ಅಕಾಲದಲ್ಲಿ ಧಾವಿಸುವ ಮಾವಿನ ಮೊಗ್ಗುಗಳು ಉದುರಿಹೋಗುವುದನ್ನು ಕಂಡು ಹೀಗೆ ಕರಬುತ್ತಾರೆ ನೋಡಿ:

Spring hesitates at winters door

But the mango blossom rashly runs out to him

Before her time and meets her doom.

ಚದುರಗಂಗಳ ಚದುರಿ, ಚದುರಿ ನಿಂತಾಳ ಬೆದರಿ ನಿಂತಾಳ-ಕವಿವರ್ಯ ಬೇಂದ್ರೆಯವರು- ಭೂದೇವಿಯು ತನ್ನ ಗಂಗಾಳದಂತಹ ಗೋಲಾಕಾರದ ಮೈಮುಖವನ್ನು ತುಸು ವಾಲಿಸಿ ಎದೆ ಸೆಟೆಸಿ ನಿಂತಂತೆ ಕಲ್ಪಿಸಿಕೊಂಡು-ಹಾಡಿದ್ದು ಭೂಖಗೋಲ ಶಾಸ್ತ್ರಗಳನ್ನು ಕಾವ್ಯಶಾಸ್ತ್ರದಲ್ಲಿ ಮೇಳೆಸಿದಂತಿದೆ. ಭೂಮಿ ತನ್ನ ಖಚಿತ ಕಕ್ಷೆಯ ಮೇಲೆ 661/2ಕೋನದಲ್ಲಿ, ತಾನೂ ತಿರುಗುತ್ತ ಸೂರ್ಯನ ಸುತ್ತ ಪ್ರದಕ್ಷಿಣೆ ಮಾಡುವುದು ಸೃಷ್ಟಿಯ ನಿಯಮವಾಗಿದೆ. ಇದೇ ನಮ್ಮ ಕಾಲಮಾನ, ಹವಾಮಾನ, ಋತುಮಾನಗಳಲ್ಲಿ ಬದಲಾವಣೆಯನ್ನು ತರಲು ಕಾರಣವಾಗಿದೆ. ಆದಾಗ್ಯೂ ಇಡೀ ಭೂಮಿಯ ಮೇಲೆ ಒಂದೇ ಕಾಲಕ್ಕೆ ಒಂದೇ ರೀತಿಯ ಹವಾಮಾನ ಇರುವುದೂ ಅಸಾಧ್ಯವಾಗಿದೆ. ಉತ್ತರ ಗೋಲಾರ್ಧದಲ್ಲಿ ಚಳಿಗಾಲವಾದಾಗ ದಕ್ಷಿಣ ಗೋಲಾರ್ಧದಲ್ಲಿ ಬೇಸಿಗೆ ಇರುತ್ತದೆ. ಈ ರೀತಿಯ ಬದಲಾವಣೆ, ಆಯಾ ಭೂ ಪ್ರದೇಶ ಸೂರ್ಯನಿಂದ ಎಷ್ಟು ಅಂತರದಲ್ಲಿದೆ ಹಾಗೂ ಯಾವ ಕೋನದಲ್ಲಿದೆ ಎಂಬುದನ್ನು ಅವಲಂಬಿಸಿದೆ. ಈ ವೈವಿಧ್ಯತೆಯೇ ಸಕಲ ಜೀವರಾಶಿಗಳ ಜೀವನೋತ್ಸಾಹದ ಗಂಗೋತ್ರಿ ಎನಿಸಿದೆ. ಅಕಸ್ಮಾತ್ ಇದು ಹೀಗಿರದೆ, ಪೂರ್ತಿ ಕತ್ತಲೆ, ಪೂರ್ತಿ ಬಿಸಿಲು, ಬರೀ ಮಳೆ, ಬರೀ ಬೇಸಿಗೆ, ಕೇವಲ ಚಳಿ ಇರುವುದಾಗಿದ್ದರೆ ನಾವು ಹಾಗೂ ನಮ್ಮ ಪರಿಸರ ಖಂಡಿತವಾಗಿಯೂ ಈಗಿನಂತಿರುತ್ತಿರಲಿಲ್ಲ.

ಬೇಸಿಗೆಯಲ್ಲಿ ಹೊಲಗದ್ದೆಗಳನ್ನು ಉತ್ತಿ, ಮಳೆಗಾಲದಲ್ಲಿ ಬೀಜ ಬಿತ್ತಿ ಬೆಳೆದು, ನಂತರ ಕೊಯ್ಲು ಮಾಡುವ ಕಾಲವೇ ಚಳಿಗಾಲ; ಅಂತೆಯೇ ಅದು ಸುಗ್ಗಿಯ ಕಾಲ. ಇದನ್ನೆ ಕುವೆಂಪುರವರು ತಮ್ಮ ಸುಗ್ಗಿ ಬರುತಿದೆ ಎಂಬ ಕವನದಲ್ಲಿ... ಜಾರುತಿಹುದು ಮಾಗಿ ಚಳಿ: ಕುಸುಮಿಸಿರುವ ಲತೆಗಳಲಿ: ಮೊರೈಯೂತಿಹವು ಸೊಕ್ಕಿದಳಿ: ಮುಕ್ತ ಜೀವನರಂದದಿ. ಎಂದು ಬಣ್ಣಿಸಿ ಹೀಗೆ ಹಳತನ್ನು ಕೂಡಿಸಿ ಹೊಸತನ್ನು ಮಾಡು ಬಾ ಎಂದು ಋತುನಾಯಕನಲ್ಲಿ ಬಿನ್ನಿಮಿಸುತ್ತಾರೆ.

ರೈತರಿಗೆ ಸುಗ್ಗಿಯ ಕಾಲವಾದ ಈ ಚಳಿಗಾಲ ಪ್ರೇಮಿಗಳಿಗೆ ಪ್ರೀತಿಯ ಕಾಲ. ತೀರಾ ತಂಪು ಪ್ರದೇಶಗಳಲ್ಲಂತೂ ಹಿಮ ಬೀಳುವ ದೃಶ್ಯ ಸೃಷ್ಟಿಯ ಅದ್ಭುತ ಪ್ರದರ್ಶನಗಳಲ್ಲೊಂದೆನಿಸುತ್ತದೆ, ಯುವಜೋಡಿಗಳಿಗೆ ಮಧುಚಂದ್ರದ ತಾಣವಾಗುತ್ತದೆ, ಪ್ರವಾಸಿಗರ ಅತ್ಯಾಕರ್ಷಣ ಕೇಂದ್ರವಾಗುತ್ತದೆ. ಉಷ್ಣ ಪ್ರದೇಶಗಳವರಿಗೆ ಈ ಹಿಮಪಾತದ ಸಮೃದ್ಧ ಸಿರಿನೋಟ ಇಲ್ಲವಾದರೂ ಇಬ್ಬನಿಯ ರೂಪದಲ್ಲಿ ಕಂಡುಬರುವ ಕೊಡುಗೆ ಅನನ್ಯವಾಗಿದೆ. ಹುಲ್ಲಿನ ತುದಿಯ ಮೇಲೆ ಕುಳಿತಾಗ ಈ ಮಂಜ ಹನಿ ಕುವೆಂಪುರವರಿಗೆ ರನ್ನದ ಸೊಡರ ಚಲುವಾಗಿ ಉರಿಯುತ್ತಿದ್ದಂತೆ ಗೋಚರಿಸುತ್ತದೆ. ಸಿನಿಮಾ ಕವಿಗೆ ಚಳಿ ಚಳಿ ತಾಳೆನು ಈ ಚಳಿಯ, ಚಳಿ ಎಂದು ಹುರಿದುಂಬಿಸುತ್ತದೆ. ಈ ಬಿಸಿಯ ಹುರುಪು ಹುಮ್ಮಸ್ಸನ್ನು ಬಹುಪೂರ್ವದ ಕವಿಯೊಬ್ಬ, ಕೂಪೋದಕಂ ತರುಚ್ಛಾಯಾಃ ತರುಣಿ ಸ್ತನಮಂಡಲಂ ಉಷ್ಣಕಾಲೇತು ಶೀತಲಂ ಶೀತಕಾಲೇತು ಭವೇತುಷ್ಣಂ, ಎಂದು ಚಿತ್ರಿಸುತ್ತ ಚಳಿಗಾಲದಲ್ಲೂ ಹಿತವಾದ ಬಿಸಿಯನ್ನು ತರುಣಿಯ ಎದೆಯಪ್ಪುಗೆಯಲ್ಲಿ ಕಂಡುಕೊಂಡಿದ್ದಾನೆ. ಇನ್ನು ಪೈಲ್ವಾನರಿಗಂತೂ ಇದು ಅತ್ಯಂತ ನೆಚ್ಚಿನ ಕಾಲ. ಗರಡೀ ಮನೆಯಲ್ಲಿ ತಾಲೀಮು ಮಾಡುವಾಗ ಹವೆಯಲ್ಲಿ ಉಷ್ಣತಾಮಾನ ಹೆಚ್ಚಿದ್ದರೆ ಬೇಗ ದಣಿವಾಗಿ ಬೆವರಿಳಿಯತೊಡಗುತ್ತದೆ. ಅದೇ ಚಳಿಗಾಲದಲ್ಲಾದರೆ ವಾತಾವರಣದಲ್ಲಿಯ ತಂಪಿನಿಂದಾಗಿ ವ್ಯಾಯಾಮ ಹೆಚ್ಚು ಮಾಡಿದರೂ ಬೇಗ ದಣಿವೂ ಆಗುವುದಿಲ್ಲ ಹಾಗೂ ಬೇಗ ಬೆವರೂ ಬರುವುದಿಲ್ಲ ಎಂಬುದು ಅನುಭವದ ಮಾತು.

ಹೀಗೆ ಕವಿಪುಂಗವರಿಗೆ, ರೈತರಿಗೆ, ಪೈಲ್ವಾನರಿಗೆ, ಯುವ ಪ್ರೇಮಿಗಳಿಗೆ ಸ್ಫೂರ್ತಿಯ ಸೆಲೆ ಉತ್ಸಾಹದ ಬುಗ್ಗೆ ಆಗುವ ಹಾಗೂ ಸುಗ್ಗಿಯ ಸಡಗರ ತರುವ ಚಳಿಗಾಲ ಹಲವಾರು ಬಾರಿ ಭಯಾನಕವೂ ಮಾರಕವೂ ಆಗುವುದೆಂಬುದು ವಿಪರ್ಯಾಸ. ಈ ಹಿಂದಿನ ಮೂವತ್ತು ವರ್ಷಗಳಲ್ಲಿ ಬೆಂಕಿ, ಮಹಾಪೂರ, ಬಿರುಗಾಳಿಗಳಂತಹ ನೈಸರ್ಗಿಕ ವಿಕೋಪಗಳಲ್ಲಿ ಆದ ಒಟ್ಟಾರೆ ಜೀವಹಾನಿಗಳಿಗಿಂತ ವಿಪರೀತ ಚಳಿಯಿಂದಾಗಿ ಸತ್ತವರ ಸಂಖ್ಯೆಯೇ ಹೆಚ್ಚಾಗಿದೆ ಎಂದು ಒಂದು ವಿಶೇಷ ಅಧ್ಯಯನದಿಂದ ತಿಳಿದುಬಂದಿದೆ. ಇದೂ ಅಲ್ಲದೆ, ಈ ನರಹಂತಕ ಚಳಿಯ ಬಗ್ಗೆ ಮುನ್ಸೂಚನೆ ನೀಡುವುದು ತಜ್ಞರಿಗೂ ಸಹ ಹೆಚ್ಚೆಚ್ಚು ಕಠಿಣವಾಗುತ್ತ ಬರುತ್ತಿದೆ. ಯಾಕೆಂದರೆ ಇದು ತೀರ ಅನಿರೀಕ್ಷಿತವಾಗಿ ಬಂದೆರಗುವ ಅರಿ ಭಯಂಕರವಾಗಿದೆ ಎಂದು ಆ ಅಧ್ಯಯನದಲ್ಲಿಯೇ ಕಂಡುಬಂದಿದೆ. ಇದರಿಂದಾಗಿ ಚಳಿಯನ್ನೆದರಿಸಲು ನಾವೆಲ್ಲ ಸಿದ್ಧವಾಗಿರಬೇಕಿದೆ. (ಈ ದೃಷ್ಟಿಯಿಂದ ದಕ್ಷಿಣ ಭಾರತೀಯರು ಸುದೈವಿಗಳು) ಒಣ ಕಟ್ಟಿಗೆ, ಗ್ಯಾಸ್, ಪೆಟ್ರೋಲ್, ಸೀಮೆಎಣ್ಣೆ ಮುಂತಾದ ಸ್ಫೋಟಕ ವಸ್ತುಗಳನ್ನು ಸುರಕ್ಷಿತ ಜಾಗೆಗೆ ಸ್ಥಳಾಂತರಿಸಬೇಕಿದೆ. ಅಂತೆಯೇ ಶಾಲು, ಕಂಬಳಿ, ರಗ್ಗು, ಸ್ವೆಟರ್ ಇತ್ಯಾದಿ ಉಣ್ಣೆಬಟ್ಟೆಗಳನ್ನು ಚಳಿ ಎದುರಿಸಲು ಅಣಿಗೊಳಿಸಿ ಕೈಗೆಟುಕುವಂತೆ ಇಡಬೇಕಿದೆ. ಹಾಗೆಂದಾಕ್ಷಣ ತೀರ ಕಳವಳ ಪಡಬೇಕಿಲ್ಲ. ಕಾರಣ ಡಿ.ವಿ.ಜಿ.ಯವರ ಈ ಮಾತನ್ನು ಕೇಳಿ, "ಹಸಿವ ಕಳೆಯಲು ಕವಳ ಚಳಿಯ ಕಳೆಯಲು ಬಟ್ಟೆ." ಇಷ್ಟಕ್ಕಾಗಿಯಾದರೆ ಆ ದುಡಿತಕ್ಕೊಂದು ಅರ್ಥವಿದೆ, ಇದನ್ನು ಮೀರಿದ ದುಡಿತವೆಂದರೆ, ಬರೀ ಬುರುಗು ನೊರೆಗಾಗಿ ಜೀವನವ ಮಾರಿದಂತೆ. ಆ ಜೀವನ ಪಾಠದೊಂದಿಗೆ ಈ ಚಳಿಗಾಲವನ್ನು ಎದುರಿಸೋಣ. ಆನಂದಿಸೋಣ.



ಕವಿ ಹೃದಯಿ , ಚಿಂತನಶೀಲ ಕತೆಗಾರ ಮನು ಬಳಿಗಾರ್ ಅವರ ಈ ನಿಬಂಧ ಸಂಕಲನ, ಅವರ ಸಹಜ ಬಹುಮುಖೀ ಆಸಕ್ತಿಯನ್ನು ಮತ್ತು ಆ ಆಸಕ್ತಿಯನ್ನು ಸಹಪ್ರವಾಸಿಗಳೊಂದಿಗೆ ಹಂಚಿಕೊಳ್ಳುವ ವ್ಯವಧಾನವನ್ನು -ಸೋಗಿಲ್ಲದೆ ಬಿಂಬಿಸುತ್ತದೆ. ಈ ಹೊತ್ತಗೆಯ ಹರಹು ನೋಡಿ: ಇಲ್ಲಿ ಮೈಲಾರ ಮಹಾದೇವ, ಚಂಬಾ ಮುತ್ನಾಳರಂಥ ಯಾರೂ ಅರಿಯದ ವೀರರಿದ್ದಾರೆ. 'ಅಂತರಂಗಶುದ್ಧಿ' , 'ಏಕಾಂತ' 'ಸಮಯಾವಕಾಶ' , 'ಮಾತು' ಗಳಂಥ ಧ್ಯಾನಸ್ಥ ಜಿಜ್ಞಾಸೆಗಳಿವೆ. 'ಗ್ರಾಹಕಪ್ರಜ್ಞೆ'ಯಿಂದ ಹಿಡಿದು 'ಮೆಟ್ರೋ ಬಸ್' ತನಕದ ವಿವಿಧ ಸಕಾಲಿಕ ಹೊಳಹುಗಳಿವೆ. ಕನಕ, ಕಾರಂತ, ಗಿರಡ್ಡಿ ಕುರಿತ ವಿಮರ್ಶಾ ಟಿಪ್ಪಣಿಗಳಿವೆ ಮತ್ತು ಇವೆಲ್ಲವೂ ಯಾವ ತಿಳಿದವನ ಗತ್ತೂ ಇಲ್ಲದೆ, ತಿಳಿಯುತ್ತಲೇ ಹಂಚಿಕೊಳ್ಳುವ ಸರಳ ನಡಿಗೆಯಲ್ಲಿ ಆಪ್ತವಾಗಿವೆ.

ಬಳಿಗಾರರ ವ್ಯಾಪಕ ಓದು, ತಾರತಮ್ಯವಿಲ್ಲದ ಜೀವನಾಸಕ್ತಿ ಮತ್ತು ಮುಕ್ತ ನಾಗರಿಕ ನೋಟ - ಇವು ಈ ನಿಬಂಧಗಳನ್ನು ಒಟ್ಟಿಗೆ ಹಿಡಿಯುವ ಸೂತ್ರಗಳಾಗಿವೆ. ಕವಿಯೊಬ್ಬನ ಗದ್ಯದಲ್ಲಿ ವಾಡಿಕೆಯಿಂದೆಂಬಂತೆ ಇಣುಕುವ ಪದರಮ್ಯತೆ ಅಥವಾ ಕತೆಗಾರನೊಬ್ಬನ ಲೇಖನಗಳಲ್ಲಿ ಬರಬಹುದಾದ ದೃಷ್ಟಾಂತಗುಣ - ಇವೆರಡೂ ಹುಸಿ ಆಕರ್ಷಣೆಗಳನ್ನು ತೊರೆದಿರುವುದರಿಂದಲೇ ಈ ಲೇಖನಗಳಿಗೊಂದು ಸರಳ ಸ್ಪಷ್ಟ ಘನತೆ ಬಂದಿದೆ. ಅಲ್ಲಲ್ಲಿ ನೆಲಸಮಗೊಂಡ ಡಬ್ಲ್ಯು.ಟಿ.ಸಿ. ಅವಳಿ ಕಟ್ಟಡಗಳು ರಾಮಾಯಣದ ರಾಮಲಕ್ಷ್ಮಣರಂತೆ ನಿಂತಿದ್ದವು - ಎಂಬ ಸಾಲ್ ಮಿಂಚುಗಳೂ ಇವೆ.

ಒಬ್ಬ ಲೇಖಕ ತನ್ನ ಸಮಯದ ಮತ್ತು ಪ್ರದೇಶದ, ಒಬ್ಬ ಅಪ್ಪಟ ಪ್ರಾಮಾಣಿಕ ನಾಗರಿಕನೂ ಆಗಿರಬೇಕಾದ ಅಗತ್ಯವನ್ನು ಮತ್ತೆ ನಮಗೆಲ್ಲ ಜ್ಞಾಪಿಸುವಂತಿರುವ ಈ ಸಂಕಲನಕ್ಕಾಗಿ ಸ್ನೇಹಿತ ಮನು ಬಳಿಗಾರ್ ಅವರನ್ನು ಆತ್ಮೀಯವಾಗಿ ಅಭಿನಂದಿಸುತ್ತೇನೆ.

-ಜಯಂತ ಕಾಯ್ಕಿಣಿ

ISBN: 81-89268-69-4

ರೂ.100/-

ಐಬಿಎಚ್ ಪ್ರಕಾಶನ
ನಂ. 77, ರಾಮರಾವ್ ಲೇಔಟ್, 2ನೇ ಮುಖ್ಯ ರಸ್ತೆ
ಬಿಎಸ್‌ಕೆ 3ನೇ ಹಂತ, ಬೆಂಗಳೂರು -85
ದೂರವಾಣಿ : 56698689, 26698088